
ಕಸ್ತೂರಿ

ಜನೆವರಿ ೧೯೭೪



ರೂ. ೧.೨೫



ಐ.ಓ.ಬಿಯ ಉಳಿತಾಯ ಸಲಹಾಧಿಕಾರಿಗಳನ್ನು ವಿಚಾರಿಸಿ. ಅವರು ನಿಮಗೆ ಈ ಬಗ್ಗೆ ಅಮೂಲ್ಯವಾದ ಸಲಹೆಗಳನ್ನು ನೀಡಬಲ್ಲರು.

ನಿಮ್ಮ ಐ.ಓ.ಬಿಯ ಎಲ್ಲ ಶಾಖೆಗಳಲ್ಲೂ ಉಳಿತಾಯ ಸಲಹಾಧಿಕಾರಿಗಳು ನಿಮಗಾಗಿ ಕಾದಿದ್ದಾರೆ. ಅವರು ನಿಮ್ಮ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾರೆ. ಉದಾಹರಣೆಗೆ ತಿಂಗಳ ಕೊನೆಯಲ್ಲಿ ದುಡ್ಡಿಲ್ಲವಾದರೆ ತಿಂಗಳ ಮೊದಲಲ್ಲೇ ಸ್ವಲ್ಪ ಉಳಿಸಬಹುದಲ್ಲ. ಅಂದಮೇಲೆ ಆಮೇಲಿನ ನಿಮ್ಮ ವ್ಯರ್ಥ ಖರ್ಚು ಕೂಡಾ ಕಡಿಮೆಯಾಗುತ್ತದೆಯಲ್ಲವೇ ?

ಇಷ್ಟೇ ಅಲ್ಲ. ನಿಮ್ಮ ಬೇರೆ ಎಲ್ಲ ಸಮಸ್ಯೆಗಳನ್ನು ಅವರು ಪರಿಹರಿಸುತ್ತಾರೆ. ನಿಮಗಾಗಿ ಅವರು ವಿಶಿಷ್ಟ ಉಳಿತಾಯ ಯೋಜನೆಗಳನ್ನೇ ರೂಪಿಸುತ್ತಾರೆ.

ನಿಮ್ಮ ಉಳಿತಾಯದ ಉದ್ದೇಶವೇನು ? ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ? ನಿಮ್ಮ ಮನೆಗೆ ಆಧುನಿಕ ಸಲಕರಣೆಗಳನ್ನು ಕೊಳ್ಳಲೇ ? ನಾಳೆ ನೀವು ಕಟ್ಟುವ ಮನೆಯ ದೃಷ್ಟಿಯಿಂದಲೇ ? ಅಥವಾ ನಿಮ್ಮ ನಿವೃತ್ತಿಯ ದಿನಗಳನ್ನು ಆರಾಮವಾಗಿ ಕಳೆಯಲೇ ? ನಿಮ್ಮ ಗುರಿ ಒಂದೇ ಇರಬಹುದು ಅಥವಾ ಹಲವಿರಬಹುದು. ಆದರೆ ನಮ್ಮ ಸಲಹಾಧಿಕಾರಿಗಳು ಈ ಅಭಿಲಾಷೆಗಳನ್ನು ಪೂರೈಸಲು ಯೋಜನೆಗಳನ್ನು ರೂಪಿಸಬಲ್ಲರು.

ಉಳಿತಾಯಕ್ಕೆ ಹೆಚ್ಚು ಹಣ ಬೇಕಾಗುವುದೆಂದು ಚಿಂತಿಸಬೇಡಿ. ಸ್ವಲ್ಪ ಹಣ ತೊಡಗಿಸಿ ದೊಡ್ಡ ಹಣ ಪಡೆವ ಸೂತ್ರದ ಬಗ್ಗೆ ನಮ್ಮ ಸಲಹಾಧಿಕಾರಿಗಳು ನಿಮಗೆ ತಿಳಿಸುತ್ತಾರೆ. ಅಲ್ಲದೇ ತೆರಿಗೆಯ ಬಗ್ಗೆಯೂ ಅವರು ಸಮಯೋಜಿತ ಸಲಹೆ ನೀಡಬಲ್ಲರು.

ಐ.ಓ.ಬಿ.ಗೆ ಬನ್ನಿ.

"ಹಲವು ಯೋಜನೆಗಳು ನಿಮಗಾಗಿ ಸಿದ್ಧವಾಗಿವೆ"

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅತೀ ದೊಡ್ಡ ಹೆಸರು. ಐ.ಓ.ಬಿ. 1969 ರಿಂದೀಚೆಗೆ 771% ರಷ್ಟು ಬೆಳೆದು ಉಳಿದೆಲ್ಲ ರಾಷ್ಟ್ರೀಕೃತ ಬ್ಯಾಂಕುಗಳನ್ನು ಮೀರಿಸಿ ಪ್ರಗತಿ ಪಥದಲ್ಲಿದೆ.

ಪ್ರತಿ ಐ.ಓ.ಬಿ ಶಾಖೆಯಲ್ಲಿಯೂ ಉಳಿತಾಯ ಸಲಹಾಧಿಕಾರಿಗಳು ನಿಮಗಾಗಿ ಕಾದಿದ್ದಾರೆ. ಅವರನ್ನು ನೀವೇಕೆ ಸಂಧಿಸಬಾರದು ?



ಇಂಡಿಯನ್ ಓವರ್‌ಸೀಸ್ ಬ್ಯಾಂಕ್

ನಿಮ್ಮ ಅಭಿವೃದ್ಧಿಗೆ ಉತ್ತಮ ಸ್ನೇಹಿತ

ಕಸ್ತೂರಿ

✡

ವ್ಯವಸ್ಥಾಪಕ ಸಂಪಾದಕ:
ಎಚ್. ಆರ್. ಬಸವರಾಜ್

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ. ಬಿ. ಕುಲಕರ್ಣಿ

✡

ಮುಖಪುಟ :
ರಾಜಾಜಿ
ಚಿತ್ರ:
ಕೆ. ಬಿ. ಕುಲಕರ್ಣಿ

✡

ಚಂದಾದರ

೩ ವರ್ಷಕ್ಕೆ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧವರ್ಷ	,,	ರೂ. ೭-೫೦

KASTURI January 1979

ಬೆಳಕಿಂಡಿ

ಪ್ರೇಮ ಕುರುಡಾದರೆ, ವಿವಾಹ ಮನುಷ್ಯನ ಕಣ್ಣು ತೆರೆಸಿಬಿಡುತ್ತದೆ.

— ಕೇಳಿದ್ದು

ವೃದ್ಧಾಪ್ಯ : ಹೆಂಡತಿಗಿಂತಲೂ ಹೊಟ್ಟೆಯೆಡೆಗೇ ಹೆಚ್ಚು ಲಕ್ಷ್ಯ ಹರಿಸುವ ಕಾಲ.

ಹಾಗೆ ನೋಡಿದರೆ ವೃದ್ಧಾಪ್ಯ ಕೆಟ್ಟದು ಎಂದು ತಿಳಿದುಕೊಳ್ಳುವ ಅವಶ್ಯಕತೆಯೇ ಇಲ್ಲ. ಯಾಕೆಂದರೆ ಆಗ ಯುವಾವಸ್ಥೆಯಲ್ಲಿ ಒದಗಬಹುದಾದ ಅಪಮಾನ, ಯಾವುದೇ ರೀತಿಯ ವಾಂಛೆ ಇರುವದಿಲ್ಲ. ಎಲ್ಲೆಲ್ಲೂ ಗೌರವ ಸಿಗುತ್ತದೆ.

— ಮಾರೀ ಚೆವ್ಯಾಲೀಯರ್

ಸರಕಾರ ಮಾತಾಡಿದರ ಬಡವರಿಗೊಂದು ತಿಳೀತೈತಿ, ಶ್ರೀಮಂತರಿಗೊಂದು ತಿಳೀತೈತಿ.

— ಡಾ. ಕಂಬಾರ ('ಜೈಸಿದನಾಯ್ಕ'ದಲ್ಲಿ)

ಚಟ ಅನ್ನುವುದು ಮೊದಲ ರಾತ್ರಿಯ ರುಚಿ ಕಂಡ ಹೆಂಡತಿ ಇದ್ದಂತೆ.

— ಅನುಭವಿ

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಏಕೆ ?

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಗೀತಾ ಕುಲಕರ್ಣಿಯವರ 'ಏಕೆ?' ಕಥೆ ಇಂದಿನ ಸಮಾಜದಲ್ಲಿ ಕಂಡುಬರುವ ಸಾಮಾನ್ಯ ಎನಿಸಿದರೂ ಮಹತ್ವವಾದ ಸಮಸ್ಯೆಗಳಿಗೆ ಕನ್ನಡಿ ಹಿಡಿದಂತಿದೆ. ಬಾಡಿಗೆ ಮನೆ-ಅಲ್ಲಿಂದ ಶುರುವಾಗುವ ಅದಕ್ಕಂಟಿದ ಇತರ ಸಮಸ್ಯೆಗಳು ಒಂದೇ ಎರಡೇ? ಕಥೆ ಹೆಣೆದ ರೀತಿ ಬಲು ಸೊಗಸಾಗಿದೆ.

ಶಿವಮೊಗ್ಗ —ಆರ್. ಲಕ್ಷ್ಮಣ

ಕನ್ನಡ 'ಕಸ್ತೂರಿ' !

ಡಿಸೆಂಬರ್ ೭೮ ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೆ. ಚಂದ್ರಮೌಳಿಯವರ ಲೇಖನ "ಕನ್ನಡ 'ಕಸ್ತೂರಿ'" ಕನ್ನಡಿಗರ (ಒಣ) ಅಭಿಮಾನಕ್ಕೆ ಕನ್ನಡಿ ಹಿಡಿದಿದೆ. ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನಲ್ಲಿ ನೆರೆ ನಾಡಿನ ಅಂದರೆ ತಮಿಳು, ತೆಲುಗು, ಮಲೆಯಾಳ ದಿನ, ವಾರ, ಮಾಸಪತ್ರಿಕೆಗಳೆಲ್ಲ ಸಿಗುತ್ತವೆ. ಅದೇ ರೀತಿ ಕನ್ನಡದ ಎಲ್ಲ ಪತ್ರಿಕೆಗಳು ನಿಮಗೆ ಹೈದರಾಬಾದಿನಲ್ಲಿ, ಮದ್ರಾಸಿನಲ್ಲಿ, ತಿರುವನಂತಪುರದಲ್ಲಿ ಸಿಗುತ್ತವೆಯೇ? ಇಲ್ಲವಾದರೆ ಏಕೆ? ತುಸು ಯೋಚಿಸಿ ನೋಡಿ. ನಾವು ಅಭಿಮಾನಧನರೇ? ಅಭಿಮಾನಶೂನ್ಯರೇ? ನಮ್ಮ ತೆರೆದ ಹೃದಯ-ವಿಶಾಲ ಮನೋಭಾವ ಎಲ್ಲ ಅರ್ಥವಾಗಬೇಕಾದರೆ ತುಂಬಿದ ಸಂಸಾರ ಸಹಿತ ಮಲಬಾರ್ ಎಕ್ಸ್‌ಪ್ರೆಸ್ ರೈಲು ಬಂಡಿಯಲ್ಲಿ ಪ್ರಯಾಣ ಮಾಡಿ. ಆಗ ನಿಮಗೆ, ಅನವರತ ನೆನೆಯುವ ಅನುಭವವಾಗುತ್ತದೆ! 'ರಾಷ್ಟ್ರೀಯ ಭಾವೈಕ್ಯ'-'ವಿವಿಧತೆಯಲ್ಲಿ ಏಕತೆ' ಇವೆಲ್ಲಾ ಕೇಳುವುದಕ್ಕೇನೋ ಇಂಪಾದ ಶಬ್ದಗಳು. ಆದರೆ ದೇಶದಲ್ಲೆಲ್ಲ ಸಂಚರಿಸುವಾಗ ನಾವು ಪಡುವ ಅನುಭವವೇ ಬೇರೆ. ನಮ್ಮನ್ನೇ ನಾವು ತಿಳಿಯದಿರುವಾಗ ಇನ್ನು ಇತರರನ್ನು ನಾವು ತಿಳಿಯುತ್ತೇವೆ ಎನ್ನುವುದು ಎಂಥ ಶುದ್ಧ ತಿಳಿಗೇಡಿತನವಾಗದು ?

ದಾವಣಗೆರೆ —ಎಲ್ ಹೆಲ್ಮಿನಾ ರೋಸಿ

ಸಂಚಿಕೆಯಲ್ಲಿ ಬಂದ ಕೆ. ಚಂದ್ರಮೌಳಿಯವರ ಲೇಖನವು, ಕನ್ನಡಿಗನ ವಿಕೃತ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ, ಅವನ ಮುಖಕ್ಕೆ ಹಿಡಿದ ಕನ್ನಡಿಯಾಗಿತ್ತು. ಆದರೆ, ಈ ಲೇಖನದಲ್ಲಿ ಹೊರನಾಡ ಕನ್ನಡಿಗರಲ್ಲಿ ನಿರಭಿಮಾನಕ್ಕಿಂತ ಹೆಚ್ಚಾಗಿ ತುಂಬಿರುವ ನೈಚ್ಯಾನುಸಂಧಾನವನ್ನು ಪ್ರಸ್ತಾಪಿಸಿಲ್ಲ. ಹಿಂದಿನ ಜನ್ಮದ ಪಾಪದ ಫಲವಾಗಿ ತಾವು ಕನ್ನಡಿಗರಾಗಿ ಜನಿಸಿರುವುದಾಗಿ ಹೊರನಾಡ ಕನ್ನಡಿಗರು ಭಾವಿಸಿದಂತಿದೆ. ಇದೇ ಕಾರಣಕ್ಕಾಗಿ ಬಹುಶಃ ಮುಂಬಯಿ, ಪುಣೆಯಲ್ಲಿರುವ ಕನ್ನಡಿಗರು (ಹೆಚ್ಚಾಗಿ ಹೈದ್ರಾಬಾದ್-ಮುಂಬಯಿ ಕರ್ನಾಟಕ ಭಾಗದವರು ಮತ್ತು ಕೊಂಕಣಿ ಮನೆ ಮಾತುಳ್ಳವರು) ತಾವು ಮರಾಠಿಗರೆಂದೇ ಹೇಳಿಕೊಳ್ಳುತ್ತಾರೆ. ಇದೇ ತರಹ ಮದ್ರಾಸಿನಲ್ಲಿರುವ ಹಳೆ ಮೈಸೂರು ಭಾಗದಿಂದ ಬಂದವರು ತಾವು ಕನ್ನಡಿಗರೆಂಬುದನ್ನು ಬಚ್ಚಿಟ್ಟು, ತಾವು ತಮಿಳರು ಎನ್ನುವಂತೆ ವರ್ತಿಸುತ್ತಾರೆ.

ಮುಂಬಯಿ —ಆರ್. ಜಿ. ಕುಂದರ್

ಉತ್ತಮ ಕೃತಿಗಳು

ಡಿಸೆಂಬರ್ ಸಂಚಿಕೆ ಅತ್ಯುತ್ತಮ ಕಥೆ (ಒಬ್ಬ ಹುಚ್ಚನ ದಿನಚರಿ), ಕವನ (ಕವಿ ಮತ್ತು ಕೋಗಿಲೆ), ಪ್ರಥಮ ಬೇಟೆ ಅನುಭವ, ಎಲ್ಲವೂ ಅಚ್ಚುಮೆಚ್ಚು. ವರ್ಷದ ಕೊನೆಯ ಚೊಕ್ಕ ಬಂಗಾರವಾಗಿತ್ತು, ನಿಜಕ್ಕೂ ಈ ಸಂಚಿಕೆ ಕನ್ನಡ ಕಸ್ತೂರಿಯೇ ಸೈ.

ತೊಗರಿಘಟ್ಟ —ಕೆ. ಎಸ್. ರತ್ನಯ್ಯ

ಹೀಗೇಕೆ ?

ನಾನು 'ಕಸ್ತೂರಿ'ಯ ಚಂದಾದಾರಳಾಗಿದ್ದೇನೆ. ಆದರೆ 'ಕಸ್ತೂರಿ'ಯು ಕೆಲವೇ ಲೇಖಕ-ಲೇಖಕಿಯರ ಮೊನಾಪೊಲಿಯಾಗಿದೆಯೋ ಎಂಬ ಸಂದೇಹ ನನ್ನನ್ನು ಆಗಾಗ ಕಾಡುತ್ತಿದೆ. ಅನೇಕ ಉತ್ಸಾಹಶಾಲಿ ಲೇಖಕರ ಲೇಖನಗಳು ಕಸದ ಬುಟ್ಟಿಗೆ ಸೇರುತ್ತಿರಬಹುದಲ್ಲವೇ?

ಕೊಯಮತ್ತೂರು —ಮಿಸ್ ಗಾಯತ್ರಿ

ಭಾರತಾಂಬೆಗೊಂದು ನಾಲಾಮಾಲೆ

ಡಿಸೆಂಬರ್ ತಿಂಗಳ 'ಕಸ್ತೂರಿ' ಸಂಚಿಕೆ ತೃಪ್ತಿಕರವಾಗಿದೆ. 'ಭಾರತಾಂಬೆಗೊಂದು

ನಾಲಾಮಾಲೆ' ಉತ್ತಮ ಲೇಖನ. ದಿನ ಪಾದಸ್ತೂರ್ ಅದರ ಆಶಯದಂತೆ ಈ ನಾಲಾಮಾಲೆ ನಿರ್ಮಾಣವಾದರೆ ಭಾರತದ ಕೃಷಿ ಉತ್ಪಾದನೆ ಹೆಚ್ಚುವುದಲ್ಲದೆ ಕೈಗಾರಿಕೆಗಳಿಗೂ ಸಹಾಯವಾಗಿ ಭಾರತ ಶೀಘ್ರ ಗತಿಯಲ್ಲಿ ಮುಂದುವರಿದ ಹಾಗೂ ಬಲಿಷ್ಠ ರಾಷ್ಟ್ರಗಳಲ್ಲೊಂದಾಗುವುದರಲ್ಲಿ ಸಂದೇಹವಿಲ್ಲ.

ಎ. ವಿ. ನಾರಾಯಣರ 'ಅಸ್ವೀಕೃತ' (ಪುಸ್ತಕ ವಿಭಾಗ) ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ವಸ್ತುವಿಷಯದಲ್ಲಿ ನಾವೀನ್ಯ ಕಾಣದಿದ್ದರೂ ಶೈಲಿ, ನಿರೂಪಣೆ ಹೊಸತನದಿಂದ ಕೂಡಿದೆ. ಆದರೆ ಅಂತ್ಯ ಮಾತ್ರ ಸ್ಪಷ್ಟವಾಗಿ ಅರ್ಥವಾಗದೆ ಸ್ವಲ್ಪ ಯೋಚಿಸುವಂತೆ ಮಾಡುತ್ತದೆ.

ಸಿದ್ದಯ್ಯನಪುರಂ —ಎಲ್. ಪ್ರೇಮಶೇಖರ
—ಎಸ್. ರಾಜೇಂದ್ರ

ಒಬ್ಬ ಹುಚ್ಚನ ದಿನಚರಿ

ಲೂ ಶೂನ್‌ರವರ ಚೀನೀ ಕಥೆ 'ಒಬ್ಬ ಹುಚ್ಚನ ದಿನಚರಿ' ಅನೇಕ ದಿನಗಳಲ್ಲಿ ನಾನು ಓದಿದ ಶ್ರೇಷ್ಠ ದರ್ಜೆಯ ಕಥೆ. ಇದು ಅವರ ಮೊಟ್ಟಮೊದಲ ಕಥೆಯಾದರೆ ಇನ್ನೂ ಉತ್ತಮ ಕಥೆಗಳು ಅವರ ಲೇಖನಿಯ ಮೂಲಕ ಬಂದಿರಬೇಕು. ಕೆಲವನ್ನಾದರೂ ಆಗೀಗ 'ಕಸ್ತೂರಿ' ಕನ್ನಡ ಓದುಗರಿಗೆ ನೀಡಲಿ. ಜಗದೀಶ ಮಂಗಳೂರಮಠರವರ ಅನುವಾದವೂ ಸರಾಗವಾಗಿ ಹರಿದುಬಂದಿದೆ.

ಪುಣೆ —ಸುಚೇತಾ ಪಾಟೀಲ

ಫರ್ಮಾನ ಅಂತಿಮ ಪ್ರಮೇಯ

ಡಿಸೆಂಬರ್ 'ಕಸ್ತೂರಿ'ಯಲ್ಲಿ ಬಂದ ಜಿ. ಟಿ. ನಾರಾಯಣರಾಯರ 'ಫರ್ಮಾನ ಅಂತಿಮ ಪ್ರಮೇಯ'ವನ್ನೋದಿದಾಗ ನನಗೆ ಎರಡು ಸಂದೇಹಗಳು ಬಂದವು.

೧. "ಪೈಥಾಗೊರಸನ ಕಾಲಾನಂತರ ಬಂದ ಆತನ ಪಂಥದ ಗಣಿತವಿದರು.....ಪೈಥಾಗೊರಸ್ ತ್ರಯಗಳನ್ನು ನೀಡಬಲ್ಲ ಸಾರ್ವತ್ರಿಕ ಸೂತ್ರವನ್ನು ಕೊಟ್ಟಿದ್ದಾರೆ: $X = 2n$, $Y = n^2 - 1$, $Z = n^2 + 1$."- ಎಂದು ಹೇಳುತ್ತಾರೆ ಲೇಖಕರು.

ಆದರೆ, $n = 2$ ಇಟ್ಟುಕೊಂಡಾಗ '3, 4, 5' ತ್ರಯವನ್ನು ಸೂತ್ರ ನೀಡುವುದಿಲ್ಲ. ಗಣಿತವಿದರ ಪರವಾನಗಿ ಪಡೆಯದೇ x ಮತ್ತು y ಗಳು ತಮಗೆ ಕೊಡಲ್ಪಟ್ಟ ಬೆಲೆಗಳನ್ನು ಪರಸ್ಪರ ಬದಲಾಯಿಸಿಕೊಂಡುಬಿಡುತ್ತವೆ.

೨. ಮುಂದೆ '5, 12, 13.' ತ್ರಯವನ್ನು ಪಡೆಯಲು ಹೊರಟು $n = 2.5$ ಎಂದಿಟ್ಟುಕೊಂಡೆ. x ತನ್ನ ಬೆಲೆಯಾದ 5ನ್ನು ಕೊಟ್ಟಿತು. y ಮತ್ತು zಗಳು ತಮ್ಮ ಬೆಲೆಗಳಾದ 12 ಮತ್ತು 13 ನ್ನು ಕೊಡಲು ಖಡಾಖಂಡಿತವಾಗಿ ನಿರಾಕರಿಸಿಬಿಟ್ಟವು.

ಮೈಸೂರು —ಐ. ಎಸ್. ನಾಗರಾಜ

[೧. ಸೂತ್ರಗಳಲ್ಲಿ nಗೆ ನಿರ್ದಿಷ್ಟ ಪೂರ್ಣಾಂಕ ಬೆಲೆಗಳನ್ನು ಆದೇಶಿಸಿದಾಗ ಪೈಥಾಗೊರಸ್ ತ್ರಯಗಳು ದೊರೆಯುತ್ತವೆ ಎಂಬುದು ಮುಖ್ಯ, ತ್ರಯಗಳ ಕ್ರಮ ಅಲ್ಲ. ಯಾವುದೇ ತ್ರಯದಲ್ಲಿನ ಅತಿ ದೊಡ್ಡ ಸಂಖ್ಯೆಯ ವರ್ಗ ಇತರ ಎರಡು ಸಂಖ್ಯೆಗಳ ವರ್ಗಗಳ ಮೊತ್ತಕ್ಕೆ ಸಮನಾಗಿರಬೇಕು ಎಂಬುದು ಇಲ್ಲಿನ ನಿಯಮ. 3, 4, 5 ಆಗಲಿ, 5, 3, 4 ಆಗಲಿ, 4, 3, 5 ಆಗಲಿ ಈ ನಿಯಮಕ್ಕೆ ಒಳಪಡುತ್ತವೆ.

೨. nಗೆ ಪೂರ್ಣಾಂಕ ಬೆಲೆಗಳನ್ನು ಮಾತ್ರ ಆದೇಶಿಸಬೇಕು ಎಂಬುದು ಇಲ್ಲಿನ ನಿರ್ಬಂಧ. ಇದನ್ನು ಉಲ್ಲಂಘಿಸಿ nಗೆ 2.5 ಬೆಲೆಯನ್ನು (ಇದು ಪೂರ್ಣಾಂಕವಲ್ಲ) ಆದೇಶಿಸಲು ನಮಗೆ ಹಕ್ಕಿಲ್ಲ. ಉಲ್ಲಂಘಿಸಿದ್ದೇ ಆದರೆ, ಸಹಜವಾಗಿ, ಲಭ್ಯ ಉತ್ತರ ತಪ್ಪಾಗಿರುತ್ತದೆ.]

ಮೈಸೂರು —ಜಿ. ಟಿ. ನಾರಾಯಣರಾವ್

ಕಸ್ತೂರಿ

ಸಂಚಿಕೆ: ೫ ಕಸ್ತೂರಿ, ಜನೆವರಿ ೧೯೭೯ ವರ್ಷ: ೨೩

ಐದು ಕತ್ತೆ ಭಾರ....

—ಪ. ರಾಮಕೃಷ್ಣ ಶಾಸ್ತ್ರಿ

ಯೇಸು ಕ್ರಿಸ್ತ ಒಮ್ಮೆ ಒಬ್ಬ ವ್ಯಾಪಾರಿಯನ್ನು ಕಂಡ. ಐದು ಕತ್ತೆಗಳ ಮೇಲೆ ಅವು ಹೊರಲಾರದಷ್ಟು ಹೊರೆಯನ್ನು ಆ ವ್ಯಾಪಾರಿ ಹೊರಿಸಿದ್ದ. ಯೇಸುವು ಅವನೊಂದಿಗೆ. "ಯಾವ ಸಂತೆಗೆ ಹೊರಟಿದ್ದೀ? ಏನೇನು ಸರಕು ಇದೆ?" ಎಂದು ಕೇಳಿದ.

"ನನ್ನ ಸರಕುಗಳಿಗೆ ಪ್ರಪಂಚವೇ ಒಂದು ಸಂತೆ. ಇದೋ ನನ್ನ ಮೊದಲನೆಯ ಕತ್ತೆಯ ಮೇಲಿರುವ ಹೊರೆಗೆ ದುರಾಡಳಿತ ಎಂದು ಹೆಸರು," ಎಂದ ವ್ಯಾಪಾರಿ ಗಂಭೀರವಾಗಿ.

"ಇದಕ್ಕೆ ಯಾರು ಗಿರಾಕಿಗಳು?" ಯೇಸು ಪ್ರಶ್ನಿಸಿದ.

"ರಾಜರೂ, ಆಡಳಿತಗಾರರೂ ಇದನ್ನು ಕೊಳ್ಳುತ್ತಾರೆ," ಎನ್ನುತ್ತಾ ವ್ಯಾಪಾರಿ ಗರ್ವವನ್ನೂ ಅಹಂಭಾವವನ್ನೂ ಹೊತ್ತಿರುವ ಕತ್ತೆಯನ್ನು ತೋರಿಸಿ, "ಇದರ ಗಿರಾಕಿಗಳು ಧನವಂತರು," ಎಂದ.

ಮೂರನೆಯ ಕತ್ತೆಯ ಮೇಲೆ ಯೋಗ್ಯತಾಹೀನತೆಯ ಸರಕು ಇತ್ತು. "ಇದು ನನ್ನಂತಹ ವರ್ತಕರಿಗೇ

ಬೇಕಾದ ಬಂಡವಾಳ!" ವ್ಯಾಪಾರಿ ಮುಗುಳ್ನಗುತ್ತ ಹೇಳಿದ.

ನಾಲ್ಕನೆಯ ಕತ್ತೆಯ ಮೇಲಿರುವುದು ವಂಚನೆ. "ಈ ಸರಕನ್ನು ದಾಸಿಯರು ವಿಪುಲವಾಗಿ ಕೊಳ್ಳುತ್ತಾರೆ." ನುಡಿದ ವ್ಯಾಪಾರಿ.

"ಕೊನೆಯ ಕತ್ತೆಯ ಮೇಲೆ ಹೇರಿರುವುದು ಶಾಂತಿ. ಅದನ್ನು ಅಪರೂಪವಾಗಿ ಯಾರಾದರೂ ಜ್ಞಾನಿಗಳೋ ಪಂಡಿತರೋ ಕೊಳ್ಳುತ್ತಾರೆ." ಎಂದು ವಿವರಿಸಿದ ವ್ಯಾಪಾರಿ, "ನಾನು ಗಿರಾಕಿಗಳನ್ನು ಅರಸಿ ಕೊಂಡು ಹೋಗಬೇಕಾಗಿಲ್ಲ. ಜಗತ್ತಿನ ಜನತೆಯೆಲ್ಲಾ ನನ್ನ ಗಿರಾಕಿಗಳು. ಅವರಾಗಿಯೇ ನನ್ನನ್ನು ಹುಡುಕಿಕೊಂಡು ಬರುತ್ತಾರೆ." ಎಂದ.

ಕ್ರಿಸ್ತ ತಲೆಯಲ್ಲಾಡಿಸಿ, "ನಿನ್ನ ಹೆಸರೇನು?" ಎಂದು ಕೇಳಿದ.

"ಇಪ್‌ಲಿಸ್" (ಸೈತಾನ) ಎಂದು ಬಂದಿತು ಉತ್ತರ.

ನಿಮಗಿದು ಗೊತೆ ?

ಮನುಷ್ಯನ ಚರ್ಮದಿಂದ ಬೈಂಡ್‌ಮಾಡಿ ಇರಿಸಿದ ಪುಸ್ತಕವೊಂದು ಇದೆಯೆಂದರೆ ಬಹುಶಃ ಯಾರು ನಂಬಲಿಕ್ಕಿಲ್ಲ. ಆದರೆ ಅಂಥದೊಂದು ಪುಸ್ತಕ ಇದೆ- ಅದು ಕೂಡ ಇಂಗ್ಲಂಡಿನಲ್ಲಿಯೇ ಇದೆ. ವಿಲಿಯಂ ಕಾರ್ಡರನನ್ನು ೧೮೨೮ ರಲ್ಲಿ ತನ್ನ ಪ್ರೇಯಸಿ-ಮಾರಿಯಾ ಮಾರ್ಟನಳ ಕೊಲೆ ಮಾಡಿದ ಕೊಲೆಯ ಆರೋಪದ ಮೇಲೆ ಬಂಧಿಸಿ ಅವನ ಮೇಲೆ ಮೊಕದ್ದಮೆ ಹೂಡಲಾಯಿತು. ಬಹು ದಿನಗಳ ವರೆಗೆ ನಡೆದ ಆ ಮೊಕದ್ದಮೆಯ ತೀರ್ಪು ಬಹು ವಿಚಿತ್ರವಾದಗಿತ್ತು.

ಕಾರ್ಡರನಿಗೆ ಮರಣದಂಡನೆಯನ್ನು ವಿಧಿಸಲಾಯಿತು. ಅದಕ್ಕೂ ಭೀಭತ್ಸ ಸಂಗತಿಯೆಂದರೆ ಆ ಮೊಕದ್ದಮೆಯ ಕಾಗದ ಪತ್ರಗಳನ್ನು ಅವನ ಮೈಯಿಂದ ಸುಲಿದ ಚರ್ಮದಿಂದ ಬೈಂಡ್ ಮಾಡಿಸಿ ಇಡಲಾಯಿತು. ಅದು ಇಂದಿಗೂ ಸೇಂಟ್ ಎಡ್ಮಂಡ್ಸಿನ ಮೈಸೆಸ್ ಹಾಲ್‌ನೊಳಗೆ ಸುರಕ್ಷಿತವಾಗಿದೆ. ಇಂಥ ಉದಾಹರಣೆಯು ಜಗತ್ತನೊಳಗೆ ಇನ್ನೊಂದು ಸಿಗುವುದೇ ಇಲ್ಲ.

-ಸಂಗ್ರಹ: ಶಿವದೇವ ಬ್ಯಾಗವಾಟ

ಅಜ್ಜ-ಮೊಮ್ಮಗ

ಅಬ್ರಹಾಂ ಲಿಂಕನ್ ಮತ್ತು ಅವರ ಅಜ್ಜ ಇಬ್ಬರೂ ತುಪಾಕಿಗೆ ಆಹುತಿಯಾಗಿ ಮೊದಲು ಅಜ್ಜ ನಂತರ ಮೊಮ್ಮಗ ಸಾವನ್ನಪ್ಪಿದರು. ಇಬ್ಬರ ಹೆಸರೂ ಅಬ್ರಹಾಂ ಲಿಂಕನ್ ಎಂದೇ. ಇಬ್ಬರ ಪತ್ನಿಯರ ಹೆಸರುಗಳೂ ಮೇರೀ, ಇಬ್ಬರ ಗಂಡುಮಕ್ಕಳ ಹೆಸರುಗಳೂ ಥಾಮಸ್ ಎಂದು.

-ನಂಗಲಿ ಎಂ. ಶಿವಾನಂದಂ

ಇದು ಅವರ ಜನ್ಮಶತಾಬ್ದಿ ವರ್ಷ

ರಾಜಾಜಿಯ ದೃಷ್ಟಿಯಲ್ಲಿ ಹಿಂದೂ ಧರ್ಮ

ಆಧುನಿಕ ಭಾರತದ ಮಹಾಮುತ್ಸದ್ದಿಗಳಲ್ಲಿ ರಾಜಾಜಿ ಅವಿಸ್ಮರಣೀಯ ಹೆಸರು. ಅವರು ಮಹಾಮುತ್ಸದ್ದಿಯಾಗಿದ್ದಂತೆಯೆ ವಿದ್ವಾಂಸರೂ ಜ್ಞಾನಸಂಪನ್ನರೂ ಎನಿಸಿದ್ದರು. ತಮಿಳು, ಇಂಗ್ಲೀಷುಗಳೆರಡರಲ್ಲೂ ಅತ್ಯಂತ ಪರಿಣಾಮಕಾರಿ ಶೈಲಿಯಲ್ಲಿ ಬರೆಯಬಲ್ಲವರಾಗಿದ್ದ ಅವರ ಶ್ರೇಷ್ಠ ಗ್ರಂಥಗಳಲ್ಲಿ 'ಹಿಂದೂಧರ್ಮ : ಸಿದ್ಧಾಂತ ಮತ್ತು ಜೀವನಮಾರ್ಗ' (HINDUISM : DOCTRINE AND WAY OF LIFE *) ಎಂಬುದೂ ಒಂದು. ಈ ಗ್ರಂಥದ ಮೊದಲಿನೆರಡು ಪ್ರಕರಣಗಳನ್ನು ಶ್ರೀ ಡಿ.ಎಸ್. ಕುಲಕರ್ಣಿಯವರು ಮಾಡಿಟ್ಟುಕೊಂಡ ಅನುವಾದದಿಂದ ಎತ್ತಿಕೊಂಡು ಇಲ್ಲಿ ಪ್ರಕಟಿಸುವುದರ ಮೂಲಕ 'ಕಸ್ತೂರಿ' ರಾಜಾಜಿಗೆ ತನ್ನ ಶ್ರದ್ಧಾಂಜಲಿಯರ್ಪಿಸುತ್ತಿದೆ.

'ಹಿಂದೂ ಧರ್ಮ' ಎಂಬುದು ಆಧುನಿಕ ಪದ. ಹಿಂದುಗಳ ಧಾರ್ಮಿಕ ಶ್ರದ್ಧೆಗೆ ನೀಡಲಾಗಿರುವ ಅನೇಕ ಹೆಸರುಗಳಲ್ಲಿ ವೇದಾಂತ ಎಂಬುದು ಅತ್ಯಂತ ಯೋಗ್ಯವಾದುದಾಗಿದೆ. ವೇದಾಂತವನ್ನು ಬೋಧಿಸುವವನೂ ಆಚರಿಸುವವನೂ ವೇದಾಂತಿಯೆನಿಸಿಕೊಳ್ಳುತ್ತಾನೆ. ಈ ಪದವು ಈವರೆಗೆ ಹಿಂದೂ ಸಮಾಜದ ಯಾವದೇ ಪಂಥದ ಸೊತ್ತು ಆಗಿಲ್ಲ.

ವೈಯಕ್ತಿಕ ಸ್ಪರ್ಧೆಯ ಅರ್ಥವ್ಯವಸ್ಥೆಯ ಬದಲು ನಿಯಂತ್ರಿತ ಸಹಕಾರಿ ಅರ್ಥವ್ಯವಸ್ಥೆ ತರುವದು ಅವಶ್ಯ. ಈ ವ್ಯವಸ್ಥೆಗೆ ಕೆಲವೊಂದು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ತಳಹದಿ ಇರಬೇಕು. ವೇದಾಂತದಿಂದ ಹೊರಹೊಮ್ಮುವ ನೀತಿ ಹಾಗೂ ಸಂಸ್ಕೃತಿ ಖಂಡಿತವಾಗಿ ಈ ಉದ್ದೇಶವನ್ನು ಈಡೇರಿಸಬಲ್ಲವು. ಇತ್ತೀಚಿನವರೆಗೆ ಪ್ರಬಲವಾಗಿದ್ದ ಒಂದು ವಿಧದ ಜೀವನ ಕ್ರಮ ಹತ್ತೊಂಬತ್ತನೆಯ ಶತಮಾನದಲ್ಲಿ ಉತ್ಕರ್ಷಕ್ಕೆ ಕಾರಣವಾಯಿತು. ಆದರೆ ಅದು ಈಗ ಸಲ್ಲದೆಂದು ಪ್ರತಿಯೊಬ್ಬರಿಗೂ ಅರಿವಾಗಿದೆ. ಖಾಸಗಿ ಅರ್ಥವ್ಯವಸ್ಥೆಯಲ್ಲಿ ಅಡಗಿರುವ ಸ್ಪರ್ಧಾತ್ಮಕತೆಯಿಂದ ಉತ್ಕರ್ಷವೇನೋ ಆಯಿತು; ಆದರೆ ಈ ಉತ್ಕರ್ಷದ ನೇರ ಪರಿಣಾ

---

* ಮುಂಬಯಿಯ ಭಾರತೀಯ ವಿದ್ಯಾಭವನದ ಭವನ್ಸ್ ಬುಕ್ ಯುನಿವರ್ಸಿಟಿ ಈ ಗ್ರಂಥದ ಮೂಲ ಪ್ರಕಾಶಕರು. ಅವರ ಅನುಮತಿಯಿಂದಲೇ ಈ ಲೇಖನ ಪ್ರಕಟವಾಗುತ್ತಿದೆ.

ಮವೇ ಅಸಮಾನ ವಿತರಣೆ. ಹಾಗೆ ನೋಡಿದರೆ ಅಭಿವೃದ್ಧಿ ಅಥವಾ ಏಳ್ಗೆಗೆ ಈ ಅಸಮಾನ ವಿತರಣೆಯೆ ಮೂಲಾಧಾರವಾಗಿತ್ತು. ಈ ಉತ್ಕರ್ಷವನ್ನು ಬೆಳೆಸಿ ಉಳಿಸಿಕೊಳ್ಳಲು ಸ್ವದೇಶದಲ್ಲೇ ಆಗಲಿ ಬೇರೆ ದೇಶಗಳಲ್ಲೇ ಆಗಲಿ ಕೆಲವರು ಕೆಲ ಪ್ರಮಾಣದಲ್ಲಿ ಬಡತನ ಅನುಭವಿಸಲೇಬೇಕಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಸಮಾಜದ ಯಾವುದೇ ವರ್ಗ ಅಥವಾ ಜಗತ್ತಿನ ಯಾವದೇ ಭಾಗದಲ್ಲಿ ದಾರಿದ್ರ್ಯವನ್ನು ಅಸಹ್ಯಕರ ಅವಮಾನವೆಂದು ಬಗೆಯಲಾಗುತ್ತಿದೆ. ಸದ್ಯದ ಐಹಿಕ ನೈತಿಕ ಮಟ್ಟಗಳಿಗಿಂತ ಹೆಚ್ಚಿನ ಮಟ್ಟ ಮುಟ್ಟಬೇಕೆಂಬುದು ಎಲ್ಲರ ಸ್ಪಷ್ಟ ಗುರಿಯಾಗಿದೆ. ಅಸಮಾನತೆಯು ಅವಶ್ಯ ಅಥವಾ ಸಹ್ಯವೆಂದು ಈಗ ಬಗೆಯಲಾಗುತ್ತಿಲ್ಲ. ಖಾಸಗಿ ಸ್ಪರ್ಧೆ ಅಥವಾ ಅನಿಯಂತ್ರಿತ ಅರ್ಥವ್ಯವಸ್ಥೆಯನಾ ಧರಿಸಿದ ಹಳೆಯ ಜೀವನ ಕ್ರಮವನ್ನು ಅರಾಜಕತೆಯೆಂದು ನಿಸ್ಸಂಕೋಚವಾಗಿ ಖಂಡಿಸಲಾಗಿದೆ. ಅದು ಕಾಡಿನಲ್ಲಿ ಕಾಣಬಹುದಾದ ಬಲವೇ ನ್ಯಾಯವೆನ್ನಬಹುದಾದಂಥ ವ್ಯವಸ್ಥೆಯ ಸುಧಾರಿತ ಆವೃತ್ತಿಯೆಂದೂ ಬಗೆಯಲಾಗುತ್ತಿದೆ. ವೈಯಕ್ತಿಕ ಜೀವನದ ಖಾಸಗಿ ವಿಷಯಗಳೆಂದು ಈವರೆಗೆ ಬಗೆಯಲಾಗುತ್ತಿದ್ದಂಥವುಗಳಲ್ಲಿ ಕೂಡ ಇಡೀ ಸಮಾಜದ ಹಿತದ ದೃಷ್ಟಿಯಿಂದ ಕೈ ಹಾಕಲೇಬೇಕು ಮತ್ತು ಸಮಾಜವು ಅವುಗಳನ್ನು ನಿಯಂತ್ರಿಸಲೇಬೇಕು ಎಂಬ ಅಭಿಪ್ರಾಯಕ್ಕೆ ಈಗ ಮನ್ನಣೆ ದೊರೆತಿದೆ. ಸಾರ್ವತ್ರಿಕ ಕಲ್ಯಾಣಕ್ಕೆ ಪ್ರತಿಯೊಂದು ರಾಷ್ಟ್ರದಲ್ಲೂ ಹೆಚ್ಚಿನ ಪ್ರಾಮುಖ್ಯವಿದೆ. ಜಗತ್ತಿನಲ್ಲಿಯ ರಾಷ್ಟ್ರಗಳು ಹಾಗೂ ಅವುಗಳ ಅವಶ್ಯಕತೆಗಳಲ್ಲಿ ಪರಸ್ಪರ ಸಂಬಂಧ ಬಹುಮಟ್ಟಿಗೆ ಹೆಚ್ಚಿದೆ. ತತ್ಪರಿಣಾಮವಾಗಿ ಆರ್ಥಿಕ ನಿಯಂತ್ರಣದ ಪರಿಮಿತಿಯು ರಾಷ್ಟ್ರದ ಗಡಿಗಳಿಗೆ ಮಾತ್ರ ಸೀಮಿತವಾಗಬಾರದೆಂಬುದು ಈಗ ಶತಃಸಿದ್ಧ ನಿಯಮವೆಂದು ಪರಿಗಣಿಸಲಾಗುತ್ತಿದೆ.

ಹಳೆಯ ನೀತಿ–ಹೊಸ ದೃಷ್ಟಿ

ಅದೇನೇಯಿರಲಿ, ನಿಯಂತ್ರಣವು ಅವಶ್ಯವೆಂದು ಒಪ್ಪಿಕೊಂಡರೂ ಕೂಡ, ವೈಯಕ್ತಿಕ ಸ್ವಾತಂತ್ರ್ಯವನೂ ಮುನ್ನುಜ್ಜೆ ಇಡುವಂಥ ಮನುಷ್ಯ ಶಕ್ತಿಯನ್ನೂ ನಾಶಪಡಿಸದಂತೆ ಮತ್ತು ಅವುಗಳಿಂದ ದೊರೆಯುವ ಸಂತೋಷವನ್ನು ಅದು ಹರಣಮಾಡದಂತೆ ನಿಯಂತ್ರಿತ ಅರ್ಥವ್ಯವಸ್ಥೆಯನ್ನು ರೂಪಿಸಬೇಕೆಂದು ಭಾವಿಸಲಾಗುತ್ತಿದೆ. ಈ ರೀತಿಯ ಹೊಂದಾಣಿಕೆಯ ಬಗ್ಗೆ ಕೆಲವರು ಆಶಾಭಾವನೆ ತಾಳುವದಿಲ್ಲ. ಅದರ ಸಾಧ್ಯತೆಯನ್ನು ಅವರು ನಿರಾಕರಿಸುತ್ತಾರೆ. ಆದರೆ ಅದು ಖಂಡಿತ ಸಾಧ್ಯವೆಂಬುದು ಇನ್ನಿತರರ ದೃಢ ಅಭಿಪ್ರಾಯ. ಆವಶ್ಯಕವಾದ ಸಮಗ್ರ ನಿಯಂತ್ರಣ ಹಾಗೂ ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯಗಳನ್ನು ಸಂಯೋಜಿಸಬಲ್ಲ ಅರ್ಥವ್ಯವಸ್ಥೆಯೊಂದಿದೆ ಎಂದು ಇವರು ಭಾವಿಸುತ್ತಾರೆ. ಆದರೆ ಪ್ರತಿ ವ್ಯಕ್ತಿಗೂ ಸ್ವಯಂಪ್ರೇರಿತ ಕಾರ್ಯದಲ್ಲಿ ಎಷ್ಟೊಂದು ಆನಂದ ದೊರೆಯುತ್ತದೆಂದರೆ, ಸಮಾಜದ ಹಿತದ ದೃಷ್ಟಿಯಿಂದ ನಿಯಂತ್ರಣ ಹೇರಿದರೂ ಈ ಸ್ವಾತಂತ್ರ್ಯವನ್ನು ಪೂರ್ಣವಲ್ಲದಿದ್ದರೆ ಕನಿಷ್ಠ ಪಕ್ಷ ಬಹುಮಟ್ಟಿಗೆಯಾದರೂ ಕಾಪಾಡಿಕೊಳ್ಳಲು ಸಾಧ್ಯವಾಗುವಂಥ ಪರಿಹಾರ ಕಂಡುಹಿಡಿಯಲು ಯತ್ನಿಸುವದು ಪ್ರಯೋಜನಕಾರಿಯಾದೀತು. ಸ್ವಾತಂತ್ರ್ಯ ಹೋರಾಟದಲ್ಲಿ ಸೋತೆವೆಂದು ಕೈ ಚೆಲ್ಲಿ ಕೊಡುವುದು ಎಂದೂ ಸಲ್ಲದು. ಕೊನೆಯಲ್ಲಿ ಯಾವದಾದರೊಂದು ಅಭಿಪ್ರಾಯ ದಿಟವೆಂದು ನಿಲ್ಲಬಹುದು, ಆದರೆ ಒಂದು ಮಾತಂತೂ ನಿಶ್ಚಿತ. ಅರ್ಥವ್ಯವಸ್ಥೆಯ ನಿಯಂತ್ರಣದಿಂದಾಗುವ ಬಾಧೆಗೆ ಹೊರಗಿನಿಂದ ಆ ನಿಯಂತ್ರಣವನ್ನು ನಮ್ಮ ಮೇಲೆ ಹೇರಲಾಗುತ್ತಂಬುದೆ ಕಾರಣ. ಹೊರಗಿನಿಂದ ಹೇರಲಾಗುವ ಈ ಒತ್ತಾಯದ ನಿಯಂತ್ರಣ ನೋವಿಗೆ ಕಾರಣವಾಗುವುದು ಮಾತ್ರವಲ್ಲ, ಅದು ಈ ನಿಯಂತ್ರಣ ವ್ಯವಸ್ಥೆಯ ಕಾರ್ಯದಕ್ಷತೆಯನ್ನೂ ಹಾಳುಮಾಡಬಹುದಾಗಿದೆ. ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಅನಿಯಂತ್ರಿತ ಅರ್ಥವ್ಯವಸ್ಥೆಗಿಂತ ಭಿನ್ನವಾದ ನಿಯಂತ್ರಿತ ಅರ್ಥವ್ಯವಸ್ಥೆಯಲ್ಲಿ ಅವಶ್ಯ ಅಥವಾ ಯೋಗ್ಯವೆಂದಾದ ಯಾವದೇ ಬಾಹ್ಯ ನಿಯಂತ್ರಣಕ್ಕೆ ಮೌಲ್ಯಗಳು ಹಾಗೂ ಸಂಸ್ಕೃತಿ ಅಂತಶ್ಚೇತನದಲ್ಲಿ ರೂಪುದಳೆದು ಗಟ್ಟಿಗೊಂಡ ನಿಯಮಗಳಂತೆ ಪೂರಕವಾಗಬಲ್ಲವು. ಇಂಥ ಆಧ್ಯಾತ್ಮಿಕ ಮೌಲ್ಯಗಳ ಕಟ್ಟಳೆ ಮತ್ತು ಇಂಥ ಸಂಸ್ಕೃತಿಯು ಸರಕಾರದ ಜಟಿಲ ನಿಯಂತ್ರಣಗಳಿರುವಾಗಲೂ ಸ್ವಾತಂತ್ರ್ಯ ಹಾಗೂ ಸ್ವಯಂಪ್ರೇರಣೆಯ ಪ್ರಜ್ಞೆಯನ್ನು ವ್ಯಕ್ತಿ ಕಾಪಾಡಿಕೊಳ್ಳಲು ಸಹಾಯಕಾರಿಯಾ



ಸ್ವಾತಂತ್ರ್ಯಕ್ಕೆ ತುಸುವೆ ಮುನ್ನ ದಿಲ್ಲಿಯಲ್ಲಿ ಇನ್ನೊಬ್ಬ ಮಹಾ ಮುತ್ಸದ್ದಿ ಸರದಾರ ಪಟೇಲ ಮತ್ತು ಅವರ ಮಗಳು ಮಣಿ ಬೇನ್ ಪಟೇಲರೊಂದಿಗೆ ರಾಜಾಜಿ.

ಗುವವು. ಈ ಪ್ರಜ್ಞೆಯನ್ನು ಜಾಗ್ರತವಾಗಿಸಬೇಕೆಂಬುದು ಹಳೆಯ ಸ್ವಾತಂತ್ರ್ಯ ಹಾಗೂ ಹೊಸ ವ್ಯವಸ್ಥೆಗಳಲ್ಲಿ ಹೊಂದಾಣಿಕೆ ಸಾಧಿಸಲೆತ್ನಿಸುವವರ ಗುರಿಯಾಗಿದೆ. ಅಂತಃಪ್ರೇರಣೆಯಿಂದ ಜಾಗ್ರತವಾದ ನಿಯಮ ನಿಯಂತ್ರಣಗಳು ಹೊರಗಿನಿಂದ ಹೇರಲಾದವುಗಳಿಗಿಂತ ಖಂಡಿತ ಕಾರ್ಯಕ್ಷಮವಾಗಿವೆ; ಅವುಗಳ ಉಲ್ಲಂಘನೆಯೂ ಅತಿ ವಿರಳ. ವೈಯಕ್ತಿಕ ಸ್ವಾತಂತ್ರ್ಯ ನಿರರ್ಥಕ ಭ್ರಮೆಯೆಂದು ಭಾವಿಸುವವರು ಮತ್ತು ನಿರ್ದಾಕ್ಷಿಣ್ಯವಾಗಿ ನಿಯಂತ್ರಣ ಹೇರಬೇಕೆಂದೆನ್ನುವವರು ಕೂಡ ಇದನ್ನು ಒಪ್ಪಿಕೊಳ್ಳಲೇಬೇಕು. ಸಮಾಜ-ಕಂಟಕರು ಈ ನಿಯಂತ್ರಣವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಲು ಯತ್ನಿಸುವರಲ್ಲದೆ ಅಕ್ರಮವಾಗಿ ಅಧಿಕಾರವನ್ನೂ ಸಂಪತ್ತನ್ನೂ ಗಿಟ್ಟಿಸುವ ಅವಕಾಶವನ್ನಾಗಿ ಮಾಡಿಕೊಳ್ಳುವರು. ಈ ಕೇಡನ್ನು ಹೇಗೆ ಎದುರಿಸಬೇಕೆಂಬುದೇ ನಿಯಂತ್ರಿತ ಅರ್ಥವ್ಯವಸ್ಥೆಯಲ್ಲಿ ಅತ್ಯಂತ ಕಠಿಣ ಹಾಗೂ ವಾಸ್ತವಿಕ ಸಮಸ್ಯೆ. ಸರ್ವಮಾನ್ಯ ನೀತಿ ಮತ್ತು ಸಂಸ್ಕೃತಿಯೊಂದೇ ಇದಕ್ಕೆ ಪರಿಹಾರ.

ಹಾಗಾದರೆ, ಈ ರೀತಿ ಪರಿಣಾಮಕಾರಿಯಾಗಬಲ್ಲ, ಜನರು ಒಪ್ಪಬಲ್ಲ, ನೀತಿ ಅಥವಾ ಸಂಸ್ಕೃತಿಯನ್ನು ರೂಪಿಸಲು ಸಾಧ್ಯವಿದೆಯೆಂಬುದಕ್ಕೇನಾದರೂ ಆಧಾರವಿದೆಯೆ? ಸಮಾಜದ ಹಿತಕ್ಕಾಗಿ ವ್ಯಕ್ತಿಯು ಜೀವನವನ್ನು, ಬಹುಮಟ್ಟಿಗೆ ನಿಯಂತ್ರಣಕ್ಕೊಳಪಡಿಸಲು ಸಹಾಯವಾಗುವ ಧಾರ್ಮಿಕ ಶ್ರದ್ಧೆಯನ್ನು ನಾವು ಯೋಜಿಸಬಲ್ಲೆವೆ, ಬೆಳೆಸಬಲ್ಲೆವೆ? ನಿರ್ದಿಷ್ಟವಾದ ಲೌಕಿಕ ಉದ್ದೇಶ ಸಾಧನೆಗಾಗಿ ಹೊಸ ಧರ್ಮವೊಂದರ ಸ್ಥಾಪನೆ ಸಾಧ್ಯವೆಂದು ಗ್ರಹಿಸಿದರೂ ಕೂಡ ಅದೇನೂ ಸುಲಭದ ಕಾರ್ಯವಲ್ಲವೆಂದು ತಟ್ಟನೆ ಒಪ್ಪಿಕೊಳ್ಳಬಹುದು. ನೂತನ ಅರ್ಥವ್ಯವಸ್ಥೆಗೆ ಸಮಂಜಸವಾದುದೆಂದು ಪ್ರಸ್ತುತ ಗ್ರಂಥಕರ್ತನು ಹೇಳಿಕೊಳ್ಳುವ ವೇದಾಂತವು ಹೊಸ ಧರ್ಮವೇನಲ್ಲ. ಅದು ಜಗತ್ತಿನ ಧರ್ಮಗಳ ಇತಿಹಾಸದಲ್ಲಿ ಅತ್ಯಂತ ಪ್ರಾಚೀನವಾದುದೆಂದು ಗುರುತಿಸಲ್ಪಡುತ್ತಿದೆ, ಮೂವತ್ತು ಕೋಟಿ ಸ್ತ್ರೀ-ಪುರುಷರ ಜೀವನದ ಸ್ಪಷ್ಟ ದಾರಿದೀಪವಾಗಿರುವ ಸಚೇತನ ಶ್ರದ್ಧೆಯಾಗಿದೆ. ಏಶಿಯದ ಬಹುಭಾಗದ ಜನರು ಮೂಲತಃ ಭಾರತದ್ದಾದ ಧಾರ್ಮಿಕ ಹಾಗೂ ನೈತಿಕ ವಿಚಾರಗಳಿಗೆ ನಿಕಟವಾದಂಥ ಧಾರ್ಮಿಕ, ನೈತಿಕ ವಿಚಾರಗಳನ್ನೇ ಅನುಸರಿಸುತ್ತಾರೆ. ಪಾಶ್ಚಿಮಾತ್ಯರು ದೀರ್ಘಕಾಲದಿಂದ ಕ್ರೈಸ್ತ ಧರ್ಮ ಅಂಗೀಕರಿಸಿದ್ದರೂ ಕೂಡ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳ ಸಾಹಿತ್ಯ, ತತ್ವಜ್ಞಾನಾದಿಗಳಿಗೆ ಭಾರತದ ವೇದಾಂತವೇ ಸ್ಫೂರ್ತಿಯ ಸೆಲೆಯಾಗಿದೆ. ವೇದಾಂತದ ಮೂಲಭೂತ ತತ್ವಗಳ ಪ್ರತಿಪಾದನೆಯು ಜಗತ್ತಿನಲ್ಲಿಯ ಎಲ್ಲ ಧರ್ಮಗಳ ಬಗ್ಗೆ ಆಸ್ಥೆಯುಳ್ಳವರಿಗೆ ಸಾಕಷ್ಟು ತಿಳವಳಿಕೆ ನೀಡುತ್ತದೆ; ಅದರ ಜೊತೆಗೆ ಲೌಕಿಕ ವಿಷಯದಲ್ಲಿ ಪ್ರಪಂಚವನ್ನು ಪುನರ್ವ್ಯವಸ್ಥೆಗೊಳಿಸಬಯಸುವ ಮುಂದಾಳುಗಳ ಲಕ್ಷ್ಯವನ್ನೂ ಕೆಲ ಮಟ್ಟಿಗೆ ಸೆಳೆಯುತ್ತದೆ.

ಸತ್ಯ ಮತ್ತು ಮನಸ್ಸು

ರಾಜಕೀಯ ವಿಚಾರಗಳು ಸುತ್ತಲೂ ಸಂಭವಿಸುತ್ತಿರುವ ಘಟನೆಗಳ ತುಳಿತದಿಂದಲೇ ತತ್ತರಿಸುತ್ತಿವೆ. ಹೀಗಿರುವಾಗಲೂ ಅವುಗಳ ಭಕ್ತರು ಸತ್ತರೂ ಬಿಡೆನೆಂಬಂಥ ಛಲದಿಂದ ಅವುಗಳಿಗೆ ಅಂಟಿಕೊಂಡಿದ್ದಾರೆ. ಜಗತ್ತು ಅನಾಹುತದ ಮುಸುಕನ್ನೇ ಹೊದ್ದು ನಿಂತಿದೆ. ಮಾನವ ಜನಾಂಗವು ವಿನಾಶಕ್ಕೆಳಸಬಾರದೆಂದಿದ್ದರೆ, ವಿಚಾರವಂತರು ನಾಗರಿಕತೆ ಹಾಗೂ ಅಂತಾರಾಷ್ಟ್ರೀಯ ನಡವಳಿಕೆ ತತ್ವಗಳಿಗೆ ಹೆಚ್ಚು ಸುಭದ್ರವಾದ ನೆಲೆಗಟ್ಟನ್ನು ಕಂಡುಹಿಡಿಯಬೇಕಾಗುವದು. ಪ್ರಪಂಚದ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲೊಂದು ಇಂಥ ನೆಲೆಗಟ್ಟು ಆಗಬಲ್ಲದಾಗಿದ್ದರೆ, ಆಸ್ಥೆಯುಳ್ಳವರು ಪರೀಕ್ಷಿಸಿ ಅಂಗೀಕರಿಸುವದಕ್ಕಾಗಿ ಅದರ ತತ್ವಗಳನ್ನು ಹೆಚ್ಚು ಸ್ಪಷ್ಟ ಭಾಷೆಯಲ್ಲಿ ಮುಂದಿರಿಸುವದು ಯೋಗ್ಯ.

ಸತ್ಯವು ಅಖಂಡವೂ ಅವಿಭಾಜ್ಯವೂ ಆಗಿದೆ ಮತ್ತು ಎಲ್ಲ ಬಾಹ್ಯ ಪ್ರಚೋದನೆಗಳ ಪೀಡೆಗೊಳಗಾಗುವ ಮನುಷ್ಯನ ಮನಸ್ಸು ವೈಚಾರಿಕ ಸೌಹಾರ್ದ ಹಾಗೂ ಸಾಮರಸ್ಯದ ಅಧಿಷ್ಠಾನವಾಗಿದೆ. ಕೆಲವು ಉದ್ದೇಶಗಳಿಗಾಗಿ ಸತ್ಯವನ್ನು ಅಂಗೀಕರಿಸುವದು, ಇನ್ನಿತರ ಉದ್ದೇಶಗಳಿಗಾಗಿ ಅದನ್ನು ತಿರಸ್ಕರಿ

ಸುವದು ಮನಸ್ಸಿಗೆ ಸಾಧ್ಯವಾಗಲಾರದು. ಮನಸ್ಸು ಪರಸ್ಪರ ವಿರೋಧಿ ನಿಯಮಗಳನ್ನು ಒಪ್ಪಿಕೊಳ್ಳು ವುದಕ್ಕೆ ಅನುವು ನೀಡುವುದು ಬುದ್ಧಿವಂತಿಕೆಯಾಗ ಲಾರದು. ಭೌತಿಕ ವಿಜ್ಞಾನದ ನಿಯಮಗಳು ಮತ್ತು ಅಧ್ಯಯನ ಇಂದು ಕಡೆಗಣಿಸಲಾಗದಷ್ಟು ಭದ್ರವಾಗಿ ನೆಲೆಯೂರಿವೆ. ಹಾಗೆ ನೋಡಿದರೆ, ಅರ್ವಾಚೀನ ಕಾಲದ ಅತ್ಯಂತ ಪ್ರಬಲವೂ ವ್ಯಾಪಕವೂ ಆದ ವಿಧಾನವು ಅದಾಗಿದೆ. ಭೌತಿಕ ವಸ್ತುಗಳು ಹಾಗೂ ಶಕ್ತಿಗಳು ಸೂಕ್ಷ್ಮ ಪರೀಕ್ಷೆ ಮತ್ತು ನಾನಾ ವಿಧದ ಪ್ರಯೋಗಗಳಿಗೊಳಪಡಲು ಸಾಕಷ್ಟು ಅವಕಾಶ ನೀಡುತ್ತವೆ. ಹೀಗಾಗಿ ಆ ಕ್ಷೇತ್ರದಲ್ಲಿಯ ಜ್ಞಾನದ ಬೆಳವಣಿಗೆಯು ನೈತಿಕ ಅಥವಾ ತತ್ವಜ್ಞಾನ ರಂಗ ದಲ್ಲಿಯದಕ್ಕಿಂತ ಹೆಚ್ಚು ಶೀಘ್ರಗತಿಯಲ್ಲಿ ಹಾಗೂ ಗಣನೀಯ ಪ್ರಮಾಣದಲ್ಲಿ ನಡೆಯುತ್ತದೆಂಬು ದರಲ್ಲಿ ಅಚ್ಚರಿಯೇನಿಲ್ಲ. ಭೌತಿಕ ವಿಜ್ಞಾನವು ರೂಪ ಮತ್ತು ವಿಚಾರಗಳ ವಿಷಯದಲ್ಲಿ ಅನುಸರಿಸುವ ವಿಧಾನಗಳನ್ನೂ ತರ್ಕವನ್ನೂ ಅಂಗೀಕರಿಸಲೇ ಬೇಕು; ಮತ್ತು ಅವುಗಳನ್ನು ಇನ್ನಿತರ ನಿಯಮ ಗಳನ್ನು ರೂಪಿಸುವಲ್ಲಿ ಮಾದರಿಗಳೆಂದು ಪರಿಗ್ರ ಹಿಸಬೇಕು. ಅವುಗಳ ವಿರುದ್ಧ ಹೋಗುವದು ಒಳ್ಳೆಯದಲ್ಲ. ವೈಜ್ಞಾನಿಕ ಪದ್ಧತಿಯ ಅಂಗೀ ಕಾರವು ಧರ್ಮದ ಸೋಲಲ್ಲ; ಆದರೆ ಅದು ಧರ್ಮದ ಒಂದು ಮುಖವೇ ಆದ ಸತ್ಯದ ಪಾರ ಮ್ಯದ ಅಂಗೀಕಾರ. ಧರ್ಮವು ಎಂದೂ ವಿಜ್ಞಾನಕ್ಕೆ ವಿಸಂಗತವಾಗಲಾರದು ಎಂಬುದು ಅದರ (ಧರ್ಮ) ಬಗೆಗಿನ ಸರಿಯಾದ ದೃಷ್ಟಿಯಾಗಿದೆ. ಆದರೆ ಅನೇಕ ವೇಳೆ ಧಾರ್ಮಿಕ ನಿಯಮಗಳು ವೈಜ್ಞಾನಿಕ ಪ್ರಪಂ ಚದ ಅಂಗೀಕೃತ ಸಿದ್ಧಾಂತಗಳಿಗೆ ವಿಸಂಗತವಾಗಿರು ತ್ತವೆಂಬುದು ಸರ್ವವಿದಿತವಿದೆ.

ಧಾರ್ಮಿಕ ಹಾಗೂ ನೈತಿಕ ಸಿದ್ಧಾಂತಗಳು ಮತ್ತು ರಾಜಕೀಯ ಚಟುವಟಿಕೆಗಳನ್ನು ನಿರ್ದೇ ಶಿಸುವ ಅನುಕೂಲಸಿಂಧು ತತ್ವಗಳ ನಡುವಿನ ವೈಷಮ್ಯವು ಇನ್ನೂ ಮಹತ್ತರವಾಗಿರುತ್ತದೆ. ಅವುಗಳಲ್ಲಿಯ ಪರಸ್ಪರ ವಿರೋಧ ಭಾವವನ್ನು ಕಡೆಗಣಿಸಲಾಗುತ್ತಿದೆ ಇಲ್ಲವೆ ಅದು ಅನಿವಾರ್ಯ ವೆಂದು ಬಗೆಯಲಾಗುತ್ತಿದೆ. ಅವುಗಳಲ್ಲಿ ಪರಸ್ಪರ ಹೊಂದಾಣಿಕೆ ಸಾಧಿಸಲು ಯಾವದೇ ಯತ್ನ ನಡೆಸ ಲಾಗಿಲ್ಲ. ಧರ್ಮ ಮತ್ತು ವಾಸ್ತವಿಕ ವ್ಯವಹಾರಗಳ ನಡುವಿನ ವಿರೋಧ ಭಾವ ಅನಿವಾರ್ಯವೆಂದು ಒಪ್ಪಿಕೊಳ್ಳಲೇಬೇಕೆಂಬುದೂ ಒಂದು ಅಂಗೀಕೃತ ಸಿದ್ಧಾಂತವಾಗಿಬಿಟ್ಟಿದೆ. ಇದು ಹೊಂದಾಣಿಕೆಯ ರೀತಿಯಲ್ಲ, ಆದರೆ ದೀರ್ಘಕಾಲದಿಂದ ಬೇರೂ ರಿರುವ ಅಸಂಗತಿಯಾಗಿದೆ. ಇದು ಮನುಷ್ಯರ ಮನಸ್ಸನ್ನು ಗಾಸಿಗೊಳಿಸುತ್ತದೆ. ತತ್ಪರಿಣಾಮವಾಗಿ ಸಮಾಜದ ಸ್ವಾಸ್ಥ್ಯವೂ ಹಾಳಾಗುತ್ತದೆ. ಅಪಾಥ ಭೂತಿತನ ವ್ಯಾಪಕವಾಗಿ ಹರಡಿಕೊಂಡಿದೆ. ಅದರ ಅಸ್ತಿತ್ವ ಗ್ರಹಿತವೆಂಬ ಕಾರಣದಿಂದ ಅದು ನಿರುಪದ್ರವಕಾರಿಯಾಗಲಾರದು. ಸ್ಪಷ್ಟ ಗೋಚರ ವಾದ ತೀವ್ರ ವ್ಯಾಧಿಯಂತಲ್ಲದೆ ಆಪಾಥಭೂತಿತನ ಶರೀರವನ್ನು ಒಳಗಿನಿಂದಲೇ ಕೊರೆಯುವ ಆಂತರಿಕ ಜ್ವರದಂತಿದೆ.

ಹಿಂದೆ–ಇಂದು–ಮುಂದು

ವಿಜ್ಞಾನ,ಧರ್ಮ,ರಾಷ್ಟ್ರೀಯ ರಾಜಕಾರಣ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಕಂಡುಬರುವ ಅಸಂಗತಿಗಳಿಂದಾಗಿ, ವಿರೋಧಾಭಾಸದಿಂದಾಗಿ ಮಾನವನ ಶಕ್ತಿ ಹ್ರಾಸವಾಗುತ್ತದೆ. ಈ ನಿರರ್ಥಕ ಜೀವನ ಕ್ರಮದಲ್ಲಿಯೇ ನಾವು ಬಹು ದೀರ್ಘಕಾಲ ದಿಂದ ಸಾಗಿ ಬಂದಿದ್ದೇವೆ. ಆದರೆ ಹಾಗೆಯೇ ಮುಂದೆ ಸಾಗುವದು ಜಾಣತನದ್ದೆ? ಹಿತಕರವೆ? ನಾವು ಎದುರಿಸಬೇಕಾಗಿರುವ ಸಮಸ್ಯೆಗಳ ಜಟಿಲತೆ ಹೆಚ್ಚುತ್ತಿದೆ. ಅಲ್ಲದೆ ತಪ್ಪಿನಿಂದಾಗುವ ತೊಂದರೆಗಳು ನಾವು ಗೆಲ್ಲಬೇಕಾದ ಸಮಸ್ಯೆಗಳ ಗಾತ್ರ ಹಾಗೂ ಸಂಖ್ಯೆಗಿಂತ ಹಿರಿಕೆಯ ಪ್ರಮಾಣದಲ್ಲೇ ವರ್ಧಿಸು ತ್ತಿವೆ. ಸಮಸ್ಯೆಗಳು ಸರಳವಾಗಿದ್ದಾಗ ವಾಸ್ತವಿಕವಾಗಿ ನಗಣ್ಯವೆನಿಸುತ್ತಿದ್ದಂಥವೇ ದೊಡ್ಡವೂ ಹೆಚ್ಚು ಕ್ಲಿಷ್ಟವೂ ಆದಾಗ ಭೂತಾಕಾರ ತಾಳುತ್ತವೆ.

ಸದ್ಯದ ಜಟಿಲ ಪ್ರಪಂಚದಲ್ಲಿ ನಮ್ಮನ್ನು ಪೀಡಿಸುತ್ತಿರುವ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಬೇಕೆಂದಾದರೆ ನಾವು ಅರಿತಿರುವ ನಿಸರ್ಗ, ನಿಯಮಗಳು, ನಂಬಿದ ತತ್ವಜ್ಞಾನ ಅನುಸರಿಸುವ ರಾಜನೀತಿ ಇವೆಲ್ಲವುಗಳಲ್ಲೂ ಒಂದು ಬಗೆಯ ಸಾಮರಸ್ಯವಿರುವಂತೆ ನೋಡಿಕೊಳ್ಳಬೇಕು.ಸತ್ಯದಲ್ಲಿ ನಮಗೆ ನಿಜವಾದ ನಂಬಿಕೆ ಇದೆಯೇ? ಇದು ಬಲು ಮುಖ್ಯ ಪ್ರಶ್ನೆ, ಮಾರ್ಮಿಕ ಪ್ರಶ್ನೆ. ನಮ್ಮಲ್ಲಿ ಆ

ನಂಬಿಕೆಯಿದ್ದರೆ, ನಾವು ಅವಶ್ಯಕವಾದ ಧೈರ್ಯ ತಂದುಕೊಂಡು ಕೃತಿಗಿಳಿಯಬೇಕು. ಹಿಂದಿನ ಕಾಲದ ವರ ಸಮಸ್ಯೆಗಳು ತೀರ ಸರಳವಾಗಿದ್ದವು, ಆದರೆ ನಾವು ನಮ್ಮ ಅತಿ ಕಠಿಣವಾದ ಸಮಸ್ಯೆಗಳನ್ನು ಎದುರಿಸುವಲ್ಲಿ ತೋರುವದಕ್ಕಿಂತಲೂ ಹೆಚ್ಚು ಧೈರ್ಯ ಹಾಗೂ ಸಾಹಸಿ ಮನೋಭಾವನೆಯಿಂದ ಅವರು ಅವುಗಳನ್ನು ಗೆಲ್ಲಲು ಶ್ರಮಿಸುತ್ತಿದ್ದರು. ಕಾರಣಗಳೇನೇಯಿದ್ದರೂ, ಈ ದೌರ್ಬಲ್ಯ ದುರ-ದೃಷ್ಟಕರ. ಅದಕ್ಕೆ ಕಾರಣವೇನೇ ಇರಲಿ, ನಾವು ಹತಾಶರಾಗಬಾರದು. ಹಿಂದಿನವರಿಂದ ಸಾಧ್ಯ ವಿದ್ದಷ್ಟು ಸ್ಫೂರ್ತಿ ಪಡೆದು ಮೂಲಭೂತ ವೈಚಾರಿಕ ಸಾಮರಸ್ಯ ತಂದುಕೊಳ್ಳಬೇಕು ಮತ್ತು ನಮ್ಮ ಮೂಲಭೂತ ನಂಬಿಕೆಗಳನ್ನು ಅವಶ್ಯ ಕಂಡಲ್ಲಿ ತಿದ್ದಿಕೊಳ್ಳಬೇಕು.

ಶ್ರದ್ಧೆ–ಅಷಾಢಭೂತಿತನ

ವೈಜ್ಞಾನಿಕ ಸಂಶೋಧನೆ ಮತ್ತು ಅಧ್ಯಯನ ಗಳಲ್ಲಿ ತೊಡಗಿದಾಗ ನಾವು ಕೆಲವೊಂದು ಸಿದ್ಧಾಂತ ಗಳನ್ನು ಯಾವ ಸಂಶಯವೂ ಇಲ್ಲದೆ ಒಪ್ಪಿಕೊಂಡು ಬಿಡುತ್ತೇವೆ. ಈ ಅಂಗೀಕೃತ ಸಿದ್ಧಾಂತಗಳನ್ನು ದೇವರು ಮತ್ತು ಧಾರ್ಮಿಕ ವಿಷಯಗಳ ಬಗೆಗೆ ವಿವೇಚಿಸುವಾಗ ಮನಸ್ಸಿಗೊಪ್ಪವೆಂದು ಬಿಟ್ಟು ಬಿಡುವದಾಗಲಿ ಅಥವಾ ತಿರಸ್ಕರಿಸುವದಾಗಲಿ ಸಾಧ್ಯವೆಂದು ನಂಬುವದು ತಪ್ಪು. ಸತ್ಯವಾಗಲಿ ಮಾನವನ ಮನಸ್ಸಾಗಲಿ ಇಂಥ ಅಸಹಜ ದಮುಸಿಕೆಗೆ ಮಣಿಯುವಷ್ಟು ಸುಲಭವಾಗಿರುವದಿಲ್ಲ. ಆದರೆ ಸತತ ವೈಜ್ಞಾನಿಕ ಪ್ರಗತಿಯ ಈ ಕಾಲದಲ್ಲೆಲ್ಲ ನಾವು ಇದನ್ನೇ ಯಶಸ್ವಿಯಾಗಿ ಸಾಧಿಸಿದ್ದೇವೇನೊ ಎಂದು ತೋರುವದಿಲ್ಲವೆ? ಇದಕ್ಕೊಂದು ವಿವರಣೆಯನ್ನೂ ಕೊಡಬಹುದು. ಸತ್ಯದಿಂದ ಸಿಡಿದುಹೋದ ಶ್ರದ್ಧೆಯು ಬರಿ ಆಷಾಢಭೂತಿತನ ಹಾಗೂ ಅಸಾಧ್ಯ ವನ್ನು ಸಾಧಿಸುತ್ತೇನೆ ಎಂಬುದೊಂದು ಚಿತ್ತಭ್ರಮೆ. ಪರಸ್ಪರ ವಿರೋಧವುಳ್ಳ ಇಬ್ಬಗೆಯ ಶ್ರದ್ಧೆಗಳು ಬಹುಶಃ ಶ್ರದ್ಧೆಗಳಾಗಿ ಉಳಿಯಲಾರವಲ್ಲದೆ ಮನಸ್ಸಿನ ನಿಷ್ಠೆಗೂ ಪಾತ್ರವಾಗಲಾರವು. ಅವುಗಳ ಲ್ಲೊಂದು ಶ್ರದ್ಧೆಯ ಮುಖವಾಡ ಧರಿಸಿಕೊಂಡು ಮೆರೆಯುತ್ತಿರಬೇಕಷ್ಟೆ. ಅದು ತನ್ನ ಸತ್ವಕ್ಕೆ ಎರವಾಗಿ ಕಳೆಗುಂದಿಹೋಗಿರಲೇಬೇಕು.

ರಾಜಕೀಯ ವ್ಯವಹಾರಗಳಲ್ಲಿ ಅನುಸರಿಸುವ ತತ್ವಗಳಿಗೆ ಪ್ರತಿಯಾಗಿ ಧರ್ಮ ಹಾಗೂ ನೀತಿಗಳ ಪ್ರತಿಪಾದನೆ, ನಿರೂಪಣೆ ಮಾಡುವಾಗ ನಾವು ಪರಸ್ಪರ ವಿರೋಧಿ ಶ್ರದ್ಧೆಗಳನ್ನನುಸರಿಸುವ ಕಲೆಯನ್ನು ಅದೇ ರೀತಿಯಲ್ಲಿ ಅಷ್ಟೇ ಅವಿವೇಕತನ ದಿಂದ ಸಾಧಿಸುತ್ತ ಬಂದಿದ್ದೇವೆ. ಇಲ್ಲಿಯೂ ಕೂಡ ನಾವು ಒಂದು ಕಾಲಕ್ಕೆ ಕೆಲವೊಂದು ದೃಢೀಕೃತ ಸಿದ್ಧಾಂತಗಳನ್ನು ಅಂಗೀಕರಿಸುತ್ತೇವೆ; ಮತ್ತೊಂದು ಕ್ಷಣಕ್ಕೆ ರಾಜಕೀಯ ವ್ಯವಹಾರಗಳ ವಿಷಯದಲ್ಲಿ ಅವುಗಳನ್ನು ಮೂಲೆಗೊತ್ತಲು ಬಯಸುತ್ತೇವೆ. ನಿಜವಾಗಿಯೂ ರಾಜಕೀಯ ಪದ್ಧತಿಯನ್ನು ಧಾರ್ಮಿಕ ತತ್ವಗಳ ಆಧಾರದ ಮೇಲೆ ನೆಲೆಗೊಳಿಸು ವದು ದಡ್ಡತನವೆಂದು ಸಾಮಾನ್ಯವಾಗಿ ಬಗೆಯಲಾ ಗುತ್ತದೆ. ಸರ್ ವಾಲ್ಟರ್ ಸ್ಕಾಟನಂಥ ಶುದ್ಧ ಸಾತ್ವಿಕ ಮನುಷ್ಯನು ಕೂಡ ಈ ರೀತಿ ಹೇಳಿದ್ದಾನೆ : "ಧಾರ್ಮಿಕ ಉದ್ದೇಶಗಳನ್ನು ಲೌಕಿಕ ವ್ಯವಹಾರ ಗಳಲ್ಲಿ ಅಳವಡಿಸಿಕೊಳ್ಳುವದು ಮಾನವ ಹೃದಯದ ಅಪಾರ ಭ್ರಾಂತಿಗಳಲ್ಲಿ ಜಾಲವೆನಿಸಲು ಯೋಗ್ಯ ವಾಗಿದೆ." ಧರ್ಮ ಮತ್ತು ರಾಜನೀತಿಗಳು ಬೇರೆ ಬೇರೆಯಾಗಿರುವದೇ ಒಳಿತು; ಅವುಗಳ ಮೂಲ ಭೂತ ಸಿದ್ಧಾಂತಗಳಲ್ಲಿ ಹೊಂದಾಣಿಕೆ ಸಾಧಿಸಲೆತ್ನಿ ಸುವದು ಮೂರ್ಖತನವೆಂದು ಅವನ ನಿಶ್ಚಿತಾಭಿ ಪ್ರಾಯ. ನಿತ್ಯಜೀವನದಲ್ಲಿ ಇದನ್ನು ಬಹುತೇಕವಾಗಿ ಯಥಾರ್ಥವೆಂದು ಅಂಗೀಕರಿಸಲಾಗಿದೆ. ಆದರೆ ಆ ಅಂಗೀಕಾರ ಸಾರ್ವತ್ರಿಕವಾಗಿದೆಂಬುದರಿಂದಾಗಿ ಅದೇನೂ ಕಡಿಮೆ ಅಪಾಯಕಾರಿಯಲ್ಲ. ಲೌಕಿಕ ಬುದ್ಧಿವಂತಿಕೆ ಹಾಗೂ ಧರ್ಮಗಳ ಎರಡು ವಿಭಿನ್ನ ರೀತಿಯ ಭಾಗಗಳನ್ನು ಒಂದೇ ಮನಸ್ಸಿನಲ್ಲಿ ಇಟ್ಟು ಕೊಂಡು ನಡೆಯುವುದು ಮತ್ತು ಅದಕ್ಕಾಗಿ ಆತ್ಮವಂಚನೆಯ ಹತ್ತಾರು ದಾರಿಗಳನ್ನು ಬಳಸು ವದು ಸಮಂಜಸವೂ ಜಾಣತನವೂ ಆಗಿದೆಯೆಂದು ಸಹಸ್ರಾವಧಿ ವರ್ಷಗಳಿಂದ ಭಾವಿಸುತ್ತಲೇ ಬರ ಲಾಗಿದೆ. ಇದಕ್ಕಿಂತ ಹೆಚ್ಚಿನ ಕೇಡು ಏನಂದರೆ, ಈ ಪ್ರತ್ಯೇಕತೆಯ ಕ್ರಮವನ್ನು ಮುಂದಿನ ಪೀಳಿಗೆಯ ವರೆಗೆ ಬಳುವಳಿಯಾಗಿ ನೀಡಲು ನಮ್ಮ ಮಕ್ಕಳ ಮನಸ್ಸನ್ನು ವಂಚಿಸುವದು ಕೂಡ ಬುದ್ಧಿವಂತಿಕೆ ಯೆಂದು ಬಗೆಯಲಾಗುತ್ತಿದೆ. ಪ್ರತಿಯೊಬ್ಬರ

ಮೇಲೂ ಕೆಲವೊಂದು ಮಕ್ಕಳನ್ನು ಪೋಷಿಸಿ ಬೆಳೆಸುವ ಮತ್ತು ಅವರ ಕೋಮಲ ಮನಸ್ಸನ್ನು ರೂಪುಗೊಳಿಸುವ ಹೊಣೆಗಾರಿಕೆಯಿದೆ. ತಂದೆ-ತಾಯಿ ಮತ್ತು ಶಾಲಾ ಶಿಕ್ಷಕರು ತಮ್ಮ ಅತ್ಯಂತ ಪವಿತ್ರ ಕರ್ತವ್ಯವನ್ನು ಪೂರಯಿಸಬೇಕಾಗಿರುವಲ್ಲಿ ಉದ್ದೇಶ ಪೂರ್ವಕವಾಗಿ ಕಪಟತನದಿಂದ ನಡೆದುಕೊಳ್ಳುತ್ತಾರೆ. ಅದರ ಪರಿಣಾಮವೆಂದರೆ ಮಕ್ಕಳು ತಮ್ಮ ಮುಂದಿನ ಪೀಳಿಗೆಗೆ ಈ ವೈಚಾರಿಕ ಅಸಂಗತಿಯನ್ನೇ ಸ್ಥಿರಗೊಳಿಸಿ ಬಳುವಳಿಯಾಗಿ ಕೊಡುತ್ತಾರೆ. ಇದು ಎಳೆಯರ ಮುಗ್ಧ ಮನಸ್ಸಿನ ದುರ್ವಿನಿಯೋಗವಲ್ಲ ದಿನ್ನೇನು? ಈ ಅಪ್ರಾಮಾಣಿಕವಲ್ಲದ ಕೆಲಸವನ್ನು ಮಾಡುವ ಹೊಣೆಯನ್ನು ತಂದೆ ತಾಯಿಗಳು ಪರಸ್ಪರರಿಗೆ. ಇಬ್ಬರೂ ಶಾಲಾ ಶಿಕ್ಷಕನಿಗೆ ಸಾಗಿಸಿ ಬಿಡಲು ಯತ್ನಿಸುತ್ತಾರೆ. ಆದ್ದರಿಂದ ಅಲ್ಲಿ ಅಹಿತಕರ ವಾದುದೆಲ್ಲ ಅನಿವಾರ್ಯವೇನೋ ಎಂದೆನಿಸುವಂಥ ರೀತಿಯಲ್ಲಿ ಎಲ್ಲವೂ ನಡೆದು ಕೇಡು ಮಾತ್ರ ಖಂಡಿತ ಆಗುತ್ತದೆ. ಕೆಲವೊಂದು ತತ್ವಗಳನ್ನು ಸರಿಯೆಂದು ಅಂಗೀಕರಿಸುವಂತೆ ಮಗುವಿಗೆ ಪೂರ್ತಿ ಮನದಟ್ಟು ಮಾಡಿಕೊಡವುದರ ಜೊತೆಗೆಯೆ ಕೃತಿಯಲ್ಲಿ, ಭೌತಿಕ ಪ್ರಯೋಜನಗಳನ್ನು ಪಡೆಯಬೇಕಿರುವಲ್ಲೆಲ್ಲ, ಈ ತತ್ವಗಳನ್ನು ಕೈಬಿಡುವಂತೆಯೂ ಬೋಧಿಸ ಲಾಗುತ್ತದೆ.

ಭ್ರಮೆಯ ರೂಪದಲ್ಲಿ ಹೊರತು ಪರಸ್ಪರ ವಿರೋಧಿ ವಿಚಾರಗಳನ್ನು ಏಕಕಾಲಕ್ಕೆ ಅಂಗೀ ಕರಿಸುವದು ಸಾಧ್ಯವಿಲ್ಲ; ನಿಷ್ಕಪಟ ರೀತಿಯಲ್ಲಿ ಅದನ್ನು ಸಾಧಿಸಿದರೂ ಅದು ಹಿತಕರ ವಿಧಾನವಾಗ ಲಾರದು. ಆಧ್ಯಾತ್ಮಿಕ ಮೃತ್ಯುವನ್ನೇ ಅದು ಬಲಿ ಬೇಡುತ್ತದೆ. ಈ ಭಾರೀ ಬೆಲೆ ತೆತ್ತು ನಾವು ಅಸತ್ಯವನ್ನು ಸೇವಕನ ಹಾಗೆ ಉಪಯೋಗಿಸಿಕೊಳ್ಳ ಲಾರೆವು. ಪಾಪಕ್ಕೆ ತೆತ್ತಬೇಕಾದ ಬೆಲೆಯೆಂದರೇ ಸಾವು ಎಂಬ ಅರ್ಥಪೂರ್ಣ ಮಾತಿನಲ್ಲಿ ರೂಪ ಗೊಂಡಿರುವುದು ಮಹಾನ್ ಸತ್ಯದ ಇನ್ನೊಂದು ಮುಖ ಮಾತ್ರ. ನಾವು ಸತತವಾಗಿ ತಪ್ಪು ಮಾಡುತ್ತಲೇ ನಡೆದರೆ ಚೈತನ್ಯದ ಸೆಲೆಗಳು ಬತ್ತಿ ಹೋಗುವದನ್ನು ತಡೆಯಲಾರೆವು.

ಮನುಷ್ಯನ ಮನಸ್ಸೊಂದು ಆಲೋಚನಾ ಯಂತ್ರ-ಭಾವನಾಯಂತ್ರ; ಅಷ್ಟೇ ಅಲ್ಲ ಮನು ಷ್ಯನಿಗೆ ಶಕ್ತಿಯು ಮೂಲವಾಗಿರುವಂಥ ಉತ್ಪಾ ದನಾ ಕೇಂದ್ರ ಯಂತ್ರಾಗಾರ. ಅಸಂಗತಿಯಿಂದ ಕೇಡಾಗುವುದು ಇಂಥ ಮನಸ್ಸಿಗೆ. ಈ ಯಂತ್ರವೇ ಕೆಟ್ಟು ನಿಂತರೆ ಮನುಷ್ಯ ಪ್ರಗತಿಗೆ ಅದಕ್ಕಿಂತ ಹೆಚ್ಚಿನ ಹಾನಿ ಮತ್ತೇನಿದೆ? ಮನ ಸ್ಸನ್ನು ಒಂದು ವ್ಯಾಪಾರಿ ಸಂಸ್ಥೆಗೆ ಹೋಲಿಸಿದರೆ ಅದರ ಬಂಡವಾಳವೇ ಎಲ್ಲ ಗಂಡು ಹೆಣ್ಣುಗಳ ಮನಸ್ಸಿನ ಒಟ್ಟಾರೆ ಮೌಲ್ಯವಲ್ಲವೆ? ಆಳವಾಗಿ ಬೇರೂರಿರುವಂಥ ಈ ತಾತ್ವಿಕ ವಿರೋಧಾಭಾಸವು ಈ ಬಂಡವಾಳದ ಸವಕಳಿಗೆ ಕಾರಣವಾಗುತ್ತದೆ. ಮನುಕುಲದ ಆಶಾಕಿರಣ ಮತ್ತೆ ಬೆಳಗಬೇಕಿದ್ದರೆ ಈ ಕೊಳೆಯನ್ನು, ಕೊಳೆತವನ್ನು ತಡೆಗಟ್ಟಲೇ ಬೇಕು.

ಹಿಂದಿನ ಕಾಲದಲ್ಲಿ ವಿಜ್ಞಾನ ಮತ್ತು ಧರ್ಮ ಗಳ ನಡುವೆ ಈಗಿರುವಷ್ಟು ವಿರೋಧವಿರಲಿಲ್ಲ. ವಿಜ್ಞಾನ ಆಗ ಅಷ್ಟು ಪ್ರಗತಿ ಹೊಂದಿರಲಿಲ್ಲವಾದ್ದ ರಿಂದ ಈ ಅಂತರ ಕಡಿಮೆಯಿದ್ದಿತು. ತತ್ಪರಿಣಾಮ ವಾಗಿ ಆಗಿನ ಕಾಲದಲ್ಲಿ ಧರ್ಮ ಮತ್ತು ತತ್ವಜ್ಞಾನಗಳಿಗೆ ಅಂಟಿಕೊಳ್ಳುವುದು ತೀವ್ರ ಅಸಂಗತಿಗಳಿಗೆ ಕಾರಣವಾಗಲಿಲ್ಲವಷ್ಟೆ ಅಲ್ಲ, ಪ್ರತಿಯಾಗಿ ಸಂಶೋಧನೆಗೆ ಆಧ್ಯಾತ್ಮದ ಬಲವ ನ್ನಿತ್ತು ಜನ ಮಹತ್ಸಾಧನೆಗಳನ್ನು ಮಾಡುವುದು ಶಕ್ಯವಾಯಿತು. ಆಗಿನ ಕಾಲದ ಜನರು ಪರಸ್ಪರ ವಿರೋಧಿ ಸಂಗತಿಗಳಲ್ಲಿ ನಂಬಿಕೆಯಿರಿಸಲು ಯತ್ನಿಸಲಿಲ್ಲವೆಂದೇ ಇದು ಸಾಧ್ಯವಾಯಿತು. ವಿಜ್ಞಾನ ರಂಗದಲ್ಲಿಯ ಮೂಲಪುರುಷರು ಸಂಶೋಧನೆಯು ತಮ್ಮ ದೈವಸಂಕಲ್ಪಿತ ಕಾರ್ಯ ವೆಂದು ಬಗೆಯುತ್ತಿದ್ದರಲ್ಲದೆ ನಿಷ್ಠಾವಂತ ದೇವ ಭಕ್ತರಾಗಿದ್ದರೆಂಬುದಕ್ಕೆ ಅನೇಕ ಉದಾಹರಣೆಗಳು ಪ್ರಾಚೀನ. ಹಾಗೆಯೆ, ಆಧುನಿಕ ಕಾಲದ ಪ್ರಾರಂ ಭಿಕ ಇತಿಹಾಸದಲ್ಲಿವೆ. ಆದರೆ ವಿಜ್ಞಾನವು ಈಗ ಬಹುವಾಗಿ ಬೆಳೆದಿದೆ. ಅದರ ಅನುಯಾಯಿ ಗಳ ವ್ಯಾಪಕತೆಯು ಹಿಂದೆಂದಿಗಿಂತಲೂ ಈಗ ಬಹಳ ವಿಸ್ತಾರಗೊಂಡಿದೆ. ತತ್ಪರಿಣಾಮವಾಗಿ, ಈಗ ಅಸಂಗತಿಯು ಹೆಚ್ಚು ಗಂಭೀರ ಸ್ವರೂಪ ತಳೆದಿದೆಯಲ್ಲದೆ ಅದರಿಂದಾಗಬಹುದಾದ ಕೇಡೂ ಅಪಾರವಾಗಿದೆ.

ನಂಬಿಗೆ–ಆಚರಣೆ

ಧರ್ಮ ಮತ್ತು ರಾಜನೀತಿಗಳ ನಡುವಿನ ಅಂತರವು ಧರ್ಮ ಮತ್ತು ವಿಜ್ಞಾನಗಳ ನಡುವಿನ ಅಂತರಕ್ಕಿಂತ ಹೆಚ್ಚು ಪ್ರಗಲ್ಭವಾಗಿದೆ. ರಾಷ್ಟ್ರೀಯ. ಅಂತಾರಾಷ್ಟ್ರೀಯ ಚಟುವಟಿಕೆಗಳ ಸದ್ಯದ ಸ್ಥಿತಿಯಲ್ಲಿ ನಿಷ್ಠಾವಂತ ಕ್ರೈಸ್ತರು ತಮ್ಮ ಧಾರ್ಮಿಕ ಶ್ರದ್ಧೆ ಹಾಗೂ ಮಾನಸಿಕ ಸ್ವಾಸ್ಥ್ಯ ಎರಡನ್ನೂ ಹೇಗೆ ಕಾಪಾಡಿಕೊಂಡಿರುತ್ತಾರೆ ಎಂಬುದು ನಿಜಕ್ಕೂ ಒಂದು ಪವಾಡವೇ. ಕ್ರೈಸ್ತವಾಣಿಯೆಂದು ನಿತ್ಯ ಓದುವುದನ್ನೂ ಬೋಧಿಸಲ್ಪಡುವದೆಲ್ಲವನ್ನೂ ವ್ಯಾಪಕವಾಗಿ ಉಲ್ಲಂಘಿಸುವುದಕ್ಕೆ ಸರಕಾರಗಳು ಪರ್ಯಾಯವಾಗಿಯಾದರೂ ಒಪ್ಪಿಗೆ ನೀಡುತ್ತಿವೆ, ಪ್ರೋತ್ಸಾಹಿಸುತ್ತಿವೆ, ನೆರವಾಗುತ್ತಿವೆ. ಹೀಗಿದ್ದರೂ ಬಹುಶಃ ಅಲ್ಲಿರುವವರೆಲ್ಲ ತಾವು ಧಾರ್ಮಿಕರೆಂದು ಪ್ರತಿಪಾದಿಸುತ್ತಾ, ಕ್ರೈಸ್ತರೆಂದು ನಂಬುತ್ತಾರೆ. ಅವರು ಕ್ರಮಪ್ರಾಪ್ತ ರೀತಿಯಲ್ಲಿ ಕ್ರೈಸ್ತಮತದ ವಿಧಿಕರ್ಮಗಳನ್ನು ಮತ್ತು ಹಬ್ಬಗಳನ್ನು ಆಚರಿಸುತ್ತಾರೆ. ಮನುಷ್ಯ ಮನುಷ್ಯರ ನಡುವಿನ ಅಂತರವನ್ನು ಅತ್ಯಂತ ತೀವ್ರಗತಿಯಲ್ಲಿ ಹೆಚ್ಚಿಸುವ ಅನಿರ್ಬಂಧಿತ ಖಾಸಗಿ ಸ್ಪರ್ಧೆ, ಇತರರನ್ನು ನಷ್ಟಕ್ಕೀಡುಮಾಡಿ ಪರಮಾವಧಿ ಲಾಭ ಗಿಟ್ಟಿಸುವ ಹಕ್ಕು, ಆಕಸ್ಮಿಕವಾಗಿಯೋ ಸಾಹಸಿಯತ್ನದಿಂದಲೋ ದೊರೆತ ಅನುಕೂಲಗಳನ್ನು ಮನುಷ್ಯ–ಮನುಷ್ಯರಲ್ಲಿಯ ಅಂತರ ಹೆಚ್ಚುತ್ತಲೇ ಹೋಗುವಂತೆ ಬಳಸುವುದು, ಇವೆಲ್ಲ ಕ್ರಿಸ್ತನನ್ನೇ ನಿರಾಕರಿಸಿದಂತಾಗುವುದಲ್ಲವೆ? ಖಾಸಗಿ ಸ್ಪರ್ಧೆಯ ಮೂಲಭೂತ ಹಕ್ಕನ್ನು ಆಧರಿಸಿಯೇ ರೂಪಿಸಲಾದ ಯೋಜನೆಗಳನ್ನು ಅನುಷ್ಠಾನದಲ್ಲಿ ತರುವುದಕ್ಕೆಂದೇ ಪ್ರಚಂಡ ವಾಣಿಜ್ಯ ಸಂಸ್ಥೆಗಳು ತಲೆಯೆತ್ತಿವೆ. ಅವೂ ಇಂದು ಚರ್ಚಿನಷ್ಟೇ ಗೌರವಾನ್ವಿತವಾಗಿವೆಯಲ್ಲದೆ ಅದಕ್ಕಿಂತ ಎಷ್ಟೋ ಪಾಲು ಹೆಚ್ಚು ಶ್ರೀಮಂತವಾಗಿವೆ. ಭಯಾನಕವಾಗಿವೆ. ಅವುಗಳನ್ನೂ ಪ್ರಜಾಪ್ರಭುತ್ವವಾದಿ ಸರಕಾರಗಳ ಅಧಿಕಾರದ ರಕ್ಷಣೆಯ ಛತ್ರದಡಿಯಲ್ಲೇ ಸ್ಥಾಪಿಸಲಾಗಿದೆ. ಆದರೂ ಈ ದೇಶಗಳ ನಾಗರಿಕರೆಲ್ಲ ಬಹುತರವಾಗಿ ಕ್ರೈಸ್ತರು ಇಲ್ಲವೆ ಅಸಮಾನತೆಯನ್ನೂ ಶೋಷಣೆಯನ್ನೂ ಅಷ್ಟೇ ತೀವ್ರವಾಗಿ ಖಂಡಿಸುವ ಬೇರೊಂದು ಧರ್ಮಕ್ಕೆ ಸೇರಿದವರು ಆಗಿದ್ದಾರೆ. ಇಂಥ ವಿರೋಧಾಭಾಸ, ಆಷಾಡಭೂತಿತನಗಳು ಹುಟ್ಟಿಸಬಹುದಾದ ಆಧ್ಯಾತ್ಮ ವಿರೋಧಿ ಗುಣವು ಪ್ರಚಂಡವಾಗಿದೆ. ಈ ವಿನಾಶವನ್ನು ತಡೆಗಟ್ಟಲು ಏನಾದರೂ ಮಾಡದಿದ್ದರೆ ನಾಗರಿಕತೆ ತುಕ್ಕು ಹಿಡಿದ ಕಬ್ಬಿಣದಂತೆ ಕುಸಿಯಲೇಬೇಕಾಗುತ್ತದೆ.

ತಂತಮ್ಮ ವೃತ್ತಿಗಳಿಗೆ ನಿಷ್ಠರಾದ ಅನೇಕರು ಸಂಪತ್ತಿನ, ಬಲದ ದುರುಪಯೋಗವನ್ನು ಖಂಡಿಸುತ್ತಲೇ ಇದ್ದಾರಾದ್ದರಿಂದ ಇದೆಲ್ಲವೂ ಅತಿರಂಜಿತವೆಂದೂ ವಾದಿಸಬಹುದು. ಧಾರ್ಮಿಕ ತತ್ವಗಳ ನಿರ್ಲಕ್ಷ್ಯದ ಬಗ್ಗೆ ಪ್ರತಿಯೊಂದು ದೇಶದಲ್ಲಿಯೂ ಪ್ರಾಮಾಣಿಕವಾಗಿ ಮತ್ತು ಧೈರ್ಯದಿಂದ ಅಪಾರ ಅಸಮಾಧಾನ ವ್ಯಕ್ತಪಡಿಸಲಾಗುತ್ತದೆಯೆಂಬುದು ನಿಸ್ಸಂಶಯ. ನ್ಯಾಯವಾದ ಕಾರಣಗಳಿಗಾಗಿ ಕೂಡ ಯುದ್ಧ ಮಾಡುವದನ್ನು ವಿರೋಧಿಸಲಾಗುತ್ತದೆ. ಶಾಂತಿವಾದದ ಬಗೆಗಿನ ಬೃಹತ್ ಸಾಹಿತ್ಯವೇ ಈ ಮಾತಿನ ಯಥಾರ್ಥತೆಗೆ ಎದ್ದು ಕಾಣುವ ನಿದರ್ಶನವಾಗಿದೆ. ಆದರೆ ಈ ಅಸಮಾಧಾನವು ಸದ್ಯದ ವ್ಯವಸ್ಥೆಯ ಮೇಲೆ ವಾಸ್ತವಿಕ ಪರಿಣಾಮವನ್ನುಂಟುಮಾಡಲಾರದು ಎಂಬ ಕಾರಣಕ್ಕಾಗಿ ಮಾತ್ರ ಇದನ್ನು ವ್ಯಕ್ತಗೊಳಿಸುವುದರ ಮೇಲೆ ಕೊಡಲಿಯೇಟು ಬಿದ್ದಿಲ್ಲ. ಈ ಅಸಮಾಧಾನವು ಅಪರಾಧಿ ಮನಸ್ಸಾಕ್ಷಿಗೆ ಪಾರಾಗುವ ಮಾರ್ಗ ನೀಡುವದರ ಮೂಲಕ ಅಂಥವರ ಮಾನಸಿಕ ಭಾರವನ್ನು ಹಗುರಗೊಳಿಸುತ್ತದೆ. ಅದರಿಂದಲೇ ಈ ಅಪರಾಧ ಮುಂದುವರಿಯುವುದಕ್ಕೂ ಅನುವು ಸಿಕ್ಕುತ್ತದೆ. ಒಂದು ದೃಷ್ಟಿಯಿಂದ ಇದು ಆಷಾಡಭೂತಿತನಕ್ಕೆ ಒಳ್ಳೆ ಸಹಚರಿಯೇ ಆಗುತ್ತದೆ.

ನೂರು ವರ್ಷಗಳ ತಪಸ್ಸಿನಿಂದ ತಂದೆ ಒಲಿಯುತ್ತಾನೆ, ಆದರೆ ತಾಯಿ ಐದೇ ನಿಮಿಷಗಳಲ್ಲಿ ಒಲಿಯುತ್ತಾಳೆ.

–ಸ್ವಾಮಿ ವಿವೇಕಾನಂದ



ಕೋಣಾರ್ಕದ ಸೂರ್ಯದೇವಾಲಯ ಶಿಲಾಶಿಲ್ಪದ ಬೀಡು. ವೀರನೊಬ್ಬನ ಪ್ರೀತಿಯ ವಾಹನವಾದ ಈ ಅಶ್ವ ಶತ್ರುವೊಬ್ಬನನ್ನು ಮೆಟ್ಟಿನಿಂತಿದೆ.



ಯಶವಂತ ಆಚಾರ್ಯ

ಭಾರತೀಯ ಸಂಗೀತದ ಉಚ್ಛ್ರಾಯಕ್ಕಾಗಿ ಕಟಿಬದ್ಧವಾಗಿರುವ ಮುಂಬಯಿಯ 'ಸುರ ಸಿಂಗಾರ ಸಂಸದ್' ಇತ್ತೀಚೆ ರಜತ ಮಹೋತ್ಸವವನ್ನಾಚರಿಸಿದಾಗ ಈ ಸಂಸ್ಥೆಯನ್ನು ಕನ್ನಡಿಗರಿಗೆ ಏಕೆ ಪರಿಚಯಿಸಬಾರದೆಂಬ ವಿಚಾರ ಬಂದು ಈ ಲೇಖನವನ್ನು ಬರೆಯಲು ಪ್ರೇರೇಪಿಸಿತು.

ಈ ಸಂಸ್ಥೆಯ ಜನನಕ್ಕೆ ಕಾರಣರಾದವರು ಬ್ರಿಜನಾರಾಯಣ ಎಂಬ ವಾಣಿಜ್ಯೋದ್ಯಮಿಗಳು. ಸಂಸ್ಥೆಯ ಪ್ರಾರಂಭದಿಂದಲೂ ಇವರೇ ಸಂಸ್ಥೆಯ ನಿರ್ದೇಶಕರು. 'ಸುರ ಸಿಂಗಾರ ಸಂಸದ್'ನ ಯಾವುದೇ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದವರಿಗೆ ಬ್ರಿಜನಾರಾಯಣರ ವ್ಯಕ್ತಿತ್ವ ಅಚ್ಚಳಿಯದೇ ಉಳಿಯುತ್ತದೆ. ಎಂಟು ದಿನಗಳ ದೀರ್ಘ ಸಮ್ಮೇಳನದಲ್ಲಿ ಸಭೆಯ ಪ್ರಾರಂಭದಿಂದಲೂ ಕೊನೆಯವರೆಗೆ ರಂಗಮಂಟಪದ ಎದುರು ಸುತ್ತು ಹಾಕುತ್ತಾ ಪ್ರಮುಖ ಅತಿಥಿಗಳನ್ನು ಕಲಾವಿದರನ್ನು ರಸಿಕರನ್ನು ಆದರದಿಂದ ಬರಮಾಡಿಕೊಳ್ಳುತ್ತಾ ಸಮಯ ಸಿಕ್ಕಾಗ ನಿಂತಲ್ಲೆ ಸಂಗೀತವನ್ನು ಕೇಳುತ್ತಿರುತ್ತಾರೆ.


ಅವರಿಗೆ ಸಂಗೀತದಲ್ಲಿ ಅಪಾರವಾದ ಆಸಕ್ತಿ. ಆದ್ದರಿಂದಲೆ ಬ್ರಿಜನಾರಾಯಣರು ಎಲ್ಲಿಯೇ ಇರಲಿ, ಹತ್ತಾರು ಕಲಾಭಿಮಾನಿಗಳು ಅವರನ್ನು ಸುತ್ತಿರುತ್ತಾರೆ. ಅವರನ್ನು ಕಾಣಲು ಒಮ್ಮೊಮ್ಮೆ ಅವರ ಕೊಠಡಿಗೆ ಹೋಗುವಾಗ ಬ್ರಿಜನಾರಾಯಣರ ಕಾರ್ಯದರ್ಶಿಗಳು, "ಹೋಗಿ ಹೋಗಿ ಈಗಾಗಲೆ ದರಬಾರು ಶುರುವಾಗಿದೆ" ಎಂದು ಚೇಷ್ಟೆ ಮಾಡುವುದೂ ಉಂಟು. ಅಮೀರಖಾನರಿಂದ ಹಿಡಿದು ಸಂಗೀತದಲ್ಲಿ ಆಸಕ್ತಿಯಿರುವ ಸಾಮಾನ್ಯ ಮನುಷ್ಯನವರೆಗೆ ಸಮಾಜದ ಎಲ್ಲ ಸ್ತರಗಳ ಜನರು ಬ್ರಿಜನಾರಾಯಣರ ಮೇಜಿನ ಸುತ್ತು ಕುಳಿತು ಹರಟಿದರೆ ಯಾರಿಗಾದರೂ ಆಶ್ಚರ್ಯವಾಗಬಹುದು. ರಸಿಕವರ್ಗದವರು ಬ್ರಿಜನಾರಾಯಣರನ್ನು ಔದ್ಯೋಗಿಕ ಸಂಸ್ಥೆಯ ನಿರ್ದೇಶಕರೆಂದು ಗುರುತಿಸದೆ ಸಂಗೀತ ಕ್ಷೇತ್ರದ ಮನುಷ್ಯರೆಂದು ತಿಳಿದು ಆತ್ಮೀಯತೆಯಿಂದ ಮಾತನಾಡಿಸುವುದುಂಟು.

ಅವರು ಮೂಲತಃ ಉತ್ತರ ಪ್ರದೇಶದವರು. ಸಂಗೀತದ ಯಾವುದೇ ಸಂಸ್ಕಾರವಿಲ್ಲದ ಅವರು ಕಾಯಿದೆ ಶಿಕ್ಷಣ ಪಡೆದು ಔದ್ಯೋಗಿಕ ಸಂಸ್ಥೆಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ

ಅವರ ಹತ್ತಿರದ ಮಿತ್ರರೊಬ್ಬರು ಉತ್ತರ ಭಾರತದ ಸಂಗೀತಗಾರರೊಬ್ಬರನ್ನು ಯಾವಾಗಲೂ ಪ್ರಶಂಸಿಸುತ್ತಿದ್ದರು. ಹೀಗಾಗಿ ಆ ಸಂಗೀತಗಾರರನ್ನು ಕಾಣುವ ಅಭಿಲಾಷೆ ಸಹಜವಾಗಿಯೆ ಬೃಜನಾರಾಯಣರಲ್ಲಿ ಉತ್ಪನ್ನವಾಯಿತು. ಆ ಕಲಾವಿದರು ಒಮ್ಮೆ ಮುಂಬಯಿಗೆ ಬಂದ ಸುದ್ದಿ ತಿಳಿದಾಗ ಅವರನ್ನು ತಮ್ಮೆಡೆ ಬರುವಂತೆ ಆಹ್ವಾನಿಸಿದರು.

ಆ ಕಲಾವಿದನ ವೇಷಭೂಷಣ ತೀರಾ ಸಾಮಾನ್ಯವಾಗಿತ್ತು. ಆದರೂ ಆತ ಬೃಜನಾರಾಯಣರ ಮೇಲೆ ಅಗಾಧವಾದ ಪ್ರಭಾವ ಬೀರಿದ. ಮುಂಬಯಿಯಲ್ಲಿ ಸಂಗೀತ ಸಮ್ಮೇಳನಕ್ಕೆಂದು ಆಗ ಹೆಸರುವಾಸಿಯಾದ ಲಕ್ಷ್ಮೀಬಾಗ ಹಾಲಿನಲ್ಲಿ ಆ ಕಲಾವಿದರ ಕಾರ್ಯಕ್ರಮವನ್ನು ಏರ್ಪಡಿಸುವುದೆಂದು ಬೃಜನಾರಾಯಣರು ಆಗಲೆ ನಿಶ್ಚಯಿಸಿದರು. ಸಿಮ್ಮೇಳಕ್ಕಾಗಿ ಬೃಜನಾರಾಯಣರು ಹೆಸರುವಾಸಿಯಾದ ಸಾರಂಗೀ, ತಬಲಾ ವಾದಕರನ್ನು ಕೇಳಿಕೊಂಡಾಗ ಈ ಅಪರಿಚಿತ ಸಂಗೀತಗಾರನೊಡನೆ ತಮ್ಮಂತಹ ಶ್ರೇಷ್ಠ ಮಟ್ಟದ ಕಲಾವಿದರು ಭಾಗವಹಿಸಬೇಕೆಂದರೆ ಹೆಚ್ಚಿನ ಮೊತ್ತದ ಸಂಭಾವನೆಯನ್ನು ಕೊಡಬೇಕು ಎಂದು ವಿಧಿಸಿದರಂತೆ. ಬೃಜನಾರಾಯಣರು ಅದಕ್ಕೂ ಒಪ್ಪಿಕೊಂಡಮೇಲೆ ಕಾರ್ಯಕ್ರಮ ನಡೆಯುವುದು ನಿಶ್ಚಿತವಾಯಿತು. ಅಲ್ಲಿ ನೆರೆದವರ ಪೈಕಿ ಹೆಚ್ಚಿನ ಜನರು ಸಂಗೀತದ ಬಗೆಗೆ ಏನೂ ಗೊತ್ತಿಲ್ಲದ ಉದ್ಯೋಗಪತಿಗಳು ಅಥವಾ ಚಿಕ್ಕ ದೊಡ್ಡ ವ್ಯಾಪಾರಸ್ಥರು. ಕಾರ್ಯಕ್ರಮದ ಪ್ರಾರಂಭದಲ್ಲಿ ತಮ್ಮ ಮೇಲುಗೈ ತೋರಿಸಲು ನೋಡಿದ ಸಿಮ್ಮೇಳದವರು ಕಾರ್ಯಕ್ರಮದ ಕೊನೆಯಲ್ಲಿ ಆ ಕಲಾವಿದನಿಗೆ ಶರಣು ಹೋದರಂತೆ. ಆ ಕಲಾವಿದ ಬೇರಾರೂ ಆಗಿರದೆ ಇಂದು ಇಳಿವಯಸ್ಸಿನಿಂದಾಗಿ ರಸಿಕರಿಗೆ ಅಪರೂಪಕ್ಕೊಮ್ಮೆ ಕೇಳಲು ಸಿಗುವ ಪಂಡಿತ ಭೀಷ್ಮದೇವ ಮೋದಿ.

ಒಂದರ ಹಿಂದೊಂದು ಕಾರ್ಯಕ್ರಮ. ಸಂಗೀತಗಾರರ, ಸಂಗೀತಶಾಸ್ತ್ರಜ್ಞರ ಹಾಗೂ ಕಲಾರಸಿಕರ ಪ್ರಶಂಸೆಯಿಂದ ಉತ್ಸಾಹಿತರಾದ ಬೃಜನಾರಾಯಣರು ೧೯೪೭ರಲ್ಲಿ 'ಸುರ ಸಿಂಗಾರ ಸಂಸದ್' ಅನ್ನು ಸ್ಥಾಪಿಸಿದರು. ಅದೇ ವರ್ಷ



ಬೃಜಲಾಲ್ ವರ್ಮಾ

ನವೆಂಬರ್ ತಿಂಗಳಲ್ಲಿ ಈ ಸಂಸ್ಥೆಯ ಮೊದಲ ಸಂಗೀತ ಸಭೆ ಸ್ವಾಮಿ ಹರಿದಾಸ ಸಂಗೀತ ಸಮ್ಮೇಳನವೆಂಬ ಹೆಸರಿನಿಂದ ಜರುಗಿತು (ಸ್ವಾಮಿ ಹರಿದಾಸರು ತಾನಸೇನನ ಗುರುಗಳು). ಆಗಿನ ಕಾಲದ ಮಹಾನ್ ಕಲಾವಿದರಾದ ಫೈಯಾಜ್ ಖಾನ್, ಓಂಕಾರನಾಥ ಠಾಕೂರ, ಹೀರಾಬಾಯಿ ಬಡೋದೇಕರ ,ಕೇಸರಬಾಯಿ ಕೇರಕರ, ಸಿದ್ಧೇಶ್ವರಿ ದೇವಿ, ದಿಲೀಪ ಚಂದ್ರ ವೇದಿ, ಸ್ವಾಮಿ ಬ್ರಹ್ಮಾನಂದ, ಹಫೀಜ ಅಲಿಖಾನ್ ಮುಂತಾದವರೊಡನೆ ಆಗಿನ ಯುವ ಕಲಾವಿದರೆನ್ನಿಸಿಕೊಂಡ ಬಿಸ್ಮಿಲ್ಲಾ ಖಾನ್, ರವಿಶಂಕರ, ಅಲಿಅಕಬರಖಾನ್, ವಿಲಾಯತ್ ಖಾನ್, ಕಿಶನ್ ಮಹಾರಾಜ ಮುಂತಾದವರು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಸಮ್ಮೇಳನವೇನೋ ಯಶಸ್ವಿಯಾಯಿತು. ಆದರೆ ಹತ್ತು ಸಾವಿರ ರೂಪಾಯಿಗಳಷ್ಟು ಭಾರ ಬೃಜನಾರಾಯಣರ ಮೇಲೆ ಬಿತ್ತು. ಹೀಗಾಗಿ ಅವರು ಮರು ವರುಷ ಈ ಸಮ್ಮೇಳನವನ್ನು ಮಾಡುವ ಗೋಜಿಗೇ ಹೋಗಲಿಲ್ಲ.

೧೯೫೪ರಲ್ಲಿ ಇನ್ನೊಮ್ಮೆ ಸಮ್ಮೇಳನವನ್ನು ಪ್ರಾರಂಭಿಸುವಂತೆ ಮಿತ್ರರೆಲ್ಲ ಹುರಿದುಂಬಿಸಿದ ಫಲವಾಗಿ ಬೃಜನಾರಾಯಣರು ಆ ವರ್ಷದ ಮಾರ್ಚ ತಿಂಗಳಿನಲ್ಲಿ ಎರಡನೆಯ ಹರಿದಾಸ ಸಮ್ಮೇಳನವನ್ನು ನಡೆಸಿದರು. ಅಂದಿನಿಂದಲೂ ಸುರ-ಸಿಂಗಾರ ಸಂಸದ್‌ನ ಆಶ್ರಯದಲ್ಲಿ ಸಂಗೀತಕ್ಕೆ ಸಂಬಂಧಪಟ್ಟ ಚಟುವಟಿಕೆಗಳು ನಡೆಯುತ್ತಲೇ ಬಂದಿವೆ. ಅವುಗಳಲ್ಲಿ ಸುರ ಸಿಂಗಾರ ಸಮ್ಮೇಳನ, ಸ್ವಾಮಿ ಹರಿದಾಸ ಸಂಗೀತ ಸಮ್ಮೇಳನ, ಕಲ್ ಕೆ ಕಲಾಕಾರ ಸಂಗೀತ ಸಮ್ಮೇಳನ, ಫಿಲ್ಮ್ ಸಂಗೀತ ಸಮ್ಮೇಳನ, ರಸಗಂಗಾ ಸಮ್ಮೇಳನ, ಫಿಲ್ಮ್ ಮ್ಯೂಜಿಕ್ ಅವಾರ್ಡ್ಸ್ ನೈಟ್ ಮುಂತಾದವು ಪ್ರಮುಖವಾವುದು.

ನಮ್ಮ ದೇಶದಲ್ಲಿ ಅನೇಕ ಯುವಕರು ಸಂಗೀತ ಶಾಸ್ತ್ರದಲ್ಲಿ ಪರಿಶ್ರಮಪಟ್ಟು ಪರಿಣತಿಯನ್ನು ಗಳಿಸಿದ್ದರೂ ಪ್ರಸಿದ್ಧಿಯ ಬೆಳಕನ್ನು ಕಾಣದೆ ಬಾಳಿದ್ದಾರೆ. ಸರಿಯಾದ ಶ್ರೋತೃವರ್ಗವಾಗಲಿ, ಗಾನ ಲಹರಿಯನ್ನು ಪಸರಿಸಲು ಸರಿಯಾದ ಮಾಧ್ಯಮವಾಗಲಿ ದೊರೆಯದೆ ಇರುವುದು ಒಂದು ಕಾರಣವಾದರೆ ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಆಗೊಮ್ಮೆ ಈಗೊಮ್ಮೆ ಕೂಡುವ ಸಂಗೀತ ಕಚೇರಿಗಳಿಗೆ ಹೆಸರುವಾಸಿಯಾದ ಕಲಾವಿದರನ್ನು ಮಾತ್ರ ಆಹ್ವಾನಿಸುತ್ತಿರುವುದು ಇನ್ನೊಂದು ಕಾರಣ. ಇದನ್ನರಿತ ಬೃಜನಾರಾಯಣರು 'ಸುರ ಸಿಂಗಾರ ಸಂಸದ್'ದ ಅಂಗವಾಗಿ 'ಕಲ್ ಕೆ ಕಲಾಕಾರ್' (ನಾಳಿನ ಕಲಾವಿದರು) ಸಮ್ಮೇಳನವನ್ನು ನಡೆಸಲು ನಿರ್ಧರಿಸಿದರು. ಆಗ ಅವರ ಅನೇಕ ಜನ ಮಿತ್ರರು, 'ಪರ್ಸೋಂಕೆ ಕಲಾಕಾರ್' (ನಾಡದಿನ ಕಲಾವಿದರು) ಸಮ್ಮೇಳನವನ್ನು ಎಂದು ನಡೆಸುವವರಿದ್ದೀರಿ? ಎಂದು ತಮಾಷೆ ಮಾಡಿದ್ದೂ ಉಂಟು. ಆದರೆ ಬೃಜನಾರಾಯಣರೇನೂ ಇಂತಹ ಮಾತುಗಳನ್ನು ಕೇಳಿ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯಲಿಲ್ಲ. ೧೯೫೯ರಲ್ಲಿ ಮೊದಲ ಬಾರಿಗೆ ನಡೆದ 'ಕಲ್ ಕೆ ಕಲಾಕಾರ್' ಸಮ್ಮೇಳನ ಇಂದಿನ ವರೆಗೂ ಅನೂಚಾನವಾಗಿ ನಡೆದು ಬಂದಿದೆ.

ಆ ಸಮ್ಮೇಳನದಲ್ಲಿ ಭಾಗವಹಿಸಲು ಪ್ರವೇಶ ಕೋರಿ ಪ್ರತಿವರ್ಷ ಸುಮಾರು ಇನ್ನೂರು ಅರ್ಜಿಗಳು ದೇಶದ ಎಲ್ಲ ಭಾಗಗಳಿಂದಲೂ ಬರುತ್ತವೆ. ಈ ಸಂಸ್ಥೆಯವರು ನಿಯಮಿಸಿದ ಸಮಿತಿಯ ಸದಸ್ಯರು ಎಲ್ಲ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆ ಆಧಾರದ ಮೇಲೆ ೭೫-೨೦ ಜನರನ್ನು ಆಯ್ಕೆ ಮಾಡುತ್ತಾರೆ. ಈ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಸಿದ್ಧಿಗೆ ಬಂದವರಲ್ಲಿ ಎನ್. ರಾಜಂ, ಹರಿಪ್ರಸಾದ ಚೌರಾಸಿಯಾ, ಶಿವಕುಮಾರ ಶರ್ಮಾ, ಶಮೀಮ ಅಹಮ್ಮದ, ಪ್ರಭುದೇವ ಸರದಾರ, ಲಕ್ಷ್ಮೀಶಂಕರ, ಲಲಿತಾ ರಾವ್, ಸುಧಾ ದಿವೇಕರ್ ಮುಂತಾದವರು ಪ್ರಮುಖರು. ಹಾಗೆಯೆ ನೃತ್ಯದಲ್ಲಿ ಈ ಸಂಸ್ಥೆಯಿಂದ ಮುಂದೆ ಬಂದವರಲ್ಲಿ ಸಂಯುಕ್ತಾ ಪಾಣಿಗ್ರಾಹಿ, ಪ್ರತಿಮಾದೇವಿ, ಶೋಭಾ ನಾಯ್ಡು, ರಾಧಾ ರೆಡ್ಡಿ, ಮಲ್ಲಿಕಾ ಸಾರಾಭಾಯಿ, ಚಿತ್ರಾ ವಿಶ್ವೇಶ್ವರನ್ ಮುಂತಾದವರು ಮುಖ್ಯರು.

'ಸುರ ಸಿಂಗಾರ ಸಂಸದ್' ನಡೆಸುವ ಸಮ್ಮೇಳನಗಳಲ್ಲಿ ಭಾಗವಹಿಸಲು ರಸಿಕರಿಂದ ಯಾವ ಪ್ರತಿಫಲವನ್ನು ತೆಗೆದುಕೊಳ್ಳಲಾಗುವದಿಲ್ಲ. ನರ್ತಕರೂ ಗಾಯಕರೂ ವಾದಕರೂ ಈ ಸಮ್ಮೇಳನದಲ್ಲಿ ಪಾಲುಗೊಳ್ಳುತ್ತಾರೆ. ಇಲ್ಲಿ ಮುಖ್ಯವಾಗಿ ಹಿಂದುಸ್ತಾನಿ ಸಂಗೀತದ ಪ್ರಭಾವವಿದ್ದರೂ ದಕ್ಷಿಣದಲ್ಲಿನ ನುರಿತ ಕಲಾವಿದರೂ ಭಾಗವಹಿಸುತ್ತಾರೆ. ಸಮ್ಮೇಳನ ನಡೆಯುವಾಗ ಪ್ರತಿದಿನ ಕಾರ್ಯಕ್ರಮದ ಆರಂಭದಲ್ಲಿ ಭಾರತದ ಮುಖ್ಯ ನೃತ್ಯ ಶೈಲಿಯ ಎರಡು ಕಾರ್ಯಕ್ರಮಗಳನ್ನು ಪ್ರದರ್ಶಿಸುತ್ತಾರೆ. ಈ ನೃತ್ಯಕಾರ್ಯಕ್ರಮದಲ್ಲಿ ಒಮ್ಮೊಮ್ಮೆ ಪ್ರಸಿದ್ಧ ನಾಟ್ಯಪಟುಗಳು ನೃತ್ಯದ ನಂತರ ನರ್ತನ ಶೈಲಿಯ ಸೂಕ್ಷ್ಮ ವಿನ್ಯಾಸಗಳನ್ನು ತಿಳಿಸಿಹೇಳುವುದೂ ಉಂಟು. ಈ ಕಾರ್ಯಕ್ರಮದಲ್ಲಿ ಈ ವರೆಗೆ ಭಾಗವಹಿಸಿದ ಸುಪ್ರಸಿದ್ಧ ನರ್ತನಕಾರರ ಪೈಕಿ ಪಂ. ಲಚ್ಚು ಮಹಾರಾಜ (ಕಥಕ್), ಸಿತಾರಾದೇವಿ (ಕಥಕ್), ಬಿರ್ಜುಮಹಾರಾಜ (ಕಥಕ್), ಗುರುವೆಂಕಟಪತಿ ಚಿನ್ನಿಸತ್ಯಂ (ಕುಚಪುಡಿ), ಕೇಲು ಚರಣ ಮಹಾಪಾತ್ರ (ಓಡಿಸಿ), ಕಲ್ಯಾಣ ಸುಂದರಂ ತಿಲ್ಲೈ, (ಭರತನಾಟ್ಯ) ಮುಂತಾದವರನ್ನು ಹೆಸರಿಸಬಹುದು. ಈ ಕಾರ್ಯಕ್ರಮವನ್ನು ತೂಗಿಸಿಕೊಂಡು ಹೋ-ಗುವ ಹೊಣೆ ಹೊತ್ತ ಡಾ. ಸುನೀಲ ಕೋಠಾರಿಯವರು ತಮ್ಮ ಅಮೋಘ ವಿವರಣೆಯಿಂದ ಜನರನ್ನು ಮುಗ್ಧರನ್ನಾಗಿ ಮಾಡುತ್ತಾರೆ.

ಒಮ್ಮೆ ಬೃಜನಾರಾಯಣರ ಮಿತ್ರರೊಬ್ಬರು "ನೀವೇಕೆ ಸಂಗೀತ ಕಲಿಯಬಾರದಿತ್ತು? ಅದ

ರಿಂದ ಈ ಕಾರ್ಯಕ್ರಮಗಳಿಗೆ ಇನ್ನೂ ಹೆಚ್ಚಿನ ಕಳೆ ಬರುತ್ತಿತ್ತು" ಎಂದು ಕೇಳಿದಾಗ ಬೃಜನಾರಾಯಣರು "ನೋಡಿ ನನಗೆ ಸಂಗೀತದ ಗಂಧಗಾಳಿಯೂ ಗೊತ್ತಿಲ್ಲ. ವಯಸ್ಸನ್ನು ಅನುಲಕ್ಷಿಸಿದರೆ ಇನ್ನು ಸಂಗೀತಶಾಸ್ತ್ರವನ್ನು ಅಭ್ಯಸಿಸುವುದು ಸಾಧ್ಯವೂ ಇಲ್ಲ" ಎಂದು ಮಿತವಾಗಿಯೆ ಉತ್ತರಿಸಿದರು. ಆಗ ಅಲ್ಲಿ ಹಾಜರಿದ್ದ ನಾನು "ಬೃಜನಾರಾಯಣಜಿ. ನೀವು ಸಂಗೀತವನ್ನು ಕಲಿಯದಿದ್ದುದೆ ಒಳ್ಳೆಯದಾಯಿತು. ಇಲ್ಲದಿದ್ದರೆ ನೀವು ನಿಮ್ಮ ಸಂಗೀತ ಪರಂಪರೆಯ ಜನರನ್ನೆ ಕಾರ್ಯಕ್ರಮಕ್ಕೆ ಕರೆಸುತ್ತಿದ್ದಿರಿ. ಅವರ ಸಂಗೀತವನ್ನೇ ಪ್ರಚಲಿತಪಡಿಸುತ್ತಿದ್ದಿರಿ. ಆದರೆ ಈಗ ಆ ಪ್ರಮೇಯವೇ ಇಲ್ಲ ನೋಡಿ" ಎಂದೆ. ಬೃಜನಾರಾಯಣರು ಮನಸೋಕ್ತವಾಗಿ ನಕ್ಕರು.

ಸ್ವಾಮಿ ಹರಿದಾಸ ಸಂಗೀತ ಸಮ್ಮೇಳನವು ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಎಂಟು ದಿನಗಳವರೆಗೆ ನಡೆಯುತ್ತದೆ. ಇದರಲ್ಲಿ ವಿವಿಧ ಪರಂಪರೆಗಳಿಗೆ ಸೇರಿದ ಗಾಯಕರು, ವಾದಕರು ಹಾಗೂ ನರ್ತಕರು ಭಾಗವಹಿಸುತ್ತಾರೆ. 'ಕಲ್ ಕೆ ಕಲಾಕಾರ್' ಸಮ್ಮೇಳನದಿಂದ ಆಯ್ದ ಕಲಾವಿದರನ್ನು ಈ ಕಾರ್ಯಕ್ರಮದಲ್ಲಿ ಸೇರಿಸುತ್ತಾರೆ. ಅವರಿಗೆ ಪ್ರಸಿದ್ಧಿ ಪಡೆಯಲು ಇದೊಂದು ಒಳ್ಳೆಯ ಅವಕಾಶ. ಇದರಲ್ಲಿ ಸಿತಾರಾದೇವಿ, ರೋಶನಕುಮಾರಿ, ಸೋನಾಲಮಾನಸಿಂಗ, ಝುವೇರಿ ಭಗಿನಿಯರು, ದಮಯಂತಿಶಿಯವರಂತಹ ನಾಟ್ಯಪಟುಗಳು ಭಾಗವಹಿಸಿ ಮುಂದೆ ಬಂದಿದ್ದಾರೆ. ಬಡೇ ಗುಲಾಮ ಅಲಿಖಾನ್, ವಿಲಾಯತ ಹುಸೇನ್‌ಖಾನ್, ಅಹ್ಮದಜಾನ್ ತಿರಕ್ವಾ, ಗಂಗೂಬಾಯಿ ಹಾನಗಲ್, ಕೇಸರಬಾಯಿ ಕೇರಕರ, ಹೀರಾಬಾಯಿ ಬಡೋದೇಕರ. ಮಲ್ಲಿಕಾರ್ಜುನ ಮನ್ಸೂರ, ಶರಚ್ಚಂದ್ರ ಆರೋಳಕರರಂಥ ಹಿರಿಯರೂ ಭಾಗವಹಿಸಿದ್ದಾರೆ.

ಸುರಸಿಂಗಾರ ಸಮ್ಮೇಳನ ಲಘುಶಾಸ್ತ್ರೀಯ ವಾದ್ಯ ಗಾಯನ, ಭಜನೆಗಳನ್ನು ಒಳಗೊಂಡರೆ ಫಿಲ್ಮ್ ಸಂಗೀತ ಸಮ್ಮೇಳನ ಹಿನ್ನೆಲೆ ಗಾಯಕರ ಶಾಸ್ತ್ರೀಯ ಸಂಗೀತವನ್ನಾಧರಿಸಿದ ಚಿತ್ರಗೀತೆಗಳನ್ನು ಒಳಗೊಂಡಿರುತ್ತದೆ.

ಅಲ್ಲದೆ 'ಸುರ ಸಿಂಗಾರ ಸಂಸದ್' ಹಿಂದಿ ಹಾಗೂ ಮರಾಠಿ ಚಿತ್ರಗಳಲ್ಲಿ ಶಾಸ್ತ್ರೀಯ ಸಂಗೀತದ ಆಧಾರದ ಮೇಲೆ ರಚಿಸಿದ ಕವನಗಳ ಕರ್ತೃವಿಗೂ ಅದನ್ನು ಹಾಡಿದವರಿಗೂ, ಹಾಡಿಗೆ ನಿರ್ದೇಶನ ನೀಡಿದವರಿಗೂ ಪ್ರತ್ಯೇಕವಾದ ಬಹುಮಾನವಿತ್ತು ಗೌರವಿಸುತ್ತದೆ. ಅಲ್ಲದೆ ಈ ಸಂಸ್ಥೆಯ ಸಂಗೀತ ಪೀಠವು ಪ್ರತಿವರ್ಷ ಗಾಯಕರಿಗೆ ಸ್ವರವಿಲಾಸ, ವಾದಕರಿಗೆ ತಾಂತ್ರಿವಿಲಾಸ, ಚರ್ಮವಾದ್ಯಗಳನ್ನು ಬಾರಿಸುವುದರಲ್ಲಿ ನಿಷ್ಣಾತರಾದವರಿಗೆ ತಾಲವಿಲಾಸ ಹಾಗೂ ಹೆಸರಾಂತ ನಾಟ್ಯಪಟುಗಳಿಗೆ ನೃತ್ಯವಿಲಾಸವೆಂಬ ಬಿರುದುಗಳನ್ನು ನೀಡುವುದು. ಎಂ ಎಸ್ ಸುಬ್ಬಲಕ್ಷ್ಮಿ, ಮಲ್ಲಿಕಾರ್ಜುನ ಮನ್ಸೂರ, ಪಂಡಿತ್ ರವಿಶಂಕರ, ಕರಾಮತ ಉಲ್ಲಾಖಾನ, ಬಾಲಸರಸ್ವತಿ, ವೈಜಯಂತಿಮಾಲಾ ಮೊದಲಾದವರು ಈ ಬಿರುದುಗಳನ್ನು ಪಡೆದಿದ್ದಾರೆ.

ಸಂಗೀತ ಹಾಗೂ ನಾಟ್ಯಶಾಸ್ತ್ರದಲ್ಲಿ ಪಾರಂಗತರಾದವರಿಂದಲೂ ನಗರದ ಪ್ರತಿಷ್ಠಿತರಿಂದಲೂ ಬೌದ್ಧಿಕರಿಂದಲೂ ಕೂಡಿದ ಈ ಸಂಸ್ಥೆಯ ಸೀನೇಟು 'ಸುರ ಸಿಂಗಾರ ಸಂಸದ್' ಪರವಾಗಿ ಪ್ರತಿವರ್ಷ ಆಯಾ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿದವರಿಗೆ ಫೆಲೋಶಿಪ್ ಅನ್ನು ನೀಡುವುದು. ಪ್ರೊ. ಬಿ.ಆರ್. ದೇವಧರ, ಉದಯಶಂಕರ, ವಿಷ್ಣುದಾಸ ಶಿರಾಲಿ. ಪಂ. ಲಚ್ಚು ಮಹಾರಾಜ ಮೊದಲಾದವರು ಈ ವರೆಗೆ ಇದರ ಫೆಲೋಶಿಪ್ ಪಡೆದಿದ್ದಾರೆ. ಡಾ. ಮುಲ್ಕರಾಜ ಆನಂದರಂತಹ ಸೌಂದರ್ಯ ಮೀಮಾಂಸಕರು ಈ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದಾರೆ.

ಈ ಸಂಸ್ಥೆಯ ಇನ್ನೊಂದು ಅಂಗವಾದ 'ಅಲಂಕಾರ' ನೃತ್ಯ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತದೆ. ಸದಸ್ಯರು ಹಾಗೂ ಆಮಂತ್ರಿತರಿಗಾಗಿ ಪ್ರತಿ ತಿಂಗಳು ಗಾಯನ, ವಾದನ ಇಲ್ಲವೆ ಹೀಗೆ ವರ್ಷವಿಡೀ ನಡೆಯುವ ಕಾರ್ಯಕ್ರಮಗಳಿಗೆ ತಗುಲುವ ಖರ್ಚು ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು. ಆದರೆ ಪ್ರವೇಶಧನದ ರೂಪದಲ್ಲಿ ಸಂಗ್ರಹವಾಗುವುದು ಎಂಟು ಹತ್ತು ಸಾವಿರದಷ್ಟು ಮಾತ್ರ. ಉಳಿದ ಹಣವನ್ನು ವ್ಯಾಪಾರಿ ಸಂಸ್ಥೆಗಳಿಂದಲೂ ಉದ್ದಿಮೆದಾರರಿಂದಲೂ ಸಂಗ್ರಹಿಸಲಾಗುತ್ತದೆ. ಸರಕಾರದಿಂದ ಇದಕ್ಕೆ ಯಾವ ಸಹಾಯವೂ ಇಲ್ಲ.

ನಗೆವಲ್ಲಿ

"ನನ್ನ ವುಡ್ ಬಿ ಯಾವಾಗಲೂ ಕೋಟಿ ಕೋಟಿಯಮೊತ್ತದಲ್ಲೇ ಮಾತಾಡುತ್ತಾರೆ."

"ಹೌದಾ? ನೀನು ಕೋಟ್ಯಾಧೀಶನ ಪತ್ನಿಯಾಗ್ತೀ ಅನ್ನು."

"ಊಹುಂ. ಅವ್ರು ಜೀವಾಣುಶಾಸ್ತ್ರಜ್ಞ ರಾಗಿದ್ದಾರೆ ಅಷ್ಟೆ ..."

▪

ಮಾಸ್ತರಣಿ ಶಿಷ್ಯನಿಗೆ ಕೇಳಿದಳು: 'ನಾನು ಸುಂದರಿ ಇದ್ದೇನೆ' ಇದರ ಕಾಲ ಯಾವುದು?

"ಭೂತಕಾಲ" ಎಂದನಾ ಭೂಪ.

▪

"ಏನ್ರಿ ಕಮಲಮ್ಮ, ಮಗು ಅತ್ರೆ ಏನ್ಮಾಡ್ಬೇಕು?"

"ನಿಮ್ಮ ಮನೆಯವ್ರಿಗೆ ಕವಿ ಅನ್ನೋ ಭ್ರಮೆ ಇದೆಯೇ?"

"ಇಲ್ಲ. ಯಾಕೆ? ಅದಕ್ಕೂ ಇದಕ್ಕೂ ಏನ್ಸಂಬಂಧ?"

"ನಮ್ಮವ್ರು ನಮ್ಮ ಮಗು ಅತ್ರೆ ತಾವು ಬರೆದ ಕವಿತೇನ ಹಾಡೋದಕ್ಕೆ ಶುರೂ ಮಾಡಿಬಿಡ್ತಾರೆ. ಮಗು ಅತ್ರೆ ಕೇಳಿ."

▪

ಟ್ರಾಫಿಕ್ ಕಾನ್ಸ್ಟೇಬಲ್ಲನಿಗೆ ಆ ರಾತ್ರಿ ಇನ್ಸ್ಪೆಕ್ಟರರು ಆಜ್ಞಾಪಿಸಿದರು: 'ನೋಡು, ಆ ಲೈಟು ಕಾಣುತ್ತಲ್ಲ, ಅಲ್ಲೀವರ್ಗೂ ಗಸ್ತಿ ತಿರುಗು. ನಂತರ ನನಗೆ ರಿಪ್ಪೋರ್ಟ ಕೊಡು.'

ತಿಂಗಳ ನಂತರ ಆ ಕಾನ್ಸಟೇಬಲ್ ಇನ್ಸಪೆಕ್ಟರ್‌ನೆದುರಿಗೆ ಬಂದು ಸಲಾಮು ಹೊಡೆದ. "ಏನಯ್ಯಾ ಗಸ್ತಿ ತಿರುಗಿ ರಿಪೋರ್ಟ್ ಕೊಡು ಅಂದ್ರೆ ಎಲ್ಹೋಗಿದ್ದೆ ಹಾಳಾಗಿ? ಒಂದು ತಿಂಗಳ ಮೇಲೆ ಬರೋದೆ?"

"ಸಾರಿ ಸರ್, ನೀವು ತೋರಿಸಿದ್ದು ಲೈಟಲ್ಲ, ಕಾರು. ಅದರ ಹಿಂದಿಂದೇ ಗಸ್ತಿ ತಿರಗ್ತಾ ಪುಣೆವರ್ಗೂ ಹೋಗಿ ಇವತ್ತಷ್ಟೇ ಬರ್ತಾ ಇದೀನಿ."

"ನಿನ್ತಲೆ... ಹೂಂ. ಇರ್ಲಿ ಹೋಗು ಡ್ಯೂಟಿಗೆ ಜಾಯ್ನ್ — ಆಗು."

"ಹಾಗಾದ್ರೆ ಸಾರ್, ಒಂದು ತಿಂಗಳ ಟಿಎ ಡಿಎ..."

▪

"ಅಲ್ಲಾ ತಾಯಿ ಸೈಕಲ್ ಗಾಳಿ ಬಿಟ್ನಲ್ಲಾ ಈ ಹುಡುಗಾ, ನಿಮ್ಮ ಮಗನಾ?" ಪಾರ್ಕಿನಲ್ಲಿ ಕುಳಿತಿದ್ದ ಆತ ಆ ಮಹಿಳೆಯನ್ನು ಕೇಳಿದ.

"ಅಲ್ಲ...ಆತ ನನ್ನ ತಂಗೀ ಮಗ ಅದೋ, ನಿಮ್ಮ ಸೈಕಲ್ಲಿಗೆ ಕಲ್ಲಿನಿಂದ ಜಜ್ಜಿ ದೀಪಾ ಒಡೀತಿದಾನಲ್ಲ ಆತ ನನ್ನ ಮಗ." ಆಕೆ ಹೇಳಿದಳು.

▪

ಕತೆಗಾರ: ನಾನು ಈಗ ಬರೆದಿರೋ ಕತೆ ಎಷ್ಟು ಗಂಭೀರವಾಗಿದೆ ಅಂದ್ರೆ ಅದನ್ನ ಕೇಳಿದವ್ರೆಲ್ಲಾ ಓಡಿ ಹೋಗ್ತಾರೆ.

ಮಿತ್ರ: ಆದ್ರೆ ನೀನು ಆ ಕತೆ ಯಾರಿಗೆ ಕೇಳಿಸ್ತಿ?

ಕತೆಗಾರ: ನನಗೆ ಸಾಲಾ ಕೊಟ್ಟವರೆದುರಿಗೆ...

▪

ಒಬ್ಬ ದುರುಳ ತನ್ನ ತಂದೆ ತಾಯಂದಿರನ್ನು ಕೊಂದುಬಿಟ್ಟ. ವಿಚಾರಣೆ ನಡೆದು ಫಾಸಿ ಶಿಕ್ಷೆಗೆ ಗುರಿಯಾದ. ಮಾಫಿಗಾಗಿ ವಿನಂತಿ ಅರ್ಜಿ ಬರೆದ. ಮಾಫಿಗೆ ನೀಡಿದ ಕಾರಣ: "ನಾನು ಅನಾಥ."

▪

ರಾವ್ ಸಾಹೇಬರು ದಿವಾನಖಾನೆಯಲ್ಲಿ ಕುಳಿತಿದ್ದರು. ಒಬ್ಬ ಧಡೂತಿ ಆಸಾಮಿ ಬಂದವನೇ ನಮಸ್ಕರಿಸಿ ಹರಟೆ ಹೊಡೆಯು

ಲಾರಂಭಿಸಿದ. ಒಂದು ಗಂಟೆಯಾಯಿತು, ಎರಡು ಗಂಟೆಯಾಯಿತು. ಹರಟೆ ಮುಗಿಸುವ ಲಕ್ಷಣ ಕಾಣದಿದ್ದಾಗ ರಾವ್ ಸಾಹೇಬರು ಬೇಜಾರಿನಿಂದ, "ಇಲ್ಲಿಂದ ಎದ್ದು ಹೋಗೋದಕ್ಕೆ ನೀನೇನು ತಗೊಳ್ತೀರಿ?"

"ನಮ್ಮ ಪತ್ರಿಕೆಗೆ ಎರಡು ವರ್ಷದ ಚಂದಾ ಹಣ" ಎನ್ನುತ್ತ ಆ ಧಡೂತಿ ಆಸಾಮಿ ರಸೀತಿ ಪುಸ್ತಕ ಮುಂದು ಮಾಡಿದ.

•

ನ್ಯಾಯಾಧೀಶರು, "ಈತನ ಮೇಲಿರೋ ಅಪಾದನೆ ಏನು?'' ಎಂದು ಕೇಳಿದರು.

"ಈತ ಒಬ್ಬ ಯುವತಿಯನ್ನು ಕದ್ದೊಯ್ದಿದ್ದಾನೆ."

"ಇಲ್ಲ ಹುಜೂರ್, ನಾನು ಕೇವಲ ಸೈಕಲ್ ಕದಿಯೋನು. ಎಷ್ಟು ಹೇಳಿದ್ರೂ ಆಕೆ ಸೈಕಲ್ ಬಿಟ್ಟು ಕೆಳಗಿಳೀಲಿಲ್ಲ. ಮತ್ತೇನ್ಮಾಡ್ಲಿ?" ಆರೋಪಿ ರಾಗ ಎಳೆದ.

•

ಕುರೂಪಿರಾಣಿ ಕಮಲಮ್ಮ ಸೌಂದರ್ಯ ವಿಶೇಷಜ್ಞನ ಬಳಿ ಬಂದು, "ನನ್ನ ರೂಪವನ್ನು ಸುಂದರಗೊಳಿಸಲಿಕ್ಕೆ ಫೀ ಎಷ್ಟು?" ಎಂದಳು.

"ಐದು ಸಾವಿರ ರೂಪಾಯಿ'' ಆತ ಉತ್ತರಿಸಿದ.

"ಅಂ! ಅಷ್ಟಾ? ಭಾಳಾ ಹೆಚ್ಚಾಯಿತು. ಇದಕ್ಕಿಂತ ಸೋವಿ ಮಾರ್ಗ ಯಾವುದೂ ಇಲ್ವೆ?"

''ಯಾಕಿಲ್ಲ?— ನೀವು ಬಟ್ಟೆ ಬಿಚ್ಚಲು ಶುರು ಮಾಡಿ."

▪

ಸೈನ್ಸ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವರು 'ನಾರಿ'ಯ ರಾಸಾಯನಿಕ ವ್ಯಾಖ್ಯೆಯನ್ನು ಈ ರೀತಿ ನೀಡಿದರು:

"ಮಾನವ ಜಾತಿಯ ಒಂದು ವಿಶೇಷ ರೂಪ. ಮೇಲಿಂದ ಮೇಲೆ ಅವಸ್ಥೆ ಬದಲಿಸುವ ಜೀವಿ. ತಾಪಮಾನ ಅನಿಶ್ಚಿತ; ಕೆಲವೊಮ್ಮೆ ಬಿಸಿ, ಕೆಲವೊಮ್ಮೆ ತೀರಾ ತಣ್ಣಗೆ. ಅತ್ಯಧಿಕ ವಿಸ್ಫೋಟಕ. ವಿಶೇಷ ಗುಣ: ಪುರುಷನನ್ನು— ದಿಕ್ಕುತಪ್ಪುವಂತೆ ಮಾಡುವುದು. ಒಂದಕ್ಕಿಂತ ಹೆಚ್ಚು ಕೂಡಿದರೆ ಪ್ರಳಯಾಂತಕ...''

•

ರೋಗಿ ಡಾಕ್ಟರನಿಗೆ ಗಾಬರಿಯಿಂದ ಕೇಳಿದ: "ಖರೆ ಹೇಳ್ರಿ, ನಂಗ ಆರಾಮಾಗ್ತದ? ಯಾರೊ ಹೇಳ್ತಿದ್ರು, ಡಾಕ್ಟರ್ರು ರೋಗ ಯಾವುದು ಅಂತ ಪತ್ತೆ ಹಚ್ಚಲಿಕ್ಕ ಪ್ರಯತ್ನಾನs ಮಾಡೂದಿಲ್ಲ ಅಂತ. ಟೈಫಾಯಿಡ್ ಆಗಿದ್ರ ನ್ಯುಮೋನಿಯಾ ಅಂತ ಟ್ರೀಟ್‌ಮೆಂಟ್ ಕೊಟ್ಟು ಕೊಲ್ತಾರ ಅಂತ..."

"ಏನ್ರಿ? ಎಷ್ಟ ಮಾತಾಡ್ತೀರಿ...ಏನದು? ನಾನು-ನ್ಯುಮೋನಿಯಾ ರೋಗಿಗೆ ಟ್ರೀಟ್‌ಮೆಂಟ್ ಕೊಟ್ರ ಅವ ನ್ಯುಮೋನಿಯಾದಿಂದನs ಸಾಯ್ತಾನ,ಟೈಫಾಯ್ಡಿನಿಂದಲ್ಲ..."

*

ನ್ಯಾಯಾಧೀಶ: ನಿನಗೆಷ್ಟು ಜನ ಸೋದರರು?

ಅಪರಾಧಿ: ಒಬ್ಬನೂ ಇಲ್ಲ.

ನ್ಯಾಯಾಧೀಶ: ಸುಳ್ಳು ಹೇಳಿಕೆ ನೀಡ್ತಿದ್ದೀಯಾ? ಹತ್ತು ರೂಪಾಯಿ ದಂಡ ಕೊಡು. ಅಲ್ಲೋ ನಿನ್ನೆ ನಿಮ್ಮ ತಂಗಿ ಸಾಕ್ಷಿ ಹೇಳೋವಾಗ ತನಗೊಬ್ಬ ಸೋದರ ಇದ್ದಾನೇಂತ ಹೇಳಿದ್ಲು...

ಕಜ್ಜಿ

ಡಿ. ಕೆ. ಮಹಾಬಲರಾಜು

ಕಜ್ಜಿ ಅತಿ ಸಾಮಾನ್ಯವಾದ ಅಂಟುರೋಗ. ಆಸ್ಪತ್ರೆಗೆ ಬರುವ ಪ್ರತಿ ನೂರು ಚರ್ಮರೋಗಿಗಳಲ್ಲಿ ಇಪ್ಪತ್ತರಷ್ಟು ಜನರಿಗಾದರೂ ಕಜ್ಜಿಯಾಗಿರುತ್ತದೆ. ಇದರಲ್ಲಿ ಹತ್ತು ವರ್ಷದೊಳಗಿನ ಮಕ್ಕಳ ಸಂಖ್ಯೆಯೇ ಅಧಿಕ. ಇದು ಗಂಡು, ಹೆಣ್ಣು, ಮಕ್ಕಳು ಮುದುಕರು ಎಂಬ ಭೇದವಿಲ್ಲದೇ ಎಲ್ಲರಿಗೂ ಅಂಟುತ್ತದೆ.

ಕಾರಣ

ಕಜ್ಜಿ ಸಂದಿಪದಿಗಳ ಗುಂಪಿಗೆ ಸೇರಿದ ಇಚ್ ಮೈಟ್ ಎಂಬ ಒಂಟು ಕ್ರಿಮಿಯಿಂದ ಬರುತ್ತದೆ. ತಲೆಯಲ್ಲಿ ಹೇನು ವಾಸಿಸುವಂತೆಯೇ ಈ ಕ್ರಿಮಿಗಳು ಚರ್ಮದಲ್ಲಿ ಬಿಲಗಳನ್ನು ಕೊರೆದುಕೊಂಡು ವಾಸಿಸುತ್ತವೆ. ೦.೪ ಮಿಲಿ ಮೀಟರಿನಷ್ಟು ಉದ್ದವಾದ ಈ ಕ್ರಿಮಿಯನ್ನು ತೀರಾ ಕಷ್ಟಪಟ್ಟು ಬರಿಗಣ್ಣಿನಿಂದ ನೋಡಲು ಸಾಧ್ಯ. ದುಂಡಗಿರುವ ಈ ಕ್ರಿಮಿಯ ಮೇಲ್ಮೈ ಉಬ್ಬಾಗಿಯೂ, ಕೆಳ ಬಾಗ ಚಪ್ಪಟೆಯಾಗಿಯೂ ಇದೆ. ದೇಹವನ್ನು ತಲೆ, ಎದೆ, ಹೊಟ್ಟೆ ಎಂದು ವಿಂಗಡಿಸಬಹುದು. ದೇಹದ ಮೇಲ್ಮೈ ಸುಕ್ಕುಸುಕ್ಕಾಗಿದ್ದು ಚಿಕ್ಕ ಚಿಕ್ಕ ಕೂದಲಿನಿಂದ ತುಂಬಿಕೊಂಡಿದೆ. ಒಟ್ಟು ನಾಲ್ಕು ಜೊತೆ ಕಾಲುಗಳಿದ್ದು ಎರಡು ಜೊತೆ ಮುಂಭಾಗದಲ್ಲೂ ಮತ್ತೆರಡು ಜೊತೆ ಹಿಂಭಾಗದಲ್ಲೂ ಇದೆ. ಕಾಲಿನತುದಿಯಲ್ಲಿ ಹೀರುನಳಿಕೆ ಇದೆ.

ಹೆಣ್ಣು ಕ್ರಿಮಿ ಚರ್ಮದ ಸಂದುಗಳಲ್ಲಿ ಚಿಕ್ಕ ಬಿಲ ತೋಡಿಕೊಂಡು ನೂರರವರೆಗೆ ಮೊಟ್ಟೆ ಇಟ್ಟು ನಂತರ ಸಾಯುತ್ತದೆ. ಮೂರು ನಾಲ್ಕು ದಿನಗಳಲ್ಲಿ ಮೊಟ್ಟೆ ಒಡೆದು ಚಿಕ್ಕ ಚಿಕ್ಕ ಮರಿಗಳು ಹೊರಬರುತ್ತವೆ. ಇವು ಬಿಲದಿಂದ ಹೊರಬಂದು ದೊಡ್ಡವಾಗಿ ಹೊಸ ರಂಧ್ರ ಕೊರೆಯುತ್ತವೆ. ಒಂದು ಮೊಟ್ಟೆಯಿಂದ ಪೂರ್ಣ ಬೆಳೆದ ಕ್ರಿಮಿಯಾಗಲು ಒಂದು ವಾರ ಮಾತ್ರ ಸಾಕು. ಹೀಗೆ ಪೂರ್ಣ ಬೆಳೆದ ಕ್ರಿಮಿ ಒಂದೆರಡು ತಿಂಗಳು ಬದುಕಬಲ್ಲದು.

ಹರಡುವಿಕೆ

ಕಜ್ಜಿ ಅತಿ ಶೀಘ್ರವಾಗಿ ಒಬ್ಬರಿಂದ ಒಬ್ಬರಿಗೆ ತಗಲುತ್ತದೆ. ಕಜ್ಜಿ ಆದವನೊಂದಿಗೆ ಸಂಪರ್ಕ ಅವನು ಉಪಯೋಗಿಸಿದ ಹಾಸಿಗೆ ಬಟ್ಟೆಬರೆ ಉಪಯೋಗಿಸುವುದರಿಂದ ಅದು ಬರುತ್ತದೆ. ಒಬ್ಬರಿಗೆ ಕಜ್ಜಿಯಾದರೆ ಅವನ ಕುಟುಂಬದವರಿಗೆಲ್ಲಾ ಕಜ್ಜಿ ಆಗುವುದು ಸಾಮಾನ್ಯ. ಕಜ್ಜಿ ಮನುಷ್ಯನಿಗಲ್ಲದೇ ನಾಯಿ ಕುರಿ, ಕುದುರೆ ಮುಂತಾದ ಪ್ರಾಣಿಗಳಿಗೂ ತಗಲುತ್ತದೆ. ಕಜ್ಜಿ ಹತ್ತಿದ ಪ್ರಾಣಿಗಳಿಂದಲೂ ಮನುಷ್ಯನಿಗೆ ಕಜ್ಜಿ ತಗಲುತ್ತದೆ.

ಲಕ್ಷಣ

ಇದು ಮುಖ್ಯವಾಗಿ ಮೊದಲು ಕೈಬೆರಳುಗಳ ಸಂದಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲದೇ ಕೈ ಕಂಕುಳು ತೊಡೆಸಂದಿ ಕಿಬ್ಬೊಟ್ಟೆ, ಕಾಲುಗಳ ಬೆರಳಿನ ಸಂದಿ, ಕಾಲುಗಳು, ನಿತಂಬ, ಜನನೇಂದ್ರಿಯ ಹಾಗೂ ಸ್ತನಗಳ ಮೇಲೆಯೂ ತೋರಬಹುದು. ದೊಡ್ಡವರಿಗೆ ಕಜ್ಜಿ ಮುಖದ ಮೇಲೆ ಆಗುವುದು ತೀರಾ ವಿರಳ. ಕಜ್ಜಿ ಆದವನಿಗೆ ಮೊದಲ ಕಜ್ಜಿ ಆದ ಸ್ಥಳಗಳಲ್ಲಿ ಕಡಿತ ನವೆ ಉಂಟಾಗುತ್ತದೆ. ಸಂಜೆ ವೇಳೆ ಈ ಕಡಿತ ಹೆಚ್ಚಾಗಿ ರೋಗಿ ಪದೆ ಪದೆ ಕೆರೆದುಕೊಳ್ಳುತ್ತಾನೆ. ಕಜ್ಜಿ ಆಗಿರುವ ಸ್ಥಳಗಳಲ್ಲಿ ಚಿಕ್ಕ ಚಿಕ್ಕ ಕೊರಕಲು ರಂಧ್ರಗಳು ಕಾಣಿಸಿಕೊಳ್ಳುತ್ತವೆ. ಕಜ್ಜಿ ಆದ ಜಾಗೆಗಳಲ್ಲಿ ಬೇರೆ ಬೇರೆ ಬಗೆಯ ಬ್ಯಾಕ್ಟೀರಿಯಾಗಳು ಸೇರಿಕೊಂಡರೆ ದೊಡ್ಡ ದೊಡ್ಡ ಬೊಕ್ಕೆಗಳಾಗಿ ಕೀವು ತುಂಬಿಕೊಳ್ಳುತ್ತದೆ.

ನಿವಾರಣೆ

ಇದು ವಾಸಿಯಾಗಲು ಮೂರುದಿನ ಮಾತ್ರ ಸಾಕು. ಹಲವಾರು ಔಷಧಿಗಳು ಕಜ್ಜಿಗೆ ಕಾರಣವಾದ ಕ್ರಿಮಿಯನ್ನು ಕೊಲ್ಲುತ್ತವೆಯಾದರೂ ಇಂದು ಪ್ರಬಲವಾದ ಬೆಂಜಾಲ್ ಬೆಂಜೋಯೇಟ್ ಎಂಬ ಔಷಧಿಯನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ.

ಔಷಧಿಯನ್ನು ಉಪಯೋಗಿಸುವಾಗ ಗಮನಿಸಬೇಕಾದಂತಹ ಮುಖ್ಯ ಅಂಶಗಳು.

- ಕಜ್ಜಿ ಹತ್ತಿದವರು ಬಿಸಿನೀರಿನಿಂದ ಚೆನ್ನಾಗಿ ಸ್ನಾನ ಮಾಡಬೇಕು.
- ಸ್ನಾನ ಮಾಡುವಾಗ ಮೈ ತಿಕ್ಕಲು ತೆಂಗಿನ ಗಂಜನ್ನು ಉಪಯೋಗಿಸಿ ಕಜ್ಜಿಯಾಗಿರುವ ಸಂದುಗಳನ್ನು ವಿಶೇಷವಾಗಿ ಉಜ್ಜಿ ತೊಳೆಯಬೇಕು.
- ಸ್ನಾನವಾದ ನಂತರ ಮೈಯನ್ನು ಒರಟಾದ ಟವಲ್‌ನಿಂದ ಚೆನ್ನಾಗಿ ಒರೆಸಿಕೊಳ್ಳಬೇಕು.
- ಬೆಂಜಾಲ್ ಬೆಂಜೋಯೇಟ್ ಔಷಧಿಯನ್ನು ಕುತ್ತಿಗೆ ಇಂದ ಕೆಳಕ್ಕೆ ಮೈ ತುಂಬ ಹಚ್ಚಬೇಕು.
- ಔಷಧಿಯನ್ನು ಹಚ್ಚುವಾಗ ಕಜ್ಜಿಹತ್ತಿದ ಜಾಗೆಗಳಿಗೆ ಹೆಚ್ಚಾಗಿ ಹಚ್ಚಬೇಕು.
- ಔಷಧಿ ಹಚ್ಚಿದ ನಂತರ ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.
- ಔಷಧಿಯನ್ನು ಮತ್ತೆರಡು ದಿನ ಇದೇ ರೀತಿ ಹಚ್ಚಬೇಕು. ಆದರೆ ಸ್ನಾನ ಮಾಡಬಾರದು.
- ನಾಲ್ಕನೆ ದಿನ ಚೆನ್ನಾಗಿ ಸ್ನಾನಮಾಡಬೇಕು. ಮೈಮೇಲಿನ ಕಜ್ಜಿಗಳೆಲ್ಲ ಮಾಯವಾಗಿರುತ್ತವೆ.
- ರೋಗಿಯ ಬಟ್ಟೆಗಳನ್ನೆಲ್ಲಾ ಚೆನ್ನಾಗಿ ಕುದಿಸಿ ಒಗೆದು ಇಸ್ತ್ರಿ ಮಾಡಬೇಕು.

ಕಜ್ಜಿ ಇರುವ ಸಮಯದಲ್ಲಿ ಉಂಟಾಗುವ ಕಡಿತವನ್ನು ಕಡಿಮೆ ಮಾಡಲು ಕೆಲವು ಮಾತ್ರೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇತರ ರೋಗಾಣುಗಳೂ ಕಜ್ಜಿಯಲ್ಲಿ ಸೇರಿಕೊಂಡಿದ್ದರೆ ಮೊದಲು ಆ ರೋಗಾಣುಗಳನ್ನು ಪ್ರತಿಜೈವಿಕಗಳಿಂದ ಕೊಂದು ನಂತರ ಕಜ್ಜಿಗೆ ಚಿಕಿತ್ಸೆ ಪ್ರಾರಂಭಿಸಬೇಕು.

ಕಜ್ಜಿ ಬಂದಾಗ ಈ ಕೆಳಗಿನ ನಿಯಮಗಳನ್ನು ಚೆನ್ನಾಗಿ ಪಾಲಿಸಬೇಕು:

- ಕಜ್ಜಿಯ ಲಕ್ಷಣ ಕಂಡ ತಕ್ಷಣ ಸೂಕ್ತ ವೈದ್ಯರ ಸಲಹೆ ಪಡೆಯಬೇಕು.
- ಕಜ್ಜಿ ಹತ್ತಿದವರನ್ನು ಇತರರು ಮುಟ್ಟಬಾರದು.
- ರೋಗಿಯ ಹಾಸಿಗೆ ಬಟ್ಟೆ ಇತರರು ಉಪಯೋಗಿಸಬಾರದು.
- ಕಜ್ಜಿ ಹತ್ತಿದವರ ಮನೆಯವರೆಲ್ಲಾ ಒಟ್ಟಿಗೇ ಔಷಧಿ ಉಪಯೋಗಿಸುವುದು ಒಳ್ಳೆಯದು.
- ರೋಗಿಯ ಬಟ್ಟೆಗಳನೆಲ್ಲಾ ಕುದಿಸಿ, ಒಗೆದು ಇಸ್ತ್ರಿ ಮಾಡಬೇಕು.
- ರೋಗಿಯು ಉಗುರುಗಳನ್ನು ಕತ್ತರಿಸಿಕೊಳ್ಳಬೇಕು.

ಕೈಕೊಡದ ಹಿಲ್‌ಮ್ಯಾನ್

ಜಿ. ಟಿ. ನಾರಾಯಣರಾವ್

ನಾರಾಯಣ ನಾರಾಯಣ ನಾರಾಯಣ ... ಬರಿ ನಾಮಸಂಕೀರ್ತನವೆಂದರೆ ಹಾಯಾಗಿ ಮಾಡಿಕೊಂಡಿರಬಹುದು. ಆದರೆ ಹಳ್ಳಿಗೆ ಹೋದ ನಾರಾಯಣ—ಅದೂ ಕೊಡಗಿನ ದಟ್ಟ ಕಾಡುಗಳಲ್ಲಿ ಅಡಗಿದ ಹಳ್ಳಿ—ಕಡೆಯ ಬಸ್ಸು ಬಂದಾಗಲೂ ಊರಿಗೆ ಮರಳಲಿಲ್ಲ. ಊರು ಕೇರಿಗಳನ್ನೇ ನುಂಗಿಬಿಡಬಹುದಾದಂಥ ಭಯಂಕರ ಮಳೆ...ಆಗ ಮುಂದೇನು ?

ಬಳ್ಳಾರಿಯ ಬೇಸಗೆಯ ಬೇಗೆ ತಡೆಯಲಾಗದೆ ಒಂದು ವಾರ ರಜೆ ಪಡೆದು ಊರಿಗೆ ಮರಳಿದ್ದೆ. ನನ್ನೂರು ಮಡಿಕೇರಿ. ಸ್ವಿಟ್ಸರ್ಲೆಂಡನ್ನು ಯೂರೋಪಿನ ಮಡಿಕೇರಿ ಎಂಬುದಾಗಿ ಹಿರಿಯರೊಬ್ಬರು ಬಣ್ಣಿಸಿದ್ದನ್ನು ಕೇಳಿ ಹೆಮ್ಮೆ ತಳೆದಿದ್ದೇನೆ. ನನ್ನೂರಿದೇ ಬೃಹತ್ತಾದ ಶೀತಕಾರಿ (ರಿಫ್ರಿಜರೇಟರ್). ಬೆಟ್ಟಗಳ ನಡುವಿನ ಬೋಗುಣಿ ಈ ಪುಟ್ಟ ಪಟ್ಟಣ. ಎಲ್ಲೆಲ್ಲಿಯೂ ಕಾಡೋ ಕಾಡು, ಹಸಿರೋ ಹಸಿರು. ವಿರಳ ಜನಸಂಖ್ಯೆ. ಸಾರಿಗೆ ಸಂಪರ್ಕ ಸರ್ವವ್ಯಾಪಿಯೂ ಅಲ್ಲ, ಸರ್ವಗ್ರಾಹಿಯೂ ಅಲ್ಲ. ನಿಸರ್ಗವೇ ಇಲ್ಲಿ ಆರಾಮವಾಗಿ ಮೈ ಚೆಲ್ಲಿ ವಿಶ್ರಾಂತಿ ಸುಖ ಸವಿಯುತ್ತಿರುವಾಗ ಅದರ ಕೂಸುಗಳಾದ ಜನರಿಗೆ ಎಲ್ಲಿಂದ ತಾನೇ ತುರ್ತುತನ ಬಂದೀತು!

ನಾನು ಅಜ್ಜಿ ಸಾಕಿದ ಮಗು—ಅಜ್ಜಿಯ ಗುಡಾರಕ್ಕೆ ಬಂದಿದ್ದೆ; ತಾಯಿ ಚಿಕ್ಕಮ್ಮ ಬೆಳೆಸಿದ ಕೂಸು—ತವರಿನ ಬಿಡಾರಕ್ಕೆ ಮರಳಿದ್ದೆ. ಬಳ್ಳಾರಿಯಲ್ಲಿ ಹಿರಿಯ ಸೇನಾಧಿಕಾರಿಯಾಗಿದ್ದ ನಾನು ಅಜ್ಜಿ ತಾಯಿ ಚಿಕ್ಕಮ್ಮ ಇವರ ದೃಷ್ಟಿಯಲ್ಲಿ ಲೋಕೈಕ ವೀರ, ಪ್ರತಾಪಶಾಲಿ, ಮಹಾಪುರುಷ. ತವರಿನ ಈ ನಲುಮೆ ನನಗೆ ಹಿತಕರವಾಗಿತ್ತು. ಅಲ್ಲಿ ಕ್ಷಣವೊಂದು ಯುಗವಾಗಿ ಇರಿಯುತ್ತಿತ್ತು. ಇಲ್ಲಿ? ಯುಗವೊಂದು ಕ್ಷಣವಾಗಿ ಸರಿಯುತ್ತಿತ್ತು.

ಮೇ ತಿಂಗಳ ಕೊನೆಯ ವಾದ. ಅದೇ ಮಳೆಗಾಲದ ಆರಂಭದ ದಿನಗಳು. ಹೀಗಾಗಿ ಪ್ರಕೃತಿ ವ್ಯಾಪಾ

ರಗಳು ಅಸಾಧಾರಣ ಚಟುಪಟಿಕೆಯಿದಂ ಬದಲಾಗುತ್ತಿದ್ದುವು. ಈಗ ಸೆಕೆ, ಬೆನ್ನಿಗೇ ಸುಯ್ಯೆಂದು ತಂಗಾಳಿ. ಈಗ ಸೀರಿಪ, ಒಡನೆ ಗಿಡಮರಗಳ ಹಸುರೆಲೆಗಳ ಚಾಮರ ಬೀಸಿನ ಸರ ಸರ ಸದ್ದು. ಈಗ ಆಗಸ ನಿಚ್ಚಳ, ಅಗೋ ಬಂದೇ ಬಂತು ಮೋಡಗಳ ಆನೆವಿಂಡು. ಆದರೆ ಹುಯ್ಯಲಿಲ್ಲ ಮಳೆರಾಯ. ಕೈಕೊಟ್ಟ. ನಡೆದೇಬಿಟ್ಟ. ಎಲ್ಲೆಲ್ಲೂ ಪಸೆ ಪಸೆ, ಮಳೆ ಮೂರಿ. ಮತ್ತೆ ಸೆಕೆ, ಗಾಳಿ ಅಲೆತ ಸ್ಥಗಿತ.

ಊರವರಿಗೆಲ್ಲ ಗೊತ್ತು ಮಳೆರಾಯನ ಬಗೆಬಗೆಯ ವರಿಸೆಗಳ ಒಕಮತ್ತು. ಕಡಲಿನಿಂದ ಮೇಲೇರಿದ ಅವನು ಕೋಡುಮಲೆಗಳ ಈ ನಾಡನ್ನು ಹೊಗುವುದೇನು ಸಾಧಾರಣ ಸಾಹಸವೇ? ಮೇಲೇರಿದವನು ಇಳಿಗಿಳಿಯದೆ ಇನ್ನೆಲ್ಲಿಗೆ ಹೋದಾನು? ನೆಲದ ನೀರಡಕೆಯನ್ನೂ ಗಿರಿವನಗಳ ಬಯಕೆಯನ್ನೂ ಕೆರೆತೊರೆಗಳ ಆಸೆಯನ್ನೂ ಹಿಂಗಿಸದಿರುವನೇ ? ದಿನದಿಂದ ದಿನಕ್ಕೆ—ಅಲ್ಲಲ್ಲ ಸಂಜೆಯಿಂದ ಸಂಜೆಗೆ—ಬಾನಂಗಳದಲ್ಲಿ ರಂಗೇರುತ್ತಿತ್ತು. ಕೋಲ್ಮಿಂಚಿನ ಸುರುಸುರು ಬತ್ತಿಯ ಥಳಕುಗಳು ವಿಚಿತ್ರಾಕಾರಗಳನ್ನು ಕುಂಚಿಸುತ್ತಿದ್ದುವು. ಗುಡುಗಿನ ನಿನದ ದಿಗ್ದಿಗಂತಗಳನ್ನು ಭೇದಿಸಿ ಮೊಳಗುತ್ತಿತ್ತು.

ನಾನು ತಂಗಿದ್ದುದು ನನ್ನ ಚಿಕ್ಕಪ್ಪನವರ ಮನೆಯಲ್ಲಿ. ಅಲ್ಲೇ ನಾನು ಓದಿ ಬೆಳೆದವ. ಮನೆಯಲ್ಲಿ ಇದ್ದವರು ಚಿಕ್ಕಮ್ಮ, ಅವರ ಮಕ್ಕಳು, ಅಜ್ಜಿ, ಕೆಲಸದವರು ಇಷ್ಟು ಮಂದಿ. ಚಿಕ್ಕಪ್ಪ ಗತಿಸಿ ಕೆಲವು ವರ್ಷಗಳು ಸಂದಿದ್ದುವು. ಅವರ ಹಿರೇ ಮಗ ನಾರಾಯಣ ಇಪ್ಪತ್ತೆರಡರ ಹುರುಪಿನ ತರುಣ. ಕೃಷಿಕಾರ್ಯಗಳಲ್ಲೆ ನಿರತನಾಗಿದ್ದ. ಮಡಿಕೇರಿಯಿಂದ ಭಾಗಮಂಡಲಕ್ಕೆ ಹೋಗುವ ರಾಜಮಾರ್ಗದ ಬದಿಯ ಅಪ್ಪುಕಳ ಎಂಬ ಹಳ್ಳಿಯಲ್ಲಿ ಅವರ ಆಸ್ತಿ ಇತ್ತು. ದೂರ ಸುಮಾರು ಹತ್ತು ಕಿಲೋಮಿಟರುಗಳು. ನಾರಾಯಣ ಪ್ರತಿ ನಿತ್ಯ ಮುಂಜಾನೆ ಮೊದಲ ಬಸ್ಸಿನಲ್ಲಿ ಅಪ್ಪುಕಳಕ್ಕೆ ಹೋಗಿ ಹಗಲಿಡೀ ಅಲ್ಲಿದ್ದು ಸಂಜೆ ಕೊನೆ ಬಸ್ಸಿನಲ್ಲಿ ಮರಳುತ್ತಿದ್ದುದು ವಾಡಿಕೆ.

ಅಂದು ಶುಕ್ರವಾರ. ಮಡಿಕೇರಿಯಲ್ಲಿ ಸಂತೆ. ಹಳ್ಳಿಗರೆಲ್ಲರೂ ಮಡಿಕೇರಿಗೆ ಬಂದು ತಮ್ಮ ಉತ್ಪನ್ನಗಳನ್ನು ಸಂತೆಯಲ್ಲಿ ಮಾರಿ ತಮಗೆ ಬೇಕಾಗುವ ಪದಾರ್ಥಗಳನ್ನು ಅಂಗಡಿಗಳಿಂದ ಕೊಂಡು ಮರಳುವ ವಾರದ ರಜಾ ದಿನ. ಇತ್ತ ಮನೆಯಲ್ಲಿ ಗೌರವಾನ್ವಿತ ಅತಿಥಿಯಾದ ನಾನು ಬೇರೆ ಇದ್ದೇನೆ. ಹೀಗಾ ನಾರಾಯಣ ಆ ಮುಂಜಾನೆ ಅಪ್ಪುಕಳಕ್ಕೆ ಹೋಗಲಿಲ್ಲ. ನಿಸರ್ಗ ಪೂರ್ಣ ಸಹಕಾರ ನೀಡುವಂತೆ ಪ್ರಸನ್ನವಾಗಿತ್ತು. ಹೂಬಿಸಿಲು. ಸ್ವಚ್ಛಾಕಾಶ. ಗಾಳಿಯೇ ಹೆಪ್ಪುಗಟ್ಟಿ ಬಾನಾಯಿತೊ ಎನ್ನುವಂಥ ನೋಟ.

ಕೃಷಿರಂಗ ಯುದ್ಧರಂಗದಂತೆ. ನಿರಂತರ ಜಾಗರೂಕತೆಯೇ ಎರಡೂ ರಂಗಗಳಲ್ಲಿ ಯಶಸ್ಸಿನ ಗುಟ್ಟು. ನಾರಾಯಣನಿಗೆ ಅಪ್ಪುಕಳದಲ್ಲಿ ಜರೂರು ಕೆಲಸ ಒದಗಿ ಬಂತು. ಹೀಗಾಗಿ ಅವನು ಬೇಗನೆ ಮಧ್ಯಾಹ್ನದ ಊಟ ಮುಗಿಸಿ ಅತ್ತ ಕಡೆಗೆ ಪಾದಯಾತ್ರೆ ಮಾಡಿದ. ಆ ಅವೇಳೆಯಲ್ಲಿ ಯಾವ ಬಸ್ಸೂ ಇರಲಿಲ್ಲ.

"ಹೊತ್ತು ಕಂತುವ ಮೊದಲೇ ಬಂದುಬಿಡು" ಅಜ್ಜಿಯ ಬುದ್ಧಿವಾದ.

"ಹೋಗದಿದ್ದರೇನು ಮಹಾ ಸೂರೆ ಹೋಗೋದು? ನಾಳೆ ಹೋದರಾಯಿತು" ತಾಯಿಯ ಕಾಳಜಿ ನುಡಿ.

"ಮಳೆರಾಯನ ಮೂಡ್ ನಂಬಬೇಡ" ನನ್ನ ಅನುಭವೋಕ್ತಿ.

"ಕೊನೆ ಬಸ್ಸಿನಲ್ಲಿ ಬಂದೇ ಬರುತ್ತೇನೆ. ಒಟ್ಟಿಗೇ ಊಟ ಮಾಡೋಣ" ನಾರಾಯಣನ ಸಮಜಾಯಿಷಿ.

ಸರಿ, ಅತ್ತ ಅವನು ನಡೆದು ಹೋದ. ಇತ್ತ ನಾನು ನಿದ್ರೆ ಹೋದೆ.

ಗಡಿಯಾರದ ಪ್ರಕಾರ ಸಾಯಂಕಾಲದ ಐದು ಗಂಟೆ. ಆದರೆ ಸುತ್ತಲೂ ಎತ್ತೆತ್ತಲೂ ದಟ್ಟವಾಗಿ ಹಬ್ಬಿದ್ದ ಮೋಡಗಳ ದಪ್ಪ ಮುಸುಕು ಆಗಲೇ ಮಡಿಕೇರಿಗೆ ಕತ್ತಲೆಯ ಕರಿಗವಸು ತೊಡಿಸಿತ್ತು. ನಾನು ಎದ್ದೆ. ಮಳೆಯ ಮೊದಲ ಸುತ್ತು ಇನ್ನೇನು ಆರಂಭವಾಗುವುದರಲ್ಲಿತ್ತು. ಕೋಲ್ಮಿಂಚಿನ ಆರತಿ. ಗುಡುಗಿನ ನಗಾರಿ. ಕಪ್ಪೆ ಜಿಬ್ರಿಗಳ ಮಂತ್ರಪಠಣ. ಗಿಡಮರಗಳ ತೊನೆತ. ಹೊಸ ಮಣ್ಣಿನ ಹಿತಕರ ಪರಿಮಳ. ಇವೆಲ್ಲವೂ ನನಗೆ ಅಪ್ಯಾಯಮಾನವೇ. ಆದರೆ ನಾರಾಯಣ ಅಪ್ಪುಕಳಕ್ಕೆ ಹೋಗಿರುವನಲ್ಲ, ಬೇಗನೆ ಮರಳಲಿ ಎಂಬ ಚಿಂತೆ ಮನಸ್ಸಿನ ಆಳವನ್ನು ಕಲಕುತ್ತಿತ್ತು.

ಆಲಿಕಲ್ಲುಗಳ ಹೊಡೆತ ಬಿರುಸಾಗಿಯೇ ಇತ್ತು. ಅವುಗಳ ಬೆನ್ನಿಗೆ ಮಳೆಯ ತೋರ ಹನಿಗಳ ತೀವ್ರ ಕುಟ್ಟಣೆಯೂ ತೊಡಗಿತು. ಕೇವಲ ನಿಮಿಷಗಳಲ್ಲೇ ಚರಂಡಿ ತೋಡುಗಳು ತುಂಬಿ ಉಕ್ಕಿದುವು. ಪ್ರಕೃತಿಯೇ ಕರಗಿ ನೀರಾಗಿ ಹರಿಯುತ್ತಿತ್ತು. ಆಗಸವೇ

ಬಿರಿದೊಡೆದು ನೆಲದ ಮೇಲೆ ಕುಸಿದಿತ್ತು.

ಗಡಿಯಾರದ ಲೋಲಕ ನಿರಂತರವಾಗಿ ಆಂದೋಲಿಸಿತು. ಅಡುಗೆಯ ಮನೆಯಲ್ಲಿ ಸೌದೆ ಒಲೆಯ ಬೆಚ್ಚಗಿನ ಮೂಲೆಯಲ್ಲಿ ಕಾಲು ಚಾಚಿ ಕುಳಿತು ಸುಟ್ಟ ಹಲಸಿನ ಬೇಳೆಗಳನ್ನು ಕಟುಂ ಕುಟುಂ ಜಗಿಯುತ್ತ ಕೊಡಗಿನ ಘಮಘಮಿಸುವ ಸುಡು ಕಾಫಿಯನ್ನು ತಳುಪೊರೆಯಲ್ಲಿ ಆಸ್ವಾದಿಸುತ್ತ ಪರನಿಂದೆ ಹಾಗೂ ಆತ್ಮಶ್ಲಾಘನೆ ಎಂಬ ಅತ್ಯುತ್ಸಾಹದಾಯಕ ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ ಮಾತಾಡುತ್ತ ಕಾಲ ಸವೆದದ್ದಾಯಿತು. ರಾತ್ರಿ ಗಂಟೆ ಎಂಟಾದರೂ ಕೊನೆಯ ಬಸ್ ಮಡಿಕೇರಿ ನಿಲ್ದಾಣ ತಲಪಿ ಒಂದು ಗಂಟೆಯೇ ಸಂದು ಹೋಗಿದ್ದರೂ ನಾರಾಯಣ ಬರಲಿಲ್ಲ. ಚಿಂತೆ ಕಾತರತೆಯಾಗಿ ಭಯರೂಪದಲ್ಲಿ ಗಟ್ಟಿಕಟ್ಟಿತು.

"ದಾರಿಯಲ್ಲಿ ಮರ ಬಿದ್ದು ಬಸ್ ಸಂಚಾರ ಬಂದ್ ಆಗಿರಬಹುದು."

"ಸೇತುವೆ ಕುಸಿದು ಬಸ್ ಆ ಕಡೆ ನಿಂತು ಹೋಗಿರಬಹುದು."

"ಬಸ್ಸು ಓಡಿಯೇ ಇರಲಾರದು."

"ಬಂದೇ ಬರುವನೆಂದ. ಮಹಾ ಹಠಮಾರಿ. ನಡೆದುಕೊಂಡೇ ಹೊರಟಿರಬಹುದು."

"ಅಲ್ಲಿ ಹೇಗೂ ಮನೆ ಉಂಟಷ್ಟೆ. ಒಕ್ಕಲಿನವರೂ ಇದ್ದಾರೆ. ತಡವಾದ್ದರಿಂದ ಅಥವಾ ಬಸ್ ತಪ್ಪಿದ್ದರಿಂದ ಅಲ್ಲಿಯೇ ಉಳಿದಿರಬಹುದು."

"ಹಾಗೆಂದೂ ತಂಗಲಾರ. ನಟ್ಟಿರುಳಾದರೂ ಬಂದೇ ಬಂದಾನು."

"ಹಾಗಾದರೆ ಯಾಕೆ ಬರಲಿಲ್ಲ?"

ಅಪ್ಪುಕಳದಾಂವ ಇನ್ನೂ ಯಾಕs ಬರಲಿಲ್ಲ? ಮುಂದಿನ ಊಹಾಪೋಹಗಳು ಯಾರಿಗೂ ಬೇಕಾಗಲಿಲ್ಲ. ಚಿಕ್ಕಮ್ಮನ ಕಳವಳ ವ್ಯಾಕುಲವಾಯಿತು. ಮಳೆಗಾಳಿಗಳು ಗಿಸುರ್ ಪರಿಸಿ ಇನ್ನೂ ರಭಸದಿಂದ ಪ್ರತಾಪ ಪ್ರದರ್ಶಿಸತೊಡಗಿದುವು. ರಾಕ್ಷಸಶಕ್ತಿಗಳೇ ಹಾಗೆ. ರಾತ್ರಿ ವೇಳೆ ಅವಕ್ಕೆ ಹೆಚ್ಚಿನ ಹುಮ್ಮಸ್ಸು, ಧಿಮಾಕು.

ಅಪ್ಪುಕಳದಾಂವ ಇನ್ನೂ ಯಾಕs ಬರಲಿಲ್ಲ?

ಸೇನಾಧಿಕಾರಿಯಾದ ನಾನೊಂದು ಮಿಲಿಟರಿ ಅಪರೇಷನ್—ಯುದ್ಧ ಕಾರ್ಯಾಚರಣೆ—ಸೂಚಿಸಿದೆ. ಚಿಕ್ಕಪ್ಪನವರ ಹಳೆ ಕಾರ್ ೧೯೩೦ರ ಮೋಡೆಲ್ ಹಿಲ್‌ಮ್ಯಾನ್ ಮಿಂಕ್ಸ್ ಮನೆಯ ಗೆರಾಜಿನಲ್ಲಿದ್ದದ್ದು ನನಗೆ ಗೊತ್ತಿತ್ತು. ಎರಡು ದಿನಗಳ ಹಿಂದೆ ನಾರಾಯಣ ಅದನ್ನು ಮಡಿಕೇರಿ ಬೀದಿಗಳಲ್ಲಿ ಓಡಿಸಿದ್ದ, ನಾನದರೊಳಗೆ ಮಂಡಿಸಿದ್ದೆ. "ಈಗ ನಾನು ಆ ಕಾರನ್ನು ಡ್ರೈವ್ ಮಾಡಿ ಅಪ್ಪುಕಳಕ್ಕೆ ಹೋಗಿ ಏನಾಗಿದೆ ಎಂದು ತಿಳಿದು ಬರುತ್ತೇನೆ" ಎಂದೆ.

ಚಿಕ್ಕಮ್ಮನವರ ಆಗಿನ ಮನಃಸ್ಥಿತಿಯಲ್ಲಿ ಈ ಸೂಚನೆ ಅಮೃತೋಪಮವಾಯಿತಾದರೂ ಒಡನೆ ಅವರಿಗೆ ನನ್ನ ಯೋಗಕ್ಷೇಮದ ಬಗ್ಗೆ ಚಿಂತೆ ಕವಿಯಿತು. ಇಂಥ ಎಲ್ಲ ಸನ್ನಿವೇಶಗಳಲ್ಲಿ ನಡೆಯುವಂತೆ ಅತಿ ಕಾಳಜಿಯ ವಾದವಿವಾದವಾದ ಬಳಿಕ ಚಿಕ್ಕಮ್ಮ ಮತ್ತು ನಾನು ಇಬ್ಬರೂ ಕಾರಿನಲ್ಲಿ ಅಪ್ಪುಕಳಕ್ಕೆ ಹೋಗುವುದೆಂಬ ಒಪ್ಪಂದವಾಯಿತು.

ಕತ್ತಲೆಯ ಗುಹೆಯೊಳಗೆ ಹುದುಗಿದ್ದ ಹಿಲ್‌ಮ್ಯಾನನ್ನು ಮುಟ್ಟಿನೋಡಿ ಅರಿತೆ. ಚಾಲಕನ ಆಸನದ ಕಡೆಗಿದ್ದ ಬಾಗಿಲನ್ನು ಪ್ರಯಾಸದಿಂದ ತೆರೆದೆ. ಅದು



"ಖಂಡಿತವಾಗಿ ನಾನು ನಿಮ್ಮ ಅಳಿಯನಾಗಿ ಬರ್‍ತೀನೀಂತ ಹೇಳಿದ್ರೆ, ಅದು ಸಾಧ್ಯನೇ ಇಲ್ಲ ಅಂತ ವಾದ ಮಾಡಿದ್ರಲ್ರಿ ಆ ದಿನ, ಈಗೇ-ನ್ಹೇಳ್ತೀರಿ"

ಕಿರೋೀರೋೀರೋೀಠಕ್ ಎಂದು ಅರಚಿ ಹಠಾತ್ತಾಗಿ ನಿಂತಾಗ ಪಾತಾಳದಾಕಳಿಕೆಯೋ ಕುಂಭಕರ್ಣನ ಸೆಟೆತವೋ ಎಂಬ ಭಾವಗಳು ಮೂಡಿದುವು. ಒಳಹೊಕ್ಕೆ. ಕುಳಿತೆ. ಬಡಿದು ಬಾಗಿಲಿಕ್ಕಿದೆ. ಸ್ವಿಚ್ ಕೀಲಿಯನ್ನು ಪರಡಿ ತೂತಕ್ಕೆ ಸಿಕ್ಕಿಸಿದೆ. ತಿರುಗಿಸಿದೆ. ಫಲಕದಲ್ಲಿ ಬೆಳಕು ಮಿನುಗಲಿಲ್ಲ. ಬಿರಿ ಒತ್ತಿ ಕ್ಲಚ್ ಅಮರಿಸಿ ಗಿಯರನ್ನು ತಟಸ್ಥ ಸ್ಥಾನಕ್ಕೆ ತಳ್ಳಿ ಸ್ಟಾರ್ಟರನ್ನು ಎಳೆದೆ. ಚೋಕ್ ಕೊಟ್ಟೆ. ಊಹೂಂ. ಜೀವ ಸ್ಪಂದಿಸಲಿಲ್ಲ. ಸ್ಪಂದನ ಶ್ರುತಿಯೂ ನಾಸ್ತಿ. ಬ್ಯಾಟರಿ ಡೌನ್. ನನ್ನದೂ ಹಾಗೇ.

ಮನೆ ಮಂದಿ ಸೇರಿ ಕಾರನ್ನು ರೊಪ್ಪದಿಂದ ಉತ್ಖನನ ಮಾಡಿದ್ದಾಯಿತು. ಈಗ ಅದು ರಸ್ತೆಯ ತೆರೆಜಾಗದಲ್ಲಿ ನಿಂತಿರುವ ಲಠಾರಿ ಮಾಲು. ಅದರ ಮೇಲೆ ಮಳೆಯ ಒನಕೆ ಹನಿಗಳು ಎಡೆಬಿಡದೆ ಬಡಿದು ಅಭ್ಯಂಜನ ಮಾಡಿಸುತ್ತಿವೆ. ಟಾರ್ಚ್‌ಲೈಟಿನಿಂದ ಬೆಳಕು ಬೀರಿ ಕಾರಿನ ಒಳಭಾಗವನ್ನು ಒಮ್ಮೆ ಪರಿಶೀಲಿಸಿದೆ. ಇದೇನು ಕಾರೇ? ಗತಯುಗದ ಭವ್ಯ ಸ್ಮಾರಕವೇ? ರಸ್ತೆಯಲ್ಲಿ ಓಡಾಡಬಲ್ಲ ವಾಹನವೇ? ಪ್ರಾಚ್ಯ ಸಂಶೋಧನಾಲಯದಲ್ಲಿ ಇಡಬೇಕಾದ ವಸ್ತುವಿಶೇಷವೇ? ಚಿಕ್ಕಪ್ಪನವರ ಅತಿವಿಧೇಯ ಪುಷ್ಪಕವಾಗಿದ್ದ ಈ ಕಾರ್ ತನ್ನ ಆತ್ಮವನ್ನು ಅವರೊಂದಿಗೆ ಪರಲೋಕಕ್ಕೆ ರವಾನಿಸಿಬಿಟ್ಟಿರಬೇಕು ಎಂದೆನ್ನಿಸಿತು ನನಗೆ. ಹರುಕುಮುರುಕು, ಜಂಗು ಹಿಡಿದ ಈ ಜಂಕನ್ನು ನಾನು ಚಾಲೂ ಮಾಡಬಲ್ಲೆನೇ?

ಆದರೆ ನಾರಾಯಣ ಅಲ್ಲಿ. ಚಿಕ್ಕಮ್ಮ ಇಲ್ಲಿ. ನಡುವೆ ನಾನು. ನಾವು ಹೋಗಲೇಬೇಕು.

ನೋಡಿಯೇ ಬಿಡೋಣ ಒಂದು ಕೈ ಎಂದು ಜಟ್ಕಾ ಸ್ಟಾರ್ಟ್ ಮಾಡಲು ಪ್ರಯತ್ನಿಸಿದೆ. ಕಾರನ್ನು ಜೋರಾಗಿ ತಳ್ಳಿಸಿ ಅದು ಓಡುತ್ತಿದ್ದಂತೆ ಗಿಯರನ್ನು ಲಗಾಯಿಸಿ ಎಂಜಿನ್ನನ್ನು ಚಾಲೂ ಮಾಡುವ ಉಲ್ಟಾ ವಿಧಾನವಿದು. ನನ್ನ ಈ ಹಿಕಮತ್ತು ಫಲ ನೀಡಿತು. ಜೊರಡೊರಡೊರಠಪ್‌ಬ್ರೂರೊ ಎಂಬ ಕರ್ಣಾನಂದಕರ ಹೃದಯಮಧುರ ನಿನಾದದೊಡನೆ ಕಾರ್ ಜೀವ ಪಡೆದೇ ಪಡೆಯಿತು. ಭಲೇ ಹಿಲ್‌ಮ್ಯಾನ್, ಯೂ ಆರ್ ಎ ಮ್ಯಾನ್ (ಅಥವಾ ನಾನೋ?).

ದೀಪಗಳ ಸ್ವಿಚ್ ಹಾಕಿದೆ. ಜ್ಯೋತಿ ಬೆಳಗಲಿಲ್ಲ. ಎಂಜಿನ್ನಿನ ನಾದವೇನೋ ಭರವಸೆ ಮೂಡಿಸುವಂತಿದೆ. ಆದರೆ ಬೆಳಕಿಲ್ಲದೆ ಆ ಅಪರಾತ್ರಿ ಮಳೆಗೋಡೆ ಭೇದಿಸುತ್ತ ಮಲೆನಾಡಿನ ಗೊಂಡಾರಣ್ಯದ ಸರ್ಪಮಾರ್ಗದಲ್ಲಿ ಕಾರನ್ನು ಓಡಿಸುವುದು ಹೇಗೆ? ಇನ್ನೂ ಒಂದು ತೊಂದರೆ ಕಾದಿತ್ತು. ಚಾಲಕನಿಗೆ ಎದುರಾಗಿ ಅಖಂಡ ಕನ್ನಡಿ ಚೌಕಟ್ಟು—ಗಾಳಿತೆರೆ (ವಿಂಡ್ ಸ್ಕ್ರೀನ್)—ಇದೆಯಷ್ಟೆ. ಅದರ ಹೊರ ಮೈಮೇಲೆ ಚಾಮರ ಬೀಸಿ ನೀರೊರೆಸುವ ವೈಪರುಗಳೇ ಇರಲಿಲ್ಲ. ಹೀಗಾಗಿ ರಸ್ತೆ ಒಂದಿಷ್ಟೂ ಕಾಣುತ್ತಿರಲಿಲ್ಲ. ಹಾಗಾದರೆ ಕಾರನ್ನು ಹಿಂತಿರುಗಿಸುವುದೇ?

ನಾರಾಯಣ ಅಲ್ಲಿ, ಚಿಕ್ಕಮ್ಮ ಇಲ್ಲಿ, ನಡುವೆ ನಾನು. ನಾವು ಹೋಗಲೇಬೇಕು.

ಪ್ರಾಚೀನ ಕಾಲದ ಯಂತ್ರೋದ್ಯಮದ ಪ್ರತೀಕವಾದ ಹಿಲ್‌ಮ್ಯಾನಿನ ಗಾಳಿತೆರೆಯ ತಿರುಪನ್ನು ಸಡಿಲಗೊಳಿಸಿ ಕೈಹಿಡಿಯನ್ನು ತಿರುಗಿಸಿದೆ. ಗಾಳಿತೆರೆ ಹೊರತೆರೆದುಕೊಂಡು ಬಾನೆಟ್ಟಿಗೆ ಸಮಾಂತರವಾಗಿ ನಿಂತಿತು. ಅಲ್ಲಿಗೆ ನನಗೂ ಹಾದಿಗೂ ನಡುವಿನ ಅಡಚಣೆ ಇಲ್ಲದಂತಾಯಿತು, ನಿಜ. ಆದರೆ ಈಗ ಮಳೆಯ ನೇರ ಹೊಡೆತಕ್ಕೆ, ಅದೂ ಕಾರ್ ಓಡುವಾಗ ಹೆಚ್ಚಿನ ಬಡಿತಕ್ಕೆ, ನಾನು ತುತ್ತಾಗುತ್ತಿದ್ದೆ. ಮಳೆಯೂರಿನವನಾದ ನಾನು ಈ ಹೊಡೆತ ಬಡಿತಗಳಿಗೆ ಅಂಜುವ ಮಾಣಿ ಅಲ್ಲ. ಮಡಿಕೇರಿಯಿಂದ ಅಪ್ಪ್ರಕಳದವರೆಗಿನ ಹಾದಿ ಕಂಡರೆ ಹೇಗೋ ಹೋಗಬಹುದು. ಎಕ್ಸ್‌ಕಿರಣನೇತ್ರಗಳಿರಬಾರದಿತ್ತೇ ನನಗೆ?

ಆ ಹಾದಿಯ ಒಂದೊಂದು ತಿರುವು ಮುರುವು, ಏಳುಬೀಳು, ಓರೆಕೋರೆ ಎಲ್ಲವೂ ನನಗೆ ಕಂಠಪಾಠ, ಅಲ್ಲಲ್ಲ, ಪಾದಪಾಠ. ಹಾದಿಬದಿಯ ಗಿಡಗಂಟೆ, ಪೊದೆ ಕುರುಚಲು, ಬರೆ ಕೊರಕಲು ಎಲ್ಲವೂ ಆತ್ಮೀಯ ಒಡನಾಡಿಗಳು. ಹಾಗಿದ್ದರೂ ತಿಳಿಯದ ಕಾರನ್ನು ಕಾಣದ ಹೊತ್ತಿನಲ್ಲಿ ಅರಿಯದ ಗುರಿಯೆಡೆಗೆ ಆ ಹಾದಿಯಲ್ಲಿ ಒಯ್ದೇನೆಂಬ ಧೈರ್ಯ ಮೂಡಲಿಲ್ಲ. ಕಾರಿನ ಚಕ್ರಗಳು ಪಾದಗಳಲ್ಲವಷ್ಟೆ. ಹಾಗಾದರೆ ಕಾರನ್ನು ಲಾಯದೊಳಕ್ಕೆ ನುಗ್ಗಿಸುವುದೇ?

ನಾರಾಯಣ ಅಲ್ಲಿ, ಚಿಕ್ಕಮ್ಮ ಇಲ್ಲಿ, ನಡುವೆ ನಾನು. ನಾವು ಹೋಗಲೇಬೇಕು.

ಚಿಕ್ಕಮ್ಮನಿಗೆ ಹೇಳಿದೆ, "ನೀವು ಮುಂದಿನ ಆಸನದಲ್ಲಿ ಎಡಗಡೆ ಕುಳಿತುಕೊಳ್ಳಿ. ಮಳೆನೀರಿನಿಂದ ತೋಯದಂತೆ ಕಂಬಳಿ ಹೊದ್ದುಕೊಳ್ಳಿ. ಎಡಗೈಯಲ್ಲಿ

ಟಾರ್ಚ್ ಹಿಡಿದು ಅದರ ಬೆಳಕನ್ನು ತಾರು ದಾರಿಯ ಎಡ ಅಂಚು ಸರಿಯಾಗಿ ನನಗೆ ಕಾಣುವಂತೆ ಬೀರುತ್ತಿರಿ. ಆ ಅಂದಾಜಿನ ಮೇಲೆ ನಾನು ಕಾರ್ ನಡೆಸುತ್ತೇನೆ. ನಿಧಾನವಾಗಿ ಹೋಗೋಣ.”

ಕುರುಡಚಾಲಕ ಕುಂಟಪಯಣಿಗ ಇವರ ಸಹಯೋಗದಿಂದ ಬಂಡಿ ಉರುಳಿತು.

ಕಾರನ್ನು ಒಂದನೆಯ ಗಿಯರಿನಲ್ಲಿ ಸರಿಸಿ ಎಂಜಿನ್ನಿನ ನಾದ ಏರಿದಂತೆ ಎರಡನೆಯ ಗಿಯರಿಗೆ ಬದಲಾಯಿಸಿದೆ. ರಸ್ತೆಯಲ್ಲಿ ಜುಳುಜುಳಿಸುತ್ತಿದ್ದ ನೀರನ್ನು ಇಕ್ಕೆಲಗಳಿಗೂ ಚೇಪುತ್ತ ಎರಡೆರಡು ತಿರುಗಾಸುಗಳನ್ನು ಮಂದಗತಿಯಿಂದ ದಾಟುತ್ತ ಕಾರ್ ಸಾಗಿತು.

ಈಗ ಬಲು ಕಡಿದಾದ ಚಡಾವು ಏರಬೇಕು. ಮೂರನೆಯ ಗಿಯರಿಗೆ ಆ ತಾಕತ್ತು ಬಾರದೆಂದು ಅನಿಸಿದ್ದರಿಂದ, ಜೊತೆಗೆ ಮೂರನೆಯದರಲ್ಲಿ ಹೋಗುತ್ತಿರುವಾಗ ನಡು ಚಡಾವಿನಲ್ಲಿ ವೇಗ ತಗ್ಗಿದರೆ ಗಿಯರನ್ನು ಎರಡನೆಯದಕ್ಕೆ ಇಳಿಸಬೇಕಾಗುವ ಎದೆಗಾರಿಕೆ ನನಗೆ ಇಲ್ಲದ್ದರಿಂದ—ಹೊಸ ನೀರು, ಹೊಸ ಕಾರು, ಬಲು ಹುಷಾರು--ಯಥಾಸ್ಥಿತಿಯನ್ನೇ ಮುಂದುವರಿಸಿದೆ. ಊರ ಒಳಗಿನ ಓಣಿಕೇರಿಗಳನ್ನು ಹಿಂದೆಹಾಕಿ ಮಡಿಕೇರಿಯ ಗಡಿಯಲ್ಲಿದ್ದ ಸುಂಕದಕಟ್ಟೆ ತಲಪಿದೆವು. ಪೆಟ್ರೋಲ್ ಪಂಪಿನಿಂದ ಕಾರಿಗೆ ಅಮೃತ ಊಡಿಸಿದೆ.

ಇನ್ನು ಮುಂದೆ ನಾವು ಐದು ಕಿಲೊಮೀಟರುಗಳಷ್ಟು ದೂರ ಗೊಂಡಾರಣ್ಯದ ನಡುವೆ, ಬೆಟ್ಟದ ತಪ್ಪಲನ್ನು ಕೊರೆದು ಮಾಡಿದ್ದ ಬಳಸುದಾರಿಯ ಮೇಲೆ, ಸುತ್ತುತ್ತ ಬಳುಕುತ್ತ ಇಳಿಯುತ್ತ ತೆವಳಬೇಕು.

ಮಳೆರಾಯ ಗಿಯರ್ ಏರಿಸಿ ಇನ್ನೂ ತೀವ್ರವಾಗಿ ಜಡಿಯತೊಡಗಿದ. ನಾನೇನು ಕಡಿಮೆ? ನಾನೂ ಗಿಯರ್ ಏರಿಸಿ ಅಪ್ಪುಕಳದ ಹಾದಿಗೆ, ಗಹನತಿಮಿರದ ಬಾಯಿಗೆ, ಅಜ್ಞಾತ ಭವಿಷ್ಯದ ಕೂಪಕ್ಕೆ ಕಾರನ್ನು ಹೊರಳಿಸಿದೆ.

ಕಾರಿನ ಜರಿಗಳು ಸಮರ್ಪಕವಾಗಿಲ್ಲ. ಆದ್ದರಿಂದ ನಾಲ್ಕನೆಯ (ಟಾಪ್) ಗಿಯರ್ ಪೂರ್ಣ ವರ್ಜ್ಯ. ಮೂರನೆಯ ಗಿಯರಿನಲ್ಲಿ ಹೋಗೋಣವೇ? ಅದರಲ್ಲಿ ಜಾರಿಕೆ. ಎಂದರೆ ಗಿಯರಿನ ಸರಳು ಬೇಕಾದಲ್ಲಿ ನಿಲ್ಲದೆ ತಟಸ್ಥ ಸ್ಥಾನಕ್ಕೆ ಜಾರಿ ಬೀಳುವ ಐಬು. ಆಗ ಎಂಜಿನ್ ಚಾಲೂ ಇದ್ದರೂ ಬಂಡಿ ಓಡದು. ಎರಡನೆಯ ಗಿಯರಿನಲ್ಲಿಯೇ ಇಡೀ ಪ್ರಯಾಣ ಮಾಡೋಣವೇ? ಗತಿ ಅತಿ ಮಂದ. ಎಂಜಿನ್ ತುಂಬ ಕಾದು ಒಡೆದೇ ಹೋದೀತು. ಆದ್ದರಿಂದ ಮೂರನೆಯ ಗಿಯರೇ ಶರಣು. ಸರಳನ್ನು ಎಡಗೈಯಿಂದ ಅಮರಿಸಿ ಬಿಗಿಹಿಡಿದು ಬಲಗೈಯಿಂದ ಚುಕ್ಕಾಣಿ ಚಕ್ರ (ಸ್ಟಿಯರಿಂಗ್ ವ್ಹೀಲ್) ತಿರುಗಿಸುವ ಕರ್ಣನಾದೆ.



“ಏನ್ರಿ, ವಿರೋಧ ಪಕ್ಷದವರ ತರಹ ಹೇಳಿದ್ದಕ್ಕೆಲ್ಲಾ ಅಡ್ಡ ಪ್ರಶ್ನೆ ಹಾಕ್ತೀರಾ, ಹೇಳಿದ್ದನ್ನು ಒಪ್ಪಿಕೊಳ್ಳಲು ಕಲಿಯಿರಿ.”

ಕಾರ್ ಮುಂದೆ ಮುಂದೆ ಹರಿಯಿತು, ಅಲ್ಲ ರಸ್ತೆ ಹಿಂದೆ ಹಿಂದೆ ಸರಿಯಿತು. ಕಣ್ಣುಗಳಿಗೆ ಮಳೆಹನಿಗಳು ಬಡಿದು ಎವೆ ಮೇಲೆ ಮಿನಿ ಭೂತಗನ್ನಡಿಗಳನ್ನು ರಚಿಸಿದುವು. ಅವುಗಳ ಮೂಲಕ ಕಾಣುವ ನೋಟವೇ ಬೇರೆ. ಇತ್ತ ತಾರು ರಸ್ತೆಯಲ್ಲಿ ಹರಿಯುತ್ತಿರುವ ನೀರ ಹೊನಲಿನಲ್ಲಿ ಪ್ರತಿಫಲನಗೊಂಡ ಟಾರ್ಚಿನ ಬೆಳಕು ಮಾಯಾಲೋಕವೊಂದನ್ನು ನಿರ್ಮಿಸಿದೆ. ದಾರಿ ಯಾವುದಯ್ಯಾ? ದಾರಿ ಯಾವುದಲ್ಲವಯ್ಯಾ? ತಿಳಿಯದೆ ಭಯಗೊಂಡೆ. ಬಲಗಡೆಗೆ ಬರೆ, ಎಡಗಡೆಗೆ ದರೆ, ಎದುರಿಗೋ? ಮಳೆಹಿಮಗಳ ದಟ್ಟ ತೆರೆ. ಟಾರ್ಚಿನ ಸುತ್ತಲೂ ಬೆಳಕಿನ ಮಬ್ಬು ಜೊಂಪೆ. ಅದರಿಂದಾಚೆಗೆ ಗಭೀರ ಶೂನ್ಯ.

ಚಿಕ್ಕ ಕಲ್ಲಿನ ಮೇಲೂ ಗಾಲಿ ಉರುಳಿದಾಗ ಪುಟ್ಟ

ಹೊಂಡವನ್ನೂ ಅದು ದಾಟಿದಾಗ ಸಣ್ಣ ಕಣಿಯನ್ನೂ ಅದು ಅಡ್ಡ ಹಾಯ್ದಾಗ ಚುಕ್ಕಾಣಿಚಕ್ರ ಅಲುಗುತ್ತಿತ್ತು, ನನ್ನ ಗುಂಡಿಗೆ ಬಡಿತ ತಾರಕ್ಕೆ ಜಿಗಿಯುತ್ತಿತ್ತು, ಎಂಜಿನ್ ನಾದ ಮಂದ್ರಕ್ಕೆ ಕುಸಿಯುತ್ತಿತ್ತು. ಅತ್ತಿತ್ತ ನೋಡುವುದುಂಟೇ? ರಸ್ತೆಯ ಎಡ ಅಂಚೊಂದೇ ನನ್ನ ಧ್ರುವ ನಕ್ಷತ್ರ. ಆದರೆ ಎಡ ಅಂಚೇ ನಲುಗಿ ಕರಗಿ ನೀರಾಗಿ ಪ್ರವಹಿಸುತ್ತಿದೆ. ಚಿಕ್ಕಮ್ಮ ಎವೆ ಮುಚ್ಚದೆ ಹಾದಿ ದಿಟ್ಟಿಸುತ್ತ ನನಗೆ ಸೂಚನೆ ನೀಡುತ್ತಿದ್ದಾರೆ, ಅಳಿಯಂದಿರು ಅರ್ಜುನನ ಟೊಳ್ಳು ಎದೆಗೆ ಕೆಚ್ಚು ತುಂಬುತ್ತಿದ್ದಾರೆ. ಅಂಥಾದ್ದರಲ್ಲೂ, ನನಗೆ ಖಾತ್ರಿ ಇದೆ, ನಮ್ಮ ವಾಹನ ಕೇರೆ ಹಾವಿನಂತೆ ಅಂಕುಡೊಂಕಾಗಿಯೇ ತೆವಳಿರಬೇಕೆಂದು.

ಐದು ಕಿಲೊಮೀಟರ್ ಉದ್ದದ ಇಳಿಜಾರು ಹಾದಿ ಮುಗಿಯಿತು. ದಾರಿಗೆ ಅಡ್ಡ ಮರ ಬಿದ್ದಿರಲಿಲ್ಲ. ಬಿದ್ದಿದ್ದರೆ ಅದೇ ನಮ್ಮನ್ನು ತಡೆದು ನಿಲ್ಲಿಸಿರುತ್ತಿತ್ತು. ಮೋರಿ ಸೇತುವೆ ಯಾವುದೂ ಕುಸಿದಿರಲಿಲ್ಲ. ಕುಸಿದಿದ್ದರೆ ಅವೇ ನಮ್ಮ ಕಾರನ್ನು ಮುಗ್ಗರಿಸಿ ಕುಕ್ಕರಿಸುವಂತೆ ವಿಧಿಸಿರುತ್ತಿದ್ದುವು.

ಈಗ ಬಂದಿದೆ ನಿಜವಾದ ಪರೀಕ್ಷಾಕಾಲ. ನನ್ನೂರಿನ, ಚೆನ್ನಾಗಿ ಗೊತ್ತಿರುವ, ಎಂದೂ ಬದಲಾಗದಿರುವ ಹಾದಿಯೊಂದು ಸನ್ನಿವೇಶದ ಬದಲಾವಣೆಯಿಂದ ಎಂಥ ಸವಾಲಾದೀತೆಂಬುದನ್ನು ಯೋಚಿಸಿ ನಡುಗಿದೆ. ಬಿಗಿ ಸರಿಗೆಯ ಮೇಲೆ ಸಮತೋಲ ತಪ್ಪದೆ ನಡೆದು ಗುರಿ ತಲಪುವ ಅದಟು ನನಗಿದೆಯೇ? ಮೂರು ಕಿಲೊಮೀಟರ್ ಉದ್ದದ ಚಡಾವನ್ನು ನಾವೀಗ ಏರಬೇಕಾಗಿದೆ. ಅದೆಂಥ ಚಡಾವು? ಏರು ಘಾಟಿಯಲ್ಲಿ ಬಳಸುತ್ತ ಸುತ್ತುತ್ತ ಹತ್ತುತ್ತ ಹೋಗಿ ಕೊನೆಯ ಹಂತದಲ್ಲಿ ನೇರ ನೆತ್ತಿಗ ನೆಗೆದು ಬಲಕ್ಕೆ ಲಂಬಕೋನದಲ್ಲಿ ಒಮ್ಮೆಗೇ ತಿರುಗಿ ದಿಢೀರನೆ ಇಳಿಯಲು ತೊಡಗುವ ಕಾಲನ ಕೋಣನ ಜಾಡು. ಇದರ ಬಹುಭಾಗವನ್ನು ಮೂರನೆಯ ಗಿಯರಿನಲ್ಲಿ ನಿಭಾಯಿಸಬಹುದು, ನಿಜ. ಆದರೆ ಗಿಯರ್ ಜಾರಿಕೆಗೆ ಮದ್ದು? ಚಡಾವು ಏರುವಾಗ ಚುಕ್ಕಾಣಿ ಚಕ್ರದ ಮೇಲೆ ಬೀಳುವ ಒತ್ತಡ ಜಾಸ್ತಿ. ಅದ್ದರಿಂದ ಎರಡೂ ಕೈಗಳೂ ಅದರ ಮೇಲಿರುವುದು ಅಪೇಕ್ಷಣೀಯ. ಈ ಕಾರಣಕ್ಕಾಗಿ ಎರಡನೆಯ ಗಿಯರಿನಲ್ಲಿ ಹೋಗಲಾದೀತೇ? ಅತಿಯಾಗಿ ಕಾದು ಹೋಗುವ ಎಂಜಿನ್ ಯಾವ ಗಳಿಗೆಯಲ್ಲಿಯೂ ಒಡೆದು ಹೋಗಬಹುದಾದ ಶಾಶ್ವತ ಅಪಾಯದೊಂದಿಗೆ ಸೆಣಸಾಟ. ಸರಿ ಹಿಂದಿನಂತೆಯೇ ಎಡಗೈಯಲ್ಲಿ ಗಿಯರ್ ಸರಳು, ಬಲಗೈಯಲ್ಲಿ ಚುಕ್ಕಾಣಿ ಚಕ್ರ ಹಿಡಿದು, ಮೂರನೆಯ ಗಿಯರಿನಲ್ಲಿ ಬಂಡಿ ಚಾಲೂ ಮಾಡಿದೆ.

ಏರಿದೆವು. ಮಳೆಯ ತಾಡನವನ್ನು ಲೆಕ್ಕಿಸದೆ ಏರಿದೆವು. ಎಂಜಿನ್ನಿನ ನಾದ ತಾರಕ್ಕೇರಿದಂತೆ ಕಾಡಿನ ಗುಹಾಂತರದಿಂದ ಅದರ ಪ್ರತಿಧ್ವನಿ ಭೀಕರವಾಗಿ ಅನುರಣಿಸಿದಂತ ಮುಂದೆ ಮುಂದೆ ಏರಿದೆವು. ಬಲಗಡೆಯ ಬರೆಗೆ ಹೆಟ್ಟದೆ ಎಡಗಡೆಯ ಕೊರಕಲಿಗೆ ಬೀಳದೆ ಏರಿದೆವು. ಆಗ ಬಂದೇ ಬಂತು ಕೊನೆಯ ಇಪ್ಪತ್ತೈದು ಮೀಟರುಗಳ ಅಗ್ನಿಪರೀಕ್ಷಾ ಸ್ಥಳ.

ಮೂರನೆಯ ಗಿಯರಿನಲ್ಲಿಯೇ ಮುಂದುವರಿಯುವುದೇ? ಇಲ್ಲ. ಎಂಜಿನ್ ಹುಯಿಲಿಡುತ್ತಿದೆ, "ನಾನಿನ್ನು ಎಳೆಯಲಾರೆ." ಅದರ ಮೊರೆಯನ್ನು ಅಲಕ್ಷಿಸಿ "ಹೋಗಿಯೇ ಹೋಗು" ಎಂದು ವಿಧಿಸಲೇ? ಅದು ನಡು ಚಡಾವಿನಲ್ಲಿ ದುಡುಂ ಸಂಪು ಹೂಡಿ ನಿಂತೇ ಹೋದರೆ? ಒಡನೆ ಗಿಯರ್ ಪೆಟ್ಟಿಗೆ ಒಡೆದೇ ಹೋದೀತು. ಅಥವಾ ಕಾರ್ ಹಿಂದಕ್ಕೆ ದಡದಡನೆ ಧಾವಿಸೀತು. ದುರ್ಬಲ ಬಿರಿಗಳು ಈ ಹಿನ್ನುರಿತವನ್ನು ತಡೆಯಲಾರವು. "ನ್ಯೂಟನ್ ಮಹಾಶಯಾ! ನೀನು ದೂರದ ಇಂಗ್ಲೆಂಡಿನಲ್ಲಿ ಸತ್ತು ಮಣ್ಣು ಮುಕ್ಕಿ ಹೋಗಿ ಎರಡು ಶತಮಾನಗಳೇ ಸಂದಿದ್ದರೂ ನಮ್ಮನ್ನು ಈ ಕಾಡಿನ ಸಂದಿನಲ್ಲಿ ಕೂಡ ಗೋಳು ಹುಯ್ದುಕೊಳ್ಳುವುದನ್ನು ಇನಿತೂ ಕಡಿಮೆ ಮಾಡಿಲ್ಲವಲ್ಲ!" ಎಂದು ಅವನಿಗೆ ಮನಸ್ವೀ ಶಾಪ ಹಾಕಿದೆ. ಯೋಚನೆಗೆ ಈಗ ಪುರಸೊತ್ತಿಲ್ಲ. ಕ್ರಿಯೆ, ಕ್ರಿಯೆ, ಕ್ರಿಯೆ. ಕಾರ್ ಮುಂದೆ ಹೋಗಲೇಬೇಕು. ಪರ್ವಬಿಂದುವನ್ನು ಉತ್ತರಿಸಲೇಬೇಕು. ಜಯ ಲಭಿಸಲೇಬೇಕು.

ಕ್ಲಚ್ ಒತ್ತಿದೆ. ಗಿಯರನ್ನು ಅದೇ ಕ್ಷಣ ತಟಸ್ಥ ಸ್ಥಾನಕ್ಕೆ ಎಳೆದೆ. ಕ್ಲಚ್ ಬಿಟ್ಟೆ. ಆಕ್ಸಲರೇಟರ್ ಒತ್ತಿದೆ. ಎಂಜಿನ್ ಬುರ್‌ಗುಂಯ್ ಎಂದಿತು. ಆಕ್ಸಲರೇಟರ್ ಬಿಟ್ಟೆ. ಕ್ಲಚ್ ಒತ್ತಿದೆ. ಅದೇ ಕ್ಷಣ ಗಿಯರನ್ನು ಬಲಪ್ರಯೋಗಿಸಿ ಎರಡನೆಯ ಸ್ಥಾನಕ್ಕೆ ತಳ್ಳಿಯೇ ಬಿಟ್ಟೆ. ನಿಧಾನವಾಗಿ ಕ್ಲಚ್ಚನ್ನು ಸಡಿಲಗೊಳಿಸುತ್ತ ಆಕ್ಸಲರೇಟರನ್ನು ಒತ್ತತೊಡಗಿದೆ. ಇವೆಲ್ಲ ಕ್ರಿಯೆಗಳೂ ನಡೆದು ಹೋದದ್ದು ಸೆಕೆಂಡಿನ ಅಲ್ಪಾಂಶ ಅವಧಿಯಲ್ಲಿ. ಆ ವೇಳೆ ನಾನೇ ಗಿಯರ್, ನಾನೇ ಕ್ಲಚ್, ನಾನೇ ಆಕ್ಸಲರೇಟರ್, ನಾನೇ ಎಲ್ಲವೂ.

ಅಹಂ ಕ್ರತುರಹಂ ಯಜ್ಞಃ. ಒಮ್ಮೆ ಕಾರ್ ಹಿಂದೆ ಸರಿದಂತಾಯಿತು. ದೇವರೇ ಗತಿ. (ಅಂದ ಹಾಗೆ ಶತನಾಸ್ತಿಕನಾದ ನಾನು ದೇವರೇ ಗತಿ ಎಂದು ಮರೆತೂ ಅನ್ನುವಂತಿಲ್ಲ). ಬಲಗಡೆಗೆ ಹೋಗಿ ಬರೆಗೆ ಬಡಿದು ನಿಲ್ಲಲಿ, ಎಡಗಡೆಗೆ ಸಾಗಿ ದರೆಗೆ ಬಿದ್ದು ನುಚ್ಚು ನುರಿ ಆಗುವುದಕ್ಕಿಂತ ಎಂದು ಬಗೆದು ಚುಕ್ಕಾಣಿ ಚಕ್ರವನ್ನು ಬಲಗಡೆಗೆ ತಿರುಗಿಸಿದೆ. ಹಿಲ್‌ಮ್ಯಾನ್ ಕೈಕೊಡಲಿಲ್ಲ, ಹಸ್ತ ಲಾಘವ ನೀಡಿತು. ಎಂಜಿನ್ ಎರಡನೆಯ ಗಿಯರನ್ನು ಒಪ್ಪಿಕೊಂಡು ಘೋರ ಗರ್ಜನೆ ಸಮೇತ ಎಳೆಯ ತೊಡಗಿತು. "ನೀರೋಳಗಿರ್ದುಂ ಬೆಮರ್ದ" ನಾನು ಆ ಕ್ಷಣ ಗಾಳಿಯಂತೆ ಹಗುರಾದೆ, ಮಿಂಚಿನಂತೆ ಚುರುಕಾದೆ, ಮಳೆ ಹನಿಯಂತೆ ಮುಕ್ತನಾದೆ. ಚಡಾ ವಿನ ಕೊನೆ ಮಜಲನ್ನು ಕಾರ್ ಯಶಸ್ವಿಯಾಗಿ ಉತ್ತ, ರಿಸಿ ತಿರುಗಾಸಿನಲ್ಲಿ ರಷ್ಯದ ಬ್ಯಾಲೇ ನರ್ತಕಿಯಂತೆ ಬಳುಕಿ ತಿರುಗಿ ಮುಂದಿನ ಇಳಿಜಾರು ಹಾದಿಯಲ್ಲಿ ಓಡಲು ಸಿದ್ಧವಾಗಿತ್ತು.

ಅಲ್ಲಿ ಅದನ್ನು ಕ್ಷಣಕಾಲ ನಿಲ್ಲಿಸಿಕೊಂಡು, ಆದರೆ ಎಂಜಿನ್ನನ್ನು ಚಾಲೂ ಸ್ಥಿತಿಯಲ್ಲಿಯೇ ಇಟ್ಟು ಕೊಂಡು, ಕೈ ಮುಸುಡು ಒರೆಸಿಕೊಂಡು ನಿಡುಉಸಿರು ಎಳೆದುಕೊಂಡೆ. "ಹೋಗಿನ್ನು ಸಲೀಸಾಗಿ" ಎಂದು ಹಿಲ್‌ಮ್ಯಾನನಿಗೆ ಆತ್ಮೀಯತೆಯಿಂದ ಉಸುರಿದೆ.

ಆಚ್ಚರಿ ಎಂದರೆ ಈಗ ತೇಜಿ ಮಳೆ ಪೂರ್ತಿ ಬಂದ್ ಆಗಿತ್ತು. ಕಾಡಿನ ಹೆಮ್ಮರಗಳ ಕೊಂಬೆರೆಂಬೆ ಎಲೆ ಹೂವುಗಳ ಮೇಲೆ ಒಟ್ಟಯಿಸಿದ್ದ ನೀರು ತೊಟ್ಟು ತೊಟ್ಟಾಗಿ ಬೀಳುತ್ತಿತ್ತು. ನಮ್ಮ ಟಾರ್ಚಿನ ಪ್ರಕಾ ಶದಲ್ಲಿ (ಈಗ ಅದು ಅತಿ ಪ್ರಖರವಾಗಿತ್ತು) ಆ ನೀರ ಹನಿಗಳು ಬೆಂಕಿ ಕಿಡಿಗಳಂತೆ ಮಿನುಗುತ್ತಿದ್ದುವು. ಮೋಡಗಳ ಎಡೆಯಿಂದ ತಿಂಗಳ ಬೆಳಕು ಮಂದ ವಾಗಿ ಒಸರಿ ಗಿಡಮರಗಳ ಎಲೆ ಅಡರುಗಳ ಜರಡಿ ಮೂಲಕ ಸೋರಿ ಅಲ್ಲಲ್ಲ ತೆಳು ಅರಿಸಿನ ಹುಡಿ ಹರಡಿ ರುವಂತೆ ತೋರುತ್ತಿತ್ತು. ಕೇವಲ ಒಂದು ಗಳಿಗೆ ಹಿಂದೆ ಕಾಡಿನ ಏಕಾಂಗೀ ಭೀಕರತೆಯಿಂದ ಭೀತನಾ ಗಿದ್ದೆ. ಈಗಾದರೋ ಅದರ ರುದ್ರರಮಣೀಯ ತೆಯಿಂದ ಉಲ್ಲಸಿತನಾಗಿದ್ದೇನೆ.

ಆದರೆ ನಾರಾಯಣ?

ಕಾರು ದೌಡಾಯಿಸುತ್ತಿದೆ. ಅಪ್ಪುಕಳದ ಶಹರು, ಎರಡಂಗಡಿಗಳ ಓರಿಸಾಲು, ಇನ್ನೇನು ಎದುರಾಗಲಿದೆ. ಅಲ್ಲಿಂದ ಮುಂದೆ ರಾಜಮಾರ್ಗ ಬಿಟ್ಟು ಎಡಕ್ಕೆ ಹೊಡೆದುಕೊಂಡು ಕೆಸರು ರಾಡಿ ಸೆಗಣಿ ರೊಚ್ಚೆ ತುಂಬಿರುವ ಹಳ್ಳಿ ಹಾದಿಯಲ್ಲಿ ನಮ್ಮ ಜಮೀನಿಗೆ ಹೋಗಬೇಕು. ಅಲ್ಲಿ ಕಾರ್ ಓಡೀತೇ? ಹೂತು ಹೋಗದೇ? ಹೀಗೆ ಎಣಿಕೆ ಹಾಕುತ್ತಿದ್ದಂತೆಯೇ ಅಪ್ಪುಕಳದ ಶಹರು ಬಂದೇ ಬಂತು. ಆ ತನಕ, ಸುಮಾರು ಒಂದೂವರೆ ತಾಸು, ಎಡೆಬಿಡದೆ ಮಿಡಿ ದಿದ್ದ ಎಂಜಿನ್ ಅಲ್ಲಿ ಇದ್ದಕ್ಕಿದ್ದಂತೆ ನಿಶ್ಶಬ್ದವಾ ಯಿತು. ಇನ್ನೂ ಇಳಿಜಾರೇ ಇದ್ದುದರಿಂದ ಜಟ್ಕಾ ಸ್ಟಾರ್ಟ್ ಪ್ರಯತ್ನಿಸಿದೆ. ಸ್ಟಾರ್ಟರ್ ಎಳೆದೆ, ಚೋಕ್ ಕೊಟ್ಟೆ, ಸ್ವಿಚ್ ಕೀಲಿ ಮೇಲೆ ಕೈ ಪರಡಿದೆ. ಆದರೆ ಎಂಜಿನ್ನಿಗೆ ಜೀವ ಬರಲಿಲ್ಲ. ಕಾರಿನಿಂದ ಇಳಿದೆ. ನನಗೆ ಸೊಂಟವಿದೆ, ಮಂಡಿ ಕೀಲುಗಳೂ ಇವೆ ಎಂದು ಚೆನ್ನಾಗಿ ತಿಪಿದು ಹೇಳುವಂತೆ ಅವು ನೋಯುತ್ತಿ ದ್ದುವು. ಕಾರಿನ ಬಾನೆಟ್ ಮುಟ್ಟಿದೆ. ಅದು ಕಾದು ಕರಗಲು ಸನ್ನದ್ಧವಾಗಿದ್ದ ಕಬ್ಬಿಣವಾಗಿತ್ತು. ಮಳೆಯ ನಿರಂತರ ಅಭಿಷೇಕವೂ ಅದರ ಕಾವನ್ನು ತಗ್ಗಿಸಿರಲಿಲ್ಲ.

ಉಳಿದಿದ್ದ ದೂರ ಕೇವಲ ಅರ್ಧ ಕಿಲೊಮೀಟರ್ ಮಾತ್ರ. ನಡೆದೇ ಹೋದೆವು. ಅಲ್ಲಿನ ಬಿಡಾರದಲ್ಲಿ ನಾರಾಯಣ ಉಳಿದಿದ್ದರೆ ಸರಿ. ಇಲ್ಲವಾದರೆ? ಈ ಯೋಚನೆ ಬೇಕಾಗಲಿಲ್ಲ.

ನಾಯಿಗಳು ಬಗುಳಿದುವು. ಕೋಳಿಗಳು ಕೊ ಕ್ಕೊ ಕ್ಕೊ ಕ್ಕೋ ಕೂಗಿ ರಂಪ ಎಬ್ಬಿಸಿದುವು. ಹಂದಿ ಗಳು ಡುರುಂಕುತ್ತ ಅಡ್ಡ ತಿಡ್ಡ ಓಡಿದುವು. ಕಾಲ್ನ ಡೆಗಳು ಗಾಬರಿಯಿಂದ ಘೂಕಾರ ಮಾಡಿ ಮಲೆ ತುವು. ಒಕ್ಕಲಿನ ಗಂಡಸರು ಹೆಂಗಸರು ಲಾಂದ್ರ ಹಿಡಿದು ಹೊರಗೆ ಬಂದು ಬೊಬ್ಬೆ ಅಬ್ಬರಿಸಿದರು. ಯಾರೋ ಕಳ್ಳರು ಹಂದಿ ಕೋಳಿಗಳನ್ನು ಲಪಟಾ ಯಿಸಲು ಬಂದಿರಬೇಕೆಂದು ಅವರ ಊಹೆ.

ಚಿಕ್ಕಮ್ಮ ಕೂಗಿ ಹೇಳಿದರು ತಾವು ಯಾರೆಂದು.

"ಓ ಅಮ್ಮಾ ನೀವಾ? ಏನು ಈ ಹೊತ್ತಿನಲ್ಲಿ? ಮನೇಲೆಲ್ಲ ಚೆನ್ನಾಗಿದ್ದಾರಾ?"

"ನಮ್ಮ ನಾರಾಯಣ ಸ್ವಾಮಿ........."

ಕೂರಲಗಿನ ಮೇಲೆ ನಿಂತಿದ್ದೇವೆ. ಯಶಸ್ವಿಯಾಗಿ ದಾಟುತ್ತೇವೋ? ಸಿಗಿದು ಬೀಳುತ್ತೇವೋ? ಒಕ್ಕ ಲಿನವರ ಉತ್ತರವನ್ನು ಅವಲಂಬಿಸಿದೆ.

"ನಾರಾಯಣಸ್ವಾಮಿ! ಬಂಗ್ಲೆಯೊಳಗೆ ಮಲಗಿ ದ್ದಾರಲ್ಲ!"

✡


Nestle
NESCAFE
instant
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ
ವಿಶ್ವದಲ್ಲೇ
ಅತ್ಯಂತ ಹೆಚ್ಚು
ಮಾರಾಟವಾಗುವ
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟಂಟ್ ಕಾಫಿ

ಅನಾಮಧೇಯ ವೈಜ್ಞಾನಿಕ ಶ್ರೇಷ್ಠ



ಶ್ರೀಕಾಂತ ಮುಳಗಿ

ವಿಜ್ಞಾನದ ಹತ್ತಾರು ಹೊಸ ಶಾಖೆಗಳು ಹುಟ್ಟಿಕೊಳ್ಳುವುದಕ್ಕೆ ಕಾರಣನಾದರೂ ಆತನಿನ್ನೂ ಅನಾಮಧೇಯ. ಅಮೇರಿಕದ ಆ ಮನುಷ್ಯ ಅಲ್ಲಿನ ಜನಸಾಮಾನ್ಯರಿಗಷ್ಟೇ ಏಕೆ, ಶಿಷ್ಟ ವೈಜ್ಞಾನಿಕ ವಲಯಗಳನ್ನು ಹೊರತುಪಡಿಸಿದರೆ ಉಳಿದ ಪಂಡಿತವಲಯಗಳಲ್ಲಿಯೂ ಒಂದು 'ರೀತಿಯಲ್ಲಿ ಅಪರಿಚಿತನಂತೆಯೆ ಬಾಳಿ ಅನಾಮಿಕನಾಗಿಯೆ ಈ ಜಗತ್ತಿನಿಂದ ನಿರ್ಗಮಿಸಿದ. ಹತ್ತಾರು ಶ್ರೇಷ್ಠ ವಿಜ್ಞಾನಿಗಳು ಮಾಡುವ ಕೆಲಸವನ್ನು ತನ್ನ ಜೀವಿತಾವಧಿಯಲ್ಲಿ ಪೂರೈಸಿದ ಆತ ಕ್ಷೇತ್ರೀಯ ರಸಾಯನಶಾಸ್ತ್ರ ಹುಟ್ಟಿಕೊಳ್ಳಲು ಕಾರಣನಾದನಲ್ಲದೆ ಅದರಲ್ಲಿ ಕೆಲವು ಮೂಲಭೂತವಾದ ಸಂಶೋಧನೆಗಳನ್ನು ನಡೆಸಿ ೧೯೩೨ ರಲ್ಲಿ ನೋಬೆಲ್ ಬಹುಮಾನವನ್ನು ಪಡೆದ. ಆಗ ಕೀರ್ತಿಯ ಲಹರಿ ಜಗತ್ತಿನಾದ್ಯಂತ ಪಸರಿಸಿದರೂ ಅದು ಬಹು ಕ್ಷಿಪ್ರಿಯವಾಗಿಯೇ ಲುಪ್ತವಾಗಿ ಹೋಯಿತು.

ರಸಾಯನಶಾಸ್ತ್ರದಲ್ಲಿ ನೋಬೆಲ್ ಪಾರಿತೋಷಕವನ್ನು ಪಡೆದ ಅವನು ತರಬೇತಿ ಪಡೆದದ್ದು ಲೋಹಶಾಸ್ತ್ರದಲ್ಲಿ.ಕಾಲೇಜು ಶಿಕ್ಷಣವನ್ನು ಮುಗಿಸಿದ ನಂತರ ಕೆಲಕಾಲ ಶಿಕ್ಷಕನಾಗಿ ಕೆಲಸ ಮಾಡಿದರೂ ವೃತ್ತಿಗೂ ಪ್ರವೃತ್ತಿಗೂ ಅಷ್ಟಾಗಿ ಸರಿಹೋಗದ್ದರಿಂದ ಜನರಲ್ ಇಲೆಕ್ಟ್ರಿಕಲ್ಸ್‌ನಲ್ಲಿ ವಿಜ್ಞಾನಿಯಾಗಿ ಕೆಲಸಕ್ಕೆ ಸೇರಿದ. ಈತನ ಪ್ರತಿಭೆಯನ್ನು ಆಗಲೆ ಗುರುತಿಸಿದ ಅಲ್ಲಿನ ಪ್ರಯೋಗಾಲಯದ ನಿರ್ದೇಶಕ ವಿಲ್ಲಿಸ್ ವ್ಹಿಟ್ನಿ ಅವನು ಕೆಲಸಕ್ಕೆ ಸೇರಿದ ತರುಣದಲ್ಲಿ ನೀಡಿದ ಉಪದೇಶ: "ಮಜಾ ಮಾಡು". ಉಪದೇಶ ತೆಗೆದುಕೊಂಡಾತ ಉಪದೇಶವನ್ನು ಮನಃಪೂರ್ವಕವಾಗಿ ಸ್ವೀಕರಿಸಿ ಅನುಷ್ಠಾನಕ್ಕೆ ತಂದ. ಈತನ 'ಮಜಾ' ಜನರಲ್ ಇಲೆಕ್ಟ್ರಿಕಲ್ಸ್‌ಗೆ 'ಲಾಭ'ವೆಂಬುದು ಕುಶಾಗ್ರಮತಿಯಾದ ವ್ಹಿಟ್ನಿಗೆ ಗೊತ್ತಿಲ್ಲದೆ ಇದ್ದಿಲ್ಲ. ಆದ್ದರಿಂದಲೇ 'ಜನರಲ್ ಇಲೆಕ್ಟ್ರಿಕಲ್ಸ್' ಈತ ಎಲ್ಲಿ ಬೇಕಾದರೂ ಹೋಗಬಹುದು; ಏನು ಬೇಕಾದರೂ ಮಾಡಬಹುದು. ಇದಕ್ಕಾಗಿ ಆತ ಪೂರ್ವಾನುಮತಿಯನ್ನು ಪಡೆಯುವ ಕಾರಣವೇ ಇಲ್ಲ ಎಂಬ ವಿಶೇಷ ಫರ್ಮಾನನ್ನೇ ಹೊರಡಿಸಿತ್ತು.

ಯಾರೀತ? ಆತನ ಹೆಸರು ಲ್ಯಾಂಗ್‌ಮುಯಿರ್. ವಿಜ್ಞಾನವೇ ಅವನ ಜೀವನದ ಉಸಿರು. ಸಂಶೋಧನೆಯೆ ಅವನಿಗೆ ನಿಜವಾಗಿಯೂ ದಕ್ಕಿದ ಆಹಾರ. ಒಮ್ಮೆ ಆತ ಸುಪ್ರಸಿದ್ಧ ವೈಮಾನಿಕ ಲಿಂಡ್‌ಬರ್ಗನೊಂದಿಗೆ ವಿಮಾನದಲ್ಲಿ ಪಯಣಿಸುತ್ತಿದ್ದಾಗ ಹರಟೆಗಿಳಿದದ್ದೇ ವಿಮಾನ ನಿಲ್ದಾಣಗಳಲ್ಲಿರುವ ದಿಶಾದೀಪ(beacon)ಗಳ ಸುಧಾರಣೆಗೆ ಕಾರಣವಾಯಿತು. ಮತ್ತೊಮ್ಮೆ ಗಾಯಕ ಮಿತ್ರನೊಬ್ಬ ವಾದ್ಯ ಸಂಗೀತದ ಮೇಳವೊಂದಕ್ಕೆ ಅವನನ್ನು ಆಹ್ವಾನಿಸಿದಾಗ ಅದನ್ನು ಧ್ವನಿಮುದ್ರಿಸಿಕೊಳ್ಳುತ್ತಿದ್ದ ಆರ್.ಸಿ.ಎ. ಕಂಪನಿಯ ಪ್ರತಿನಿಧಿಗೆ ಧ್ವನಿಮುದ್ರಣ ಇನ್ನೂ ಚೆನ್ನಾಗಿರಬೇಕಾದರೆ ಏನೇನು ಮಾಡಬೇಕೆಂಬುದನ್ನು ಸೂಚಿಸಿದನಲ್ಲದೆ ಮುಂದೆ ಅದರಲ್ಲಿ

ಸಂಶೋಧನೆ ನಡೆಸಿ ಧ್ವನಿಮುದ್ರಣದ ವಿನ್ಯಾಸದಲ್ಲೇ ಮಾರ್ಪಾಡುಗೊಳಿಸಿದ. ಹೀಗೆ ಲ್ಯಾಂಗ್‌ಮುಯಿರ್ ಎಲ್ಲಿಯೆ ಹೋಗಲಿ, ಏನೇ ಮಾಡಲಿ ಅವನ ಲಕ್ಷ್ಯವೆಲ್ಲ ವಿಜ್ಞಾನದಲ್ಲೇಕೇಂದ್ರೀಕೃತವಾಗಿರುತ್ತಿತ್ತು.

ಹಾಗೆ ನೋಡಿದರೆ ಪ್ಲಾಸ್ಮಾ ಭೌತಶಾಸ್ತ್ರದ ಜನಕನೇ ಈತ. ಅಯೋನೀಕೃತವಾದ ವಾಯುಸಮಾಹಾರಗಳಿಗೆ ಕೆಲವು ವಿಲಕ್ಷಣವಾದ ವಿದ್ಯುದಯಸ್ಕಾಂತ ಗುಣಧರ್ಮಗಳಿದ್ದುದೆ ಅವು ವಸ್ತುವಿನ ತುರೀಯಾವಸ್ಥೆಯನ್ನು ತಲುಪಲು ಕಾರಣವಾಗುತ್ತವೆ. ಲ್ಯಾಂಗ್‌ಮುಯಿರ್ ಈ ಸ್ಥಿತಿಯನ್ನು ಗುರುತಿಸಿ ಅದಕ್ಕೆ ಪ್ಲಾಸ್ಮಾ ಎಂಬ ಹೆಸರನ್ನು ಕೊಟ್ಟ. ಗ್ರೀಕ್ ಭಾಷೆಯಲ್ಲಿ ಫ್ಲಾಸ್ಸೈನ್ ಎಂದರೆ ಎರಕ ಹೊಯ್ಯುವುದು ಎಂದರ್ಥ. ಪ್ಲಾಸ್ಸೈನಿನ ನಾಮರೂಪವೆ ಫ್ಲಾಸ್ಮಾ. ಪ್ಲಾಸ್ಮಾಸ್ಥಿತಿಯಲ್ಲಿನ ವಸ್ತುವನ್ನು ಆಯಸ್ಕಾಂತ ನಿಬಂಧನೆಗಳಿಗೆ ಒಳಪಡಿಸಿ ಅದನ್ನು ಸಂಸ್ಥಿತಗೊಳಿಸಬಹುದಾದ್ದರಿಂದ ಈ ಹೆಸರು.*

ಪ್ಲಾಸ್ಮಾ ಜೆಟ್ ಎಂಜಿನ್ನುಗಳಿಂದ ಹಿಡಿದು ನಿಯಂತ್ರಿತ ಅಣ್ವೌಷ್ಣಿಕ ವಿಲಯನದ (Controlled thermonuclear fusion) ವರೆಗೆ ಅನೇಕ ಕಡೆಗಳಲ್ಲಿ ಬಹು ಮಹತ್ವದ ಪಾತ್ರವಹಿಸುವ ಜಲೈಸ್ಕಾಂತೀಯ ಗತಿಶಾಸ್ತ್ರ (Magneto-hydro dynamics) ಎಂಬ ವಿಜ್ಞಾನದ ಹೊಸ ಶಾಖೆಗೆ ಅಸ್ತಿಭಾರ ಹಾಕಿದವನೂ ಇವನೆ.

ಜಲಜನಕವನ್ನು ಪರಮಾಣುವಿನ ರೂಪದಲ್ಲಿ ಮೊಟ್ಟಮೊದಲು ಪೃಥಕ್ಕರಿಸಿದವನೂ ಲ್ಯಾಂಗ್‌ಮುಯಿರ್‌ನೇ. ಅಲ್ಲದೆ ಇವನು ವೈಜ್ಞಾನಿಕ ವಲಯಗಳಲ್ಲಿ ಸರ್ವಮಾನ್ಯವಾಗುವ ಹಾಗೆ, ಬಿಸಿಯಾದ ಲೋಹಗಳ ಹೊರಮೈಯಿಂದ ವಿದ್ಯುತ್ಪ್ರೇರಿತವಾದ ಅಣುಗಳು ಏಕೆ ನೆಗೆಯುತ್ತವೆಂಬುದನ್ನೂ ಎರಡು ಎಲೆಕ್ಟ್ರೋಡುಗಳ ನಡುವೆ ಇರುವ ಅವಕಾಶಗಳಲ್ಲಿ ವಿದ್ಯುತ್ಪ್ರೇರಿತವಾದ ಅಣುಗಳ ಸಮಾಹಾರ ಹೇಗೆ ರೂಪುಗೊಳ್ಳುತ್ತವೆಂಬುದನ್ನೂ ವಿವರಿಸಿದ.

ಕ್ಷೇತ್ರೀಯ ರಸಾಯನಶಾಸ್ತ್ರದಲ್ಲಿ ಇವನು ಮಾಡಿದ ಸಾಧನೆಯನ್ನು ಕಂಡು ಯಾರಾದರೂ ಬೆರಳು ಕಚ್ಚಬೇಕು. ಪದಾರ್ಥದ ಹೊರಮೈ ಅದರ ಬಾಹ್ಯಮಿತಿಯಲ್ಲ; ಬದಲು ಪದಾರ್ಥ ಘನರೂಪದಲ್ಲೆ ಇರಲಿ, ದ್ರವರೂಪದಲ್ಲೆ ಇರಲಿ ಅಥವಾ ವಾಯುರೂಪದಲ್ಲೇ ಇರಲಿ ಸೀಮೆಗಳು ಒಂದುಗೂಡುವ ನಿಕ್ಷಿಪ್ತ ಪೃಷ್ಠಗಳೆಂದೇ ಅವುಗಳನ್ನು ಗ್ರಹಿಸಬೇಕು ಎಂದು ಹೇಳಿ ಅನನಿಪೇತ ಕ್ರಿಯೆ(ಶೋಷಣೆಗೆ ವಿರುದ್ಧವಾದ ಕ್ರಿಯೆ)ಯನ್ನು ವಿವರಿಸಿದ. ಒಂದೇ ಅಣುವಿನಷ್ಟು ದಪ್ಪವಾದ ಏಕಸ್ತರದ ಪಟಲಗಳನ್ನು ನಿರ್ಮಿಸುವ ಮೂಲಕ ಇವನು ಕೇವಲ ಎರಡೇ ಆಯಾಮಗಳಿರುವ ವಿಚಿತ್ರ ಸೃಷ್ಟಿಗೆ ಕಾರಣನಾದ. ಲ್ಯಾಂಗ್‌ಮುಯಿರ್ ಸಂಶೋಧನೆಗಳನ್ನು ಮುಂದುವರಿಸುತ್ತಿದ್ದ ಹಾಗೆ ಅವುಗಳನ್ನು ವ್ಯಾವಹಾರಿಕ ಜಗತ್ತಿಗೆ ಉಪಯೋಗವಾಗುವ ರೀತಿಯಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸುತ್ತಾ ನಡೆದ.

ಇನ್‌ಕ್ಯಾಂಡೆಸೆಂಟ್ ದೀಪಗಳನ್ನು ಶೋಧಿಸಿದಾತ ಥಾಮಸ್ ಅಲ್ವಾ ಎಡಿಸನ್ನನಾದರೂ ಅವುಗಳಲ್ಲಿ ಸುಧಾರಣೆಯನ್ನು ಮಾಡಿದಾತ ಲ್ಯಾಂಗ್‌ಮುಯಿರ್. ಪ್ರಥಮ ಮಹಾಯುದ್ಧದ ಸಮಯದಲ್ಲಿ ಜರ್ಮನ್ ಜಲಾಂತರ್ಗಾಮಿಗಳಿಗೆ ಮಿತ್ರರಾಷ್ಟ್ರಗಳ ಹಡಗುಗಳು ಬಲಿಯಾಗುತ್ತಿದ್ದಾಗ ಈತ ಜಲಾಂತರ್ಗಾಮಿಗಳನ್ನು ಪತ್ತೆ ಹಚ್ಚುವ ಸಾಧನಗಳನ್ನು ಕಂಡುಹಿಡಿದು ಒದಗಬಹುದಾದ ಹಾನಿಯನ್ನು ತಪ್ಪಿಸಿದ. ಅತಿ ಎತ್ತರದಲ್ಲಿ ಹಾರುವ ಯುದ್ಧವಿಮಾನಗಳ ರೆಕ್ಕೆಯ ಮೇಲೆ ಹಿಮ ಸಂಗ್ರಹಗೊಂಡಾಗ ಅದನ್ನು ಕರಗಿಸುವ ಸಾಧನವನ್ನು ನಿರ್ಮಿಸುವ ಮೂಲಕ ದ್ವಿತೀಯ ಮಹಾಯುದ್ಧದ ಸಮಯದಲ್ಲಿ ವಾಯುಪಡೆಗೆ ನೆರವಾದ. ಒಣ ಬರ್ಫವನ್ನಾಗಲಿ ಸಿಲ್ವರ್ ಅಯೋಡೈಡನ್ನಾಗಲಿ ಮೋಡಗಳಲ್ಲಿ ಬಿತ್ತುವ ಮೂಲಕ ಕೃತಕವಾಗಿ ಮಳೆಯನ್ನು ತರಿಸಬಹುದೆಂಬುದನ್ನು ಕಂಡುಹಿಡಿದವನೂ ಇವನೆ.

ಬಹುತರವಾಗಿ ನಮ್ಮೆಲ್ಲರ ಕ್ರಿಯಾತ್ಮಕ ಶಕ್ತಿ ಮೂವತ್ತರ ನಂತರ ಕುಗ್ಗಿಹೋಗುತ್ತದೆ. ಆದರೆ ಬಿಡುವನ್ನರಿಯದ ಈ ವಿಜ್ಞಾನಿಯ ರೀತಿಯೆ ಬೇರೆ. ಎಪ್ಪತ್ತರ ಇಳಿವಯಸ್ಸಿನಲ್ಲಿಯೂ ಆತ ಇಪ್ಪತ್ತರ ತರುಣರಷ್ಟೆ ಹುರುಪಿನಿಂದ ಕಾರ್ಯ

* ೧೯೭೭ರ ಮಾರ್ಚ್ ಸಂಚಿಕೆಯನ್ನು ನೋಡಿರಿ. ಪುಟ: ೫೦

ಪ್ರವೃತ್ತನಾಗಿ ವಿಜ್ಞಾನ ಜಗತ್ತಿಗೆ ಹೊಸ ಹೊಸ ಕೊಡುಗೆಗಳನ್ನು ನೀಡಿದ. ತನ್ನ ಈ ಅನುಪಮ ಸಾಧನೆಗಳಿಂದಾಗಿಯೆ ಆತ ಪ್ರಪಂಚದಾದ್ಯಂತ ಅನೇಕ ವಿಶ್ವವಿದ್ಯಾಲಯಗಳಿಂದ ಇಪ್ಪತ್ತೆರಡು ಗೌರವ ಪದವಿಗಳನ್ನೂ ಹದಿನೈದು ಗೌರವ ಡಾಕ್ಟರೇಟುಗಳನ್ನೂ ಪಡೆದ.

ಆದರೂ ಅವನು ಜನಸಾಮಾನ್ಯರ ಪಾಲಿಗೆ ನ ದೇಶದಲ್ಲೆ ಅನಾಮಧೇಯನಾಗಿ ಉಳಿದ. ಇದಕ್ಕೆ ಕಾರಣವಿಲ್ಲದೆ ಇಲ್ಲ. ಆತ ಬಡತನದಿಂದ ನರಳಲಿಲ್ಲ, ಕಷ್ಟಕಾರ್ಪಣ್ಯಗಳನ್ನು ಅನುಭವಿಸಲಿಲ್ಲ, ರೋಗರುಜಿನಗಳಿಂದ ಬಳಲಲಿಲ್ಲ; ಸಚ್ಚಾರಿತ್ರ್ಯನಾಗಿ ಬಾಳಿದುದರಿಂದ ಯಾವುದೇ ಬಗೆಯ ಅಸ್ಪೈತಿಕ ಕತೆಗಳು ಅವನ ಸುತ್ತ ಹಬ್ಬಿಕೊಳ್ಳಲಿಲ್ಲ. ಸಾಕಷ್ಟು ಐಶ್ವರ್ಯವಿದ್ದರೂ ಆತನೆಂದೂ ಆಡಂಬರದ ಜೀವನ ನಡೆಸಲಿಲ್ಲ. ತನ್ನ ವರ್ತನೆಯಲ್ಲೆಂದೂ ವಿಕ್ಷಿಪ್ತತನವನ್ನು ಪ್ರದರ್ಶಿಸಲಿಲ್ಲ. ಅವನ ಜೀವನದಲ್ಲೆಂದೂ ಅಲ್ಲೋಲಕಲ್ಲೋಲವುಂಟಾಗಲಿಲ್ಲ. ಶಾಂತಜೀವನವನ್ನು ನಡೆಸಿದ ಆತ ತನ್ನ ವೈಜ್ಞಾನಿಕ ಸಾಧನೆಯಲ್ಲೆ ಜೀವನದ ಎಲ್ಲ ಆನಂದವನ್ನೂ ಪಡೆದ. ಇದೆಲ್ಲಕ್ಕಿಂತ ಹೆಚ್ಚಾಗಿ ಕೀರ್ತಿ, ಪ್ರಸಿದ್ಧಿ, ಪ್ರತಿಷ್ಠೆಗಳಿಂದ ದೂರವುಳಿಯಲು ಬಾಳಿನುದ್ದಕ್ಕೂ ತವಕಪಟ್ಟ. ಶ್ರೇಷ್ಠ ವೈಜ್ಞಾನಿಕನೊಬ್ಬ ಅನಾಮಧೇಯನಾಗಿ ಉಳಿಯಲು ಇದಕ್ಕಿಂತ ಒಳ್ಳೆಯ ಕಾರಣಗಳೇನು ಬೇಕು? (ಸಾಧಾರ)

✪

ಸೊನ್ನೆಯ ಶಕ್ತಿ

ನನ್ನ ದೇಶದವರು ಮೊಟ್ಟ ಮೊದಲಿಗೆ ಸೊನ್ನೆಗೆ ಸಂಖ್ಯೆಯ ಸ್ಥಾನಮಾನವನ್ನು ಕೊಟ್ಟಿರುವುದರಿಂದ ಇದಕ್ಕೆ ನಾನು ವಿಶೇಷ ಪ್ರೀತಿಯನ್ನು ಇಳಿದಿದ್ದೇನೆ. ನಮ್ಮ ಗಣಿತದಲ್ಲಿ ಇದರ ಪಾತ್ರ ಪ್ರಾಮುಖ್ಯವಾದುದು. 'ದಶಮಾನ' ಪದ್ಧತಿಗೆ ಮೂಲಾಧಾರವಿದು. ಇದರ ಶಕ್ತಿ ಅದೆಷ್ಟಿದೆಯೆಂದರೆ ಯಾವುದೇ ಸಂಖ್ಯೆಯಿಂದ ಇದನ್ನು ಗುಣಿಸಿದರೆ ಆ ಸಂಖ್ಯೆಗೆ ಸರ್ವನಾಶ ಖಂಡಿತ !

– ಶಕುಂತಲಾದೇವಿ

ಸಂಗ್ರಹ – ಕ. ಶಿ. ಕುಡಗುಂಟಿ

ಎರಡನೇದು ಚೆನ್ನಾಗಿದೆ

ಫ್ರಾನ್ಸ್ ದೇಶದ ನಾಟಕಕರ್ತ ಸಾಚಾ ಗಿಟ್ರೀರವರನ್ನು ಸಂದರ್ಶಿಸಿದ ಒಬ್ಬ ತರುಣ ಕವಿ, "ಸರ್. ನಾನೆರಡು ಪದ್ಯಗಳನ್ನು ರಚಿಸಿದ್ದೇನೆ- ಅವೆರಡರಲ್ಲಿ ಯಾವುದು ಚೆನ್ನಾಗಿದೆ ಅನ್ನೋದನ್ನ ತಾವು ಹೇಳಬೇಕು," ಎಂದು ಬೇಡಿಕೊಂಡ.

"ಸರಿ... ಓದು... ಹೇಳ್ತೀನಿ," ಎಂದು ಗಿಟ್ರೀರವರು ಕುರ್ಚಿಗೆ ಒರಗಿ ಕುಳಿತು ವಿಶ್ರಮಿಸಿಕೊಳ್ಳುತ್ತಾ, ಅರೆನಿಮೀಲಿತರಾಗಿ ಹೇಳಿದರು.

ಆ ಕವಿ ಮೊದಲ ಕವಿತೆ ಓದಿ ಮುಗಿಸಿದ ತಕ್ಷಣವೇ ಗಿಟ್ರೀ, "ಎರಡನೇದು ಚೆನ್ನಾಗಿದೆ!" ಎಂದು ಹೇಳುತ್ತಾ ಮೇಲಕ್ಕೆದ್ದರು.

–ಎಸ್. ವಿಶ್ವನಾಥ



ಪುಟ್ಟ ಮಾತಾಕೆಗೆ ಗೊತ್ತಿರುವುದೇನು?

ಮೂಲ : ಮೇರಿ ಎಲಿಜಾಬೆಥ್ ಕೌನ್ಸೆಲ್‌ಮನ್
ಕನ್ನಡಕ್ಕೆ : ಪಿ. ಸುನಂದಾ

ನಾನು ಏಳುವರ್ಷದೊಳಗಿನ ಮಗುವನ್ನು ದತ್ತು ತೆಗೆದುಕೊಳ್ಳಲು ಬಯಸುತ್ತೇನೆ." ಎಂದು ಶ್ರೀಮತಿ ಎಲಿಸನ್ ಅಮೇರಿಕಾದ ಅನಾಥಾಶ್ರಮ ವೊಂದರ ಮೇಟ್ರನ್‌ಗೆ ಸ್ವಲ್ಪ ಹೊತ್ತಿನ ಕೆಳಗೆ ತಿಳಿಸಿ, ನಂತರ ಆ ಆಶ್ರಮದ ಆಟದ ಮೈದಾನದಲ್ಲಿ ಆಡುತ್ತಿದ್ದ ಪುಟ್ಟ ಹುಡುಗಿಯರನ್ನು ಪರೀಕ್ಷಿಸು ವಂತೆ ದಿಟ್ಟಿಸಿ ನೋಡುತ್ತಾ ನಿಂತಿದ್ದಳು.

ಕಪ್ಪು ಗುಂಗುರು ಕೂದಲಿನ ದುಂಡು ದುಂಡಾಗಿ ರುವ ಪುಟಾಣಿ ಹುಡುಗಿಯೊಬ್ಬಳು ಆಡುತ್ತಿದ್ದಳು. 'ಎಷ್ಟು ಮುದ್ದಾಗಿದೆ ಈ ಮಗು, ಇವಳನ್ನು ಕರೆ ದೊಯ್ದರೆ ಮಕ್ಕಳಿಲ್ಲದ ವಿಧವೆಯಾದ ನನ್ನ ಬಾಳಿಗೆ ಚೇತೋಹಾರಿಯಾಗುತ್ತಾಳೆ.' ಎಂದುಕೊಳ್ಳುತ್ತಾ ಎಲಿಸನ್ ಆಡುತ್ತಿದ್ದ ಇನ್ನೊಂದು ಹುಡುಗಿಯ ಕಡೆ ತಿರುಗಿದಳು. 'ಜೇನುವರ್ಣದ ಸುಂದರ ಕಣ್ಣುಗ ಳುಳ್ಳ ನಗೆಮೊಗದ ಆ ಹುಡುಗಿ, ಉತ್ಸಾಹದಿಂದ ಮೇಲೆ ಹೋಗುತ್ತಿದ್ದ ಹಾಗೆ ಜೋರಾಗಿ ನಗುತ್ತಾ ಚಪ್ಪಾಳೆ ತಟ್ಟುತ್ತಿದ್ದಳು. ಆ ಹುಡುಗಿ ಯಲ್ಲಿ ಶ್ರೀಮತಿ ಎಲಿಸನ್ ತನ್ನ ಬಾಲ್ಯದ ಪ್ರತಿ-ಬಿಂಬವನ್ನು ಕಂಡು, ಅಚ್ಚರಿ ಪಟ್ಟಳು.

'ತಾಯಿಯಿಲ್ಲದೆ, ತಬ್ಬಲಿಯಂತೆ ಈ ಮುದ್ದು ಮಕ್ಕಳು ಇಲ್ಲಿ ಬೆಳೆಯುತ್ತಿವೆ, ಯಾರನ್ನು ಆರಿಸಲಿ? ನನ್ನ ನಿರ್ಣಯದ ಮೇಲೆ ಇಲ್ಲಿನ ಒಂದು ಮಗುವಿನ ಜೀವನ ಗತಿಯೇ ಇಂದಿನಿಂದ ಬದಲಾಗುತ್ತದೆ ನನ್ನದರಂತೆ' ಎಂದು ಶ್ರೀಮತಿ ಎಲಿಸನ್ ಯೋಚನಾ ಮಗ್ನಳಾಗಿದ್ದಾಗ, ತನ್ನ ಸ್ಕರ್ಟನ್ನು ಪುಟ್ಟ ಕೈಗಳೆ ರಡು ಹಿಡಿದು ಜಗ್ಗಿದಂತಾಗಲು, ತಕ್ಷಣ ಕೆಳಗೆ ನೋಡಿದಳು. ಅಲ್ಲಿ, ಬಡಕಲು ಮೈಯಿನ, ತೀರಾ ಸಾಧಾರಣವಾಗಿ ಕಾಣುತ್ತಿದ್ದ ಪುಟ್ಟ ಹುಡುಗಿ ಯನ್ನು ಕಂಡು ಚಕಿತಳಾದಳು.

ಆ ಹುಡುಗಿಯದು ಮನಸ್ಸನ್ನು ಹೊಕ್ಕು ನೋಡು ತ್ತಿದ್ದಾಳೇನೊ ಎನ್ನಿಸುವಂಥ ಭಾವವುಳ್ಳ ಅಗಲವಾದ ನೀಲಿ ಕಣ್ಣುಗಳು ಅವು ಅವಳ ಬತ್ತಿ ಹೋದ ವಿವರ್ಣ ಮುಖಕ್ಕೆ ಬಹಳ ದೊಡ್ಡವೆನಿಸುತಿತ್ತು. ಇಲಿ ಬಣ್ಣದ ಕೂದಲನ್ನು ಎರಡು ಜಡೆಯಾಗಿ ಕಟ್ಟಿ ದ್ದರು. ಅದು ಅನಾಕರ್ಷಕವಾಗಿ ಅವಳ ಹೆಗಲ ಮೇಲೆ ಜೋತು ಬಿದ್ದಿತ್ತು. ಸ್ಕರ್ಟನ್ನು ಹಿಡಿದಿದ್ದ ಅವಳ ಕೈಗಳು ಬಹಳ ತೆಳ್ಳಗಿದ್ದು, ಮುಖ ಮತ್ತು ಕತ್ತುಗಳಂತೆ ಸುಕ್ಕುಗಟ್ಟಿತ್ತು.

"ಇಷ್ಟು ಕುರೂಪಿಯಾದ ಹುಡುಗಿಯನ್ನು ನಾನು ನನ್ನ ಜೀವನದಲ್ಲಿ ಕಂಡಿರಲಿಲ್ಲ" ಎಂದು ಶ್ರೀಮತಿ ಎಲಿಸನ್ ಅಂದುಕೊಳ್ಳುತ್ತಿದ್ದ ಹಾಗೆ, ಆ ಹುಡುಗಿ ಇವಳನ್ನು ನೋಡಿ ಸಂತಸದಿಂದ ಮುಗುಳು ನಕ್ಕಳು. ದೀಪ ಕತ್ತಲನ್ನು ಬೆಳಗುವಂತೆ, ಆ ನಗು ಅವಳ ಮುಖದ ತುಂಬಾ ಹರಡಿ, ಅವಳ ತೀರಾ ಸಾಧಾರಣ ಮುಖವನ್ನು ಒಂದು ಕ್ಷಣ ಸುಂದರ ವಾಗಿಸಿತು. ಮಧುರವಾದ ಅವಳ ನಗುವಿನಲ್ಲಿ ಆಸೆ ಮತ್ತು ವಿಶ್ವಾಸ ತುಂಬಿತ್ತು.

"ಅಮ್ಮ ಕಳುಹಿಸಿರುವುದು ನಿಮ್ಮನ್ನೇ ಅಲ್ಲವಾ?" ಎಂದು ಭಯ ಮತ್ತು ಆಸೆ ತುಂಬಿದ ಧ್ವನಿಯಲ್ಲಿ ಶ್ರೀಮತಿ ಎಲಿಸನ್ನಳನ್ನು ಪ್ರಶ್ನಿಸಿದಳು.

ಶ್ರೀಮತಿ ಎಲಿಸನ್ ಮಂಡಿಯೂರಿ ಆ ಹುಡುಗಿಯ ಪಕ್ಕ ಕುಳಿತು, ಅವಳ ಇಲಿ ಬಣ್ಣದ ತಲೆಗೂದಲನ್ನು ಸವರುತ್ತಾ, ಕರುಣೆಯಿಂದ "ನನಗೆ ಗೊತ್ತಿಲ್ಲ ಡಿಯರ್, ನಿನ್ನ ಅಮ್ಮ ಸ್ವರ್ಗಕ್ಕೆ ದೇವರ ಬಳಿಹೋಗಿದ್ದಾಳಾ" ಎಂದಳು.

ಹುಡುಗಿಯ ಮುಖ ತಕ್ಷಣ ಗಂಭೀರವಾಯಿತು. ತಲೆ ಅಲ್ಲಾಡಿಸುತ್ತ ನುಡಿದಳು "ಇಲ್ಲಮ್ಮ, ನನ್ನ ತಾಯಿ ನಾನು ಕರೆದಾಗಲೆಲ್ಲಾ ನನ್ನನ್ನು ನೋಡಲು ಬರುತ್ತಾಳೆ. ನಾನು ಪ್ರತಿದಿನ ಅವಳೊಡನೆ ಮಾತನಾಡುತ್ತೇನೆ. ಅವಳು..............."

ಆ ಸಮಯಕ್ಕೆ ಸರಿಯಾಗಿ ಹೊರ ಬಂದ ಮೆಟ್ರನ್, ಶ್ರೀಮತಿ ಎಲಿಸನ್ ಮಂಡಿಯೂರಿ ಹುಡುಗಿಯ ಬಳಿ ಮಾತನಾಡುತ್ತಿರುವುದನ್ನು ನೋಡಿ ಬೇಗ ಓಡಿ ಬಂದು. "ಶ್ರೀಮತಿ ಎಲಿಸನ್ ಕ್ಷಮಿಸಿ, ಬಹಳ ತಡಮಾಡಿದೆ..." ಎಂದು ಹೇಳಿ ಆ ಹುಡುಗಿಯ ಕಡೆ ತಿರುಗಿ ಅಸಮಾಧಾನದಿಂದ, "ಓಡು, ಹೋಗಿ ಮಕ್ಕಳ ಜೊತೆ ಆಡಿಕೊ ನಾನು ಇವರ ಬಳಿ ಮಾತನಾಡಬೇಕು" ಎಂದು ಆಜ್ಞಾಪಿಸಿದಳು.

ಆ ತೆಳು ಮುಖದ ಹುಡುಗಿ ಮಾತ್ರ ಅನುಮಾನಿಸುತ್ತಾ, ಶ್ರೀಮತಿ ಎಲಿಸನ್ನಳ ಮುಖವನ್ನೇ ಹುಡುಕು ನೋಟದಿಂದ ನೋಡುತ್ತಾ ನಿಂತಿದ್ದು, ನಂತರ ಮಾತಿಲ್ಲದೆ ಮಕ್ಕಳ ಗುಂಪೊಂದರ ಕಡೆಗೆ ಹೋದಳು.

ಇವಳು ಬಂದ ತಕ್ಷಣ, ಮಕ್ಕಳೆಲ್ಲಾ ಅಲ್ಲಿಂದ ಪರಾರಿಯಾದರು. ದೊಡ್ಡ ಓಕ್ ಮರದ ಬಳಿ ನಿಂತ ಅವಳು ಬಹಳ ಪುಟ್ಟ ಹುಡುಗಿಯ ಹಾಗೆ ಕಾಣಿಸುತ್ತಿದ್ದಳು.

ಇದನ್ನು ಗಮನಿಸಿದ ಶ್ರೀಮತಿ ಎಲಿಸನ್‌ಗೆ ವಿಚಿತ್ರವೇದನೆಯಾಯಿತು. "ಈ ಮಗು ಯಾರದು? ಪಾಪ, ಎಲ್ಲರ ಹಾಗಿಲ್ಲ ಎನ್ನಿಸುತ್ತದೆ."

"ಮಾರ್ತಾನಾ" ಎಂದು ಮೆಟ್ರನ್ ಬೇಸರದ ನಗು ಪ್ರಕಟಿಸುತ್ತಾ, "ಅವಳನ್ನಂತೂ ನೀವು ದತ್ತು ತೆಗೆದುಕೊಳ್ಳುವುದಿಲ್ಲ ತಾನೆ..., ಅವಳದ್ದೇ ನಮಗೆ ಸಮಸ್ಯೆಯಾಗಿದೆ. ಇತರ ಹುಡುಗಿಯರ ಜೊತೆಗೆ ಬೆರೆತು ಆಡುವುದಿಲ್ಲ, ಹೇಳಿದ ಮಾತು ಕೇಳುವುದಿಲ್ಲ. ಹಾಗೆಂದು ಕೆಟ್ಟ ಹುಡುಗಿಯಲ್ಲ. ಅವಳಿಗೆ ಇಲ್ಲಿನ ಪರಿಸರ ಒಗ್ಗಿಲ್ಲ ಅಷ್ಟೆ."

ಶ್ರೀಮತಿ ಎಲಿಸನ್, ತನ್ನ ಜೇನು ವರ್ಣದ ಕೂದಲನ್ನು ಸವರಿಕೊಳ್ಳುತ್ತಾ ಕರುಣೆಯಿಂದ, "ಮಾರ್ತಾ ಹೇಳಿದಳು, ಅವಳ ಅಮ್ಮ ಆಗಾಗ್ಗೆ ಬಂದು ನೋಡಿ ಹೋಗುತ್ತಾಳಂತಲ್ಲಾ? ಹಾಗಾಗಿ ಮಗುವಿಗೆ ಇಲ್ಲಿ ಹೊಂದಿಕೆಯಾಗಿಲ್ಲ ಎನಿಸುತ್ತದೆ. ಕಷ್ಟವೋ, ಸುಖವೋ, ಏನಾದರಾಗಲಿ ಎಂದು ಮಾರ್ತಾಳನ್ನು ಅವಳ ಅಮ್ಮನೆ ಕರೆದುಕೊಂಡು ಹೋಗಿ ಸಾಕಿದರೆ ಒಳ್ಳೆಯದಾಗುತ್ತದೆ."

ಮೆಟ್ರನ್ ಕ್ಷಣ ಬಿಟ್ಟು ನುಡಿದರು. "ಡಿಯರ್, ಆ ಹುಡುಗಿಗೆ ತಾಯಿ ಇಲ್ಲ. ಅವಳು ಕ್ಷಯರೋಗದಿಂದ ವರ್ಷದ ಹಿಂದೆ ತೀರಿಕೊಂಡಳು. ಹತ್ತಿ ಗಿರಣಿಯಲ್ಲಿ ಹಗಲು ರಾತ್ರಿ ಕೆಲಸಮಾಡುತ್ತಿದ್ದ ಆಕೆಗೆ ಮಗಳ ಮೇಲೆ ಬಹಳ ಪ್ರೀತಿ ಇತ್ತು. ಪುಟ್ಟ ಮಾರ್ತಾಳಿಗೆ ಅಮ್ಮನ ಸಾವಿನಿಂದ ಆಘಾತವಾಗಿದೆ ಅದರಿಂದ ಅವಳಿನ್ನು ಚೇತರಿಸಿಕೊಂಡಿಲ್ಲ. ಯಾವಾಗಲೂ ತನ್ನ ಅಮ್ಮ ಬಳಿ ಇದ್ದು ಕಾಪಾಡುತ್ತಾಳೆ, ಎಂದು ಭಾವಿಸಿಕೊಂಡು ರಾತ್ರಿಯೆಲ್ಲಾ ಒಬ್ಬಳೇ ಮಾತನಾಡುತ್ತಾಳೆ. ಇದರಿಂದ ಇತರ ಹುಡುಗಿಯರು ತೊಂದರೆಯಾಗುತ್ತದೆ ಎಂದು ದೂರು ಕೊಡುತ್ತಾರೆ. ಅವಳನ್ನು ಕಂಡರೆ ಯಾರಿಗೂ ದ್ವೇಷ ಇಲ್ಲ. ಆದರೊ ಸ್ವಲ್ಪ ಹೆದರುತ್ತಾರೆ."

"ಹೆದರುತ್ತಾರೆ!" ಎಲಿಸನ್ನಳು ಆಶ್ಚರ್ಯದಿಂದ ಹುಬ್ಬೇರಿಸಿದಳು. ಈ ಪುಟ್ಟ, ಬಡಕಲು ಹುಡುಗಿಯನ್ನು ನೋಡಿ ಹೆದರಲು ಸಾಧ್ಯವೆ?

ಮೇಟ್ರನ್ ಸ್ವಲ್ಪ ಅನುಮಾನಿಸಿ, ಬಲವಂತದ ನಗೆ ನಕ್ಕು ನುಡಿದಳು, "ವಿಚಿತ್ರವಾಗಿ ಕಾಣುತ್ತದೆ ನಿಜ, ಆದರೆ ಇವಳು ಬಂದ ಮೇಲೆ ಆಶ್ರಮದಲ್ಲಿ

ಹಲವು ಅಸಹಜವಾದ ಘಟನೆಗಳು ನಡೆದಿವೆ..., ಅವಳ ಹಿಂದಿನ ಕಥೆ ಕೇಳಿದರೆ ನಿಮಗೆ ಅರ್ಥವಾಗುತ್ತದೆ.

"ಮಾರ್ತಳ ತಾಯಿ ಅಸಾಧಾರಣ ಹೆಂಗಸು. ಆದರೆ ಅವಳು ದೃಢಕಾಯಳಾಗಿರಲಿಲ್ಲ. ನೈಟ್ ಕ್ಲಬ್ ಒಂದರಲ್ಲಿ ಕೆಲಸ ಮಾಡುತ್ತಿದ್ದಳು. ಮದುವೆಯಿಲ್ಲದೆ ಹುಟ್ಟಿದ ಮಗು ಮಾರ್ತ, ಬಹುಶಃ ಕುಡುಕ ಸೈನಿಕನಿರಬೇಕು. ಆದರೆ ಮಗಳು ಹುಟ್ಟಿದ ಗಳಿಗೆಯಲ್ಲಿ, ತಾಯಿಮನಸ್ಸು ಅಸಾಧ್ಯವಾಗಿ ಪರಿವರ್ತನೆ ಹೊಂದಿತು. ತಾನು ಸದ್ಗೃಹಸ್ಥಳಂತೆ ಬಾಳಿ, ತನ್ನ ಮಗುವಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಕಲ್ಪಿಸಿಕೊಡಬೇಕೆಂಬ ಹಂಬಲ ಆಕೆಯಲ್ಲಿ ಚಿಗುರಿತು.

"ಹೀಗಾಗಿ ಹಿಂದಿನ ತನ್ನ ಕೊಳಕು ಜೀವನವನ್ನು ಬಿಟ್ಟು, ಹತ್ತಿ ಗಿರಣಿಯಲ್ಲಿ ಕೆಲಸಕ್ಕೆ ಸೇರಿಕೊಂಡು ಮಗಳನ್ನು ಪ್ರೀತಿಯಿಂದ ಸಾಕ ತೊಡಗಿದಳು.

ಅಭ್ಯಾಸವಿಲ್ಲದ ವಿಪರೀತ ದುಡಿಮೆಯ ಜೊತೆಗೆ, ಕ್ಷಯ ರೋಗವು ಅವಳನ್ನು ಮುತ್ತಿಕೊಂಡು ಅವಳ ಜೀವವನ್ನು ಹಣ್ಣುಮಾಡಿತು. ಮಗಳಿಗಾಗಿ ಜೀವದಿಂದಿರಲು, ಆಕೆ ಸಾವಿನೊಡನೆ ಕಡೆಯವರೆಗೂ ಹೋರಾಡಿದಳು. ಅಂತ್ಯದ ಸಮಯದಲ್ಲಿ ಮಗಳನ್ನು ಕರೆಸಿಕೊಂಡು ಲೋಕಾರೂಢಿಯಂತೆ ಕೆಲವು ಉಪದೇಶ ಹೇಳಿದಳು. ಆದರೆ ಅದರ ಪರಿಣಾಮ ಮಾತ್ರ ಈಗ ವಿಪರೀತವಾಗಿ ಕುಳಿತಿದೆ.

"ಅವಳು ಮಾರ್ತಾಳಿಗೆ 'ಈ ದೇಹವೆಂಬುದು ಹಳೆಯ ಬಟ್ಟೆಯ ಹಾಗೆ, ರೋಗ ಇಲ್ಲವೆ ಮುಪ್ಪು ಬಂದು ನಾಶವಾಗುತ್ತದೆ. ಆದರೆ ಆತ್ಮಕ್ಕೆ ಸಾವಿಲ್ಲ. ಆದ್ದರಿಂದ ನಾನು ಯಾವಾಗಲೂ ನಿನ್ನ ಬಳಿ ಇದ್ದು ನಿನ್ನನ್ನು ರಕ್ಷಿಸುತ್ತೇನೆ, ನೀನು ಹೆದರಬೇಡ' ಎಂದು ನಂಬಿಕೆ ಹುಟ್ಟಿಸಿ ಮರಣ ಹೊಂದಿದಳು.

"ಈಗ ಮಾರ್ತಾ ಯಾರು ಎಷ್ಟು ಹೇಳಿದರೂ, ಅಮ್ಮ ತನ್ನ ಬಳಿ ಇದ್ದು ಕಾಪಾಡುತ್ತಾಳೆ, ಎಂಬ ನಂಬಿಕೆಯನ್ನು ಬಿಡುವುದಿಲ್ಲ. ಕೆಲವು ಘಟನೆಗಳು ಅವಳ ನಂಬಿಕೆಯನ್ನು ಇನ್ನೂ ದೃಢ ಮಾಡಿವೆ. ಒಮ್ಮೊಮ್ಮೆ ನಮಗೂ ಅನುಮಾನ ಹುಟ್ಟುವ ಹಾಗಾಗುತ್ತದೆ..."

ಶ್ರೀಮತಿ ಎಲಿಸನ್ ಎಂದಿಗೂ ಭ್ರಮೆಗಳನ್ನು ಒಪ್ಪುವ ವ್ಯಕ್ತಿಯಲ್ಲ, ಅವಳ ಮುಖದ ಮೇಲೆ ಮೂಡಿದ ಅಪನಂಬಿಕೆಯ ನಗೆಯನ್ನು ಕಂಡ ಮೇಟ್ರನ್, "ಇದೆಲ್ಲ ಭ್ರಮೆ ಎಂದು ಅನ್ನುತ್ತೀರಲ್ಲವೆ? ಇಲ್ಲಿ ಕೇಳಿ ಒಂದು ಸಲ ಒಬ್ಬ ಹೆಸರಾಂತ ನಟಿ, ಅನಾಥ ಮಗುವನ್ನು ಸಾಕಿಕೊಳ್ಳುತ್ತೇನೆ ಎಂದು ಪ್ರಚಾರ ಮಾಡಿಸಿಕೊಂಡು ನಮ್ಮ ಆಶ್ರಮಕ್ಕೆ ಬಂದಳು.

"ಯಾಕೋ, ಏನೋ, ಅವಳು ಮಾರ್ತಾಳನ್ನೇ ಆರಿಸಿಕೊಂಡಳು. ಬಹುಶಃ ಮಾರ್ತಾಳ ಮುಂದೆ ತನ್ನ ಚೆಲುವು ಎದ್ದು ಕಾಣುತ್ತದೆ ಎಂದಿರಬೇಕು; ಆದರೆ ಮಾರ್ತಾ ಮಾತ್ರ ಅಂದು ಹಗಲು, ರಾತ್ರಿ ಅಮ್ಮ ಇವಳನ್ನು ಕಳಿಸಿಲ್ಲ, ಇವಳ ಜೊತೆ ಹೋಗಬೇಡ ಎನ್ನುತ್ತಾಳೆ' ಎಂದು ಕಿರಿಚುತ್ತಲೇ ಇದ್ದಳು.

ಮಾರನೇ ದಿನ ಮಾರ್ತಾಳನ್ನು ಕಳುಹಿಸುವುದಕ್ಕೆ ಸಿದ್ಧತೆ ನಡೆಸುತ್ತಿದ್ದಾಗ ಆ ನಟಿಯ ಪತ್ರಿಕಾ ಪ್ರತಿನಿಧಿ ಬಂದು 'ದತ್ತು ತೆಗೆದುಕೊಳ್ಳುವುದಿಲ್ಲ' ಎಂದು ಹೇಳಿ ಹೋದ. ನಂತರ ಬಂದ ಪತ್ರಿಕಾವರದಿಯ ಪ್ರಕಾರ, ಅವಳು 'ತನ್ನ ಜನಪ್ರಿಯತೆಯನ್ನು ಹೆಚ್ಚಿಸಿ ಕೊಳ್ಳುವ ಸೋಗಿಗಾಗಿ ಮಗುವನ್ನು ಸಾಕಬೇಕೆಂದು ಕಾತರಿಸಿದ್ದಳಂತೆ, ಅಂದು ಆಶ್ರಮಕ್ಕೆ ಹೊರಟಾಗ, ಆಕಸ್ಮಿಕವಾಗಿ ಮಹಡಿಯಿಂದ ಜಾರಿ ಬಿದ್ದು, ಅವಳ ಮೂಗು ಒಡೆದುಹೋಗಿ, ಪ್ಲಾಸ್ಟಿಕ್ ಸರ್ಜರಿಯಿಂದಲೂ ಅದು ಸರಿ ಹೋಗದ್ದರಿಂದ ಅವಳ ಸಿನಿಮಾ ಜೀವನ ಅಲ್ಲಿಗೆ ನಿಂತು ಹೋಯಿತಂತೆ, ಹೀಗಾಗಿ ಅವಳು ಮಗುವನ್ನು ದತ್ತು ತೆಗೆದುಕೊಳ್ಳುವ ವಿಚಾರವನ್ನು ಕೈ ಬಿಟ್ಟಳು. ಅಂತೂ ಬಹಳ ಕ್ರೂರವಾದ ರೀತಿಯಲ್ಲಿ ಮಾರ್ತಾಳ ಆಸೆಯೂ ಫಲಿಸಿತೆನ್ನಬಹುದು.

ಶ್ರೀಮತಿ ಎಲಿಸನ್ ನಗುತ್ತಾ "ಕಾಕತಾಳೀಯ ನ್ಯಾಯವಿರಬಹುದು, ಪಾಪದ ಪುಟ್ಟ ಹುಡುಗಿ ಮಾರ್ತಾ!" ಎಂದಳು.

"ಇರಬಹುದು, ಆದರೆ ಇದರಿಂದ ಮಾರ್ತಾಳ ನಂಬಿಕೆ ಹೆಚ್ಚಿತು. ಇನ್ನೂ ಅನೇಕ ಸಣ್ಣ ಪುಟ್ಟ ಘಟನೆಗಳು ಅವಳ ನಂಬಿಕೆಯನು ದೃಢಪಡಿಸಿವೆ. ಇತರ ಮಕ್ಕಳಿಗೆ ಕಾಣದ ವಸ್ತುಗಳನ್ನು ಇವಳು ತಂದು ಕೊಡುತ್ತಾಳೆ. ಅವರಿಗೆ ತಿಳಿಯದ ಎಷ್ಟೋ ವಿಷಯಗಳನ್ನು ಹೇಳುತ್ತಾಳೆ. ಕೇಳಿದರೆ, ನನ್ನ ಅಮ್ಮ ಹೇಳಿಕೊಟ್ಟಳು ಎನ್ನು

ತ್ತಾಳೆ. ಎಷ್ಟು ಬೈದರೂ, 'ಅಮ್ಮ ನನಗೆ ಹೇಳಿ ಕೊಡುತ್ತಿರುವಾಗ, ನಾನು ಹೇಗೆ ಅವಳಿಲ್ಲ ಎನ್ನಲಿ ?' ಎನ್ನುತ್ತಾಳೆ. ಇದೆಲ್ಲಾ ಇತರ ಹುಡುಗಿಯರಿಗೆ ಬಹಳ ಭಯ ಹುಟ್ಟಿಸಿದೆ. ಅವಳನ್ನು ಯಾವಾಗಲೂ ಅವಳ ಅಮ್ಮನ ಭೂತ ಕಾಪಾಡುತ್ತದೆ ಎನ್ನಿಸುತ್ತದೆ.

ಶ್ರೀಮತಿ ಎಲಿಸನ್ ಜೋರಾಗಿ ನಗುತ್ತಾ, "ನಿಮ್ಮಂಥ ವಿದ್ಯಾವಂತರೇ ಇದನ್ನೆಲ್ಲಾ ನಂಬುವುದೆಂದರೆ ಬಹಳ ಆಶ್ಚರ್ಯವಾಗುತ್ತದೆ" ಎಂದಳು.

ಮೇಟ್ರನ್ ಮುಖ ಅವಮಾನದಿಂದ ಕೆಂಪಾಯಿತು, "ಅಂತಹ ವಿಚಿತ್ರ ಸಂಗತಿಗಳಂತೂ ನಡೆಯುತ್ತಿವೆ, ಕಾರಣ ದೇವರೇ ಬಲ್ಲ! ಪಾಪ, ಯಾರಾದರೂ ಒಳ್ಳೆಯವರು ಅವಳನ್ನು ಸಾಕಿಕೊಂಡರೆ ಚೆನ್ನಾಗಿರುತ್ತದೆ. ಆದರೆ ಈ ಕುರೂಪಿ ಹುಡುಗಿಯನ್ನು ನೋಡಿದವರೆಲ್ಲರೂ ಬೇಡವೆನ್ನುತ್ತಾರೆ. ಮಾರ್ತಾ ಮಾತ್ರ ಬಂದವರನ್ನೆಲ್ಲಾ ಆಸೆಯಿಂದ 'ಅಮ್ಮ ಕಳುಹಿಸಿರುವುದು ನಿಮ್ಮನ್ನಾ' ಎಂದು ಕೇಳುತ್ತಾಳೆ. ಪಾಪ,..."

ಶ್ರೀಮತಿ ಎಲಿಸನ್, ಮುದ್ದಾದ ಹುಡುಗಿಯನ್ನು ಸಾಕ ಬೇಕು, ಎಂಬ ವಿಚಾರವನ್ನೇ ಮರೆತವಳಂತೆ ದೃಢವಾದ ಧ್ವನಿಯಲ್ಲಿ ಹೇಳಿದಳು "ನಾನು ಮಾರ್ತಾಳನ್ನು ಸಾಕುತ್ತೇನೆ. ಪ್ರೀತಿ, ವಿಶ್ವಾಸ ತೋರಿಸಿ, ಆಟಕ್ಕೆ ನಾಲ್ಕು ಸಾಮಾನು ತೆಗೆಸಿ ಕೊಟ್ಟರೆ ಎಲ್ಲಾ ಭ್ರಮೆಯು ಓಡಿ ಹೋಗುತ್ತದೆ, ಆದಷ್ಟು ಬೇಗ ಏರ್ಪಾಟು ಮಾಡಿಬಿಡಿ" ಎಂದು ಹೇಳಿ ಹೊರಟಳು.

ಕೆಲವು ದಿನಗಳನಂತರ, ಸುಂದರವಾದ ಒಂದು ಸಂಜೆ, ಶ್ರೀಮತಿ ಎಲಿಸನ್ ಮಾರ್ತಾಳಿಗಾಗಿ ಆಟದ ಜೂಲು ನಾಯಿ, ನೀಲಿ ಬಣ್ಣದ ಫ್ರಾಕ್, ಹಾಗೂ ಸಿಹಿ ತಿಂಡಿ ತೆಗೆದುಕೊಂಡು, ಬೆಟ್ಟದ ಮೇಲಿದ್ದ ಆಶ್ರಮದ ದಿಕ್ಕಿಗೆ ಕಾರು ಓಡಿಸುತ್ತಿದ್ದಳು.

ಈ ಆಟಿಗೆ, ಹೊಸ ಬಟ್ಟೆ ನೋಡಿದ ತಕ್ಷಣ ಮಾರ್ತಾ ಎಲ್ಲಾ ಮರೆತು ಓಡಿ ಬರುತ್ತಾಳೆ. ನನ್ನ ಪ್ರೀತಿಯ ರಕ್ಷಣೆಯಲ್ಲಿ ಮಾರ್ತಾಳ 'ಭೀತಿಯ ಭೂತದ ಅಮ್ಮ' ಓಡಿ ಹೋಗುತ್ತಾಳೆ. ಎಂದು ಕನಸು ಕಾಣುತ್ತಾ ಆಶ್ರಮದ ಒಳಹೊಕ್ಕಳು.

ಒಂದು ಘಂಟೆಯಾದ ನಂತರ ಅನಾಥಾಶ್ರಮದಿಂದ ಕಾರು ಕೆಳಗೆ ಬರಲಾರಂಭಿಸಿತು. ಶ್ರೀಮಂತ ವಿಧವೆ. ಎಲಿಸನ್ನಳ ಸಂಗಾತಿಯಾಗಿ, ಮಾರ್ತಾ ನೀಲಿ ಫ್ರಾಕ್‌ತೊಟ್ಟು ಜೂಲುನಾಯಿಯನ್ನು ಮಡಿಲಲ್ಲಿ ಇಟ್ಟುಕೊಂಡು ಕುಳಿತಿದ್ದಳು.

ಶ್ರೀಮತಿ ಎಲಿಸನ್, ಸಂತೋಷದಿಂದ ತನ್ನ ಹೊಸ ಮಗಳೊಡನೆ ಮಾತುಕತೆ ನಡೆಸಿದ್ದಳು. ಆದರೆ ಅವಳ ಹೃದಯದಲ್ಲಿ, ಸಾಯಲು ಹೆದರಿದ, ಸ್ವಾರ್ಥಿಯಾದ ಹುಚ್ಚು ಹೆಂಗಸೊಬ್ಬಳು ಈ ಪುಟ್ಟ ಹುಡುಗಿಯ ಮನಸ್ಸಿನ ಮೇಲೆ ಎಂಥಾ ಘೋರ ಪರಿಣಾಮ ಮಾಡಿದ್ದಾಳಲ್ಲ' ಎಂದು ಮರುಗುತ್ತಿದ್ದಳು. ತನ್ನ ಮತ್ತು ಮಾರ್ತಾಳ ಮಧ್ಯೆ ಗೋಡೆಯ ತರಹ ನಿಂತುಕೊಳ್ಳುವ ಮಾರ್ತಾಳ ಅಮ್ಮನ ಮೇಲೆ ಶ್ರೀಮತಿ ಎಲಿಸನ್‌ಗೆ ತೀವ್ರ ದ್ವೇಷ ಹುಟ್ಟಿತು. ಆ ಕ್ಷಣ ಅವಳಿಗೆ ನಂಬಿಕೆ ಇಲ್ಲದಿದ್ದರೂ ತಮ್ಮಿಬ್ಬರ ಜೊತೆ ಕಾರಿನಲ್ಲಿ ಇನ್ಯಾರೋ ಕುಳಿತಿರುವ ಹಾಗೆ ಭಾಸವಾಯಿತು. ಅವಳು ತಕ್ಷಣ ಮಾರ್ತಾಳ ಕಡೆ ತಿರುಗಿದಳು. ಆಗ ಮಾರ್ತಾಳ ಇನ್ನೊಂದು ಪಕ್ಕಕ್ಕೆ ಏನೋ ಒಂದು ಶಕ್ತಿ ಕುಳಿತಿದ್ದು ಅವಳನ್ನು ರಕ್ಷಿಸುತ್ತಿದೆ ಎನ್ನಿಸಿತು.

ಎಲಿಸನ್ ಕೋಪದಿಂದ ತಲೆ ಕೊಡವಿಕೊಂಡಳು. ಏನು ಹುಚ್ಚುವಿಚಾರ, ನಾನು ಇದಕ್ಕೆಲ್ಲಾ ಸೋಲುವುದೇ ಎಂದುಕೊಂಡು, "ನಿನ್ನ ಹೊಸ ಅಮ್ಮನನ್ನು ಪ್ರೀತಿಸುವೆಯಾ ಮಾರ್ತಾ" ಎನ್ನುತ್ತಾ ಅವಳನ್ನು ಒಂದು ಕೈಯಿಂದ ತಬ್ಬಿ ಹಿಡಿದು ಕೇಳಿದಳು.

ಮಾರ್ತಾ ತನ್ನ ಹೊಳೆಯುವ ನೀಲಿ ಕಣ್ಣುಗಳನ್ನು ಅರಳಿಸುತ್ತಾ, ಸಂತೋಷದಿಂದ "ಬಹಳವಾಗಿ ಪ್ರೀತಿಸುತ್ತೇನೆ, ನೀನು ಈಗ ನನ್ನ ನಿಜವಾದ ಅಮ್ಮನಾದಿಯಲ್ಲವಾ, ಆದ್ದರಿಂದ ನಿನಗೆ ಒಂದು ಗುಟ್ಟು ಹೇಳುತ್ತೇನೆ..."

ಶ್ರೀಮತಿ ಎಲಿಸನ್ ಹೆಮ್ಮೆಯಿಂದ ಕೆಳಗೆ ಬಾಗಿದಳು. ಮಾರ್ತಾ ಅವಳ ಕಿವಿಯಲ್ಲಿ, "ಅಮ್ಮ ನನಗೆ ನಿನ್ನೆ ರಾತ್ರಿ ಹೇಳಿದಳು. ನೀವೇ ನನಗೆ ಸರಿಯಾದ ಅಮ್ಮ ಆಗುತ್ತೀರೆಂದು ತುಂಬಾ ಮುಂಚಿನಿಂದ ಅಂದುಕೊಂಡಿದ್ದಳಂತೆ. ನೀವು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೀರಲ್ಲವಾ..."

ಎಲಿಸನ್ ಏಟು ತಿಂದವಳಂತೆ ಹಿಂದೆ ಸರಿದಳು. ಕಿರುಚುವ ಧ್ವನಿಯಲ್ಲಿ "ಹೀಗೆ ಮಾತ

ನಾಡುವುದನ್ನು ಮೊದಲು ನಿಲ್ಲಿಸು" ಎಂದು ಕೂಗಿದಳು. "ನಿನ್ನ ಅಮ್ಮ ನಿನ್ನ ಬಳಿ ಇದ್ದಾಳೆ ಎಂಬುದು ಒಂದು ಭ್ರಮೆ, ಅವಳು ಸತ್ತು ಸ್ವರ್ಗದಲ್ಲಿದ್ದಾಳೆ. ಅವಳನ್ನು ಪ್ರೀತಿಸು, ನೆನೆಸಿ ಕೊಳ್ಳುತ್ತಿರು. ಆದರೆ ನಿನ್ನ ಬಳಿ ಇದ್ದು ನಿನ್ನನ್ನು ಕಾಪಾಡುತ್ತಾಳೆ ಎಂಬ ಕಲ್ಪನೆಯನ್ನು ನೀನು ಬಿಟ್ಟು ಬಿಡಬೇಕು, ನಾನು ನಿನ್ನನ್ನು..."

ಮಾರ್ಥಾ ಜೋರಾಗಿ ಕಿರುಚಿದ್ದರಿಂದ ಎಲಿಸನ್ನಳ ಮಾತು ಅಲ್ಲಿಗೆ ನಿಂತಿತು, ಅವಳು ಹಿಂತಿರುಗಿ ನೋಡಿ ಭಯದಿಂದ ಬಿಳಿಚಿ ಹೋದಳು. ಡ್ರೈವರ್ ಇಲ್ಲದ ಭಾರಿ ಟ್ರಕ್ಕೊಂದು ಬೆಟ್ಟದಿಂದ ಕೆಳಕ್ಕೆ ನುಗ್ಗಿ ಬರುತ್ತಿತ್ತು. ಬೆಟ್ಟ ಕಡಿದು ಮಾಡಿದ ಆ ರಸ್ತೆಯು, ಅತ ಇತ್ತ ತಿರುಗಲಾರದಷ್ಟು ಸಣ್ಣದಿತ್ತು.

ಮಂಜಿನಂತೆ ಕೊರೆಯುತ್ತಿದ್ದ ಕೈಗಳಿಂದ ಎಲಿಸನ್ ಕಾರನ್ನು ಚಲಿಸಲು ಯತ್ನಿಸಿದಾಗ, 'ಇನ್ನು ಏನು ಮಾಡಲು ಸಾಧ್ಯವಿಲ್ಲ' ಎಂಬಂತೆ ಅವಳ ಕಾರು ಚಲಿಸದೆ ನಿಂತು ಬಿಟ್ಟಿತು. ಟ್ರಕ್ ಕಾರಿನ ಬಳಿಗೆ ಧಾವಿಸುತ್ತಿತ್ತು.

ಶ್ರೀಮತಿ ಎಲಿಸನ್, ಅಸಹಾಯಕಳಾಗಿ, "ಡಿಯರ್ ಮಾರ್ಥಾ, ಬಾಗಿಲು ತೆಗೆದು ಹಾರು, ನನಗೆ ಆಗಲ್ಲ..."

ಆದರೆ ಮಾರ್ಥಾ ಅವಳ ಮಾತೇ ಕೇಳದಂತೆ ಕುಳಿತಿದ್ದಳು. ಅವಳ ಮುಖದಲ್ಲಿ ಸಾವಿನ ಸಮಯದಲ್ಲಿರಬೇಕಾದ ಹೆದರಿಕೆಯಿಲ್ಲದ ಅದು ಬಹಳ ಶಾಂತವಾಗಿತ್ತು. ಅವಳು ಬಹಳ ಮೆಲ್ಲಗೆ ಪ್ರಾರ್ಥಿಸುತ್ತಿದ್ದಳು: 'ಅಮ್ಮ, ಅಮ್ಮ ದಯವಿಟ್ಟು ಟ್ರಕ್ಕನ್ನು ನಿಲ್ಲಿಸು, ಇಲ್ಲವಾದರೆ ನಾವು ಸಾಯುತೇವೆ, ಟ್ರಕ್ಕನ್ನು ನಿಲ್ಲಿಸು ಅಮ್ಮ.'

ಶ್ರೀಮತಿ ಎಲಿಸನ್ ಬಾಗಿಲು ತೆಗೆದು, ಮಾರ್ಥಾಳನ್ನು ಹೊರಗೆ ತಳ್ಳಿ, ಅವಳ ಜೀವವನ್ನು ಉಳಿಸಲೆಂದು ಯತ್ನಿಸುತ್ತಿದ್ದಾಗ ಬ್ರೇಕ್ ಹಾಕಿದ ಶಬ್ದ ಕೇಳಿಸಿತು. ತಕ್ಷಣ ಎಲಿಸನ್ ಬೆದರು ಕಣ್ಣಿಂದ ನೋಡಿದಾಗ, ಇವರ ಕಾರಿಗೆ ೫ ಅಡಿ ದೂರದಲ್ಲಿ ಟ್ರಕ್ಕು ಬಂದು ನಿಂತುಕೊಂಡಿತ್ತು.

ಭಯಭೀತನಾದ ಡ್ರೈವರ್, ಪೋಲೀಸ್ ಹಾಗೂ ಅನೇಕ ಜನರು ಒಟ್ಟಾಗಿ ಬೆಟ್ಟದ ಕಡೆಯಿಂದ ಧಾವಿಸಿ ಟ್ರಕ್ಕಿನೆಡೆಗೆ ಬಂದು ನಂತರ ಕಾರಿನ ಬಳಿ ನಡೆದರು.

ಎಲಿಸನ್ ನಿರ್ಜೀವಳಂತೆ ಕಾರಿನಲ್ಲಿ ಒರಗಿದ್ದಳು. ಮಾರ್ಥಾ ಮಾತ್ರ ಏನೋ ನಡೆದೇ ಇಲ್ಲ ಎಂಬಂತೆ ಪ್ರಶಾಂತ ಮುಖದಿಂದ ಕುಳಿತಿದ್ದಳು. ಎಲ್ಲರೂ ಆಶ್ಚರ್ಯದಿಂದ ಅವಳನ್ನೇ ಮತ್ತೆ ಮತ್ತೆ ನೋಡುತ್ತಿದ್ದರು.

ಡ್ರೈವರ್, ಶ್ರೀಮತಿ ಎಲಿಸನ್‌ಳ ಬಳಿ ಬಂದು ಕುಗ್ಗಿದ ಕಂಠದಿಂದ, "ನಾನು ಟ್ರಕ್ಕಿಗೆ ಬ್ರೇಕ್ ಸರಿಯಾಗಿ ಹಾಕಿದ್ದೆ ಅದು ಹೇಗೆ ಕಳಚಿತೋ ಗೊತ್ತಿಲ್ಲ. ಅಬ್ಬಾ! ನಿಮ್ಮ ಅದೃಷ್ಟ ದೊಡ್ಡದು. ಸೀಟಿನ ಮೇಲಿದ್ದ ದೊಡ್ಡ ಡಬ್ಬ ಉರುಳಿ ಗೇರ್ ಶಿಫ್ಟಗೆ ಮೇಲೆ ಬಿದ್ದು ಬ್ರೇಕ್ ರಿವರ್ಸ್ ಆಗಿ ಟ್ರಕ್ ನಿಂತಿದೆ, ದೊಡ್ಡ ಪವಾಡವೆನ್ನ-ಬೇಕು, ಇಲ್ಲದಿದ್ದರೆ ನಿಮ್ಮ ಗತಿ..."

ಶ್ರೀಮತಿ ಎಲಿಸನ್ ಸುಮ್ಮನೆ ತಲೆ ಅಲ್ಲಾಡಿಸಿದಳು ಅವರಲ್ಲಿ ಮಾತಾಡಲು ತ್ರಾಣವೇ ಉಳಿದಿರಲಿಲ. ಒಮ್ಮೆ ಟ್ರಕ್ಕನ್ನೂ ಇನ್ನೊಮ್ಮೆ ತನ್ನ ಬಳಿ ಇದ ಮಾರ್ಥಾಳನ್ನು ದಿಟ್ಟಿಸಿ ನೋಡಿದಳು.

"ನೀನು... ನೀನು ಹುಷಾರಾಗಿದ್ದೀಯಾ ಮಾರ್ಥಾ ?" ಎಂದು ಮೆಲ್ಲಗೆ ನುಡಿದು "ಒಂದು ಕ್ಷಣ ಬಿಟ್ಟು, "ನಡಿ ಡಿಯರ್ ನಾನು, ನೀನು ಮತ್ತು... ನಿನ್ನ ಅಮ್ಮ ಮನೆಗೆ ಹೋಗೋಣ"


✡

ಗಿಡುಗ

ಮೂಲ ಜರ್ಮನ್ : **ಫ್ರಾಂಜ್ ಕಾಫ್ಕಾ**

ಅನುವಾದ : **ಎಚ್. ಕೆ. ಅನಂತರಾವ್**

ಗಿಡುಗವೊಂದು ನನ್ನ ಕಾಲುಗಳನ್ನು ಕಚ್ಚುತ್ತಿತ್ತು. ಆದಾಗಲೇ ನನ್ನ ಪಾದ ರಕ್ಷೆಗಳನ್ನು ಕಡಿದು ತುಂಡು ತುಂಡು ಮಾಡಿತ್ತು. ಈಗ ಕಾಲನ್ನೇ ಕಡಿಯುತ್ತಿತ್ತು. ಮತ್ತೆ ಮತ್ತೆ ಕಾಲುಗಳನ್ನು ಕುಕ್ಕುತ್ತ, ನನ್ನ ಸುತ್ತಲೂ ಅವಿಶ್ರಾಂತವಾಗಿ ತಿರುಗುತ್ತ ತನ್ನ ಕೆಲಸವನ್ನು ಮುಂದುವರಿಸಿತ್ತು. ಒಬ್ಬ ಸದ್ಗೃಹಸ್ಥ, ದಾರಿ ಹಿಡಿದು ಹೋಗುತ್ತಿದ್ದವನು ಇದನ್ನು ನೋಡಿ ನನ್ನನ್ನು ಕೇಳಿದ, ಗಿಡುಗಿನ ಹಿಂಸೆಯನ್ನು ಏಕೆ ಸಹಿಸಿ ಕೊಂಡಿರುವೆಯೆಂದು. "ನಾನು ನಿಸ್ಸಹಾಯನಾಗಿದ್ದೇನೆ" ಎಂದೆ, "ಅದು ನನ್ನ ಮೇಲೆ ದಾಳಿ ಮಾಡಿದಾಗ ಓಡಿಸಲು ಪ್ರಯತ್ನಿಸಿದೆ. ಆದರೆ ಈ ಗಿಡುಗಗಳು ಬಹಳ ಶಕ್ತಿಯುತವಾಗಿರುತ್ತವೆ; ಇದು ನನ್ನ ಮುಖಕ್ಕೆ ದಾಳಿಮಾಡಲು ತೊಡಗಿತು; ಕಾಲುಗಳನ್ನು ಬಿಟ್ಟುಕೊಡುವುದೇ ಲೇಸೆಂದುಕೊಂಡೆ." "ಹೀಗೆ ಹಿಂಸೆಗೊಳಗಾಗುತ್ತಿರುವುದು ವಿಚಿತ್ರವಾಗಿದೆ," ಆತನೆಂದ, "ಒಂದೇ ಒಂದು ಗುಂಡು ಸಾಕು, ಗಿಡುಗಿನ ಸಮಾಪ್ತಿಗೆ." "ಹೌದೆ?" ನಾನು ಕೇಳಿದೆ, "ನೀನು ಹಾಗೆ ಮಾಡಬಲ್ಲೆಯಾ?" "ಖಂಡಿತವಾಗಿ" ಸದ್ಗೃಹಸ್ಥನೆಂದ, "ನಾನು ಮನೆಗೆ ಹೋಗಿ ಬಂದೂಕು ತರಬೇಕು ಅಷ್ಟೆ. ಅಲ್ಲಿಯವರೆಗೆ ತಡೆಯಬಲ್ಲೆಯಾ?" "ಅದೇನೊ ಹೇಳಲಾರೆ." ಎಂದೆ. ಒಂದು ಕ್ಷಣ ನೋವು ತಡೆದುಕೊಂಡು ಹೇಳಿದೆ, "ಏನೇ ಆಗಲಿ, ದಯವಿಟ್ಟು ಪ್ರಯತ್ನಿಸಿ." "ಆಗಲಿ" ಎಂದ ಸದ್ಗೃಹಸ್ಥ. "ಬಹಳ ಬೇಗನೆ ಬಂದುಬಿಡುತ್ತೇನೆ." ಸಂಭಾಷಣೆಯನ್ನು ಗಿಡುಗ ಶಾಂತಿಯಿಂದ ಕೇಳುತ್ತಿತ್ತು-ತನ್ನ ಕಣ್ಣುಗಳನ್ನು ನಮ್ಮಿಬ್ಬರೆಡೆಗೂ ತಿರುಗಿಸುತ್ತ. ತಕ್ಷಣವೇ ನನಗೆ ತಿಳಿಯಿತು ನಮ್ಮ ಸಂಭಾಷಣೆ ಅದಕ್ಕೆ ಅರ್ಥವಾಗಿದೆ ಎಂದು. ರೆಕ್ಕೆಗಳನ್ನು ಬಿಡಿಸಿ ಒಮ್ಮೆ ಹಿಂದಕ್ಕೆ ಬಾಗಿ ಭೀಕರವಾಗಿ ನನ್ನತ್ತ ದಾಳಿಮಾಡಿತು. ನೆಲಕ್ಕೆ ಬಿದ್ದ ನಾನು ಮುಕ್ತನಾಗಿದ್ದೆ. ಹಿಗ್ಗಿ ತಗ್ಗುಗಳನ್ನೆಲ್ಲ ತುಂಬಿ ಎಲ್ಲೆಡೆಗೂ ಹರಿಯುತ್ತಿದ್ದ ನನ್ನ ರಕ್ತದಲ್ಲಿ ಮುಳುಗಿಹೋಗಿತ್ತು ಗಿಡುಗ.



ಡಾ. ಎಂ. ದಯಾಕರ

ನಿಮ್ಮ ನಾಸಿಕವೊಂದು ಅದ್ಭುತ ಇಂದ್ರಿಯ. ಅದರ ಒಳಹೊಕ್ಕು ನೋಡಬಯಸುತ್ತೀರಾ?

ಸಾಹಿತ್ಯದಲ್ಲಿ ಸುವಾಸನೆಗೆ ಸ್ಥಾನವಿದೆ. ರಸವತ್ತಾದ ಕಾವ್ಯಭಾಗಗಳ ಸಂಗ್ರಹಕ್ಕೆ ಕಾವ್ಯ ಅಥವಾ ನಾಟ್ಯ ಸೌರಭ ಎನ್ನುವುದುಂಟು. ಪ್ರತಿ ತಿಂಗಳೂ 'ಕಸ್ತೂರಿ' ತನ್ನ ಪರಿಮಳವನ್ನು ದೇಶಾದ್ಯಂತ ಹರಡುತ್ತದೆ. ಮತ್ಸ್ಯಗಂಧಿ ಎಂಬ ಬೆಸ್ತರ ಹುಡುಗಿ ಸೂಸುತ್ತಿದ್ದ ಸುವಾಸನೆಯನ್ನು ಹಿಡಿದು ಶಂತನು ಅವಳನ್ನು ಹುಡುಕಿಕೊಂಡು ಹೋದುದಾಗಿಯೂ ಗಂಧಮಾದನ ಪರ್ವತದಿಂದ ಬೀಸುತ್ತಿದ್ದ ಗಾಳಿಯಲ್ಲಿ ಭೀಮ ಸೌಗಂಧಿಕಾಪುಷ್ಪವನ್ನು ಹುಡುಕಿಕೊಂಡು ಹೋದುದಾಗಿಯೂ ಮಹಾಭಾರತದಲ್ಲಿ ಹೇಳಿದೆ.

ವಾಸನೆ ಎಂಬುದಕ್ಕೆ ಇಚ್ಛೆ, ಕಾಮನೆ, ಕಲ್ಪನೆ, ಮನೆ, ಪೆಟ್ಟಿಗೆ, ಅಜ್ಞಾನ ಎಂಬ ಅರ್ಥಗಳಿವೆ. ಈಗಿನ ವಿಜ್ಞಾನದಲ್ಲಿ ಮೂಗಿಗೆ ತಿಳಿಯುವ ವಾಸನೆ ವಿಚಾರದಲ್ಲಿ ಅಜ್ಞಾನವೇ ಹೆಚ್ಚು. ಏಕೆಂದರೆ ರುಚಿಯಂತೆ ವಾಸನೆಯೂ ಮನೋಗ್ರಾಹ್ಯ. ಕಲ್ಪನೆ ಮತ್ತು ಮೂಗಿನ ಮೇಲೆ ನೇರ ಪ್ರಯೋಗಗಳನ್ನು ನಡೆಸುವುದು ದುಸ್ಸಾಧ್ಯ. ಇಡೀ ಮೂಗು ವಾಸನೆಯ ಅಂಗವಲ್ಲ. ಅದರ ವಾಸನೆಯ ಭಾಗ ಒಳಗಡೆ ಮೇಲ್ಭಾಗದಲ್ಲಿ ಅತಿ ಇಕ್ಕಟ್ಟಾದ ಎಡ-ಬಲ ಸಂದುಗಳಲ್ಲಿ ಸುಮಾರು ಒಂದು ನಾಣ್ಯದ ಅಗಲದಷ್ಟು (೨.೫ ಚ. ಸೆ.ಮೀ.) ಇರುವ ಹಳದಿ ಲೋಳೆ ಪೊರೆ. ಮೂಗಿನ ಬಹುಭಾಗದಲ್ಲಿ ಕೆಂಪು ಲೋಳೆಪೊರೆಯಿದ್ದು ಇದು ಶ್ವಾಸಮಾರ್ಗದಲ್ಲಿದೆ. ಇದರಿಂದ ವಾಸನೆ ತಿಳಿಯದೆ ಉರಿ, ನೋವು ತಿಳಿಯುತ್ತದೆ. ಮೂಗಿಗೆ ಗಂಧಜ್ಞಾ, ಗಂಧವಹಾ, ಗಂಧನಾಳಿಕಾ,

ಘ್ರಾಣ ಇತ್ಯಾದಿ ಪರ್ಯಾಯ ನಾಮಗಳಿವೆ. ಗಂಧ್ ಎಂದರೆ ಗಾಯಮಾಡು, ಯಾಚಿಸು, ಅಲಂಕರಿಸು, ಚಲಿಸು ಎಂಬ ಅರ್ಥಗಳಿವೆ. ಗಂಧ ಎಂದರೆ ವಾಸನೆ, ಗಂಧಕ, ಗಂಧದ ಪುಡಿ, ಸಂಬಂಧ, ಗರ್ವ ಎಂಬ ಅರ್ಥಗಳಿವೆ. ಗಂಧನ ಎಂದರೆ ಪಟ್ಟು ಹಿಡಿಯುವುದು, ಸ್ಪಷ್ಟೀಕರಣ, ಸೂಚನೆ, ಗಾಸಿಪಡಿಸುವಿಕೆ, ಕೊಲ್ಲುವಿಕೆ ಎಂಬ ಅರ್ಥಗಳಿವೆ. ಈ ಅರ್ಥಗಳಿಗೂ ಮೂಗು, ವಾಸನೆಗಳಿಗೂ ಏನು ಸಂಬಂಧವಿರಬಹುದೋ?


ಘ್ರಾಣೇಂದ್ರಿಯ ಪಂಚೇಂದ್ರಿಯಗಳಲ್ಲೊಂದು. ರುಚಿಯಂತೆ ವಾಸನೆಯೂ ರಾಸಾಯನಿಕ ಅರಿವು. ಹತ್ತು ಕೋಟಿ ವರ್ಷಗಳ ಹಿಂದೆ ಸೃಷ್ಟಿಯಾದ ಪ್ರಾಣಿಗಳಲ್ಲೂ ಈ ಅರಿವು ಇದೆ. ಇತರ ಇಂದ್ರಿಯಗಳಿಗಿಂತ ರಾಸಾಯನಿಕ ಅರಿವು ಮೊದಲು ಹುಟ್ಟಿ ಪ್ರಾಣಿಗೆ ತನ್ನ ಸುತ್ತಲಿನ ಪರಿಸರವನ್ನು ಕಂಡುಕೊಳ್ಳಲು ಅನುವಾಯಿತು. ರೆಕ್ಕೆ ಹುಳಗಳಲ್ಲಿ ಸ್ಪರ್ಶನೇಂದ್ರಿಯದಷ್ಟೇ ಘ್ರಾಣೇಂದ್ರಿಯವೂ ಮುಖ್ಯವಾದುದು. ಇದರಿಂದ ಅವಕ್ಕೆ ಆಹಾರ ಹಾಗೂ ಪೀಳಿಗೆ ಮುಂದುವರಿಕೆಗೆ ಹೆಣ್ಣು ಅಥವಾ ಗಂಡನ್ನು ಹುಡುಕಲು, ಅಪಾಯದಿಂದ ಪಾರಾಗಲು ಉಪಯೋಗವಾಗುತ್ತದೆ. ಆತ್ಮರಕ್ಷಣೆ ಹಾಗೂ ವಂಶದ ಅವಿಚ್ಛಿನ್ನತೆಗೆ ರಾಸಾಯನಿಕ ಅರಿವು ಅವಶ್ಯ.

ಉಸಿರಾಡದ ಜಲಚರಿಗಳಲ್ಲಿ ವಾಸನೆ–ರುಚಿಗಳಿಗೆ ವ್ಯತ್ಯಾಸವಿಲ್ಲದೆ ನೀರಿನಲ್ಲಿರುವ ರಾಸಾಯನಿಕ ವಸ್ತುಗಳು ನೇರವಾಗಿ ನರಾಂತ್ಯಗಳಿಗೆ ತಗಲಿದಾಗ ರಾಸಾಯನಿಕ ಅರಿವು ಉಂಟಾಗುತ್ತದೆ. ಉಸಿರಾಡಿಸುವ ಸ್ಥಳ ಚರಿಗಳಲ್ಲಿ ವಾಸನೆ–ರುಚಿಗಳ ಅಂತ್ಯಾಂಗಗಳು ಬೇರ್ಪಟ್ಟವು. ಸ್ತನಿಗಳಲ್ಲಿ ಮೂಗು–ಬಾಯಿ ಪ್ರತ್ಯೇಕಗೊಂಡು ರುಚಿ ವಾಸನೆ ಅಂಗಗಳು ಪೂರ್ಣ ಅಗಲಿ ದೂರ ವಿಚಾರಗ್ರಹಣ ಹೆಚ್ಚು ಸಾಧ್ಯವಾಯಿತು.

ರುಚಿಗಿಂತ ವಾಸನೆಯ ಅರಿವು ಹೆಚ್ಚು ಸೂಕ್ಷ್ಮ. ರುಚಿಗೆ ಬೇಕಾದ ಮದ್ಯದ ಪ್ರಮಾಣದಲ್ಲಿ ೧/೨೫೦೦೦ ವಾಸನೆಗೆ ಸಾಕು. ರುಚಿಯಿಂದ ಬಾಯಲ್ಲಿರುವ ವಸ್ತುವಿನ ಅರಿವು ಮಾತ್ರ ಉಂಟಾಗುತ್ತದೆ. ವಾಸನೆಯಿಂದ ದೂರ ಜ್ಞಾನವೂ ಉಂಟಾಗುತ್ತದೆ. ದೂರದಿಂದ ಪೆಟ್ರೋಲ್ ವಾಸನೆ ಬಂದಾಗ ಆಗಬಹುದಾದ ಅನಾಹುತವನ್ನು ತಪ್ಪಿಸಬಹುದು. ಕೊಲೆ ಮುಂತಾದ ಅಪರಾಧಗಳ ತಪಾಸಣೆಯಲ್ಲಿ ವಾಸನೆ ಸಹಾಯಕರ. ರಾಸಾಯನಿಕ ಪ್ರಯೋಗಶಾಲೆಗಳಲ್ಲಿ ಜಾಣ ವಿದ್ಯಾರ್ಥಿಗಳು ವಸ್ತುಗಳನ್ನು ಮೊದಲು ವಾಸನೆಯಿಂದಲೇ ಗುರುತು ಹಿಡಿಯುತ್ತಾರೆ.

ಎಲ್ಲ ಸ್ತನಿಗಳಲ್ಲೂ ವಾಸನಾ ಶಕ್ತಿ ಒಂದೇ ಸಮನಾಗಿಲ್ಲ. ನರ ಮತ್ತು ವಾನರಗಳು, ದೃಷ್ಟಿ ಮತ್ತು ಶ್ರವಣ ಶಕ್ತಿಗಳು ಹೆಚ್ಚು ಬೆಳೆದುದರಿಂದ, ಚಿಕ್ಕ ಮೂಗಿನವು (ಲಘುಘ್ರಾಣಿಗಳು) ಆದವು. ಪಕ್ಷಿಗಳು ಇವಕ್ಕೆ ಸಮ. ಡಾಲ್ಫಿನ್ ಎಂಬ ಜಲಚರಸ್ತನಿಗಳಲ್ಲಿ ಘ್ರಾಣ ಶಕ್ತಿಯೇ ಇಲ್ಲ; ಇವು ನಿರ್ಘ್ರಾಣಿಗಳು. ಉದ್ದ ಮೂತಿಯ ಮಿಕ್ಕ ಸ್ತನಿಗಳು ದೊಡ್ಡ ಮೂಗಿನವು (ಮಹಾಘ್ರಾಣಿಗಳು). ಇವು ತಮ್ಮ ಆಹಾರ ಶತ್ರು ಅಥವಾ ಲೈಂಗಿಕ ಸಂಗಾತಿಯ ಇರವನ್ನು ಬಹುದೂರದಿಂದಲೇ ಅರಿಯಬಲ್ಲವು. ಕೊಲೆಗಾರರನ್ನು ಹಿಡಿಯುವುದರಲ್ಲಿ ಪೋಲೀಸ್ ನಾಯಿಗಳ ಉಪಯುಕ್ತತೆ ನಮಗೆ ಗೊತ್ತು. ನರನಿಗಿಂತ ನಾಯಿ ಹೆಚ್ಚು ಘ್ರಾಣಶಕ್ತಿಯನ್ನು ಹೊಂದಿದ್ದರೂ ಇಬ್ಬರಲ್ಲೂ ವಾಸನೆ ಒಂದೇ ರೀತಿಯದು ಎಂದು ಹೇಳಲಾಗದು. ನರನಿಗೆ ಅಸಹ್ಯವಾದುದು ನಾಯಿಗೆ ಅಲ್ಲದಿರಬಹುದು. ನಾಯಿಗಾಗಲಿ ಇತರ ತೀಕ್ಷ್ಣ ಘ್ರಾಣಿಗಾಗಲಿ ಸುಗಂಧಗಳಿಂದ ಮನುಷ್ಯನಿಗಾಗುವಷ್ಟು ಆಹ್ಲಾದ ಆಗುವಂತೆ ಕಾಣುವುದಿಲ್ಲ. ಮನುಷ್ಯರಲ್ಲೂ ಭಿನ್ನತೆಯಿದೆ.

ಬಹುಕಾಲದ ಮೃದು ಆಹಾರ ಸೇವನೆಯಿಂದ ಮನುಷ್ಯನಲ್ಲಿ ದವಡೆಗಳು ಚಿಕ್ಕವಾಗಿ ಅವನ ಮೂತಿ ಚಪ್ಪಟೆಯಾಗಿದೆ. ಅವನ ದವಡೆಗಳಷ್ಟು ಅವನ ಮೂಗು ಚಿಕ್ಕದಾಗದುದರಿಂದ ಅವನ ಮುಖದ ಮಧ್ಯೆ ಅವನ ಮೂಗು ಎದ್ದು ಕಾಣುತ್ತದೆ. ಆದರೂ ಅವನು ಲಘು ಘ್ರಾಣಿಯೇ. ಮುಖದ ಮುಂದೆ ಚಾಚಿರುವ ಭಾಗಕ್ಕಿಂತ ಮೂಗು ದೊಡ್ಡದಾಗಿ ಗಂಟಲವರೆಗೆ ೫ ಸೆಂಟಿಮೀಟರಿನಷ್ಟು ವಿಸ್ತರಿಸಿದೆ. ಮೇಲಕ್ಕೂ ಕೆಳಕ್ಕೂ ಎತ್ತರವೂ ಇಷ್ಟೇ ಇದೆ. ಮಧ್ಯ ತಡಕೆಯಿಂದ ಕುಹರದ ಎಡಬಲ ಭಾಗಗಳು ಬೇರೆಯಾಗಿವೆ. ಪ್ರತಿ ಪಕ್ಕದ ಮೇಲುಗಡೆ ಎರಡು ಮಿಲಿ ಮೀಟರು ಅಗಲ ಮೂರು ಸೆಂಟಿಮೀಟರು ಉದ್ದವಿರುವ ಇಕ್ಕಟ್ಟು ಸಂದಿಯಲ್ಲಿ ವಾಸನೆಯ ಹಳದಿ ಲೋಳೆ ಪೊರೆಯಿದೆ. ಕೆಳಭಾಗದಲ್ಲಿ ಪ್ರತಿ ಪಕ ಕುಹರದ ಅಗಲ ಹತ್ತು ಮಿಲಿ ಮೀಟರು ಪಕ್ಕಗಳಿಂದ



ರುವ ಮೂರು ಸುರಳಿ ಮಡಿಕೆ(ಶಂಖ)ಗಳಿಂದ ಕುಹರ ತೊಡಕಾಗಿ ಒಳಹೋಗುವ ವಾಯು ಶೋಧಿಸಲ್ಪಟ್ಟು ಬಿಸಿಯಾಗಿ ಗಂಟಲ ಮೂಲಕ ಶ್ವಾಸಕೋಶಗಳನ್ನು ಸೇರುತ್ತದೆ. ಕುಹರದ ಜಟಿಲತೆಯಿಂದ ಸಾಧಾರಣ ಉಸಿರಾಟದಲ್ಲಿ ವಾಸನೆ ಹೆಚ್ಚು ತಿಳಿಯುವುದಿಲ್ಲ. ಮೂಸಿ ನೋಡು (ಆಘ್ರಾಣಿಸು)ವಾಗ ಸ್ವಲ್ಪ ವಾಯು ಸುಂಟರಾಗಿ ವಾಸನೆ ಪೊರೆಯನ್ನು ತಲಪುತ್ತದೆ.

ಘ್ರಾಣಾಂಗ ಚೋದನೆ

ಎಲ್ಲ ರಾಸಾಯನಿಕ ವಸ್ತುಗಳು ಘ್ರಾಣಾಂಗ ಚೋದಕಗಳಲ್ಲ. ಅವು ಚಂಚಲವಾಗಿ, ನೀರಲ್ಲಿ ಹಾಗೂ ಲೈಪಿಡ್ ಎಂಬ ಕೊಬ್ಬಿನಲ್ಲಿ ಕರಗುವವಾಗಿರಬೇಕು. ವಾಸನೆ (ಚಂಚಲ) ತೈಲಗಳು ಆರಿ ಅವುಗಳ ಕಣಗಳು ವಾಯುವಿನಲ್ಲಿ ತೇಲುತ್ತ ಮೂಗನ್ನು ಸೇರಬಲ್ಲವು. ವಾಯುವಾಗುವ ವಸ್ತುಗಳು ಮೂಗಿನ ದ್ರವದಲ್ಲಿ ಕರಗಬೇಕು. ಘ್ರಾಣ ಕಣಗಳ ರೋಮಗಳು ಮುಖ್ಯವಾಗಿ ಲೈಪಿಡ್‌ನಿಂದಾದುದರಿಂದ ವಾಸನಾ ವಸ್ತು ಕೊಂಚ ಮಟ್ಟಿಗಾದರೂ ಲೈಪಿಡ್‌ನಲ್ಲಿ ಕರಗುವಂತಿರಬೇಕು. ಅಂಥ ವಸ್ತುಗಳ ಕಣಗಳು ಮಾತ್ರ ಘ್ರಾಣಾಂಗ ಚೋದಕಗಳು ರೋಹಿತದಲ್ಲಿ (Spectrum) ಅತಿರಕ್ತ (ಇನ್‌ಫ್ರಾರೆಡ್) ಕಿರಣಗಳನ್ನು ಹೀರುವವು ವಾಸನೆಯ ವಸ್ತುಗಳೆಂದು ಘ್ರಾರಡೆ ಕಂಡುಹಿಡಿದ. ಅಜೈವಿಕ ವಸ್ತುಗಳಿಗಿಂತ ಜೈವಿಕ ವಸ್ತುಗಳು ಹೆಚ್ಚು ಸಂಖ್ಯೆಯಲ್ಲಿ ವಾಸನಾ ವಸ್ತುಗಳು. ರಾಸಾಯನಿಕ ಮೂಲ ಧಾತುಗಳಲ್ಲಿ ಫ್ಲೋರಿನ್, ಒಳಕ್ಕೆ ಚಾಚಿ ಕ್ಲೋರಿನ್, ಬ್ರೋಮಿನ್, ಅಯೋಡಿನ್, ಓಜೋನ್, ರಂಜಕ ಮತ್ತು ಆರ್ಸೆನಿಕ್‌ಗಳು ಮಾತ್ರ ವಾಸನೆಯುಳ್ಳವು. ಈ ತೈಲ್, ಪ್ರೊಪೈಲ್, ಬ್ಯುಟೈಲ್ ಮತ್ತು ಅಮೈಲ್ ಅಸಿಟೇಟ್‌ಗಳಲ್ಲಿ ಕ್ರಮೇಣ ಅಸಿಟೇಟ್ ವಾಸನೆ ಅನಾನಸ್ ವಾಸನೆಯಾಗುತ್ತದೆ. ವಾಯುವಿನಲ್ಲಿ ಒಂದು ವಸ್ತುವಿನ ಅಂಶ ಹೆಚ್ಚಿದಷ್ಟು ನಾತವಿಲ್ಲದುದು ಹೆಚ್ಚು ಹೆಚ್ಚು ದುರ್ನಾತವುಳ್ಳದ್ದಾಗಬಹುದು.

ವಾಸನಾ ರಾಸಾಯನಿಕ ಕಣಗಳು ಗೋಳಾಕಾರದಲ್ಲಿದ್ದರೆ ಕರ್ಪೂರದ ವಾಸನೆ, ಅಂಡಾಕಾರದಲ್ಲಿದ್ದರೆ ಕಸ್ತೂರಿ, ಬಾಲವಿರುವ ವೃತ್ತಗಳಂತಿದ್ದರೆ ಹೂ ವಾಸನೆ, ಬೆಣ್ಣೆಯಂತಿದ್ದರೆ ಪುದಿನ, ಗುಂಡು ತಂತಿಯಂತಿದ್ದರೆ ಕ್ಲೊರೋಫಾರ್ಮ್ ವಾಸನೆಯಿರುತ್ತದೆ. ಈ ಕಣಗಳಿಗೆ ತಕ್ಕ ಆಕಾರಗಳಲ್ಲಿರುವ ಘ್ರಾಣಗ್ರಾಹಕಗಳ ಗುಳಿಗಳಲ್ಲಿ ಅವು ಕೂತಾಗ ತಕ್ಕವಾಸನೆಯುಂಟಾಗುತ್ತದೆಂದು ಹೇಳಲಾಗಿದೆ.

ರುಚಿಯಲ್ಲಿ ಸಿಹಿ ಕಹಿ ಇತ್ಯಾದಿಗಳಿರುವಂತೆ ವಾಸನೆಯಲ್ಲೂ ಮೂಲವಾಸನೆಗಳು ಇರುವುದನ್ನು ಕಂಡುಹಿಡಿಯುವುದು ಕಷ್ಟ. ಒಳ್ಳೆಯ ವಾಸನೆ ಕೆಟ್ಟ ವಾಸನೆಯೆಂದು ಸ್ಥೂಲವಾಗಿ ಎರಡು ಬಗೆಯಿವೆಯೆನ್ನಬಹುದು. ಆದರೆ ಮನುಷ್ಯನು ಸಾವಿರಾರು ವಸ್ತುಗಳನ್ನು ವಾಸನೆಯಿಂದ ಕಂಡುಹಿಡಿಯಬಲ್ಲ. ಹದಿನೆಂಟನೇ ಶತಕದಲ್ಲಿ ಲಿನ್ನೆಯುಸನು ಮೊದಲಿಗೆ ಮೂಲ ವಾಸನೆಗಳ ಪಟ್ಟಿ ಮಾಡಿದ. ಇದನ್ನು ಪರಿಷ್ಕರಿಸಿ ೧೯೨೮ರಲ್ಲಿ ಒಂಬತ್ತು ವಾಸನೆಗಳ ಪಟ್ಟಿಯನ್ನು ಜ್ವಾರ್ಡಿಮೆಕರ್‌ಮಾಡಿದ.ಇದರಿಂದ ಇದನ್ನು ತೆಗೆದುಕೊಂಡು ಏಳು ಮೂಲ ವಾಸನೆಗಳ ಪಟ್ಟಿಯನ್ನು ೧೯೫೨ರಲ್ಲಿ ಆಮೋರ್ ಮಾಡಿದ. (೧) ಕರ್ಪೂರ, (೨) ಕಸ್ತೂರಿ, (೩) ಪುಷ್ಪ, (೪) ಪುದಿನ, (೫) ಈಥೈಲ್, (೬) ಘಾಟು (೭) ಮಲ. ಒಂದೇ ವಾಸನೆಯುಳ್ಳ ವಿವಿಧ ರಾಸಾಯನಿಕ ಗುಣಗಳ ರಚನೆಯಲ್ಲಿ ಹೆಚ್ಚು ಹೋಲಿಕೆಯಿರುವುದರಿಂದ ವಾಸನೆಯ ರಾಸಾಯನಿಕ ವಾದಕ್ಕಿಂತ ಭೌತವಾದ ಹೆಚ್ಚು ಸಮಂಜಸವಾಗಿ ತೋರುತ್ತದೆ. ಕರ್ಪೂರ, ಕಸ್ತೂರಿ, ಹೂ, ಪುದಿನ, ವಾಸನಾ ಕಣಗಳನ್ನು ತಕ್ಕ ಪ್ರಮಾಣದಲ್ಲಿ ಸೇರಿಸಿದಾಗ ಗಂಧದೆಣ್ಣೆಯ ವಾಸನೆಯುಂಟಾಗುತ್ತದೆ. ಈ ರೀತಿಯ ನಿದರ್ಶನಗಳಿಂದ ನಾವು ಅನುಭವಿಸುವ ಸಾವಿರಾರು ವಾಸನೆಗಳು ವಿವಿಧ

ಪ್ರಮಾಣಗಳಲ್ಲಿ ಏಳು ಮೂಲ ವಾಸನೆಗಳ ಸಂಮಿಶ್ರಣಗಳೆಂಬ ವಾದವಿದೆ.

ಟೀ ಫ್ಯಾಕ್ಟರಿಗಳಲ್ಲಿ ಹದವಾದ ಟೀ ವಾಸನೆಯನ್ನು ನಿಷ್ಕರ್ಷಿಸುವ ವಾಸನಾಪ್ರವೀಣರನ್ನು ನೇಮಿಸಿಕೊಳ್ಳುತ್ತಾರೆ. ಅಡುಗೆಯಲ್ಲಿ ಹುರಿಯುವಾಗ, ಕರಿಯುವಾಗ ಅಥವಾ ಬೇಯಿಸುವಾಗ ಘಮಘಮಿಸುವ ಘ್ರಾಣಗಳು ಮೂಗಿಗೆ ತಗಲಿದಲ್ಲಿ ಅಡುಗೆ ಪದಾರ್ಥವೇನಿರಬಹುದೆಂಬುದು ಗೊತ್ತಾಗಿ ಬಾಯಲ್ಲಿ ನೀರೂ ಬರಬಹುದು. ತಿನ್ನುವಾಗ ರುಚಿಯೊಡನೆ ವಾಸನೆ-ಯೂ ಕೂಡಿದಾಗ ಹೆಚ್ಚು ತೃಪ್ತಿಯಾಗುತ್ತದೆ. ಮೂಗು ಕಟ್ಟಿದಾಗ ಈ ತೃಪ್ತಿ ಪೂರ್ಣವಾಗಿರುವುದಿಲ್ಲ.

ವಾಸನಾ ಶಕ್ತಿ ಎಲ್ಲರಲ್ಲೂ ಒಂದೇ ಅಲ್ಲ. ಒಂದೇ ವ್ಯಕ್ತಿಯಲ್ಲೂ ಸದಾ ಒಂದೇ ಅಲ್ಲ; ಗಾಳಿಯ ಒತ್ತಡ ತೇವ ಮತ್ತು ಶಾಖಗಳಿಗೆ ಅನುಸಾರವಾಗಿ ವ್ಯತ್ಯಾಸ ಹೊಂದುತ್ತದೆ. ನೆಗಡಿಯಾದಾಗ ಮೂಗಿನ ಮೇಲ್ಭಾಗದ ಇಕ್ಕಟ್ಟು ಸಂದುಗಳು ಮುಚ್ಚಿಕೊಳ್ಳುವುದರಿಂದ ವಾಸನಾಶಕ್ತಿ ಕಡಿಮೆ ಅಥವಾ ಇಲ್ಲವಾಗಬಹುದು. ವಾಸಿಯಾಗದ ನೆಗಡಿ ಇತ್ಯಾದಿ ರೋಗಗಳಿಂದ ಅಥವಾ ಗಾಯದಿಂದ ವಾಸನೆ ಪೊರೆನ ಸಿಸಿ ಘ್ರಾಣಶಕ್ತಿ ಪೂರ್ಣನಾಶ ಹೊಂದಬಹುದು. ಉಪಮೂತ್ರ ಪಿಂಡ (ಅಡ್ರಿನಲ್) ಗಳ ಅಪೂರ್ಣತೆಯಿಂದ ರುಚಿವಾಸನೆ ಶಕ್ತಿಗಳು ಹೆಚ್ಚುತ್ತವೆ. ವೃಷಣ ಅಥವಾ ಸ್ತ್ರೀ ಬೀಜಗಳು ಕೃಶವಾಗುವದರಿಂದಲೂ ಎ ಜೀವಸತ್ವದ ಕೊರತೆಯಿಂದಲೂ ವಾಸನಾಶಕ್ತಿಯು ಕುಗ್ಗುತ್ತದೆ.

೧೯೪೧ರಲ್ಲಿ ನಡೆದ ೬೮೬ ಜನರ ಅಧ್ಯಯನದಲ್ಲಿ ಅಮೋನಿಯ, ಮದ್ಯ, ಕರ್ಪೂರ, ಕಾಡಿ(ವಿನಿಗರ್), ಕ್ಲೋರಿನ್ (ಸೋಡಿಯಂಹೈಪೋಕ್ಲೋರೈಟ್) ಗಳ ವಾಸನೆ ೬೦% ರಷ್ಟು ಜನರಿಗೆ ಗೊತ್ತಾಯಿತು, ೩೦%ರಷ್ಟು ಜನರಿಗೆ ಖಚಿತವಾಗಲಿಲ್ಲ, ೧೦% ರಷ್ಟು ಜನರಿಗೆ ಯಾವ ವಾಸನೆಯೂ ತಿಳಿಯಲಿಲ್ಲ. ೧೯೫೪ರಲ್ಲಿ ಆಸ್ಟ್ರೇಲಿಯದಲ್ಲಿ ನಡೆದ ಅಧ್ಯಯನದಲ್ಲಿ ೨೦% ಪೊಟೇಸಿಯಂ ಸಯನೈಡ್ ದ್ರಾವಕದ ವಾಸನೆ (ಬಾದಾಮಿ ವಾಸನೆ) ೨೦% ಗಂಡಸರಿಗೂ ೫%ಕ್ಕಿಂತ ಕಡಮೆ ಹೆಂಗಸರಿಗೂ ಗೊತ್ತಾಗಲಿಲ್ಲ.



೧. ಮಹಾಮಸ್ತಿಷ್ಕ, ೨. ವಾಸನೆಕೇಂದ್ರ, ೩. ಲಘುಮಸ್ತಿಷ್ಕ, ೪. ಮಿದುಳುಕಾಂಡ, ೫. ಗಂಟಲು, ೬. ಮಿದುಳುಬಳ್ಳಿ, ೭. ಅನ್ನನಾಳ, ೮. ಶ್ವಾಸನಾಳ, ೯. ನಾಲಿಗೆ, ೧೦. ಅಂಗುಳು, ೧೧. ಉಸಿರು ೧೨, ಕೆಳ ಶಂಖ, ೧೩. ವಾಸನೆಪೊರೆ ೧೪. ವಾಸನೆ ನರ, ೧೫. ವಾಸನೆಮೊಗ್ಗು, ೧೬. ವಾಸನೆಕಾಂಡ


ಇವರಿಗೆ ಇತರ ವಾಸನೆಗಳು ತಿಳಿಯುತ್ತಿದ್ದವು. ೧೯೬೭ ರಲ್ಲಿ ನಡೆದ ಅಧ್ಯಯನವದಲ್ಲಿ ಕೆಲವರಿಗೆ ರುಚಿಯಲ್ಲಿ ಕುಂದಿಲ್ಲದಿದ್ದರೂ ಅಪೋನಿಯ ಮುಂತಾದವುಗಳ ಘಾಟು ತಿಳಿಯದ ಘ್ರಾಣದ ನ್ಯೂನತೆಯಿದ್ದಿತು.

ಕೆಲವು ವಾಸನೆಗಳು ಹಸಿವನ್ನು ಹೆಚ್ಚಿಸುವವು. ಕೆಲವು ಕಾಮ ಪ್ರಚೋದಕಗಳು. ಕೆಲವು ವಮನ ಕಾರಿಗಳು. ಕೆಟ್ಟ ವಾಸನೆಯಿಂದ ಬಾಯಲ್ಲಿ ನೀರೊಡೆದು, ಹೊಟ್ಟೆ ತೊಳಸಿ, ಓಕರಿಕೆ ಹುಟ್ಟಿ ವಾಂತಿಯೂ ಆಗಬಹುದು. ಇದರಿಂದ ಮೂಗಿಗೂ ಒಳ ಅಂಗಗಳಿಗೂ ನರಮಂಡಲದ ಮೂಲಕ ಸಂಬಂಧವಿರುವುದು ತಿಳಿಯುತ್ತದೆ.

ವಾಸನೆಯಿರುವ ಕೋಣೆಯನ್ನು ಹೊಕ್ಕರೆ ಮೊದಲ ಕ್ಷಣದಲ್ಲಿರುವ ವಾಸನೆಯ ತೀವ್ರತೆ ಮರುಕ್ಷಣದಲ್ಲಿರುವುದಿಲ್ಲ. ಕೊಂಚ ಹೊತ್ತಿನ ನಂತರ ಮೂಗು ಪೂರ್ತಿ ಒಗ್ಗಿಹೋಗಿ ವಾಸನೆಯೇ ಕಾಣುವುದಿಲ್ಲ. ಕೋಣೆಯನ್ನು ಕೊಂಚ ಕಾಲ ಬಿಟ್ಟು ಮತ್ತೆ ಹೊಕ್ಕರೆ ಪುನಃ ಅದೇ ಅನುಭವವಾಗಿ ಮೊದಲ ಕ್ಷಣದ ವಾಸನೆಯ ತೀವ್ರತೆ ಕ್ರಮೇಣ ಕುಗ್ಗುತ್ತದೆ. ಮೂಗು ಒಂದೇ ಕಡೆ ತೆರೆದಿದ್ದರೆ ಮುಚ್ಚಿದ ಕಡೆಯೂ ವಾಸನೆಯಿಲ್ಲದಂತಾಗುತ್ತದೆ. ವಾಸನಾ ಕೇಂದ್ರವೇ ಹೊಂದಿಕೊಳ್ಳುವುದರಿಂದ ಹೀಗಾಗಿ ವಾಸನೆಯ ಅರಿವಿನಲ್ಲಿ ಮಿದುಳಿನ ಪ್ರಮುಖತೆ ತಿಳಿಯುತ್ತದೆ. ಒಂದು ವಾಸನೆಗೆ ಮೂಗು ಹೊಂದಿಕೊಂಡಾಗ ಬೇರೆ ವಾಸನೆಗಳು ತಿಳಿಯುತ್ತವೆ. ಸೀಗೆ ಕಾಯಿ, ಮೆಣಸು ಇತ್ಯಾದಿಗಳ ಗಿರಣಿಗಳಲ್ಲಿ ಕೆಲಸ ಮಾಡುವವರು ಪೂರ್ಣ ಒಗ್ಗಿಕೊಂಡು ಅವರಿಗೆ ಸೀನುವಿಕೆ ಹಾಗೂ ಕಣ್ಣಲ್ಲಿ ನೀರೂ ಸೋರುವಿಕೆ ಇರುವುದಿಲ್ಲ.

ಘ್ರಾಣಾಂಗ ಸಮೂಹ: (೧) ವಾಸನೆಲೋಳೆ ಪೊರೆ, (೨) ವಾ. ‌ ‌ ಳು (ಮೊದಲ ತಲೆ ನರಗಳ ಜೊತೆ), (೩) ವಾಸನೆ ಮೊಗ್ಗು (೧ ಜೊತೆ), (೪) ವಾಸನೆ ಕಾಂಡ (೧ ಜೊತೆ), (೫) ಎಡ ಬಲ ವಾಸನೆ ಕೇಂದ್ರಗಳು (ಎರಡು). ವಾಸನೆ ಮೊಗ್ಗು ಮತ್ತು ಕಾಂಡ ಸೇರಿ ತಲೆಬುರುಡೆಯ ಮುಂಭಾಗದ ತಳದಲ್ಲಿ ಮುಟ್ಟಗದೆಯಂತಿವೆ.

ವಾಸನೆ ಲೋಳೆಪೊರೆಯ ಕಣ ಪದರದಲ್ಲಿ ಆಧಾರಕಣಗಳ ನಡುವೆ ಘ್ರಾಣ (ಗ್ರಾಹಕ) ಕಣಗಳಿವೆ. ಇವೇ ವಾಸನೆಯ ಹೊರ ಅಂತ್ಯಂಗಗಳು. ಇವು ಇತರ ಇಂದ್ರಿಯಗ್ರಾಹಕ ಕಣಗಳಂತಲ್ಲದೆ ಮಿದುಳಿನಿಂದಲೇ ಹೊರಟ ಎರಡು ಧ್ರುವಗಳುಳ್ಳ ಹೊರವಾಯುವಿನ ಸಂಪರ್ಕವಿರುವ ನಿಜವಾದ ನರಕಣಗಳು. ಮೂಗಿನ ಕುಹರದೊಳಕ್ಕೆ ಚಾಚಿರುವ ಇವುಗಳ ಸೂಕ್ಷ್ಮ ಲೋಮಗಳು ಹೊರ ಧ್ರುವಗಳಲ್ಲಿವೆ. ಒಳ ಧ್ರುವಗಳಿಂದ ಹೊರಟ ಅಕ್ಷಕ ತಂತುಗಳು ಎಡಬಲ ವಾಸನೆನರಗಳ ಎಳೆಗಳಾಗಿ ಜಲ್ಲಡಿ ಮೂಳೆ ಮೂಲಕ ಬುರುಡೆಯನ್ನು ಹೊಕ್ಕು ಮಿದುಳಿನ ಭಾಗವಾದ ಎಡ ಅಥವಾ ಬಲ ವಾಸನೆ ಮೊಗ್ಗಿನಲ್ಲಿ ಕೊನೆಗೊಳ್ಳುತ್ತವೆ. ಈ ಮೊಗ್ಗಿನಿಂದ ಎರಡನೇ ತಂಡದ ತಂತುಗಳು ವಾಸನೆ ಕಾಂಡದ ಮೂಲಕ ಹಾಯ್ದು ಮಹಾಮಸ್ತಿಷ್ಕದ ಕೆಳ ಭಾಗದಲ್ಲಿರುವ ಕೆಲವು ಭಾಗಗಳಲ್ಲಿ ಕೊನೆಗೊಳ್ಳುತ್ತವೆ. ಈ ಭಾಗಗಳಿಂದ



ಹೊರಟ ಮೂರನೇ ತಂಡದ ತಂತುಗಳು ಘ್ರಾಣ ಕೇಂದ್ರವನ್ನು ಸೇರುತ್ತವೆ. ಈ ಕೇಂದ್ರಕ್ಕೂ ಮಿದುಳಿನ ಇತರ ಭಾಗಗಳಿಗೂ ತಂತುಗಳ ಸಂಬಂಧವಿದೆ. ಕೇಂದ್ರದಿಂದ ಇಳಿಯುವ ಅವತರಣ ತಂತುಗಳು ಮಿದುಳು ಕಾಂಡ ಮತ್ತು ಮಿದುಳು ಬಳ್ಳಿಯಲ್ಲಿ ಕೊನೆಗೊಂಡು ಎದೆ, ಹೊಟ್ಟೆ ಅಂಗಗಳ ಮೇಲೆ ಪ್ರಭಾವವುಳ್ಳದಾಗಿವೆ.

ವಾಸನೆ ವಸ್ತುವಿನಿಂದ ವಾಸನೆ ಪೊರೆಯಲ್ಲಿ ವಿದ್ಯುತ್ತಿನ ವಿಭವದಲ್ಲಿ (ಪೊಟೆನ್ಶಿಯಲ್) ಬದಲಾವಣೆಗಳಾಗುವುದನ್ನು ವಿದ್ಯುತ್ಕೋಶದ ಧ್ರುವಗಳಿಂದ ತಿಳಿಯಬಹುದು. ಈ ವ್ಯತ್ಯಾಸಗಳನ್ನು ವಿಶೇಷ ಯಂತ್ರಗಳಿಂದ ಬರೆಸಿ ಗುರುತುಮಾಡುವ ಗೆರೆ–ವಿದ್ಯುತ್ಘ್ರಾಣಗೆರೆ- (ಎಲೆಕ್ಟ್ರೋ ಆಲ್ಫ್ಯಾಕ್ಟೋಗ್ರಾಂ) ಅಥವ ವಾಸನೆಗೆರೆ (ಆಸ್ಮೊಗ್ರಾಂ). ಆದರೆ ಇಂತಹ ಸೌಲಭ್ಯಗಳಿಂದ ಹೆಚ್ಚು ತಿಳಿಯಲಾಗಿಲ್ಲ. ಹಲವು ತತ್ತ್ವಗಳ ಸೃಷ್ಟಿಯಾದರೂ ಯಾವುದೂ ಪೂರ್ಣ ತೃಪ್ತಿಕರವಲ್ಲದುದರಿಂದ ಈ ವಿಚಾರವನ್ನು ಇಲ್ಲಿಗೇ ಬಿಡಲಾಗಿದೆ. ✡

ಬ್ಯಾಂಕಿನ ಕಾರ್ಮಿಕರ ಸಂಘಟನೆಯಲ್ಲಿ ದಿ. ಪರ್ವಾನರ ಹೆಸರು ಚಿರಸ್ಥಾಯಿಯಾದದ್ದು. ಅವರು ಮರಣಶಯ್ಯೆಯಲ್ಲಿದ್ದಾಗ ಹಿರಿಯ ಮಿತ್ರರೆಲ್ಲ ಕಾತರದಿಂದ ಸುತ್ತುವರೆದಿದ್ದರು. ಸಂಸ್ಥೆಯ ಬೆನ್ನೆಲುಬಾದ ಪರ್ವಾನ್ ಹೋದರೆಂದರೆ, ಮುಂದೇನು ಗತಿ? ಎಂಬುದು ಅವರ ಚಿಂತೆ. ಅಂತೆಯೇ ಕೇಳಿದರು: "ಕಾಮ್ರೇಡ್, ನಿಮ್ಮ ನೆಚ್ಚಿನ ಸಂಸ್ಥೆಯ ಗತಿ ಮುಂದೇನು?"

ಆ ಸ್ಥಿತಿಯಲ್ಲೂ ನಸುನಕ್ಕ ಪರ್ವಾನ್ ಈ ಕಥೆಯನ್ನು ಹೇಳಿದರು:

ಕುತೂಹಲಿಯೊಬ್ಬ ಜ್ಯೋತಿಷಿಯೊಬ್ಬನ ಸತ್ಯತೆಯನ್ನು ಪರೀಕ್ಷಿಸಲು ಒಂದು ಉಪಾಯ ಹೂಡಿದ. ತನ್ನ ಮುಷ್ಟಿಯಲ್ಲಿ ಸಣ್ಣ ಹಕ್ಕಿಯೊಂದನ್ನು ಹಿಡಿದು ಜ್ಯೋತಿಷಿಯ ಮುಂದೆ ಕೇಳಿದ— "ನನ್ನ ಮುಷ್ಟಿಯಲ್ಲಿರುವುದೇನು?" ಗಂಭೀರವಾಗಿ ಜ್ಯೋತಿಷಿ ಹೇಳಿದ - "ಅದೊಂದು ಹಕ್ಕಿ." ವ್ಯಕ್ತಿಗೆ ಆಶ್ಚರ್ಯವಾಯಿತು. ಮತ್ತೆ ಕೇಳಿದ - "ಅದರ ಬಣ್ಣವೇನು?" ನಿರಾಸಕ್ತನಾಗಿ ಜ್ಯೋತಿಷಿ ನುಡಿದ - "ಕಪ್ಪು." ವ್ಯಕ್ತಿಗೆ ಅತ್ಯಾಶ್ಚರ್ಯವಾಯಿತು. ಆದರೂ ಸೋಲದೆ - "ಅದು ಹೆಣ್ಣೋ, ಗಂಡೋ?" ಎಂದ. "ಹೆಣ್ಣು" ಶಾಂತವಾಗಿ ಜ್ಯೋತಿಷಿ ಹೇಳಿದ. ವ್ಯಕ್ತಿಗೆ ದಿಗ್ಭ್ರಮೆಯಾದದ್ದೇ ಅಲ್ಲದೆ, 'ತಾನು ಸೋಲುತ್ತಿದ್ದೇನೆ' ಅನ್ನಿಸಿತು. ಆದರೂ ಗೆಲ್ಲಬೇಕು, ತನ್ನ ಹಟವೇ ಉಳಿಯಬೇಕು ಅನ್ನಿಸಿತು. ಅಂತೆಯೆ ಕೊನೆಗೆ ಕೇಳಿದ - "ಅದು ಸತ್ತಿದೆಯೋ, ಬದುಕಿದೆಯೋ?"

ಜ್ಯೋತಿಷಿಯೇನಾದರೂ 'ಸತ್ತಿದೆ' ಅಂದರೆ, ಮುಷ್ಟಿ ಬಿಡಿಸಿ, ಹಕ್ಕಿಯನ್ನು ಗಾಳಿಗೆ ತೂರಿ ಅದು ಬದುಕಿರುವುದನ್ನು ತೋರಿಸಬೇಕು. 'ಬದುಕಿದೆ' ಅಂದರೆ ಕೈಯಲ್ಲೇ ಹಿಸುಕಿ ಪ್ರಾಣ ಬಿಟ್ಟ ಹಕ್ಕಿಯನ್ನು ತೋರಿಸಬೇಕು ಎಂಬುದು ಆತನ ಹಂಚಿಕೆಯಾಗಿತ್ತು. ಸ್ಥಿತಪ್ರಜ್ಞನಂತೆ ಜ್ಯೋತಿಷಿ ಉಸುರಿದ "ಅದು ನಿನ್ನ ಕೈಯಲ್ಲಿದೆ."

'ಮಿತ್ರರೇ, ಹೀಗೆ ಸಂಸ್ಥೆ ನಿಮ್ಮ ಕೈಯಲ್ಲಿದೆ- ಕೊಲ್ಲುವುದೂ ಬದುಕಿಸುವುದೂ ನಿಮ್ಮ ಕರ್ತೃತ್ವಶಕ್ತಿಗೆ ಬಿಟ್ಟದ್ದು.'

ಮುಂದೆ ಮಹಾವೃಕ್ಷವಾಗಿ ಬೆಳೆದ ಸಂಸ್ಥೆಯ ಚಿಗುರೆಲೆಗಳು ಬಹುಶಃ ಸ್ವರ್ಗದಲ್ಲಿರುವ ಪರ್ವಾನರಿಗೆ ತಂಗಾಳಿ ಬೀಸುತ್ತಿರಬಹುದು.

ಜಿ. ವೆಂಕಟೇಶ


ನೋಡಿರಿ...
ಅತ್ಯಧಿಕ ಬಿಳುಪಿಗೆ ರಾನಿಪಾಲ್®
ಬಟ್ಟೆಗಳನ್ನು ಕೊನೆಯ ಸಲ ಅದ್ದುವ ಮೊದಲು ನೀರಿನಲ್ಲಿ ಸ್ವಲ್ಪ ರಾನಿಪಾಲ್ ಹಾಕಿರಿ ಮತ್ತು ನಂತರ ನೋಡಿರಿ... ಬಟ್ಟೆಗಳಿಗೆ ಉಜ್ವಲ ಬಿಳುಪು! ರಾನಿಪಾಲ್‌ನ ಬಿಳುಪು! ಬಿಳಿಯ ಬಟ್ಟೆಗಳು ಯಾವುದೇ ಇರಲಿ—ಕಾಟನ್, ಸಿಂಥೆಟಿಕ್ ಮತ್ತು ಬ್ಲೆಂಡೆಡ್—ರಾನಿಪಾಲ್‌ನಿಂದ ಉಜ್ವಲವಾಗಿ ಎದ್ದು ಕಾಣುತ್ತವೆ.
ನಿಯಮಿತವಾಗಿ ರಾನಿಪಾಲ್ ಹಾಕಿರಿ...ಮತ್ತು ಬಿಳುಪನ್ನು ನೋಡಿರಿ, ತೋರಿಸಿರಿ!
Ranipal
Ranipal-S
whitener for synthetics and blends
ಕಾಟನ್ ಬಟ್ಟೆಗಳಿಗೆ ರಾನಿಪಾಲ್®
ಸಿಂಥೆಟಿಕ್ ಮತ್ತು ಬ್ಲೆಂಡೆಡ್
ಬಟ್ಟೆಗಳಿಗೆ ರಾನಿಪಾಲ್®-ಎಸ್.
Shilpi SG-2A/78 Kan



ಬಲು ದೂರ ದೂರ ದೂರ....

—ರೇಣುಕ

ಜಮ್ಮು ಬಳಿಯ ಸಾಂಬಾದಲ್ಲಿ ಬೀಡು ಬಿಟ್ಟಿದ್ದ ೫೪ನೇ ಪದಾತಿ ವಿಭಾಗಕ್ಕೆ ಸೇರಿದ ೧೬ನೇ ಮದ್ರಾಸ್ ಬಟಾಲಿಯನ್ ಸಿಯಾಲ್‌ಕೋಟ್ ವಿಭಾಗದಲ್ಲಿನ ಸೈನಿಕ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು. ಕಾರ್ಯಾಚರಣೆಯ ಪ್ರಾರಂಭದಿಂದ ಕೊನೆಯವರೆಗೂ ಬಟಾಲಿಯನ್ನಿನೊಂದಿಗಿದ್ದ ೫೪ನೇ ಸೇನಾ ವಿಭಾಗದ ಅಂಚೆ ಘಟಕದಲ್ಲಿನ ವಾರಂಟ್ ಆಫೀಸರ್ ಆರ್. ಆರಾಧ್ಯರ ಪ್ರತ್ಯಕ್ಷದರ್ಶಿ ಕಥನವನ್ನು ಕೇಳಿ.

*

ನವಂಬರ್ ಹದಿನಾರನೇ ತಾರೀಖು ಪಾಕ್ ಗಡಿಯನ್ನು ದಾಟಿ ಸಿಯಾಲ್‌ಕೋಟ್ ವಿಭಾಗದ ಮೇಲೆ ಸಾಗುವಂತೆ ೩೧ನೆ ಇನ್‌ಫಂಟ್ರಿ ಬ್ರಿಗೇಡಿನಿಂದ ನಮ್ಮ ಬಟಾಲಿಯನ್ನಿಗೆ ಆದೇಶ ಬಂದಿತು. ನಮ್ಮ ಬಟಾಲಿಯನ್ ಬೀಡು ಬಿಟ್ಟಿದ್ದ ಸಾಂಬಾದಿಂದ ಪಾಕಿಸ್ತಾನದ ಗಡಿಗೆ ಸುಮಾರು ಹದಿನಾರು ಮೈಲುಗಳಷ್ಟು ಅಂತರ. ಗಡಿಯಿಂದ ಸುಮಾರು ೩೦ಮೈಲು ದೂರದಲ್ಲಿದ್ದ ಸಿಯಾಲ್‌ಕೋಟ್ ವಿಭಾಗದ 'ಸೂರಿಚಕ್' ಎಂಬ ಗ್ರಾಮವನ್ನು ನಾವು ಆಕ್ರಮಿಸಿಕೊಳ್ಳಬೇಕಿತ್ತು.

ಹದಿನಾರನೆ ಡೋಗ್ರಾ ಬಟಾಲಿಯನ್ನಿನ ಕಂಪನಿಯೊಂದನ್ನೂ ಆರ್ಟಿಲರಿ ಬ್ರಿಗೇಡಿನಿಂದ ೧೬೧ನೇ ಫೀಲ್ಡ್ ರೆಜಿಮೆಂಟನ್ನೂ ನಮ್ಮ ನೆರವಿಗೆ ಒದಗಿಸಲಾಯಿತು.

ನವೆಂಬರ್ ಹದಿನಾರನೇ ತಾರೀಖು ರಾತ್ರಿ

ಹನ್ನೊಂದು ಗಂಟೆಗೆ ಲೆಫ್ಟನೆಂಟ್ ಕರ್ನಲ್ ಗಾಯ್ ಅವರ ನೇತೃತ್ವದಲ್ಲಿ ಹದಿನಾರನೇ ಮದ್ರಾಸ್ ಬಟಾಲಿಯನ್ ಪಾಕ್ ಗಡಿಗೆ ಅಭಿಮುಖವಾಗಿ ಮುನ್ನಡೆದಾಗ ಡೋಗ್ರಾ ಕಂಪನಿ ಚಕ್ರಿ ಗ್ರಾಮದ ಬಳಿ ನಮ್ಮನ್ನು ಕೂಡಿಕೊಳ್ಳುವ ಆದೇಶವನ್ನು ಪಡೆದು ಬೇರೊಂದು ದಿಕ್ಕಿನಲ್ಲಿ ಸಾಗಿತು.

ಪಾಕ್ ಗಡಿಯನ್ನು ಸಮೀಪಿಸುವ ಮುನ್ನವೇ ಪಾಕ್ ಯುದ್ಧವಿಮಾನಗಳು ನಮ್ಮ ಪಡೆಗಳ ಮೇಲೆ ಹಲವಾರು ಸಲ ದಾಳಿ ನಡೆಸಿ ಅನೇಕ ಸಾವು ನೋವುಗಳನ್ನುಂಟುಮಾಡಿದುವು. ನಮ್ಮ ಆ್ಯಂಟಿ ಏರ್‌ಕ್ರಾಫ್ಟ್‌ಗನ್ನುಗಳು ಸಖೀ ಹಳ್ಳಿಯ ಬಳಿ ಪಾಕ್ ಯುದ್ಧ ವಿಮಾನವೊಂದನ್ನು ಹೊಡೆದುರುಳಿಸಿದಾಗ ಅದು ಧಗಧಗನೆ ಉರಿಯುತ್ತ ಮಸೀದೆಯೊಂದರ ಮೇಲೆ ಬಿದ್ದಾಗ ಮಸೀದೆ ನೆಲಸಮವಾಯಿತು. ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಕೆಳಗಿಳಿದ ಪಾಕ್ ವಿಮಾನ ಚಾಲಕ ನಮ್ಮ ಸೆರೆಯಾಳಾದ.

ಆ ಸಮಯದಲ್ಲಿ ನಮಗೆ ವರ್ತಮಾನ ಪತ್ರಿಕೆಗಳು ಸರಬರಾಜಾಗುತ್ತಿರಲಿಲ್ಲವಾದ ಕಾರಣ ದೇಶದ ಇತರ ಭಾಗಗಳಲ್ಲಿ ಏನು ನಡೆಯುತ್ತಿರುವುದೆಂಬುದೇ ತಿಳಿಯುವ ಹಾಗಿರಲಿಲ್ಲ. ಪಾಕ್ ಪ್ರದೇಶದಲ್ಲಿ ಭಾರತದ ಸೇನಾಪಡೆಗಳು ವಿಜಯೋತ್ಸಾಹದಿಂದ ಮುನ್ನಡೆಯುತ್ತಿರುವ ಸುದ್ದಿಯನ್ನು ಆಕಾಶವಾಣಿಯಿಂದ ಕೇಳಿ ವೃತ್ತಪತ್ರಿಕೆಗಳಲ್ಲಿ ಓದಿ ದೇಶದ ಜನತೆ ರೋಮಾಂಚನಗೊಳ್ಳುತ್ತಿತ್ತೆಂದು ಕಾಣುತ್ತದೆ.

ಆದರೆ ಯಾರ ಸೈನಿಕ ಕಾರ್ಯಾಚರಣೆಯ ಯಶಸ್ಸಿನ ಸುದ್ದಿಯನ್ನು ಕೇಳಿ ಜನರು ಪುಲಕಿತರಾಗುತ್ತಿದ್ದರೋ ಆ ಸೈನಿಕರು ಮಾತ್ರ ಸಮರಾಂಗಣದಲ್ಲಿ ಕ್ಷಣ ಕ್ಷಣವೂ ಸಾವಿನ ನೆರಳಿನಲ್ಲಿ ತಮ್ಮ ವೈಯಕ್ತಿಕ ಆಶೋತ್ತರಗಳ ಸಮಾಧಿಯ ಮೇಲೆ, ಮುಂದಿನ ಹೆಜ್ಜೆಯಲ್ಲಿ ಮೇಲೆರಗಬಹುದಾದ ಸಾವನ್ನು ಎದುರುಗೊಳ್ಳಲು ಸ್ಥಿತಪ್ರಜ್ಞರಂತೆ ನಡೆದಿದ್ದರು.

ಅಂದು ರಾತ್ರಿ ಟ್ರೆಂಚ್‌ಗಳಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದೆವು. ನಮ್ಮ ಮುಂದೆ ಎರಡು ಮೂರು ಮೈಲುಗಳ ದೂರದಲ್ಲಿ ೧೬೧ ನೇ ಫೀಲ್ಡ್ ರೆಜಿಮೆಂಟಿನ ಟ್ಯಾಂಕುಗಳು ಹಾರಿಸುತ್ತಿದ್ದ ಶೆಲ್‌ಗಳ ಸಿಡಿತದ ಸದ್ದು ಕೇಳಿ ಬರುತ್ತಿತ್ತು. ನಮ್ಮ ಪಡೆಗಳ ಹಾದಿಯನ್ನು ಸುಗಮವಾಗಿಸಲು ಅವು ಮುಂದಾಗಿ ಹೋಗಿ ಶತ್ರು ನೆಲೆಗಳನ್ನು ಧ್ವಂಸ ಮಾಡುವ ಕಾರ್ಯದಲ್ಲಿ ನಿರತವಾಗಿದ್ದುವು. ಬೆಳಗಿನಿಂದ ಬಂದಿರದ ನೀರಿನ ಟ್ಯಾಂಕರನ್ನು ಹೊತ್ತ ಗಾಡಿ ಆಗ ತಾನೆ ಬಂದಿತ್ತು. ಒಂದು ಕುಪ್ಪಿ ನೀರಿನಲ್ಲಿಯೇ ಬೆಳಗಿನಿಂದ ನಮ್ಮೆಲ್ಲ ಕಾರ್ಯಗಳೂ ನಡೆಯುತ್ತಿದ್ದುವು.

ಸ್ವಲ್ಪ ಹೊತ್ತಿನಿಂದ ಪಾಕ್ ಯುದ್ಧವಿಮಾನಗಳ ಸುಳಿವಿರಲಿಲ್ಲ. ಒಬ್ಬೊಬ್ಬರಾಗಿ ಸಿಪಾಯಿಗಳು ಟ್ರೆಂಚ್‌ನಿಂದೆದ್ದು ಹೋಗಿ ಟ್ಯಾಂಕರಿನಿಂದ ತಮ್ಮ ನೀರಿನ ಕುಪ್ಪಿಗಳನ್ನು ತುಂಬಿಕೊಂಡು ಮತ್ತೆ ಟ್ರೆಂಚುಗಳಲ್ಲಿ ಅಡಗಿಕೊಳ್ಳುತ್ತಿದ್ದರು. ಅದೇ ಸಮಯಕ್ಕೆ ಸೈರನ್ ಕೂಗಿಕೊಳ್ಳಲಾರಂಭಿಸಿತು. ಕ್ಷಣ ಮಾತ್ರದಲ್ಲಿ ಪಾಕ್ ಯುದ್ಧವಿಮಾನವೊಂದು ಕಿವಿ ಬಿರಿಯುವಂತೆ ಸದ್ದು ಮಾಡುತ್ತ ಬಾಂಬ್‌ಗಳನ್ನುದುರಿಸಿ ಮಾಯವಾಯಿತು. ತಕ್ಷಣ ಸಮೀಪದಲ್ಲಿ ಭೀಕರ ಆಸ್ಫೋಟನೆಯಾಯಿತು. ನೀರಿನ ಟ್ಯಾಂಕರನ್ನು

ಯುದ್ಧದಲ್ಲಿ ನಮ್ಮವರ ಗೆಲವನ್ನು ಕೇಳಿದಾಗ ಅರಳುತ್ತೇವೆ; ಸೋಲಿನ ಸುದ್ದಿ ಬಂದಾಗ ಮಂಕಾಗುತ್ತೇವೆ. ಆದರೆ ಅದೆಲ್ಲ ಯುದ್ಧ ನೂರಾರು ಮೈಲುಗಳಾಚೆ ನಡೆದಿದ್ದಾಗ... ಪತ್ರಿಕೆಗಳು ಗೆಲವನ್ನೂ ಮುನ್ನಡೆಯನ್ನೂ ಉತ್ಸಾಹದಿಂದ ಪ್ರಕಟಸುತ್ತವೆ; ಆದರೆ ಸೋಲಿನ ಸುದ್ದಿ ಅನಿವಾರ್ಯವಾದಾಗ ಮಾತ್ರ ಹೊರಬರುತ್ತದೆ. ಸೋಲು ಗೆಲುವುಗಳ ಮಧ್ಯದಲ್ಲಿ ನಡೆದುಹೋಗುವ ಅದೆಷ್ಟೋ ಪ್ರಸಂಗಗಳು, ಸಾಮಾನ್ಯ ಸೈನಿಕನ, ಸೈನ್ಯಾಧಿಕಾರಿಯ ಕಲಿತನವನ್ನು ಎತ್ತಿ ತೋರುವ ಘಟನೆಗಳು-ಲಿಖಿತ ಇತಿಹಾಸದ ಪುಟಗಳನ್ನು ಸೇರುವುದೇ ಇಲ್ಲ. ಅಂಥದೊಂದು ಅಪರೂಪದ ಪುಟವಿದು.

ಹೊತ್ತಿದ್ದ ಗಾಡಿ ಚೂರು ಚೂರಾಗಿ ದಿಕ್ಕು ದಿಕ್ಕಿಗೆ ಎಸೆಯಲ್ಪಟ್ಟಿತು. ನೀರನ್ನು ಹಿಡಿಯುತ್ತಿದ್ದ ಸಿಪಾಯಿಯೊಬ್ಬನ ಶರೀರವು ಸಹ ಛಿದ್ರವಿಚ್ಛಿದ್ರವಾಯಿತೆಂದು ಬೇರೆ ಹೇಳಬೇಕಿಲ್ಲ. ಆ ಸಿಪಾಯಿಯ ಮದುವೆಯಾಗಿ ಕೇವಲ ಒಂದು ತಿಂಗಳಾಗಿದ್ದಿತು. ಮಾರನೆಯ ದಿನ ಮುಂಜಾವಿನಲ್ಲಿ ನಾವು ಆ ಸ್ಥಳದಿಂದ ಮುಂದುವರಿಯುವಾಗ ವಿವಾಹವಾದ ತರುಣದಲ್ಲಿ ಹೆಂಡತಿಯೊಂದಿಗೆ ತೆಗೆಸಿಕೊಂಡಿದ್ದ ಅವನ ಫೋಟೋ ಧೂಳಿನಲ್ಲಿ ಅನಾಥವಾಗಿ ಬಿದ್ದಿತ್ತು.

ಮಾರನೆಯ ದಿನ ನಮ್ಮ ಯುದ್ಧವಿಮಾನಗಳ ರಕ್ಷಣೆಯ ಕೊಡೆಯ ನೆರಳಿನಲ್ಲಿ ನಮ್ಮ ಪಡೆಗಳು ಕ್ಷಿಪ್ರ ಗತಿಯಲ್ಲಿ ಸಾಗಿ ಪಾಕ್ ಗಡಿಗೆ ಮೂರು ಮೈಲುಗಳ ಸಮೀಪದಲ್ಲಿ ಬೀಡು ಬಿಟ್ಟವು. ನಮ್ಮ ಬಟಾಲಿಯನ್ ಕಮಾಂಡರ್ ಲೆಫ್ಟನೆಂಟ್ ಕರ್ನಲ್ ಗಾರ್ಯ್‌ರವರು ಗಡಿಯನ್ನು ದಾಟಲು ಏಗನೇ ಬ್ರಿಗೇಡಿನ ಆದೇಶವನ್ನು ನಿರೀಕ್ಷಿಸುತ್ತಾ ಕುಳಿತರು.

ಈ ನಡುವೆ ಪಾಕ್ ಪ್ರದೇಶದಿಂದ ಗಡಿಯನ್ನು ದಾಟಿ ಬಂದ ಬಲೂಚ್ ರೆಜಿಮೆಂಟಿನ ಪಡೆಗಳು ನಮ್ಮ ಶಿಬಿರದ ಮೇಲೆ ನಡೆಸಿದ ದಾಳಿಗಳನ್ನು ನಮ್ಮವರು ಹಿಮ್ಮೆಟ್ಟಿಸಿದರು. ಈ ದಾಳಿಗಳ ಪರಿಣಾಮವಾಗಿ ನಮ್ಮಲ್ಲಿ ಅನೇಕ ಸಾವು ನೋವುಗಳು ಸಂಭವಿಸಿದವು.

ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ನಮ್ಮ ಆರ್ಟಿಲರಿ ಟ್ಯಾಂಕುಗಳು ಅಗ್ನಿವರ್ಷವನ್ನು ಕಾರುತ್ತ ಗಡಿಯನ್ನು ದಾಟಿ ನಾಲ್ಕು ಮೈಲುಗಳವರೆಗೂ ಸಿಯಾಲ್‌ಕೋಟ್ ಪ್ರದೇಶದಲ್ಲಿ ಮುಂದುವರಿದವು. ಹಾದಿಯಲ್ಲಿ ಬಟಾಲಿಯನ್ನಿನ 'ಬಿ' ಕಂಪನಿ ನಾಲ್ಕು ಪಟಾನ್ ಟ್ಯಾಂಕುಗಳನ್ನು ವಶಪಡಿಸಿಕೊಂಡಿತು. ಅದಕ್ಕಾಗಿ ತೆತ್ತ ಸೈನಿಕರ ಜೀವಗಳ ಬೆಲೆಯೂ ಅಪಾರ.

ಡಿಸೆಂಬರ್ ಹದಿನೈದರಂದು, ೧೬ನೇ ಡೋಗ್ರಾ ಬಟಾಲಿಯನ್ನಿನ ಕಂಪನಿ ನಾವಿದ್ದ ಸ್ಥಳಕ್ಕೆ ಎರಡು ಮೈಲು ದೂರದಲ್ಲಿ ಬೀಡು ಬಿಟ್ಟಿತು. ಸಮಯಕ್ಕೆ ಸರಿಯಾಗಿ ಮದ್ದು ಗುಂಡುಗಳ ಸರಬರಾಜಾಗದೆ ಬಯೋನೆಟ್ಟಿನಿಂದಲೇ ಶತ್ರುಗಳ ಮೇಲೆ ಹೋರಾಡಿ ಬಹು ಮಂದಿ ಡೋಗ್ರಾ ಸೈನಿಕರು ಹತರಾಗಿ, ಅಳಿದು ಉಳಿವರು ಸೂರಿಚಕ್ ಮೇಲಿನ ದಾಳಿಯಲ್ಲಿ ನಮಗೆ ನೆರವಾಗಲು ಬಂದಿದ್ದರು. ಅನೇಕ ಸಾವು ನೋವುಗಳಿಂದ, ಗಾಯಾಳುಗಳಿಂದ ಕೂಡಿದ ನಮ್ಮ ಬಟಾಲಿಯನ್ ಸಹ ಅಷ್ಟೇನೂ ಉತ್ತಮ ಸ್ಥಿತಿಯಲ್ಲಿರಲಿಲ್ಲ.

ಹದಿನಾರನೇ ತಾರೀಖು ರಾತ್ರಿ ಹನ್ನೊಂದು ಗಂಟೆಗೆ ಮದ್ದು ಗುಂಡುಗಳ ದಾಸ್ತಾನನ್ನು ಹೊತ್ತ ನಾಲ್ಕು ಶಕ್ತಿಮಾನ್ ಟ್ರಕ್ಕುಗಳು ನಮ್ಮನ್ನು ಕೂಡಿಕೊಂಡವು. ಮಾರನೆಯ ದಿನ ಸುಮಾರು ಎಂಟು ಮೈಲುಗಳ ದೂರದಲ್ಲಿದ್ದ ನಮ್ಮ ಅಂತಿಮ ಗುರಿಯಾದ ಸೂರಿಚಕ್ ಎಂಬ ದೊಡ್ಡ ಹಳ್ಳಿಯನ್ನು ವಶಪಡಿಸಿಕೊಳ್ಳಬೇಕಾಗಿತ್ತು.

ರಾತ್ರಿ ಹನ್ನೆರಡು ಗಂಟೆಗೆ ನಮ್ಮ ಅಳಿದುಳಿದ ಆರ್ಟಿಲರಿ ಟ್ಯಾಂಕುಗಳು ಮುನ್ನಡೆದಾಗ ಡೋಗ್ರಾ ಮತ್ತು ನಮ್ಮ ಮದ್ರಾಸ್ ಪಡೆಗಳು ಅವುಗಳನ್ನು ಹಿಂಬಾಲಿಸಿದವು. ಪಾಕ್ ಯುದ್ಧವಿಮಾನಗಳೂ ರಭಸದಿಂದ ಕಾರ್ಯಾಚರಣೆಯನ್ನು ಆರಂಭಿಸಿದ್ದವು ನಮ್ಮ ವಿಮಾನಬಲದ ಹೆಚ್ಚು ಭಾಗ ಬಂಗ್ಲಾ ಸೈನಿಕ ಕಾರ್ಯಾಚರಣೆಯಲ್ಲಿ ತೊಡಗಿದ್ದುದರಿಂದ ನಮಗೆ ನಮ್ಮ ಯುದ್ಧವಿಮಾನಗಳ ನೆರವು ಅಷ್ಟಾಗಿ ದೊರೆಯದೆ ಹೋದುದಕ್ಕೆ ಕಾರಣವಿರಬಹುದು.

ನಮ್ಮ ಟ್ಯಾಂಕುಗಳು ಸಾಗುವ ಹಾದಿಯಲ್ಲಿನ ಹೊಲಗಳಲ್ಲಿ ಪಾಕಿಗಳು ಹೂಳಿದ್ದ 'ಮೈನ್'(ಸಿಡಿಗುಂಡು)ಗಳನ್ನು ಪೂರ್ಣವಾಗಿ ಹುಡುಕಿ ಹೊರತೆಗೆಯುವುದು ದೊರೆತ ಆ ಅಲ್ಪ ಕಾಲದಲ್ಲಿ 'ಪಯೋನಿಯರ್' ಕಂಪನಿಗೆ ಸಾಧ್ಯವಾಗಲಿಲ್ಲ. ಅನೇಕ ಆರ್ಟಿಲರಿ ಟ್ಯಾಂಕುಗಳು ನೆಲದಲ್ಲಿ ಹೂಳಿದ್ದ 'ಮೈನ್'ಗಳ ಮೇಲೆ ಹಾಯ್ದಾಗ ಆಸ್ಫೋಟನೆಗೊಂಡು ನಾಶವಾದುವು.


ಈ ರೀತಿ ನಮ್ಮ ಪಡೆಗಳು ಆರ್ಟಿಲರಿಯ, ವಿಮಾನಬಲದ ಪರಿಣಾಮಕರವಾದ ರಕ್ಷಣೆಯ ನೆರಳಿನಿಂದ ವಂಚಿತವಾಗಿ ಮುಂದುವರಿಯಬೇಕಾಯಿತು. ಆಗಾಗ ನಮ್ಮ 'ನ್ಯಾಟ್' ಯುದ್ಧವಿಮಾನಗಳು ಪಾಕ್ ನೆಲೆಗಳ ಮೇಲೆ ದಾಳಿ ಮಾಡುತ್ತಿದ್ದರೂ ಪಾಕ್ ಯುದ್ಧ ವಿಮಾನಗಳ ದಾಳಿಯ ಪ್ರಮಾಣಕ್ಕೆ ಸರಿದೂಗುತ್ತಿರಲಿಲ್ಲ.

ಬಂಗ್ಲಾದೇಶದಲ್ಲಿ ನಮ್ಮ ಪಡೆಗಳು ಸಕಲ ನೆರವಿನಿಂದ ವಿಜಯೋತ್ಸಾಹದಿಂದ ಮುಂದುವರಿಯುತ್ತಿದ್ದರೆ ದುರ್ದೈವದಿಂದ ಪಶ್ಚಿಮ ರಂಗದಲ್ಲಿ ನಮ್ಮ ಸೈನಿಕರು ಸಕಾಲಿಕ ನೆರವಿನ ಅಭಾವದಿಂದಾಗಿ ಅನೇಕ

ಸಾವು ನೋವುಗಳಿಂದ ಬಳಲಿದ್ದರೂ ಹತಾಶರಾಗದೆ ಪಾಕ್ ನೆಲದ ಮೇಲೆ ಯುದ್ಧವನ್ನು ಮುಂದುವರಿಸಿದ್ದರು.

ಬೆಳಗಿನ ಜಾವ ಸರ್ವೆ ತೋಫೊಂದರಿಂದ ಶತ್ರುಗಳು ನಮ್ಮ ಮೇಲೆ ಗುಂಡಿನ ಮಳೆಗರೆಯಲಾರಂಭಿಸಿದರು. ಇಂಥ ಸಮಯದಲ್ಲಿಯೇ ಪದಾತಿ ದಳಕ್ಕೆ ವಿಮಾನಬಲ ಮತ್ತು ತೋಫುಖಾನೆಯ ನೆರವಿನ ಆಗತ್ಯ ಬೀಳುವುದು. ಅದೇ ಸಮಯಕ್ಕೆ ದುರದೃಷ್ಟದಿಂದ ಪಾಕ್ ಫಿರಂಗಿಯಿಂದ ಹಾರಿದ ಶೆಲ್ಲೊಂದು ಮರದ ಕೆಳಗೆ ಮರೆ ಮಾಡಿ ನಿಲ್ಲಿಸಿದ್ದ ಮದ್ದು ಗುಂಡಿನ ದಾಸ್ತಾನಿದ್ದ ಶಕ್ತಿಮಾನ್ ಟ್ರಕ್ಕಿನ ಮೇಲೆ ಬಿದ್ದು ಅದು ಆಸ್ಫೋಟನೆಗೊಂಡಿತು. ಅದರ ಜೊತೆಯಲ್ಲಿ ಹತ್ತಾರು ಮಂದಿ ಸೈನಿಕರೂ ಹತರಾದರು.

ಪರಿಸ್ಥಿತಿ ಪ್ರತಿಕೂಲವಾಗಿದ್ದ ನಮಗೆ ಈ ಸಮಯದಲ್ಲಿ ಸ್ವಸ್ಥಾನಕ್ಕೆ ಹಿಂದಿರುಗುವ ದಾರಿಯನ್ನು ಹುಡುಕಿಕೊಳ್ಳದೆ ಬೇರೆ ದಾರಿಯಿರಲಿಲ್ಲ. ಆದರೆ ಅನೇಕ ಸಾವು ನೋವುಗಳಿಂದ ರೋಸಿದ್ದ ಲೆಫ್ಟಿನೆಂಟ್ ಕರ್ನಲ್ ಗಾಯ್ ಅವರು ಸರ್ವೆ ತೋಫಿನೊಳಗೆ ಅಡಗಿದ್ದ ಶತ್ರುನೆಲೆಯ ಮೇಲೆ ಬಯೋನೆಟ್ ಚಾರ್ಜ್ ಮಾಡಲು ಆಜ್ಞೆ ಮಾಡಿ ತಾವೇ ಮುಂದಾಗಿ ಸೈನಿಕರನ್ನು ಹುರಿದುಂಬಿಸುತ್ತ ಸರ್ವೆ ತೋಫಿಗೆ ಅಭಿಮುಖವಾಗಿ ಓಡತೊಡಗಿದರು.



"ಸಿಗರೇಟು ಸೇದದೆ ಇದ್ದವರು ಇನ್ನು ಮುಂದೆ ಸೇದಬಾರದು ಎಂಬ ಕಾನೂನು ಮಾಡಿದರೆ ಮುಂದಿನ ೫೦ ವರ್ಷಗಳಲ್ಲಿ ನಾವು ಪೂರ್ಣ ನಿಯಂತ್ರಣವನ್ನು ಸಾಧಿಸಬಲ್ಲೆವು."

ಬಿರುಸಿನಿಂದ ಆರಿದ ಸಂಗೀನನ್ನು ಜೋಡಿಸಿದ ಬಂದೂಕನ್ನು ಹಿಡಿದು ಯುದ್ಧಘೋಷಣೆಗಳನ್ನು ಕೂಗುತ್ತ ಜೀವದ ಮೋಹದ ಹಂಗು ತೊರೆದು ಮುನ್ನುಗ್ಗಿದ್ದ ಹುಚ್ಚು ಆವೇಶದಿಂದ ಉತ್ತರಿಸಿದ ನಮ್ಮ ಸೈನಿಕರ ಮೇಲೆ ಪಾಕಿಗಳು ಗುಂಡು ಹಾರಿಸಿದಾಗ ಪಟ ಪಟನೆ ಮುಂದಿದ್ದ ಹಲವರು ನೆಲಕ್ಕುರುಳಿದರು. ನೆಲಕ್ಕುರುಳಿದ ಜೊತೆಗಾರರ ದೇಹಗಳನ್ನು ಕಂಡು ಉಳಿದ ಸೈನಿಕರು ರೋಷತಪ್ತರಾಗಿ ಶತ್ರುಗಳ ಮೇಲೆ ಧಾವಿಸಿದಾಗ ಶತ್ರುಗಳು ತಮ್ಮ ನೆಲೆಯನ್ನು ತೆರವು ಮಾಡಿ ಗಾಬರಿಯಿಂದ ದಿಕ್ಕಾಪಾಲಾಗಿ ಓಡಿದರು. ಅನೇಕ ಪಾಕ್ ಸೈನಿಕರನ್ನು ನಮ್ಮ ಸೈನಿಕರು ಸಂಗೀನಿಂದ ತಿವಿದು ಕೊಂದರು. ರೋಷದಿಂದ ಅವರು ಎಷ್ಟು ಕುರುಡಾಗಿದ್ದರೆಂದರೆ ಸತ್ತ ಪಾಕ್ ಸೈನಿಕರ ದೇಹಗಳನ್ನು ಸಂಗೀನಿಂದ ತಿವಿದು ಕಾಲಿನಿಂದ ತುಳಿಯುತ್ತಿದ್ದರು. ಆ ಸಮಯದಲ್ಲಿ ಮಾನವೀಯ ಮಹಾಶಕ್ತಿಯೇನಾದರೂ ಯಾವನಾದರೂ ಸೈನಿಕನಲ್ಲಿ ಅಂಕುರಿಸಿದ್ದೇ ಆದರೆ ಆ ಘೋರವನ್ನು ಕಂಡು ಖಂಡಿತವಾಗಿಯೂ ಎದೆ ಬಿರಿದು ಸಾಯುತ್ತಿದ್ದ. ಆದರೆ ಯುದ್ಧದಲ್ಲಿ ಏನು ಮಾಡಿದರೂ ಅದು ನ್ಯಾಯವೇ!

ಅನೇಕ ಪಾಕ್ ಸೈನಿಕರು ಆಯುಧಗಳನ್ನು ಕೆಳಗಿಟ್ಟು ಶರಣಾದರು. ಓಡಿಹೋದ ಪಾಕ್ ಸೈನಿಕರು ಅಪಾರವಾದ ಮದ್ದುಗುಂಡುಗಳ ದಾಸ್ತಾನಿದ್ದ ಬಂಕರನ್ನೆ ಹಿಂದೆ ಬಿಟ್ಟು ಹೋಗಿದ್ದರು.

ಮಾರನೆಯ ದಿನ ಸರ್ವೆ ತೋಫಿನ ಬಳಿಯಿದ್ದ ಚಿಕ್ಕ ಹಳ್ಳಿಯನ್ನು ವಶಪಡಿಸಿಕೊಂಡೆವು. ಯುದ್ಧ ಆರಂಭವಾಗುವುದಕ್ಕೆ ಮೊದಲೇ ಹಳ್ಳಿಗರು ಹಳ್ಳಿಯನ್ನು ತೆರವು ಮಾಡಿ ಹೋಗಿದ್ದರು. ಪ್ರಾಣಭಯದಿಂದ ಹಳ್ಳಿಯನ್ನು ತೆರವು ಮಾಡಿ ಹೋಗುವ ಗಾಬರಿಯಲ್ಲಿ ತೊಂಭತ್ತು ವರ್ಷದ ವೃದ್ಧನೊಬ್ಬ

ನನ್ನು ಮನೆಯಲ್ಲಿಯೇ ಬಿಟ್ಟುಹೋಗಿದ್ದರು. ಮನೆಗಳ ಮೇಲೆ ಬೀಳುತ್ತಿದ್ದ ಶೆಲ್‌ಗಳ ದಾಳಿಯಿಂದ ಅನೇಕ ಮನೆಗಳು ಕುಸಿದು ಬಿದ್ದಿದ್ದವು. ಕಣ್ಣು ಕಾಣದ ಆ ವೃದ್ಧನಿದ್ದ ಮನೆಯೂ ಅರ್ಧ ಭಾಗ ಶೆಲ್ ದಾಳಿಯಿಂದ ಭಗ್ನಗೊಂಡಿದ್ದಿತು. ಅವನ ಬಂಧುಗಳು ಅವನನ್ನು ಬಿಟ್ಟು ಹೋಗಿದ್ದರೂ ಕರಿಯ ನಾಯಿಯೊಂದು ಅವನನ್ನು ಬಿಟ್ಟು ಹೋಗಲಾರದೆ ಅವನ ಕಾಲ ಬುಡದಲ್ಲಿಯೇ ಮಲಗಿದ್ದಿತು.ಗುಂಡಿನ ಮಳೆಯ ನಡುವೆಯೂ ಆ ಮುದುಕನು ಬದುಕುಳಿದುದು ಪವಾಡ ಸದೃಶವಾಗಿ ಕಾಣುತ್ತಿತ್ತು. ಪಾಕ್ ಸೈನಿಕರೂ ಕಾಳಜಿವಹಿಸಿರದಿದ್ದ ಆ ಮುದುಕನನ್ನು ನಮ್ಮವರು ಸುರಕ್ಷಿತ ಸ್ಥಳಕ್ಕೆ ಸಾಗಿಸಿದರು.

ಆ ಹಳ್ಳಿಯಿಂದ ಸೂರಿಚಕ್ ಕೇವಲ ಆರು ಮೈಲುಗಳು. ಆ ರಾತ್ರಿ ಅಲ್ಲಿಂದ ಸಾಗಿ ಕ್ಷಿಪ್ರದಾಳಿ ಮಾಡಲು ಸಿದ್ಧತೆ ಮಾಡಿಕೊಳ್ಳಲಾಯಿತು. ನಮ್ಮ ನೆರವಿಗೆ ಬರಬೇಕಾದ ಡೋಗ್ರಾ ಕಂಪನಿಯೊಂದಿಗಿನ ನಮ್ಮ ಸಂಪರ್ಕ ಕಳೆದ ಹನ್ನೆರಡು ಗಂಟೆಗಳಿಂದ ಕಡಿದುಹೋಗಿದ್ದಿತು.

ಪಾಕಿಗಳು ತೋಡಿ ಬಿಟ್ಟು ಹೋಗಿದ್ದ ಟ್ರೆಂಚ್‌ಗಳಲ್ಲಿ ಸಂಜೆಯವರೆಗೆ ಅಡಗಿ ಕುಳಿತೆವು. ಆಗಾಗ ಪಾಕ್ ಯುದ್ಧವಿಮಾನಗಳು ನಮ್ಮ ಪ್ರದೇಶದ ಮೇಲೆ ವಾಯುವೇಗದಿಂದ ಹಾರಿ ಹೋಗುತ್ತಿದ್ದವು. ನಾವು ಅಡಗಿಕೊಂಡಿದ್ದ ಟ್ರೆಂಚ್‌ಗಳ ಎಡಬಲಗಳಲ್ಲಿ ಪಾಕ್ ಸೈನಿಕರು ಸೂರಿಚಕ್ ಕಡೆಯಿಂದ ಹಾರಿಸುತ್ತಿದ್ದ ಮಾರ್ಟರ್ ಶೆಲ್‌ಗಳು ಅವ್ಯಾಹತವಾಗಿ ಬಿದ್ದು ಸಿಡಿಯುತ್ತಿದ್ದವು. ಕೆಲವು ಶೆಲ್‌ಗಳು ಟ್ರೆಂಚ್ ಒಳಗೆ ಬಿದ್ದು ಅದರಲ್ಲಿ ಅಡಗಿದ್ದವರನ್ನು ಆಹುತಿ ತೆಗೆದುಕೊಂಡವು. ರಾತ್ರಿ ಹತ್ತು ಗಂಟೆಗೆ ಬಹು ಪ್ರಯಾಸದಿಂದ ನಮ್ಮ ಬಟಾಲಿಯನ್ ಮುಂದುವರಿಯಿತು. ಹೆಜ್ಜೆ ಹೆಜ್ಜೆಗೂ ಶೆಲ್‌ಗಳ ಸಿಡಿತದಿಂದ ಕಿವಿ ಕಿವುಡಾಗಿ ಹೋಗಿತ್ತು.

ಪಾಕಿಗಳ ಕಡೆಯಿಂದ ಮಾರ್ಟರ್ ಶೆಲ್ಲೊಂದು ನಮ್ಮ ಅಮ್ಯುನಿಷನ್ (ಮದ್ದು ಗುಂಡುಗಳ ಗಾಡಿ) ಟ್ರಕ್ಕಿನ ಮೇಲೆ ಬಿದ್ದು ಟ್ರಕ್ಕು ಚೂರು ಚೂರಾಗಿ ಅದರ ಭಾಗಗಳು [illegible] ಚದುರಿಹೋದವು. ಆ ಪ್ರದೇಶದ ಗಿಡಮರಗಳೆಲ್ಲ ಬೆಂಕಿ ಹೊತ್ತಿ ಉರಿಯಲಾರಂಭಿಸಿದವು.

ಸೂರಿಚಕ್ ಹಳ್ಳಿಗೆ ಮೂರು ಮೈಲುಗಳ ಅಂತರದಲ್ಲಿ ಭದ್ರವಾದ ಸಿಮೆಂಟ್ ಫಿಲ್ ಬಾಕ್ಸ್‌ಗಳಲ್ಲಿ ಕುಳಿತು ಗುಂಡು ಹಾರಿಸುತ್ತಿದ್ದ ಪಾಕಿಗಳ ಭದ್ರ ನೆಲೆಯ ಮೇಲೆ ನಮ್ಮವರು 'ಕ್ಷಿಪ್ರ ಬಯೋನೆಟ್' ದಾಳಿ ಮಾಡಿ ಅದನ್ನು ವಶಪಡಿಸಿಕೊಂಡರು.

ಸಾಕಷ್ಟು ತೋಪುಖಾನೆಯ ನೆರವಿಲ್ಲದೆ ಸಾವು ನೋವುಗಳಿಂದ ಕುಗ್ಗಿದ ಕ್ಷೀಣ ಬಲದಿಂದ ಸುಸಜ್ಜಿತವಾದ ಪಾಕ್ ಸೇನಾ ನೆಲೆಗಳನ್ನು ಆಕ್ರಮಿಸಿಕೊಂಡಿದ್ದು ಅದ್ವಿತೀಯವಾದ ಸೈನಿಕ ಕಾರ್ಯಾಚರಣೆ ಎಂಬುದರಲ್ಲಿ ಸಂಶಯವಿರಲಿಲ್ಲ.

ಆದರೆ ದುರದೃಷ್ಟ ಅಷ್ಟಕ್ಕೆ ನಮ್ಮ ಬೆನ್ನು ಬಿಡಲಿಲ್ಲ. ನಮ್ಮ ಪಡೆಗಳು ನಮ್ಮ ಅಂತಿಮ ಗುರಿಯಾದ 'ಸೂರಿಚಕ್' ಅನ್ನು ವಶಪಡಿಸಿಕೊಳ್ಳುವುದರಲ್ಲಿ ಸಂಶಯವೇ ಇರಲಿಲ್ಲ. ಕಲ್ಲೆಸೆತದ ಅಂತರದಲ್ಲಿ ವಿಜಯಶ್ರೀ ನಮ್ಮ ಕಣ್ಣಿಗೆ ಕಾಣಲಾರಂಭಿಸಿದಳು. ನಾವಿದ್ದ ಸ್ಥಳದಿಂದ ಸೂರಿಚಕ್‌ಗೆ ಮೂರು ಮೈಲುಗಳು ಮಾತ್ರ!

ಪಾಕ್ ಫಿರಂಗಿಯಿಂದ ಸಿಡಿದುಬಂದ ಶೆಲ್ಲೊಂದು ಲೆಫ್ಟಿನೆಂಟ್ ಕರ್ನಲ್ ಗಾಯ್‌ರವರು ಕುಳಿತಿದ್ದ ಕಮಾಂಡ್ ಟ್ರೆಂಚ್‌ನಲ್ಲಿ ಬಿದ್ದು ಅವರು ಸ್ಥಳದಲ್ಲಿಯೇ ಅಸು ನೀಗಿದರು. ಮಧ್ಯರಾತ್ರಿಯ ಹೊತ್ತಿಗೆ ಯುದ್ಧವಿರಾಮದ ವೈರ್‌ಲೆಸ್ ಸಂದೇಶ ತಲುಪಿತು. ಕೈಗೆಟುಕುವಷ್ಟು ಅಂತರದಲ್ಲಿದ್ದ ಸೂರಿಚಕ್ ಬಹು ದೂರ ದೂರವಾಗಿ ಹೋಯಿತು.

ಸಮರಾಂಗಣದಲ್ಲಿ ಯುದ್ಧವೇನೋ ಮುಗಿಯಿತು. ಸಹಸ್ರ ಸಂಖ್ಯೆಯಲ್ಲಿ ಸತ್ತ ಸೈನಿಕರ ಮನೆಗಳಲ್ಲಿ ಅವರನ್ನು ನಂಬಿದವರ ಬದುಕಿನಲ್ಲಿ ಮತ್ತೊಂದು ಯುದ್ಧ ಆರಂಭವಾಗಿತ್ತು. ಇದುವರೆಗೂ ಯುದ್ಧದ ಬಿಸಿ ಬಿಸಿ ಸುದ್ದಿಗಳನ್ನು ಕೇಳಿ ರೋಮಾಂಚನಗೊಳ್ಳುತ್ತಿದ್ದ ಜನಗಳಿಗೆ ಯುದ್ಧಾನಂತರ ನಿಜವಾದ ಬಿಸಿ ಮುಟ್ಟತೊಡಗಿತು. ❁

ದಶಶಿರನ ತಲೆಯಂತೆ ಮರಮರಳಿ ಚಿಗುರಲಿದೆ
ಯುದ್ಧ; ಶಾಂತಿ ಬರಿಯ ಮಾತು ಮಾತ್ರ!

–ಗೋಪಾಲಕೃಷ್ಣ ಅಡಿಗ

ಇದುವೇ ಜೀವ ಇದು ಜೀವನ

ಈಗ ನಾನು ಹೇಳಹೊರಟಿರುವುದು ನಮ್ಮ ಸೋದರಮಾವ ಬೊಂಬಾಯಿಯಲ್ಲಿ ಓದುತ್ತಿದ್ದಾಗ ನಡೆದ ಘಟನೆ. ಸುಮಾರು ಐವತ್ತು ವರ್ಷಗಳಷ್ಟು ಹಿಂದೆ ನಡೆದದ್ದು.

ಅವರು ಇನ್ನೊಬ್ಬ ವಿದ್ಯಾರ್ಥಿಯೊಡನೆ ಕೋಣೆಯೊಂದನ್ನು ಬಾಡಿಗೆಗೆ ಹಿಡಿದಿದ್ದರು. ಆತ ಜಾತಿಯಿಂದ ಮುಸಲ್ಮಾನನಾಗಿದ್ದರೂ ನಡೆ, ನುಡಿ, ಉಡಿಗೆ ಎಲ್ಲದರಲ್ಲಿಯೂ ಹಿಂದುಗಳಂತೆಯೆ ಇದ್ದ.

ದೀಪಾವಳಿ ಹಬ್ಬಕ್ಕಾಗಿ ಅಲ್ಲಿಯ ಬಂಧುವೊಬ್ಬರು ನಮ್ಮ ಮಾವನನ್ನು ಕರೆಯ ಬಂದಾಗ, ಅವರ ಸಹಪಾಠಿಯನ್ನೂ ಊಟಕ್ಕೆ ಆಹ್ವಾನಿಸಿದರು. ಔತಣವನ್ನು ಇಬ್ಬರೂ ಒಪ್ಪಿದ್ದು ಒಂದು ರೀತಿಯಲ್ಲಿ ಸಹಜವೇ ಎನ್ನಬಹುದು. ಆದರೂ, ಆತಿಥೇಯರು ಬಹು ಆಚಾರವಂತರಿದ್ದುದರಿಂದ, ಆತ ಮಹಮ್ಮದೀಯನೆಂದು ಆಗಲೇ ಅವರಿಗೆ ತಿಳಿಸದಿದ್ದುದು ಅಷ್ಟು ಸರಿಯಾಗಲಿಲ್ಲ.

ಪೇಚಿನಲ್ಲಿ ಸಿಕ್ಕ ನಮ್ಮ ಮಾವನಿಗೆ ಉಪಾಯವೊಂದು ಹೊಳೆಯಿತು. ಅದು, ಅವರಲ್ಲಿಗೆ ಹೋದಾಗ ಇಬ್ಬರೂ ಊಟಕ್ಕೆ ಅಕ್ಕಪಕ್ಕದಲ್ಲಿ ಕುಳಿತು, ನಮ್ಮ ಮಾವ ಹೇಗೆ ಆಚರಿಸಿದರೆ ಇನ್ನೊಬ್ಬರೂ ಹಾಗೆಯೇ ಮಾಡುವುದು. ಇದರಿಂದ ಸಲ್ಲದವನೊಬ್ಬ ಸಹಪಂಕ್ತಿಯಲ್ಲಿರುವ ಸುಳಿವೇ ಇತರರಿಗೆ ಹತ್ತದಂತೆ ಮಾಡುವುದು. ಈ ಯೋಜನೆಯಂತೆ ತಮ್ಮ ಗೆಳೆಯನಿಗೆ ಸ್ಪಷ್ಟ ತಿಳಿವಳಿಕೆ ಕೊಟ್ಟ ನಮ್ಮ ಮಾವನಿಗೆ ಈ ತಂತ್ರ ಯಶಸ್ವಿಯಾಗುವುದರಲ್ಲಿ ಸಂದೇಹವೇ ಉಳಿಯಲಿಲ್ಲ. ಇದಿಷ್ಟೂ, ಭೋಜನಕ್ಕೆ ಹೊರಡುವ ಹಿಂದಿನ ದಿನದ ವಿಷಯ.

ದೈವೇಚ್ಛೆಯೋ ಏನೋ ! ಅಲ್ಲಿ ಊಟಕ್ಕೆ ಎಲ್ಲರೂ ಎದ್ದಾಗ, ನಮ್ಮ ಮಾವ ಒಂದು ಕಡೆಯೂ ಅವರ ಸ್ನೇಹಿತ ಎದುರು ಸಾಲಿನಲ್ಲಿಯೂ ಕೂಡಬೇಕಾಗಿ ಬಂದಿತು. ಊಟ ಪ್ರಾರಂಭವಾಗುವ ಮುನ್ನ, ವಿಧಿಯಂತೆ ನಮ್ಮ ಮಾವ ಎಡದಿಂದ ಬಲಕ್ಕೆ ಪರಿಶೇಚನೆ ಮಾಡಿ, ತನ್ನ ಬಲಗಡೆಗೆ ಚಿತ್ರಾಹುತಿ ಇಟ್ಟ. ಎದುರಿನಲ್ಲಿ ಕುಳಿತ ಗೆಳೆಯ, ಬಹು ಜಾಗರೂಕತೆಯಿಂದ ನಮ್ಮ ಮಾವನನ್ನು ಅನುಕರಿಸಿ, ಬಲದಿಂದ ಎಡಕ್ಕೆ ತನ್ನೆಲೆಗೆ ನೀರು ಸುತ್ತಿಕಟ್ಟಿ ಎಲೆಯ ಎಡಗಡೆಗೆ ಚಿತ್ರಾಹುತಿ ಇಟ್ಟ. ಇದನ್ನು ಗಮನಿಸಿದ ನಮ್ಮ ಮಾವನಿಗೆ ಒಮ್ಮೆಲೇ ಎದೆ ಧಸಕ್ಕೆಂದಿತು. ಸಹಜವಾಗಿ ಅವನು ಕಾತರಗೊಂಡು, ತನ್ನ ಬಾಯನ್ನು ಬಲಗೈಯಿಂದ ಮೃದುವಾಗಿ ತಟ್ಟುತ್ತಾ, "ಅಯ್ಯೋ !" ಎಂದು ಮೆಲ್ಲಗೆ ಉದ್ಗರಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಎಂಬಂತೆ, ಆ ಗೆಳೆಯ ಸಹ ಅವರಂತೆಯೇ- ಆದರೆ ಸ್ವಲ್ಪ ಗಟ್ಟಿಯಾಗಿಯೇ- "ಅಯ್ಯೋ" ಎಂದು ಬಾಯಿ ಬಡಿದುಕೊಂಡೇಬಿಟ್ಟ.

ಕೆ. ಎಸ್. ಮೂರ್ತಿ

ವಿಧವೆಯಾದ ನನ್ನ ತಾಯಿಯೊಂದಿಗೆ ಒಮ್ಮೆ ದೇವಾಲಯವೊಂದಕ್ಕೆ ಹೋಗಿದ್ದೆ. ಅಲ್ಲಿಯ ಅರ್ಚಕರು ತೀರ್ಥ ಪ್ರಸಾದ ಕೊಡುವಾಗ ನನ್ನ ತಾಯಿಗೂ, "ದೀರ್ಘ ಸುಮಂಗಲೀ ಭವ" ಎಂದು ಹಾರೈಸಿದರು. ಕುಂಕುಮವಿಲ್ಲದ ನನ್ನ ತಾಯಿಯ ಹಣೆಯನ್ನು ಅವರು ಗಮನಿಸಲಿಲ್ಲವೋ ಏನೊ. ನನ್ನ ತಾಯಿಗೆ ಆ ಅರ್ಚಕರು ಹೇಳಿದ ಮಂತ್ರದ ಅರ್ಥವಾಗಲಿಲ್ಲ. ಆದರೆ ಸ್ವಲ್ಪ ಕಲಿತ, ಅರ್ಚಕರು ಹೇಳುವ ಮಂತ್ರದ ಅರ್ಥಮಾಡಿಕೊಳ್ಳುವ ಶಕ್ತಿ ಇರುವ ಎಳೆವಯಸ್ಸಿನ ವಿಧವೆಯೊಬ್ಬಳಿಗೆ "ದೀರ್ಘ ಸುಮಂಗಲೀ ಭವ" ಎಂದು ಹಾರೈಸಿದರೆ, ಆಗ ಅವಳ ಅಂತರಂಗದಲ್ಲಿ ಎಂತಹ ಹೋರಾಟ ನಡೆದೀತು ?

ಕೆ. ಚಂದ್ರಶೇಖರ ನಾವಡ

ನಾನು ಖಾಸಗೀ ಕಂಪನಿಯೊಂದರಲ್ಲಿ ಟೆಲಿಫೋನ್ ಆಪರೇಟರ್ ಆಗಿದ್ದೆ. ನಮ್ಮ ಆಫೀಸಿನಲ್ಲಿದ್ದ ಚೀಫ್ ಅಕೌಂಟೆಂಟ್ ಸ್ವಲ್ಪ ಸಿಡುಕು ಸ್ವಭಾವದವರು, ಯಾವಾಗಲೂ ಕೆಳಗಿನವರಿಗೆ ಬೈಯುತ್ತಾ ಇರುತ್ತಿದ್ದರು. ಅಲ್ಲದೆ ಯಾವ ಫೋನ್ ಬಂದರೂ ಅಟೆಂಡ್ ಮಾಡುತ್ತಿರಲಿಲ್ಲ. ಅವರ ಮನೆಯಿಂದ ಬಂದರೆ ಮಾತ್ರ ನಾನು ಅವರಿಗೆ ಕನೆಕ್ಷನ್ ಕೊಡುತ್ತಿದ್ದೆ. ಉಳಿದ ಫೋನ್ ಕಾಲ್‌ಗಳಿಗೆ ಅವರು ಸೀಟಿನಲ್ಲಿಲ್ಲ ಎಂದು ಉತ್ತರಕೊಡುತ್ತಿದ್ದೆ. ನಮ್ಮ ಕಂಪನಿಗೆ ಹೊಸದಾಗಿ ಸೆಕ್ರೆಟರಿಯೊಬ್ಬರು ಬಂದರು. ಅವರ ಹೆಸರೂ ನಮ್ಮ ಅಕೌಂಟೆಂಟರ ಹೆಸರೂ ಒಂದೇ. ಅದು ನನಗೆ ಗೊತ್ತಿರಲಿಲ್ಲ. ಒಮ್ಮೆ ಸೆಕ್ರೆಟರಿಯ ಮನೆಯಿಂದ ಫೋನ್ ಬಂತು. ಅವರ ಹೆಂಡತಿ ರಾಮಚಂದ್ರರಿಗೆ ಕನೆಕ್ಷನ್ ಕೊಡಿ ಎಂದರು. ತಕ್ಷಣವೆ ನಾನು ನಮ್ಮ ಅಕೌಂಟೆಂಟರಿಗೆ ಕನೆಕ್ಷನ್ ಕೊಟ್ಟೆ. ಅವರು ಯಾವುದೋ ಕೆಲಸದಲ್ಲಿ ಲೀನವಾಗಿದ್ದರು. ರಿಸೀವರ್ ಹಿಡಿದು, ಹಿಂದೆ ಮುಂದೆ ವಿಚಾರಿಸದೆ, "ಏನೇ ಅದು ರಾಮಾಯಣ? ಯಾರಾದರೂ ಮನೆಗೆ ಬಂದಿದ್ದಾರಾ, ಇಲ್ಲ ನೀನೇ ಎಲ್ಲಾದರೂ ಹೋಗಬೇಕಾಗಿದೆಯಾ? ಹೋಗುವುದಾದರೆ ಕಾರು ತೆಗೆದುಕೊಂಡು ಹೋಗಬೇಡ. ನನಗೆ ಸಂಜೆ ಎಲ್ಲಿಗೊ ಹೋಗಬೇಕು. ನೀನು ಟ್ಯಾಕ್ಸಿಯಲ್ಲಿ ಹೋಗು" ಎಂದು ಹೇಳಿ ಫೋನ್ ಕೆಳಗಿಟ್ಟರು. ನಾನು ಲೈನ್ ಕ್ಲಿಯರ್ ಆಗಿದೆಯಲ್ಲ ಎಂದು ಬೇರೆ ನಂಬರ್ ಡಯಲ್ ಮಾಡಲು ನೋಡಿದರೆ ಆ ಕಡೆಯಿಂದ ಹಲೋ ಎಂದು ಹೇಳುತ್ತಾ ಇದ್ದರು. ನಾನು ಅವರ ಮಾತು ಇನ್ನೂ ಮುಗಿದಿಲ್ಲವೇನೊ ಎಂದು, "ನಿಮಗೆ ಪುನಃ ಅಕೌಂಟೆಂಟರಿಗೆ ಕನೆಕ್ಷನ್ ಕೊಡಬೇಕಾ ?" ಎಂದು ಕೇಳಿದಾಗ ಅವರು ನಗಲು ಶುರು ಮಾಡಿ, "ನನಗೆ ಸೆಕ್ರೆಟರಿ ರಾಮಚಂದ್ರ ಅವರಿಗೆ ಕನೆಕ್ಷನ್ ಕೊಡಿ" ಎಂದು ಹೇಳಿದರು. ನಾನು ನಮ್ಮ ಅಕೌಂಟೆಂಟರ ಮುಖ ನೋಡಿದರೆ ಅವರು ಬೇರೆ ಯಾವುದೊ ಯೋಚನೆಯಲ್ಲಿ ಉಗುರು ಕಚ್ಚುತ್ತಾ ಕುಳಿತಿದ್ದರು.

ದಮಯಂತಿ ರವಿಕುಮಾರ್

ಒಮ್ಮೆ ಮುಂಬೈಯಿಂದ ಮಿರ್ಜಿಗೆ ರೈಲಿನಲ್ಲಿ ಪ್ರವಾಸಿಸುತ್ತಿದ್ದೆ. ಅಷ್ಟೇನೂ ಗದ್ದಲವಿಲ್ಲದ ಕಾರಣ ಕೂಡ್ರಲು ಸೀಟು ಸಿಕ್ಕಿತ್ತು. ನಮ್ಮ ಕಂಪಾರ್ಟಮೆಂಟಿನಲ್ಲಿ ನಾಲ್ಕು ಜನರಿದ್ದೆವು.ಅವರಲ್ಲಿ ಒಬ್ಬ ವಯಸ್ಸಾದ ಹೆಂಗಸು. ಮತ್ತೊಬ್ಬಳು ಅವಳ ಮಗಳಿರಬಹುದು. ಪುಣೆ ದಾಟುವುದರಲ್ಲಿ ನನಗೆ ತೂಕಡಿಕೆ ಬಂದಂತಾಗಿ ಮಲಗಿದೆ. ಎದ್ದು ನೋಡಿದಾಗ ನನ್ನ ತೊಡೆಯ ಮೇಲಿನ ಹೊಸ ಕೈವಸ್ತ್ರ ಮಾಯವಾಗಿತ್ತು. ಸೀಟಿನ ಕೆಳಗಡೆ, ಹಿಂಬದಿ, ಮುಂಬದಿ ನೋಡಿದೆ. ಸಿಗದಾದಾಗ ಉಳಿದ ಇಬ್ಬರು ಪ್ರಯಾಣಿಕರನ್ನು ಕೇಳಿದೆ. ಉಪಯೋಗವಾಗಲಿಲ್ಲ. ನನ್ನ ಸಹಪ್ರಯಾಣಿಕನಂತೂ ಜೋರಿನಿಂದ ನಿದ್ದೆ ಹೊಡೆಯುತ್ತಿದ್ದ ಕಾರಣ ಎದುರು ಬದಿಯ ಹೆಣ್ಣುಮಕ್ಕಳ ಮೇಲೆ ಸಂಶಯ ಬಾರದೇ ಇರಲಿಲ್ಲ. ಅಷ್ಟರಲ್ಲಿ ಆ ಪ್ರಯಾಣಿಕ ಎದ್ದು ಕುಳಿತಾಗ ಇದರ ಬಗ್ಗೆ ವಿಚಾರಿಸಿದ. ಅವನ ಮುಂದೆ ಬೇಕೆಂದೇಸಣ್ಣದಾದ ಸುಳ್ಳು ಹೇಳಿದೆ:'ಒಂದು ದಿನ ನಾನು ಪೋಸ್ಟ್ ಆಫೀಸಿಗೆ ಹೋದಾಗ ಇಟ್ಟಿದ್ದ ಹೀರೋ ಪೆನ್ನನ್ನು ಒಬ್ಬ ಕದ್ದ. ನಾನು ಎಲ್ಲರಿಗೂ ಹೇಳಿದೆ, ಹುಡುಕಿದೆ, ಕೇಳಿದೆ, ಪ್ರಯೋಜನವಾಗಲಿಲ್ಲ. ಐದೇ ನಿಮಿಷದಲ್ಲಿ ಅವನು ಎದೆ ನೋವೆಂದು ಎದೆ ಹಿಡಿದು ಕುಳಿತುಕೊಂಡ. ಅಷ್ಟರಲ್ಲಿ ಅವನ ಕಿಸೆಯಲ್ಲಿಯ ಕದ್ದ ಪೆನ್ನು ಹೊರಬಿತ್ತು. ಎಲ್ಲರೂ ಬೈಯುತ್ತಾ ನನ್ನ ಪೆನ್ನು ತೆಗೆದುಕೊಂಡದ್ದಕ್ಕಾಗಿ ಹೀಗಾಯಿತೆಂದು ಅನ್ನತೊಡಗಿದರು' ಎಂದು ಹೇಳಿ ನಿಸರ್ಗ ಕರೆಗೆ ಹೋದೆ. ಬಂದು ನೋಡುವಷ್ಟರಲ್ಲಿ ನನ್ನ ವಸ್ತ್ರ ನನ್ನ ಸೀಟಿನ ಮೇಲಿತ್ತು. ಎದುರು ಕುಳಿತ ಪ್ರಯಾಣಿಕರಿಬ್ಬರು ಕಣ್ಣು ಮುಚ್ಚಿದ್ದರು, ಆದರೆ ಮೂರ್ಛೆ ಹೋಗಿರಲಿಲ್ಲ.

ಈಶ್ವರ ಕೋಲಾರ

ಆರ್ಥಿಕ ಸ್ವಾತಂತ್ರ್ಯ ಸಾಧನೆಯತ್ತ
ಕರ್ನಾಟಕದ ಮುನ್ನಡೆ

ಆರ್ಥಿಕ ಪ್ರಗತಿ

೧೯೭೭–೭೮ ರಲ್ಲಿ ಕರ್ನಾಟಕ ಆರ್ಥಿಕ ಕ್ಷೇತ್ರದಲ್ಲಿ ಶೇಕಡ ೬ ರಷ್ಟು ಪ್ರಗತಿ ಸಾಧಿಸಿದೆ ಎಂದು ಅಂದಾಜು ಮಾಡಲಾಗಿದೆ. ಅಖಿಲ ಭಾರತ ಪ್ರಗತಿಯ ಪ್ರಮಾಣ ಶೇಕಡ ಐದು ಮಾತ್ರ.

೧೯೭೪-೭೫ ರಲ್ಲಿ ೨೫೪೪ ಕೋಟಿ ರೂ. ಆಗಿದ್ದ ರಾಜ್ಯದ ಆದಾಯ ೧೯೭೭-೭೮ರ ಹೊತ್ತಿಗೆ ೨೮೦೦ ಕೋಟಿ ರೂ.ಗೆ ಏರಿದೆ ಎಂದು ಅಂದಾಜು ಮಾಡಲಾಗಿದೆ.

ತಲಾ ವರಮಾನ ೧೯೭೪-೭೫ ರಲ್ಲಿ ರೂ. ೭೮೪ ಇದ್ದದ್ದು ೧೯೭೭-೭೮ ರಲ್ಲಿ ರೂ. ೮೪೦ ಕ್ಕೆ ಏರಿದೆ.

ಅಭಿವೃದ್ಧಿ ವೆಚ್ಚದ ಪ್ರಮಾಣವೂ ಇದೇ ಅವಧಿಯಲ್ಲಿ ತಲಾ ೯೯ ರೂ. ನಿಂದ ೧೫೬ ರೂ.ಗೆ ಏರಿದೆ.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

ಅಭಿಲಾಷಾ

ಮೂಲ : ರಾಮಮೋಹನ ಪರಾಂಜಪೆ
ಕನ್ನಡಕ್ಕೆ : ಎನ್. ಗಾಯಿತ್ರಿ

ಮದುವೆಯಾಗಿ ಎಷ್ಟೋ ವರ್ಷಗಳ ನಂತರ ಜನಿಸಿದ ಅಭಿಲಾಷಾ ತನ್ನ ತಂದೆ–ತಾಯಿಯರ ಕಣ್ಮಣಿಯಷ್ಟೇ ಅಲ್ಲ, ಅವರ ಭವಿಷ್ಯದ ಚೇತನ ಶಕ್ತಿಯಾಗಿದ್ದಳು. ಅವಳು ಪರಾಂಜಪೆ ದಂಪತಿಗಳ ಅಭಿಲಾಷೆಯೇ ಆಗಿದ್ದಳು.

ಸೂರತ್ ಶಾಲೆಯ ಅತ್ಯುತ್ತಮ ವಿದ್ಯಾರ್ಥಿ–ನಿಯಾಗಿದ್ದ ಅಭಿಲಾಷಾ ವಿನಯಶೀಲೆಯಾಗಿದ್ದಳು. ಏರುತ್ತಿರುವ ವಯಸ್ಸನ್ನೂ ಮರೆತು ಮಗಳ ಉನ್ನತ ವ್ಯಾಸಂಗಕ್ಕಾಗಿ ಅವಳ ತಂದೆ ತಾಯಿಗಳು ಮುಂಬಯಿಗೆ ತೆರಳಲು ನಿರ್ಧರಿಸಿದರು. ಇದಕ್ಕಾಗಿ ಅವರು ಸೂರತ್‌ನಲ್ಲಿನ ಒಳ್ಳೇ ನೌಕರಿಯನ್ನು ಬಿಟ್ಟು ಕಡಿಮೆ ವೇತನದ ಮುಂಬಯಿ ಉದ್ಯೋಗಕ್ಕೆ ಹೊರಡಲು ಸಿದ್ಧರಾದರು. ಆದರೆ ಅವಳ ಶಿಕ್ಷಣ ಸಮಸ್ಯಾತ್ಮಕವಾಗಿರಲಿಲ್ಲ. ಪ್ರತಿಭಾವಂತಳಾದ ಅವಳಿಗೆ ವಿದ್ಯಾರ್ಥಿವೇತನ ದೊರೆಯುತ್ತಿತ್ತು. ಚಿನ್ನದ ಪದಕದೊಂದಿಗೆ ಆನರ್ಸ್ ಪಡೆದ ಅಭಿಲಾಷಾ ಸ್ನಾತಕೋತ್ತರ ಶಿಕ್ಷಣವನ್ನೂ ಪೂರೈಸಿದಳು.

ಅವಳ ವಿವಾಹದ ಬಗ್ಗೆ ಅವರಿಗೆ ಸಾಕಷ್ಟು ಆಸಕ್ತಿ ಇದ್ದರೂ ತನ್ನ ಕರಿಅರ್‌ಅನ್ನು ಆರಿಸಿಕೊಳ್ಳಲು ಹಿರಿಯರು ಅವಳಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟರು. ಅದೂ ಶೀಘ್ರವಾಗಿ ಬಂದಿತು. ತನ್ನ ಕೋರ್ಸಿನಲ್ಲಿ ಅಭಿಲಾಷಾ ರಾಜ್ಯಕ್ಕೆ ಪ್ರಥಮಳಾಗಿದ್ದಳೆಂಬ ಸುದ್ದಿಯೊಂದಿಗೆ ಸಂತಸ ವಾರ್ತೆ–ಯೊಂದು ಮೂಡಿ ಬಂದಿತು. ಕಾಮನ್ ವೆಲ್ತ್ ಅಧ್ಯಯನದಲ್ಲಿ ವಿಶೇಷ ಪರಿಣತಿಗಾಗಿ ಅವಳಿಗೆ ಫೆಲೋಶಿಪ್ ಸಿಕ್ಕು, ಅವಳು ಆಕ್ಸ್–ಫರ್ಡಿಗೆ ತೆರಳಬೇಕಿತ್ತು. ಪರಾಂಜಪೆ ದಂಪತಿಗಳ ಆನಂದ ಎಲ್ಲೆ ಮೀರಿತು. ಅಗಲಿಕೆ ಅವರಿಗೆ ಅಸಹನೀಯವಾಗಿದ್ದರೂ ಮಗಳ ವಿದೇಶಯಾತ್ರೆಗೆ ನೆರವಾದರು.

ಅಗಲುವ ದಿನ ಬಂತು. ಇದೇ ಫೆಲೋಶಿಪ್‌ನಿಂದ ಹೋಗುವ ಹತ್ತು ವಿದ್ಯಾರ್ಥಿಗಳನ್ನು ವಿಮಾನ ನಿಲ್ದಾಣಕ್ಕೆ ಕರೆದೊಯ್ಯುವ ಏರ್ಪಾಟು ಮಾಡಲಾಗಿದೆ ಎಂದೂ ಅವರುಗಳನ್ನು ಸ್ಥಳೀಯ ಬ್ರಿಟಿಷ್ ರಾಯಭಾರ ಕಚೇರಿಗೆ ಕರೆತರಬೇಕೆಂದೂ

ಸೂಚಿಸಲಾಗಿತ್ತು. ಅಂದು ದಂಪತಿಗಳು ಹೊತ್ತು ಹುಟ್ಟುವ ಮುನ್ನ ಎದ್ದು ದೇವಸ್ಥಾನಕ್ಕೆ ಹೋಗಿ ಬಂದರು. ಮಗಳ ಹಣೆಗೆ ಕುಂಕುಮ ಇರಿಸಿದರು. ರಾಯಭಾರಿ ಕಚೇರಿಗೆ ಮೂವರೂ ತೆರಳಿದರು. ವೃದ್ಧರಾಗುತ್ತಿದ್ದ ತಂದೆ ತಾಯಿಗಳನ್ನು ಕಂಡು ಅಭಿಲಾಷಾಳ ಕಣ್ಣಲ್ಲಿ ನೀರು. ಮಗಳನ್ನು ಅಪ್ಪಿದ ಅವರೂ ದುಃಖಿತರಾದರು. ಆರೋಗ್ಯ ಸರಿಯಾಗಿ ನೋಡಿಕೊಳ್ಳುವಂತೆ ಅವರಿಗೆ ತಿಳಿಸಿ ಅವಳು ಒಳಹೊಕ್ಕಳು. ಕಾರುಗಳು ಹೊರಟಾಗ ವೃದ್ಧರ ಹೃದಯ ತುಡುಕಿತು. ವಿಮಾನ ನಿಲ್ದಾ–ಣಕ್ಕೆ ಹೊರಟೇಬಿಟ್ಟರು. ಅಲ್ಲಿನ ಗಡಿಬಿಡಿ ಅವರನ್ನು ಗಾಬರಿಗೊಳಿಸಿತು. ಹತ್ತಾರು ಬಾರಿ ವಿಚಾರಿಸಿದ ಮೇಲೆ ಅವರೆಲ್ಲ ಒಳಹೋಗಿದ್ದಾರೇದೂ ಬಾಲ್ಕನಿಯಲ್ಲಿ ನಿಂತು ನೋಡಬಹುದೆಂದೂ ತಿಳಿಯಿತು. ಏದುಸಿರು ಬಿಡುತ್ತಾ ಮೇಲೆ ಹೋದರು. ಎಷ್ಟೋ ಹೊತ್ತು ಕಾದರೂ ಅವರಿಗೆ ಬಿ.ಓ.ಎ.ಸಿ. ಬಗ್ಗೆ ತಿಳಿಯಲಿಲ್ಲ. ಕೊನೆಗೆ ಪಕ್ಕದಲ್ಲಿದ್ದ ತರುಣಿಯನ್ನು ಕೇಳಿದಾಗ ಆಕೆ, "ಈಗ್ಗೆ ಹತ್ತು ನಿಮಿಷದ ಹಿಂದೆ ಅವರೆಲ್ಲ ತೆರಳಿದರಲ್ಲಾ, ನನ್ನ ಸಹೋದರನೂ ಹೋದ. ದೂರಕ್ಕೆ ಸರಿಯಾಗಿ ಕಾಣೊಲ್ಲ" ಎಂದಳು. ಅಭಿಲಾಷಾ ಹೊರಟು ಹೋಗಿದ್ದಳು. ವ್ಯಥೆಯಿಂದ ವೃದ್ಧರು ಮರಳಿದರು.

ಒಂದು ವಾರವಾದರೂ ಅಭಿಲಾಷಾಳಿಂದ ಪತ್ರ ಇಲ್ಲ. ಪತ್ರಗಳು ಸರಿಯಾಗಿ ತಲುಪಲು ಪೋಷಕರು ರಾಯಭಾರಿ ಕಚೇರಿ ಮೂಲಕ ಪತ್ರಗಳನ್ನು ಕಳುಹಿಸಬೇಕೆಂದು ತಿಳಿಸಲಾಗಿತ್ತು. ಪರಾಂಜಪೆಯವರು ಹಾಗೇ ಮಾಡಿದರೂ ಅಭಿಲಾಷಾಗಳಿಂದ ಪತ್ರ ಬರಲಿಲ್ಲ.

ನಾಲ್ಕು ವಾರ ಉರುಳಿದರೂ ಅವಳಿಂದ ಪತ್ರವಿಲ್ಲ. ಶೋಕತಪ್ತರಾದ ಪರಾಂಜಪೆ ದಂಪತಿಗಳಿಗೆ ತಮ್ಮ ಪುತ್ರಿ ಲಂಡನ್ ತಲುಪಿರುವ ಬಗ್ಗೆಯೇ ಸಂದೇಹ ಮೂಡಿ ಭಯವಾಯಿತು. ಬ್ರಿಟಿಷ್ ರಾಯಭಾರ ಕಚೇರಿಯ ಅಧಿಕಾರಿಗಳಲ್ಲಿ ತಮ್ಮ ಆತಂಕವನ್ನು ತೋಡಿಕೊಂಡರು. ವಿದ್ಯಾರ್ಥಿಗ–ಳೆಲ್ಲಾ ಲಂಡನ್ ತಲುಪಿದ್ದಾರೆಂದೂ ಅವರಿಗೆ ಕಳಿಹಿಸಲಾಗಿರುವ ಪತ್ರಗಳನ್ನೂ ತಲುಪಿಸಲಾಗಿದೆ ಎಂದೂ ಹೇಳಲಾಯಿತು. ಪರಾಂಜಪೆಯವರು ರಾಯಭಾರ ಕಚೇರಿಗೆ ಆಗಾಗ್ಗೆ ಹೋಗತೊಡಗಿದರು. ಲಂಡನ್ನಿನಲ್ಲಿ ಪ್ರಾಥಮಿಕ ಅಧ್ಯಯನ ನಡೆಸಿ



ಆಕ್ಸ್‌ಫರ್ಡಿನ ತನ್ನ ಕಾಲೇಜಿಗೆ ಹೋಗಲು ಅಭಿಲಾಷಾಳಿಗೆ ಸೂಚನೆ ಕೊಡಲಾಗಿದೆ ಎಂದು ತಿಳಿಯಿತು.

"ಅಭಿಲಾಷಾ ಲಂಡನ್ ತಲುಪಿದ್ದಾಳೆ !" ಎಂದು ಪರಾಂಜಪೆಯುವರ ಕಾತರದ ಪ್ರಶ್ನೆಗೆ ತಿಳಿಸಿ, "ದೊಡ್ಡ ದೊಡ್ಡ ನಗರಗಳಲ್ಲಿ ವಿದ್ಯಾರ್ಥಿಗಳು ತಮ್ಮೆಲ್ಲ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕಾಗುತ್ತದೆ. ಪಾಪ! ಮಗೂ ಹೇಗೆ ತಾನೇ ಬರೆಯುತ್ತೆ? ಜೊತೆಗೆ ತನ್ನ ಪಾಠ, ಪ್ರವಚನ ಬೇರೆ ನೋಡ್ಕೊಳ್ಳಬೇಕು," ಎಂದು ಸಾಂತ್ವನ ಹೇಳಿಕೊಂಡರು.

ಅಂಥ ಸಮಾಧಾನದ ನುಡಿಗಳನ್ನು ಹೇಳಿಕೊಂಡೇ ಅವರು ದಿನಗಳನ್ನು ಕಳೆದರು. ದಿನ ವಾರವಾಯ್ತು. ತಿಂಗಳೂ ಉರುಳಿ ಹೊಸ ವರ್ಷ ಕಾಲಿಕ್ಕಿತು. ಮಗಳು ಲಂಡನ್ ಸೇರಿ ವರ್ಷವಾಗಿದ್ದರೂ ಅವಳಿಂದ ಏನೂ ತಿಳಿದಿಲ್ಲವೆಂದು ಹೇಳಿಕೊಳ್ಳುವುದು ಪರಾಂಜಪೆಯುವರಿಗೆ ಅಗೌರವದ ಪ್ರಶ್ನೆಯಾಗಿತ್ತು. ಆದರೆ ಮಾನಸಿಕ ಕ್ಲೇಶ ತಡೆಯದಾದಾಗ ತಮ್ಮ ಹಳೆಯ ಕಚೇರಿಯ ಬಳಿ ವಿಷಯ ಅರುಹಿದರು. ಭಾರತ ಸರಕಾರದ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆಯಲು ಸೂಚಿಸಿದ ಅವರು ಅದು ಲಂಡನ್ನಿಂದ ಏನಾದರೂ ತಿಳಿದುಕೊಳ್ಳಬಹುದೆಂಬ ಆಶಾಕಿರಣ ಮೂಡಿಸಿದರು. ಪರಾಂಜಪೆಯುವರು ಭಾರತ ಸರಕಾರಕ್ಕೆ ಹೃದಯ ಮಿಡಿಯುವ ಪತ್ರ ಬರೆದರು. ಪರಿಶೀಲಿಸಲಾಗುತ್ತಿದೆ ಎಂದು ಉತ್ತರ ಬಂತು. ಬ್ರಿಟಿಷ್ ಹೋಮ್ ಕಚೇರಿಗೂ ಅವರು ನಿವೇದನಾ ಪತ್ರ ಬರೆದರು. ಅಲ್ಲಿಂದ ಅವರಿಗೆ ಉತ್ತರ ಬಂದಿತು.

ಅಭಿಲಾಷಾ ಪರಾಂಜಪೆ ಆಕ್ಸ್‌ಫರ್ಡಿನಲ್ಲಿ ಸುಮಾರು ಒಂದು ವರ್ಷವಿದ್ದಳೆಂದೂ ಅಹಿತಕರ ನಡವಳಿಕೆಯ ರಿಕಾರ್ಡ್ ಪಡೆದಿದ್ದಳೆಂದೂ ತಿಳಿಸಲಾಗಿತ್ತು. ಮೊದಲ ಕೆಲವು ತಿಂಗಳುಗಳಲ್ಲಿ ಅಭಿಲಾಷಾ ಅತ್ಯಂತ ಪ್ರತಿಭಾವಂತಳಂತೆ ಕಂಡುಬಂದಿದ್ದರಿಂದ ಅವಳ ಹೆಸರನ್ನು ಕಾಲೇಜು ಹಾಜರಿಯಲ್ಲಿ ಇನ್ನೂ ಇಡಲಾಗಿತ್ತು. ನಂತರ ಅವಳು ಹಾಜರಾಗದೆ ನಾಪತ್ತೆಯಾಗಿದ್ದಳು. ಪತ್ತೆಗಾಗಿ ಪ್ರಯತ್ನ ನಡೆಯುತ್ತಿದೆ–ಇದು ಪತ್ರದ ಸಾರಾಂಶ.

ಈ ಆಘಾತದಿಂದ ಪರಾಂಜಪೆ ದಂಪತಿಗಳಿಗೆ ಚೇತರಿಸಿಕೊಳ್ಳಲಾಗಲೇ ಇಲ್ಲ. ಪರಾಂಜಪೆಯುವರು ತಮ್ಮ ೬೫ ವರ್ಷಕ್ಕಿಂತಲೂ ಹಿರಿಯರಾಗಿ ಕಾಣುತ್ತಿದ್ದರು. ಅವರ ಪತ್ನಿಯ ದುಃಖವು ಮೌನಕ್ಕೆ ತಿರುಗಿತು. ಆಕೆ ಮಾತಾಡುವುದು ಹೆಚ್ಚು ಕಮ್ಮಿ ನಿಂತೇಹೋಗಿತ್ತು. ಅಭಿಲಾಷಾ ಕಣ್ಮರೆಯಾಗಿದ್ದೇ ಇದಕ್ಕೆಲ್ಲ ಕಾರಣವಾಗಿತ್ತು.

ಭಾರತ ಸರಕಾರವೂ ಸುದ್ದಿ ಕಳಿಸಿತು. ಉತ್ತರ ಐರ್ಲೆಂಡಿನ ಕ್ರಾಂತಿಕಾರಿ ಗುಂಪೊಂದನ್ನು ಅಭಿಲಾಷಾ ಸೇರಿದ್ದಾಳೆಂದು ಲಂಡನ್ನಿನ ಅಧಿಕಾರ ವರ್ಗಕ್ಕೆ ಬ್ರಿಟಿಷ್ ಗೂಢಚಾರರಿಂದ ತಿಳಿದು ಬಂದಿದೆ ಎಂದು ಹೇಳಲಾಗಿತ್ತು. ಮುಂಬಯಿಯಲ್ಲಿ ಆಕೆ ಎಂಥ ಜನರೊಂದಿಗೆ ಸಂಪರ್ಕ ಇರಿಸಿಕೊಂಡಿದ್ದಳೆಂಬುದರ ಬಗ್ಗೆ ತಿಳಿಸಲು ಪರಾಂಜಪೆಯುವರನ್ನು ಕೋರಲಾಗಿತ್ತು.

ಪರಾಂಜಪೆಯುವರು ಕ್ರೋಧ ತುಂಬಿದ ಉತ್ತರ ಬರೆದರು. ಅವೆಲ್ಲ ಗೂಢಚಾರರ ವರದಿಗಳು ಆಧಾರರಹಿತವೆಂದು ಹೇಳಿದ್ದ ಅವರು ತಮ್ಮ ಪುತ್ರಿಗೆ ರಾಜಕೀಯದಲ್ಲಿ ಯಾವುದೇ ಆಸಕ್ತಿ ಇರಲಿಲ್ಲವೆಂದೂ ಕ್ರಾಂತಿಕಾರರೊಂದಿಗೆ ಸಂಪರ್ಕ ಬೆಳೆಸುವಷ್ಟು ಧೈರ್ಯ ಕೂಡ ಆಕೆಗೆ ಇಲ್ಲವೆಂದೂ ಪರಾಂಜಪೆಯುವರು ಹೇಳಿದ್ದರು.

ಮಗಳ ತಪಾಸಣೆಗಾಗಿ ತಾವು ಲಂಡನ್ನಿಗೆ ಹೋಗುವುದಾಗಿ ಪರಾಂಜಪೆಯುವರು ಪತ್ನಿಗೆ ತಿಳಿಸಿದರು. ಮೂರು ತಿಂಗಳ ಓಡಾಟ ನಡೆಸಿ, ಕೊನೆಗೆ ತಮ್ಮ ಯತ್ನ ವಿಫಲವಾಯಿತೆಂದರು. ಪಾಸ್‌ಪೋರ್ಟ್ ದೊರೆಯುವುದು ಅಸಾಧ್ಯವೆಂದೂ ಲಂಡನ್‌ಗೆ ಹೋಗಿ ಕೆಲವೇ ದಿನ ತಂಗಲೂ ಹತ್ತುಸಾವಿರ ರೂಪಾಯಿ ವೆಚ್ಚವೆಂದೂ ಹೇಳಿದರು. ಅಲ್ಲದೆ ಇಂಥ ಪುಂಡ ಮಕ್ಕಳಿಗಾಗಿ ಅಷ್ಟೊಂದು ವಿದೇಶಿ ವಿನಿಮಯ ಹಾಳು ಮಾಡುವುದು ಮೂರ್ಖತನವೆಂದೂ ಸರಕಾರ ಹೇಳುತ್ತದೆ ಎಂದು ವೃದ್ಧರು ಹೇಳಿಕೊಂಡರು.

ಅಭಿಲಾಷಾ ಲಂಡನ್ ವಿಮಾನ ಹತ್ತಿ ನಾಲ್ಕು ವಸಂತಗಳು ಉರುಳಿವೆ. ಗಂಭೀರಜೀವನಕ್ಕೆ ವೃದ್ಧ ದಂಪತಿಗಳು ಹೊಂದಿಕೊಂಡುಬಿಟ್ಟಿದ್ದರು. ಒಮ್ಮೊಮ್ಮೆ ಅಭಿಲಾಷಾಳ ಕಾಲೇಜಿಗೆ ಹೋಗಿ ಕಳೆದು ಹೋದ ದಿನಗಳ ಬಗ್ಗೆ ಯೋಚಿಸುತ್ತಿದ್ದರು. 'ಎಂದಾದರೊಂದು ದಿನ ದೇವರು ಮಗಳನ್ನು ಕಳುಹಿಸುತ್ತಾನೆ,' ಎಂದುಕೊಳ್ಳುತ್ತಿದ್ದರು.

ಐದು ವರ್ಷ ಸಂದಿದೆ. ಒಂದು ದಿನ ಪರಾಂಜಪೆಯವರ ನೆರೆಯವರು ಪತ್ರಿಕೆ ಹಿಡಿದು ಬಂದು ಸುದ್ದಿಯೊಂದನ್ನು ತೋರಿಸಿದರು. ಶಿಲ್ಲಾಂಗ್ ಬಳಿ ನಕ್ಸಲೈಟ್‌ಗಳ ಗುಂಪೊಂದನ್ನು ಸೆರೆಹಿಡಿಯಲಾಗಿದೆ ಎಂದೂ ಅದರಲ್ಲಿ ಅಭಿಲಾಷಾ ಎಂಬುವವಳೂ ಇದ್ದಾಳೆಂದೂ ಸುದ್ದಿ ಅಚ್ಚಾಗಿತ್ತು. ಪೋಲೀಸರು ಮತ್ತು ಭಯೋತ್ಪಾದಕ(ಕ್ರಾಂತಿಕಾರ)ರ ನಡುವೆ ತೀವ್ರ ಹೋರಾಟ ನಡೆದಿತ್ತು. ಆಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ೨೫ ಮಂದಿಯನ್ನು ಬಂಧಿಸಲಾಗಿತ್ತು. ಅದರಲ್ಲಿದ್ದ ಇಬ್ಬರು ಮಹಿಳೆಯರಲ್ಲಿ ಒಬ್ಬಳು ಭಾರತದ ಪಾಸ್‌ಪೋರ್ಟ್ ಹೊಂದಿದ್ದ ಅಭಿಲಾಷಾ ಪರಾಂಜಪೆ ಎಂದು ಗುರುತಿಸಲಾಗಿತ್ತು.

ಜಗತ್ತಿನಲ್ಲಿ ಭಾರತೀಯ ಪಾಸ್‌ಪೋರ್ಟ್ ಹೊಂದಿದ ಇಬ್ಬರು ಅಭಿಲಾಷಾ ಪರಾಂಜಪೆಗಳು ಇರುವುದು ಸಾಧ್ಯವೇ ಇಲ್ಲ. ಸುದ್ದಿ ಓದಿ ಪರಾಂಜಪೆಯವರು ದಿಙ್ಮೂಢರಾದರು. ಭಯೋತ್ಪಾದಕರೊಂದಿಗೆ ಅವಳು ಹೇಗೆ ಸೇರುತ್ತಾಳೆ? ಪತ್ನಿಗೂ ಈ ಸುದ್ದಿಯನ್ನು ತಿಳಿಸಿದರು. ತಮಗೂ ತಿಳಿಯದಂತೆ ಅಭಿಲಾಷಾ ಭಾರತದಲ್ಲೇ ಇದ್ದಿರಬಹುದೆಂದು ಹೇಳಿದರು. ಪತ್ನಿ ಕಲ್ಲಾಗಿ ನಿಂತಳು. ಶಿಲ್ಲಾಂಗಿಗೆ ಹೋಗಿ ವರದಿಯ ಸತ್ಯಾಂಶ ಪರಿಶಿಲಿಸಿಕೊಂಡು ಬರುವುದಾಗಿ ಅವರು ನುಡಿದರು. ಅಂಚೆಕಛೇರಿಗೆ ಹೋಗಿ ಉಳಿತಾಯ ಠೇವಣಿಯಿಂದ ಹಣ ಪಡೆದುಕೊಂಡರು.

ಶಿಲ್ಲಾಂಗ್ ಪೋಲೀಸರು ವರದಿಯನ್ನು ಸ್ಪಷ್ಟಪಡಿಸಿದರು. ಮೊಕದ್ದಮೆಯನ್ನು ಇನ್ನೂ ಪರಿಷ್ಕರಿಸುತ್ತಿರುವುದರಿಂದ ವಿಚಾರಣೆಯಲ್ಲಿರುವ ಆರೋಪಿಗಳನ್ನು ನೋಡಲಾಗುವುದಿಲ್ಲವೆಂದು ಅವರು ತಿಳಿಸಿದರು. ರಹಸ್ಯ ಬಂದೀಖಾನೆಯಲ್ಲಿ ಅವರನ್ನು ಇಡಲಾಗಿತ್ತು. ತನಿಖೆ ನಂತರ ವಿಚಾರಣೆ ನಡೆಯುವುದೆಂದೂ ಅದಕ್ಕೆ ಎರಡು ತಿಂಗಳಾದರೂ ಬೇಕಾಗುವುದೆಂದೂ ಅವರಿಗೆ ಹೇಳಲಾಯ್ತು.

ಪೂರ್ಣ ಹತಾಶರಾದ ಪರಾಂಜಪೆಯವರು ಮುಂಬಯಿಗೆ ಮರಳಲು ನಿರ್ಧರಿಸಿದರು. ಯಾವುದೇ ಗಳಿಗೆಯಲ್ಲಿ ಅಭಿಲಾಷಾ ಕೆಲ ಮಂದಿ ಜೊತೆ ಸೇರಿಕೊಂಡು ಬಿಟ್ಟಿದ್ದಾಳೆ. ಅವರು ಅವಳ ಮುಗ್ಧತೆಯ ದುರುಪಯೋಗ ಮಾಡಿಕೊಂಡಿದ್ದಾರೆಂದೂ ತಂದೆಯ ಹೃದಯ ಹೇಳಿತು. ಅವಳ ಬಿಡುಗಡೆಯಾಗುತ್ತದೆ, ಆಗ ಮಗುವನ್ನು ಮನೆಗೆ ಕರೆದೊಯ್ಯುತ್ತೇನೆ ಎಂದುಕೊಂಡರು. "ಅವಳೀಗ ಮಗುವಲ್ಲ. ಬರುವ ಫೆಬ್ರುವರಿಗೆ ಅವಳಿಗೆ ಇಪ್ಪತ್ತೇಳು ಆಗುತ್ತದೆ!" ಎಂದು ಮನ ಹೇಳಿತು.

ಶ್ರೀಮತಿ ಪರಾಂಜಪೆಯವರು ಮೌನವಾಗಿ ಪತಿ ಹೇಳಿದ್ದನ್ನು ಆಲಿಸಿದರು. ಚಿಂತೆ ಹಚ್ಚಿಸಿಕೊಂಡು ಆರೋಗ್ಯ ಹಾಳು ಮಾಡಿಕೊಳ್ಳಬಾರದೆಂದೂ, ಮಗಳು ದೇವರೊಂದಿಗಿದ್ದಾಳೆಂದೂ ಅವರು ಪತ್ನಿಯನ್ನು ಸಾಂತ್ವನಗೊಳಿಸಿದರು.

ಎರಡು ತಿಂಗಳ ನಂತರ ಪರಾಂಜಪೆ ದಂಪತಿಗಳು ಶಿಲ್ಲಾಂಗ್ ತಲುಪಿದರು. ಮೂರು ದಿನಗಳ ಪ್ರಯಾಣದಿಂದ ಅವರು ಕುಗ್ಗಿದ್ದರು. ಗೌಹಾತಿಯಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗಬೇಕೆಂದು ಅವರಿಗೆ ತಿಳಿಸಲಾಗಿತ್ತು. ವಿಚಾರಣೆ ರಹಸ್ಯವಾಗಿ ಜೈಲಿನಲ್ಲಿ ನಡೆಯುತ್ತಿದೆ ಎಂದು ಅವರಿಗೆ ಅಲ್ಲಿ ತಿಳಿಯಿತು. ಅವರ ಸ್ಥಿತಿ ಹಾಗೂ ಹಣಕಾಸಿನ ಪರಿಸ್ಥಿತಿ ಕಂಡು ಮರುಗಿದ್ದ ರೈಲ್ವೆ ಅಧಿಕಾರಿಗಳು ಪೋಲೀಸರಿಂದ ನಿಶ್ಚಿತ ವರ್ತಮಾನ ಬರುವವರೆಗೂ ವೇಟಿಂಗ್ ರೂಮಿನಲ್ಲಿರಲು ಅವಕಾಶ ಕೊಟ್ಟರು. ಸುಮಾರು ಹತ್ತು ದಿನಗಳವರೆಗೆ ಪ್ರತಿದಿನ ಅವರು ಪೋಲೀಸ್‌ಠಾಣೆಗೆ ಹೋಗುತ್ತಿದ್ದರು. ಮಗಳ ಬಿಡುಗಡೆ ಖಚಿತ ಎಂದು ಪತ್ನಿಗೆ ಹೇಳುತ್ತಿದ್ದರು.

ಪರಾಂಜಪೆಯವರು ನಿರೀಕ್ಷಿಸಿದ ತೀರ್ಪು ಹೊರಬಂದಿತು. ಅಭಿಲಾಷಾ ಮತ್ತು ಇತರ ಅನೇಕರನ್ನು ಜೀವಾವಧಿ ಕಠಿಣಶಿಕ್ಷೆಗೆ ಒಳಪಡಿಸಲಾಗಿತ್ತು. ಶಿಕ್ಷೆಯನ್ನು ಅನುಭವಿಸಲು ಅವರನ್ನು ಕಾಶ್ಮೀರಕ್ಕೆ ಒಯ್ಯಲಾಗುವುದೆಂದೂ ಅದಕ್ಕೆ ಮುನ್ನ ಬಂಧುಗಳು ಅವರನ್ನು ಕಾಣಬಹುದೆಂದೂ ಅಧಿಕಾರಿಗಳು ತಿಳಿಸಿದರು. ಪರಾಂಜಪೆಯವರು ಹೃದಯದಲ್ಲಿ ಆಸೆ ಇರಿಸಿಕೊಂಡೇ ರೈಲ್ವೆ ನಿಲ್ದಾಣಕ್ಕೆ ಬಂದರು. ಅತ್ಯಂತ ಕಠಿಣವಾದ ಅಂತಿಮ ಚಿತ್ರ ಅವರ ಮೇಲೆ ಹೆಚ್ಚಿನ ಪರಿಣಾಮ ಉಂಟು ಮಾಡಿರಲಿಲ್ಲ. ಮಗಳನ್ನು ನೋಡುವುದೇ ಅವರ ಆಶಾಕಿರಣವಾಗಿತ್ತು. ತ್ವರಿತವಾಗಿ ಹೋದರೆ ಅಭಿಲಾಷಾಳನ್ನು ಕಾಣಬಹುದೆಂದು ಪತ್ನಿಯನ್ನು ಅವಸರಪಡಿಸಿದರು. ಹಸಿವು–ನೀರಡಿಕೆ ಮರೆತು, ಇಬ್ಬರೂ ಜೈಲಿನ ಬಳಿ ಕಾದರು. ಅನೇಕರನ್ನು

ಒಳಗೆ ಕರೆದುಕೊಂಡು ಪೋಗಿ ಹೊರತರಲಾಯಿತು. ತಮ್ಮ ಸರದಿಗಾಗಿ ಅವರು ಕಾದೇ ಕಾದರು. ವಾರ್ಡನ್ ಬಂದು ಅವರ ಪುತ್ರಿ ಅವರನ್ನು ಕಾಣಲು ನಿರಾಕರಿಸಿದ್ದಾಳೆಂದು ತಿಳಿಸಿದಾಗ ವೃದ್ಧನ ತಾಳ್ಮೆ ಮಿತಿ ಮೀರಿತು. "ನಾನು ಅವಳನ್ನು ನೋಡಬೇಕು,"ಎಂದು ಅವರು ಚೀರಿದರು, "ಅವಳು ನನ್ನ ಮಗು...ನಿಮ್ಮ ಮಗುವಿನಂತೆ. ಗೊತ್ತಾ ? ನಾನು ಅವಳನ್ನು ನೋಡಲೇಬೇಕು."

ಅವರ ಬೆನ್ನ ಮೇಲೆ ಕೈಇರಿಸಿ ವಾರ್ಡನ್ ಹೇಳಿದರು: "ನಾನು ನಿಮ್ಮನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆಕೆ ಅಪೇಕ್ಷಿಸದೆ ನೀವು ಅವಳನ್ನು ಭೇಟಿ ಮಾಡಲಾರಿರಿ. ಇದು ನಿಯಮ. ಆದರೆ ನೀವಿಲ್ಲಿ ಕಾಯ್ದರೆ ಆಕೆಯನ್ನು ನೋಡುಬಹುದೇನೋ. ಪಠಾಣ್ ಕೋಟ್‌ಗೆ ಹೋಗುವ ರೈಲಿಗೆ ಅವರನ್ನು ಒಯ್ಯುವ ವ್ಯಾನ್ ಈಗ ಹೊರಡಲಿದೆ." ಅವರು ಕಾಯ್ದರು. ಜೇಲಿನ ಆ ಕಪ್ಪು ವ್ಯಾನುಗಳಲ್ಲಿ ಆಕೆಯನ್ನು ಒಯ್ದೇಬಿಟ್ಟರು. ಆದರೆ ವ್ಯಾನ್ ಯಾವುದೆಂದು ಅವರಿಗೆ ತಿಳಿಯದು.

ಭಾರವಾದ ಮನಸ್ಸಿನಿಂದ ಅವರು ಹಿಂದಿರುಗಿದರು. ಮುಂಬಯಿಗೆ ಮರುಳುವುದು ಬೇಡವೆಂದು ನಿಶ್ಚಯಿಸಿದರು. ಸೂರತ್‌ಗೆ ಹೋಗುವುದೆಂದು ದೃಢಮಾಡಿಕೊಂಡರು. ಮುಂಬಯಿಯಲ್ಲಿ ಅವರು ಸೂರತ್ ರೆಲಿಗಾಗಿ ಕಾಯ್ದರು. ಆಗ ಧ್ವನಿವರ್ಧಕದಿಂದ ಮೂಡಿದ ಪ್ರಕಟಣೆ ಪರಾಂಜಪೆಯವರನ್ನು ಬಡಿದೆಬ್ಬಿಸಿತು: "ಅವರು ಅಭಿಲಾಷಾ ಎಂದರೆ!" ಎಂದು ಉದ್ಗರಿಸಿದರು. ಪ್ರಕಟಣೆ ಮೂಡಿತು, "ದಯವಿಟ್ಟು ಲಕ್ಷ್ಯದಿಂದ ಕೇಳಿರಿ. ಅಭಿಲಾಷಾ ಎಂಬ ಹೆಸರಿಗೆ ಓಗೊಡುವ ಮಗುವೊಂದು ತನ್ನ ತಂದೆ ತಾಯಿಗಳಿಂದ ಬೇರ್ಪಟ್ಟಿದೆ. ಮಗುವನ್ನು ಯಾರಾದರೂ ಕಂಡರೆ ಸ್ಟೇಷನ್ ಸೂಪರಿಂಟೆಂಡೆಂಟರ ಬಳಿಗೆ ಕರೆತನ್ನಿ. ಮಗು ಅಭಿಲಾಷಾ ಎನ್ನುವ ಹೆಸರಿಗೆ ಓಗೊಡುತ್ತದೆ."

ಅದನ್ನು ಕೇಳಿದ ಶ್ರೀಮತಿ ಪರಾಂಜಪೆಯವರಿಗೆ ದುಃಖ ತಡೆಯಲಾಗಲಿಲ್ಲ. ಆಕೆ ಕುಸಿಯುವಂತಾದಳು. ಪತಿಯು ಆಕೆಯ ಕೈ ಹಿಡಿದು ಸೂರತ್ ರೆಲನ್ನು ಹತ್ತಿಸಿದ.

ಮೋಹನ ಹೇಳಿದ ಕಥೆ

ದೂರದಿಂದ ಅವಳ ಪ್ರಥಮ ದರ್ಶನ. ಆಕೆ ೨೦ರ ಯುವತಿ ಇರಬಹುದು. ಚೈತನ್ಯ ತುಂಬಿದ ಆಕರ್ಷಕ ಮುಖ. ಉದ್ದವಾದ ಜಡೆ. ಒಂದು ಕ್ಷಣ ಅವಳನ್ನೇ ನೋಡುತ್ತಾ ನಿಂತೆ. ಸರಸರನೆ ಸಾಮಾನುಗಳ ಪರಿಶೀಲನಾ ಸ್ಥಳಕ್ಕೆ ಧಾವಿಸಿದೆ.

"ಮಿಸ್ ಪರಾಂಜಪೆ, ನೀವು ನಿಮ್ಮ ವಸ್ತುಗಳನ್ನು ಪರಿಶೀಲಿಸಿಕೊಂಡಾಯ್ತೆ ?" ಧ್ವನಿ ಇಂಗ್ಲಿಷಿನವನದು. ಆತ ನನ್ನ ಗಮನ ಸೆಳೆದ ಯುವತಿಯ ಜೊತೆ ಮಾತನಾಡುತ್ತಿದ್ದ. ಪರಾಂಜಪೆ! ನನ್ನದೇ ಹೆಸರು, ಆದರೆ ನನ್ನಂತೆ ದಕ್ಷಿಣದವಳಲ್ಲ. ಹೆಸರು ಆಕಸ್ಮಿಕ ಇರಬಹುದು. ಅವಳ ಧ್ವನಿ ಮೂಡಿತು. 'ತುಂಬ ವಂದನೆಗಳು ಬ್ಯಾನರ್‌ಮ್ಯಾನ್, ನೀವು ತುಂಬಾ ನೆರವಾದಿರಿ. ಲಂಡನ್ನಿನಲ್ಲಿ ನಾವು ನಿಮ್ಮನ್ನು ಮೀಟ್ ಮಾಡುತ್ತೇವೆ'. ಓ! ಅವಳೂ ಲಂಡನ್ನಿಗೆ ಬರುತ್ತಿದ್ದಾಳೆ.

ನನಗೆ ದೊರೆತ ಮೊದಲ ಅವಕಾಶದಲ್ಲಿಯೇ ನಾನು ವಿದ್ಯಾರ್ಥಿಗಳ ಗುಂಪಿಗೆ ಪರಿಚಯಿಸಿಕೊಂಡೆ. ನಾನು ಲಂಡನ್‌ಗೆ ಹೋಗುತ್ತಿರುವೆನೆಂದೂ ನನ್ನ ಹೆಸರು ಡಾ. ಪರಾಂಜಪೆ ಎಂದೂ ತಿಳಿಸಿದೆ. ಅವಳು ಚಕಿತಗೊಂಡಂತೆ ಕಂಡಿತು. ಇನ್ನಾರೋ ಉದ್ಗರಿಸಿದರು. "ಆದರೆ ನಮ್ಮ ಗುಂಪಿನಲ್ಲಿ ಮಿಸ್ ಪರಾಂಜಪೆ ಇದ್ದಾರೆ. ನೀವೇನಾದರೂ ಕಜಿನ್‌ಗಳೇ?"

"ಅಂಥ ಸಾಧ್ಯತೆಗಳೇ ಇಲ್ಲ" ಎಂದೆ ನಾನು.

"ಇದೊಂದು ಆಕಸ್ಮಿಕ. ಮುಂಬಯಿಯಲ್ಲಿ ನನಗೆ ಯಾವ ಕಜಿನ್‌ಗಳೂ ಗೊತ್ತಿಲ್ಲ. ನಮ್ಮ ಊರಾದ ಸೂರತ್‌ನಲ್ಲಿ ನಾವೊಬ್ಬರೇ ಪರಾಂಜಪೆಗಳು. ನೀವೂ ಕಾಮನ್‌ವೆಲ್ತ್ ಗುಂಪಿನ ಸದಸ್ಯರೇ ?"

"ನಾನು ಮಂಗಳೂರಿನಿಂದ ಬಂದಿರುವ ಡಾಕ್ಟರ್. ಉನ್ನತ ವ್ಯಾಸಂಗಕ್ಕಾಗಿ ಹೋಗುತ್ತಿರುವೆ."

ವಿಮಾನದಲ್ಲಿ ನಾವು ಬಹಳಷ್ಟು ದೂರ ಕುಳಿತಿದ್ದೆವು. ನನ್ನ ಪಕ್ಕದ ಪ್ರಯಾಣಿಕನೊಂದಿಗೆ ವಿನಂತಿಸಿಕೊಂಡಾಗ ಆಕೆ ನನ್ನ ಪಕ್ಕ ಬಂದಳು. "ನಾನು ಏನೆಂದು ಕರೆಯಲಿ ? ನನ್ನ ಪೂರ್ಣ ಹೆಸರು ರಾಮಮೋಹನ ಪರಾಂಜಪೆ. ನಿಮಗೆ ಮೋಹನ ಎಂದರಾದೀತಲ್ಲ?"

ತಲೆಯಲ್ಲಾಡಿಸಿದ ಅವಳು, "ನಾನು ಅಭಿಲಾಷಾ" ಎಂದಳು.

"ಅಬ್ಬಾ! ಆಕಾಂಕ್ಷೆ! ಸ್ತ್ರೀ ಕುರಿತು ಪುರುಷನ ಅಂತಿಮ ನಿರ್ಧಾರವದು, ನಿಮ್ಮ ಬಗ್ಗೆ ತಿಳಿಸಿ."

ತನ್ನ ತಂದೆ ತಾಯಿ ಕುರಿತು, ವ್ಯಾಸಂಗದ ಬಗ್ಗೆ ಹೇಳಿದಳು. "ನಿಮ್ಮ ಬಗ್ಗೆ ಹೇಳಿರಿ" ಎಂದಳು.

"ನಮ್ಮ ತಂದೆ ಸ್ವಂತ ನರ್ಸಿಂಗ್ ಹೋಂ ಇಟ್ಟು ಕೊಂಡಿದ್ದಾರೆ. ಹಣ ಸಂಪಾದಿಸುವ ಬಯಕೆ ಅವರಿಗೆ. ನರರೋಗ ಶಸ್ತ್ರವೈದ್ಯಕದಲ್ಲಿ ಪರಿಣತಿ ಪಡೆಯಲು ನನ್ನನ್ನು ಇಂಗ್ಲೆಂಡಿಗೆ ಕಳಿಸುತ್ತಿದ್ದಾರೆ. ನನ್ನ ಉದ್ದೇಶ ಬೇರೆ ಇದೆ. ನಮ್ಮ ಗ್ರಾಮದಲ್ಲಿ ಸಾಧಿಸಲಾಗುವಂಥ ಕಡಿಮೆ ಬೆಲೆಯ ವೈದ್ಯಕೀಯ ಪದ್ಧತಿ ರೂಪಿಸುವುದು ನನ್ನ ಆಸೆ." "ಓ! ಆದರ್ಶ ವಾದಿ!" ಎಂದು ಬಾಯಿ ಹಾಕಿದ ಅವಳು, "ನಾನಲ್ಲ ನನ್ನ ತಂದೆ ತಾಯಿಗಳನ್ನು ತೃಪ್ತಿಪಡಿಸುವುದೇ ನನ್ನ ಆಸೆ" ಎಂದಳು.

ಹೀಥ್ರೋನಲ್ಲಿ ಬೀಳ್ಕೊಡುವಾಗ ಪುನಃ ಸಂಧಿ ಸುವೆನೆಂದು ಅವಳಿಗೆ ಹೇಳಿದೆ. ಆದರೆ ಮುಂದಿನ ಕೆಲ ದಿನಗಳು ನಾನು ನನ್ನ ವೃತ್ತಿಬಾಂಧವರನ್ನು ಸಂಧಿಸುವುದರಲ್ಲಿಯೇ ತೊಡಗಿದ್ದೆ. ಕೊನೆಗೆ ಶೆಫೀಲ್ಡ್ ಕಾಲೇಜು ಬಂದಾಯಿತು.

ಆಗಾಗ್ಗೆ ಅಭಿಲಾಷಾಳ ನೆನಪು ನನ್ನನ್ನು ಕಾಡು ತ್ತಿತ್ತು. ಅವಳು ಸ್ನೇಹಪರಳಂತೆ ಕಂಡಳಷ್ಟೇ ಅಲ್ಲ, ಸುಲಭವಾಗಿ ಹೊರಹೊಮ್ಮಿಸಲಾಗದಂತಹ ಗಂಭೀರತೆಯೊಂದು ಅವಳಲ್ಲಿತ್ತು. ಕಾಮನ್ ವೆಲ್ತ್ ಅಸೋಸಿಯೇಷನ್‌ಗೆ ಹೋಗಿ ಅವಳ ವಿಳಾಸ ಪಡೆದೆ.

ಕೆನಡಾ, ಆಸ್ಟ್ರೇಲಿಯಾ, ಆಫ್ರಿಕಾ ರಾಷ್ಟ್ರಗಳೂ ಸೇರಿದಂತೆ ಅನೇಕ ಕಡೆಗಳಿಂದ ಬಂದಿದ್ದ ಸುಮಾರು ೬೦ ಸ್ಕಾಲರುಗಳಿದ್ದ ಹಾಸ್ಟೆಲಿನಲ್ಲಿ ಅಭಿಲಾಷಾ ಇದ್ದಳು. ಸ್ವಾಗತ ಕೋಣೆಯಲ್ಲಿ ನನ್ನ ಹೆಸರು ನೆರ ವಾಯಿತು. 'ಕಜಿನ್' ಅನ್ನು ನೋಡಲು ಅಭಿಲಾಷಾ ಕೆಳಗೆ ಬರುವಳೆಂದು ಹೇಳಿದರು.

"ಹಲೋ, ಕಜಿನ್," ಎಂದು ಕೈ ನೀಡಿದಳು. ಅವಳ ಕಣ್ಣಲ್ಲಿ ಕಣ್ಣಿರಿಸಿದೆ. "ತಮ್ಮ ನರರೋಗ ತಜ್ಞನಿಗಾಗಿ ಕಾಯುತ್ತಿರುವ ಬಡ ಭಾರತೀಯರ ಭವಿಷ್ಯವೇನು?" ಎಂದು ಛೇಡಿಸಿದಳು.

"ಆದಾಯಕವೇನೂ ಇಲ್ಲ. ನನ್ನ ಕೆಲಸವಲ್ಲಿ ನಿರಾಸಕ್ತನಾಗುವಷ್ಟು ಕ್ಲಿಷ್ಟತೆ ಇಲ್ಲಿದೆ. ನಿಮ್ಮದು ಹೇಗಿದೆ?"

ಅಭಿಲಾಷಾ ಲಂಡನ್ನಿನಲ್ಲಿ ಮೂರು ತಿಂಗಳು ಇರಬೇಕೆಂದೂ, ಅವರಿಗೆ ಓರಿಯೆಂಟೇಶನ್ ಉಪ ನ್ಯಾಸಗಳೂ, ರಾಷ್ಟ್ರೀಯ ಸಂಸ್ಥೆಗಳಿಗೆ ಪ್ರವಾಸ ಮುಂತಾದವುಗಳಿದ್ದವು. ವಾರದ ಕೊನೆಯಲ್ಲಿ ಅವಳಿಗೆ ಬಿಡುವು. ಒಟ್ಟಾಗಿ ಅದನ್ನು ಕಳೆಯೋಣ ಎಂದು- ಕೊಂಡೆವು. ನಾನು ಹೊರಡುವಾಗ, ಸ್ಟಾಂಪ್ ಹಚ್ಚಿದ ಕವರೊಂದನ್ನು ಅವಳು ನನ್ನ ಕೈಯಲ್ಲಿ ರಿಸಿ, "ಪ್ರತಿದಿನ ಬರೆಯುವುದಾಗಿ ನನ್ನ ತಂದೆಗೆ ಹೇಳಿದ್ದೆ. ಅದು ಅಸಾಧ್ಯ ಎನಿಸಿದೆ. ಆಗಾಗ್ಗೆ ದೀರ್ಘ ಪತ್ರ ಬರೆದರಾಯಿತು. ದಯವಿಟ್ಟು ಸ್ಟ್ಯಾಂಪ್ ಹಚ್ಚಿ ಅಂಚೆಗೆ ಹಾಕಿ ಬಿಡಿ. ಮುಂದಿನ ಬಾರಿ ಭೆಟ್ಟಿ ಯಾದಾಗ ಹಣ ಪಾವತಿಮಾಡುವೆ" ಎಂದಳು.

ಅವಳನ್ನು ಅಗಲಿದ ಮೇಲೆ ಒಂಟಿತನ ಬೇಸರ ವಾಗಿ ನಾನಾ ಕಡೆ ಸಂಚರಿಸಿದೆ. ರಾತ್ರಿ ಎಷ್ಟೋ ಹೊತ್ತಿನ ನಂತರ ನನಗೆ ನನ್ನ ಕೋಣೆಯಲ್ಲಿ ಅಭಿ- ಲಾಷಾ ಕೊಟ್ಟ ಪತ್ರದ ನೆನಪಾಯಿತು. ಅದನ್ನು ನಾನು ಅಂಚೆಗೆ ಹಾಕಿರಲಿಲ್ಲವಷ್ಟೇ ಅಲ್ಲ, ಎಲ್ಲೋ ಕಳೆದಿದ್ದೆ. ಸಾಕಷ್ಟು ಕಡೆಗೆ ಹೋಗಿದ್ದೆನಾದ್ದರಿಂದ ಎಲ್ಲಿ ಕಳೆದೆನೆಂದು ನೆನಪಿಗೆ ಬರಲಿಲ್ಲ. ಅಭಿಲಾಷಾ ಅವಳು ತಂದೆ-ತಾಯಿಗಳಿಗೆ ಆಗಾಗ್ಗೆ ಪತ್ರ ಬರೆಯು ತ್ತಿರುತ್ತಾಳೆ, ಒಂದು ಕಳೆದರೇನು? ಎಂದು ಸಮಾ ಧಾನಿಸಿಕೊಂಡೆ.

ಶನಿವಾರ ಅಭಿಲಾಷಾಳನ್ನು ಕಂಡಾಗ ಪತ್ರದ ಪ್ರಸ್ತಾಪವೇ ಬರಲಿಲ್ಲ. ಅವಳು ಬಹಳ ಸ್ಫೂರ್ತಿ ಯಲ್ಲಿದ್ದಳು. ಭಾನುವಾರ ಅವಳೇ ಬಂದಳು. ಟ್ಯಾಕ್ಸಿಯಲ್ಲಿ ಪ್ರಮುಖ ಸ್ಥಳಗಳಿಗೆ ಹೋದೆವು. ಭೋಜನಕ್ಕೆಂದು ಸವಾಯ್ ಹೋಟೆಲಿಗೆ ಬರುವ ವೇಳೆಗೆ ಅವಳು ಉತ್ಸಾಹದ ಚಿಲುಮೆಯಾಗಿದ್ದಳು. ಸಂತೃಪ್ತಿಯಿಂದ ಉಂಡೆವು. ವೈನಿನ ಮೂಡಿನಲ್ಲಿ ಅವಳು ಬಿಚ್ಚು ಮನಸ್ಸಿನಿಂದ ಪ್ರೇಮವಿವಾಹ, ಮುಕ್ತಜೀವನದ ಬಗ್ಗೆ ಚರ್ಚಿಸಿದಳು. ಅವಳ ಆಧುನಿಕ ವಿಚಾರಧಾರೆಯನ್ನು ಕಂಡು ಮೂಕನಾದೆ.

ನಾಲ್ಕನೇ ಮಹಡಿಯಲ್ಲಿದ್ದ ನನ್ನ ವೈಭವದ ಕೋಣೆ ಕಂಡು ಅವಳ ಸ್ಫೂರ್ತಿ ಏರಿತು. "ಅರೇ- ಬಿಯನ್ ನೈಟ್ಸ್ ದೃಶ್ಯದಂತಿದೆ" ಎಂದು ಉದ್ಗರಿಸಿದಳು. ಮಲಗುವ ಕೋಣೆ ಕಂಡು

"ಅದ್ಭುತ!" ಎಂದಳು. ಅವಳು ನಿಷ್ಕಪಟಿ. ನನ್ನ ಶಯನಗೃಹದಲ್ಲಿ ಅವಳಿಗೆ ಪುರಾತನ ರೀತಿಯಲ್ಲೇ ಅವಳೇ ಋಷಿಯಾಗಿ ಚರ್ಚಿಸಿದ್ದ ಮುಕ್ತ ಜೀವನವನ್ನು ಪರಿಚಯಿಸಿದೆ.

ನಂತರ ಅವಳು ಹಾಸಿಗೆಯ ಮೇಲೆ ಕುಳಿತಳು. ಅವಳ ಕೂದಲು, ವಸ್ತ್ರ ಅಸ್ತವ್ಯಸ್ತವಾಗಿತ್ತು. ನನ್ನತ್ತ ನೋಡಿ ಮುಖ ಮುಚ್ಚಿ ಅಳತೊಡಗಿದಳು. ಅಂಥಾ ದುಃಖವನ್ನು ನಾನೆಂದೂ ಕಂಡಿರಲಿಲ್ಲ. ಅವಳ ದೇಹವೇ ನಡಗುತ್ತಿತ್ತು. ಉನ್ಮಾದ ಸ್ಥಿತಿಯಲ್ಲಿದ್ದಳು. ಸಮಾಧಾನಪಡಿಸಲೆತ್ನಿಸಿದಾಗ ಜೋರಾಗಿ ತಳ್ಳಿದ ಅವಳು ನನ್ನನ್ನು ಹೊರ ಗಟ್ಟಿದಳು. ಸ್ವಲ್ಪ ಸಮಯದ ನಂತರ ಹೊರಗೆ ಬಂದಾಗ ಮುಖವನ್ನು ತಿದ್ದಿ ಕೂದಲನ್ನು ಸರಿಪಡಿಸಿಕೊಂಡಿದ್ದಳು. ಸೀರೆ ಈಗ ಒಪ್ಪವಾಗಿತ್ತು. ಹಣೆಗೆ ಕುಂಕುಮ ಇರಿಸಿಕೊಂಡಳು. ನಡಗುವ ಧ್ವನಿಯಲ್ಲಿ ಮಾತು ಆರಂಭಿಸಿದಳು. "ನೀನು ನನಗೇನು ಮಾಡಿಬಿಟ್ಟಿರುವೆ ಗೊತ್ತೆ ನಿನಗೆ? ನಾನು ಮತ್ತೆ ಹಾಗೆ ಹಿಂದಿನಂತೆ ಆಗಿರಲಾರೆ, ಕಜಿನ್! ಹಾಗೇ ಇರಲಾರೆ. ನಾನು ಹೇಗೆ ನನ್ನ ತಂದೆ ತಾಯಿಗಳನ್ನು ಎದುರಿಸಲಿ? ಅವರಿಗೆ ಹೇಗೆ ಬರೆಯಲಿ? ನನಗೆ ಏನಾಯಿತೆಂದು ಅವರಿಗೆಂದಿಗೂ ತಿಳಿಯೋದು ಬೇಡ. ನೀನು ವೈದ್ಯ ಹಾಗೂ ಜಗತ್ತಿಗೆ ಮಾನವೀಯತೆ ತೋರುವವ, ನನ್ನ ಮುಗ್ಧತೆಯ ಲಾಭ ಪಡೆದುಕೊಂಡೆ. ಈಗ ನೀನು ಜಗತ್ತಿಗೆ ಬಡಾಯಿ ಕೊಚ್ಚಬೋದು, ಡಾ. ರಾಂಮೋಹನ ಪರಾಂಜಪೆ!" ಮಾತು ನಿಲ್ಲಿಸಿದಳು. ಅವಳ ಮುಖದಲ್ಲಿ ಕ್ಲೇಶ ಇತ್ತು. ನನ್ನೆಡೆ ತಿರುಗದೇ ಹೊರಟು ಹೋದಳು. ಸ್ತಬ್ಧ ಸ್ಥಿತಿಯಲ್ಲಿ ನನ್ನನ್ನು ಬಿಟ್ಟು ಹೋಗಿದ್ದಳು. ಅವಳು ಹೇಳಿದ್ದೆಲ್ಲ ಅಕ್ಷರಶಃ ಸತ್ಯವಾಗಿತ್ತು.

ನಂತರ ನಾವು ಎಷ್ಟೋ ದಿನಗಳವರೆಗೆ ಸಂಧಿಸಲಿಲ್ಲ. ಹಾಸ್ಟೆಲಿಗೆ ಹೋದಾಗ ಗುಂಪಿನೊಂದಿಗೆ ಇರುತ್ತಿದ್ದಳು. ಅವಳು ಅದರಿಂದ ಚೇತರಿಸಿಕೊಂಡಾಳೇ ಎಂದೆನಿಸುತ್ತಿತ್ತು.

ಅವಳು ಸಾವರಿಸಿಕೊಂಡಿದ್ದಳು. ಆದರೆ ಅದು ಅವಿವೇಕದ ರೀತಿಯಲ್ಲಿ. ಒಂದು ರಾತ್ರಿ ಕುಡಿತ–ಊಟದ ನಂತರ ಆಸ್ಟ್ರೇಲಿಯದವನೊಬ್ಬ ತನ್ನ ಕೋಣೆಯಲ್ಲಿ ಒಂದೆರಡು ದಿನ ಆಯಿತೆಂದ. ಪರಾಂಜಪೆ ಎಂಬ ಹೆಸರೇ ಹಬ್ಬವೆಂದ. ಅಲ್ಲಿಂದ ಹೊರಗೋಡಿದೆ.

ಮರುದಿನ ಅವಳ ರೂಮಿಗೆ ಹೋದಾಗ ಉಲ್ಲಸಿತಳಾಗಿದ್ದಳು. "ಹೇಗಿದೀಯಾ ಕಜಿನ್? ಶನಿವಾರ ಮತ್ತು ಭಾನುವಾರ ನಮಗೆ ಬ್ರಿಟಿಷ್ ಸಿಪಾಸಿಗಳು ಹಾಗೂ ಕೆನಡಾದವರೊಂದಿಗೆ ಪಾರ್ಟಿ ಇದೆ. ನಿನ್ನೊಡನೆ ಬರಲಾರೆ. ಬಿಳೀ ಜನರನ್ನು ನಾನು ಪ್ರೀತಿಸುತ್ತೇನೆ. ಪ್ರಾಣಿಗಳಂಥವರಾದ ಅವರನ್ನು ಸೋಲಿಸುವದು ಕಷ್ಟ. ನೀನು ಮೃದು," ಎಂದಳು.

ಅವಳ ಕೆನ್ನೆಗೆ ಬಾರಿಸಲು ಕೈ ಎತ್ತಿದೆ. ಆ ಇಡೀ ವಾರ ನಾನು ಅನುಭವಿಸಿದ ಯಾತನೆಯನ್ನು ಯಾರೂ ಅರಿಯರು.

ಮತ್ತೆರಡು ಬಾರಿ ಹಾಸ್ಟೆಲಿಗೆ ಹೋದಾಗ ಅಭಿಲಾಷಾ ವ್ಯಾಸಂಗ ನಿರತಳಾಗಿದ್ದಾಳೆಂದೂ ಸಭೆಯೊಂದರಲ್ಲಿ ತನ್ನ ವಾಗ್ಝರಿಯಿಂದ ಕಾಮನ್‌ವೆಲ್ತ್ ವ್ಯವಹಾರಗಳ ಸಚಿವರನ್ನು ಬೆರಗುಗೊಳಿಸಿದಳೆಂದೂ ಕೇಳಿ ತೃಪ್ತಿಯಾಯಿತು.

ಒಂದು ದಿನ ಕೋಣೆಗೆ ಬಾ ಎಂದಳು. ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾದಂತೆ ಪುಸ್ತಕಗಳನ್ನು ಪೇರಿಸಿದ್ದಳು. ತಾನು ಗರ್ಭಿಣಿಯಾಗುವ ಸಾಧ್ಯತೆಯಿಂದ ಮುಕ್ತಳಾಗುವ ಇಂಜಕ್ಷನ್ ಕೊಡಲು ಸಾಧ್ಯವೇ ಎಂದಾಗ ನಾನು ದಿಗ್ಮೂಢನಾದೆ. ನನ್ನ ಕೋಣೆಗೆ ಬಂದು ಇಂಜಕ್ಷನ್ ಪಡೆದಳು. ತಂದೆ–ತಾಯಿಗಳಿಂದ ಸುದ್ದಿ ಉಂಟೆ? ಎಂದೆ. "ನಾನು ಎಲ್ಲಿದ್ದೇನೆ ಎಂದು ಅವರಿಗೆ ಗೊತ್ತಿಲ್ಲ. ಪುನಃ ಅವರು ನನ್ನಿಂದೂ ಏನೂ ಸಮಾಚಾರ ಪಡೆದಿಲ್ಲ. ನನ್ನನ್ನು ಮರೆಯಲು ಅವರಿಗೆ ಸಾಕಷ್ಟು ಸಮಯವಿದೆ. ಆ ಜಗತ್ತಿನಮಟ್ಟಿಗೆ ನಾನು ಸತ್ತಿರುವೆ," ಎಂದಳು. ನನ್ನ ಫೆಲೋಷಿಪ್ ಕಾರ್ಯ ನನ್ನನ್ನು ಕಾಯುತ್ತಿತ್ತು. ನಾನು ಸೆವಾಯ್ ಬಿಟ್ಟು ನನ್ನದೇ ಆದ ಫ್ಲ್ಯಾಟ್‌ಗೆ ಸ್ಥಳಾಂತರಿಸಿದ್ದೆ. ಓರಿಯೆಂಟೇಶನ್ ಕೋರ್ಸ್–ನಲ್ಲಿ ಅಭಿಲಾಷಾ ಚೆನ್ನಾಗಿ ಮುಂದುವರೆಯುತ್ತಿದ್ದಳು. ಆದರೆ ವಾರಾಂತ್ಯಗಳನ್ನು ಎಲ್ಲಿ ಕಳೆಯುತ್ತಾಳೆಂದೇ ತಿಳಿದಿರಲಿಲ್ಲ. ವೆಸ್ಟ್ ಇಂಡೀಜ್ ತಂಡವಲ್ಲಿ ಅವಳು ಸ್ನೇಹ ಸಂಪಾದಿಸಿದ್ದಳು. ಇಂಡಿಯನ್ ಮೂಲದ ಸ್ಥಳೀಯರನ್ನು ಭೆಟ್ಟಿಮಾಡಿದ್ದಳು. ಅಷ್ಟೆ ನನಗೆ ಗೊತ್ತಿದ್ದುದು.

ಒಂದು ದಿನ ಅಭಿಲಾಷಾ ಪುಸ್ತಕವೊಂದರ ಪ್ರತಿ ಇತ್ತಳು. "ಇದೀಗ ಮುದ್ರಣದಿಂದ ಹೊರಬಂದಿದೆ. ಇದನ್ನು ಓದೋದ್ರಿಂದ ನಿನಗೆ ಒಳ್ಳೆದಾಗುತ್ತೆ. ಯಾರಿಗೂ ತೋರಿಸಬೇಡ," ಎಂದಳು.

ಮನೆಗೆ ಹೋಗಿ ಕಟ್ಟು ಬಿಚ್ಚಿದೆ. ಲೇಖಕರ ಹೆಸರು ಇರಲಿಲ್ಲ. "ಪ್ರೀತಿಯ ಕಜಿನ್–ಲೇಖಕಿ ಎ. ಪಿ. ಯಿಂದ" ಎಂದು ಅವಳೇ ಬರೆದಿದ್ದಳು.

ಇತರ ರಾಷ್ಟ್ರಗಳಲ್ಲಿ ಭಾರತೀಯರ ಬಡತನದ ದುಃಸ್ಥಿತಿ ಹಾಗೂ ಇತರ ವಿಷಯಗಳ ಬಗೆಗಿನ ಸಂಶೋಧನಾತ್ಮಕ ಪುಸ್ತಕವದು. ಹಿಂಸೆಗೆ ಅದು ಹಾದಿ ಮಾಡಿಕೊಟ್ಟಿತು. ರಾತ್ರಿಯಿಡೀ ಪುಸ್ತಕ ವನ್ನು ಓದುವಾಗ ನನ್ನ ರೋಮಗಳು ನಿಮಿರಿದವು. ಅನಿವಾರ್ಯ ಹಿಂಸಾಚಾರದ ನಿಂದನೆ, ವಿಪತ್ತು ಹಾಗೂ ಬೆದರಿಕೆ ಪುಸ್ತಕವಿಡೀ ತುಂಬಿತ್ತು. ಇದೇ ಅವಳ ವಾರಾಂತ್ಯದ ಹಾಗೂ ಹೊಸ ಸ್ನೇಹಿತರ ಗುಟ್ಟು! ಬೆಳಿಗ್ಗೆ ಪುಸ್ತಕವನ್ನು ಸುಟ್ಟೆ. ಈ ಮುಗ್ಧೆ ಕ್ರಾಂತಿಕಾರರ ಗುಂಪಿಗೆ ಸೇರಿ ತನ್ನ ದೈಹಿಕ ಆಕರ್ಷಣೆ ಹಾಗೂ ಬುದ್ಧಿವಂತಿಕೆಯಿಂದ ವಂಚನೆ ಗೊಳಗಾಗಿರುವುದು ಸ್ಪಷ್ಟವಾಗಿತ್ತು.

ಅವಳ ಕೋಣೆಗೆ ನುಗ್ಗಿದಾಗ ನಾನು ಕ್ರೋಧ ದಿಂದ ಕುದಿಯುತ್ತಿದ್ದೆ. ಅವಳಿಗೇನಾಯಿತೆಂದು ಕೇಳಿದೆ. "ನನಗೇನಾಯಿತೆಂದು ನಿನಗೆ ಗೊತ್ತು. ಕಜಿನ್ ಮೋಹನ್, ಗೊತ್ತಿಲ್ವಾ?" "ಓ! ದೇವರೇ! ನನ್ನನ್ನು ಕಜಿನ್ ಎನ್ನಬೇಡ." "ಓ! ದೇವರು ಇದರ ಮಧ್ಯ ಬರುವುದೇ ಇಲ್ಲ". "ಯಾವುದೇ ಕ್ಷಣದಲ್ಲಿ ನಿನ್ನನ್ನು ಬಂಧಿಸಬಹುದು, ಜೇಲಿಗೆ ಹಾಕಬಹುದು! ನಾನು ಕೂಗಾಡಿದೆ. "ಯಾರಾದರೂ ಸುಳಿವು ಕೊಟ್ಟರೆ ಮಾತ್ರ. ನೀನು ಅದನ್ನು ಮಾಡ ಲಾರೆ ಅಲ್ಲವೆ? ನಾನು 'ಎರಡು' ಬಾರಿ ಶಿಕ್ಷೆ ಅನುಭ ವಿಸುವಂತೆ ನೀನು ಮಾಡಲಾರೆ, ಮಾಡ್ತೀಯಾ?"

ಓರಿಯೆಂಟೇಶನ್ ಕೋರ್ಸಿನ ಅಂತ್ಯದಲ್ಲಿ ನಡೆದ ಘಟಿಕೋತ್ಸವದಲ್ಲಿ ಅಭಿಲಾಷಾ ಹಾಗು ಇನ್ನಿತರ ಇಬ್ಬರನ್ನು ಬೆಳ್ಳಿ ಫಲಕಗಳನ್ನಿತ್ತು ಗೌರವಿಸಲಾಯ್ತು. ನನಗೆ ತೋರಿಸಿ ಹಿಗ್ಗಿದಳು.

ಆಕ್ಸ್‌ಫರ್ಡ್ ಸೇರಿದ ಮೇಲೆ ಅವಳು ಪತ್ರ ಬರೆದಿದ್ದಳು. ನಾನು ಬರೆಯಲಿಲ್ಲ. ಕೆಲವು ತಿಂಗಳ ವರೆಗೆ ನಾವು ಒಬ್ಬರನ್ನೊಬ್ಬರು ಸಂಧಿಸಲಿಲ್ಲ. ಒಂದು ವರ್ಷವೇ ಆಗಿರಬೇಕು. ತಾನು ಆಕ್ಸ್‌ಫರ್ಡ್ ಬಿಡುತ್ತಿರುವುದಾಗಿಯೂ ತನಗೆ ಪತ್ರ ಬರೆಯ ಬಾರದೆಂದೂ ಪತ್ರವೊಂದರಲ್ಲಿ ತಿಳಿಸಿದ್ದಳು.

ಅಭಿಲಾಷಾ ಕನಸಿನಲ್ಲಿ ಬಂದು ಹೋದ ವ್ಯಕ್ತಿ ಯಾದಂತಾಯಿತು. ಒಂದು ದಿನ ಪುಸ್ತಕದ ಅಂಗ ಡಿಯ ಬಳಿ ನಿಂತಾಗ ಅಭಿಲಾಷಾ ಮರೆಯಾಗಿಲ್ಲ ಎನ್ನುವುದು ದೃಢವಾಯಿತು. ಬ್ರಿಟನ್ನಿನಲ್ಲಿ ಮಾರ್ಕ್ಸಿಸ್ಟ್ ಸಾಹಿತ್ಯ ಮಾರಾಟಕ್ಕೆ ಅನುವು ಮಾಡಿದ ಕಾರಣ ಅಭಿಲಾಷಾ ನನಗೆ ಕೊಟ್ಟಿದ್ದ ಪುಸ್ತಕದ ಪ್ರತಿಯೊಂದನ್ನು ಕಂಡೆ. ಲೇಖಕರ ಹೆಸರು ಯುರೋಪಿಯನ್ ಆಗಿತ್ತು. ಅದೇ ಲೇಖಕರ ಇನ್ನಿತರ ಕೃತಿಗಳನ್ನು ಹುಡುಕಿದೆ. ಸಿಕ್ಕಿ ದ್ದನ್ನು ಕೊಂಡು ತಂದೆ. ಶೈಲಿ ಹಾಗೂ ಲೇಖನ ಸಾಮರ್ಥ್ಯ ಅಭಿಲಾಷಾಳದೇ ಎಂಬುದರಲ್ಲಿ ಸಂದೇಹವೇ ಉಳಿದಿರಲಿಲ್ಲ. ರಾಜಕೀಯ ಕ್ರಾಂತಿ ಕಾರರು ಒಳ್ಳೆಯ ಲೇಖಕಿಯನ್ನು ಸಂಪಾದಿಸಿ ಕೊಂಡಿದ್ದರು.

ಒಂದು ದಿನ ಅಭಿಲಾಷಾ ನನ್ನ ಕೋಣೆಯಲ್ಲಿ ಕಾದಿದ್ದಳು. ಅವಳನ್ನು ಕಂಡು ವರ್ಷವೇ ಉರು ಳಿತ್ತು. ಬಾಬ್ ಮಾಡಿಸಿದ್ದಳು ಪ್ಯಾಂಟ್ ಧರಿಸಿ ದ್ದಳು. ಇನ್ನಷ್ಟು ಸುಂದರವಾಗಿ ಕಂಡಳು. ನನ್ನನ್ನು ಕಂಡು ಕೋಣೆ ಬಾಗಿಲು ಮುಚ್ಚಿದಳು. ನನ್ನನ್ನು ಅಪ್ಪಿಕೊಂಡು ಚುಂಬಿಸಿದಳು. "ಎಲ್ಲವನ್ನೂ ಕ್ಷಮಿ ಸೋಣ, ಮರೆಯೋಣ." ಎಂದು ಉಸುರಿದಳು. ವೈದ್ಯನಾದ ನಾನು ಮಗುವಿನಂತೆಯೂ ಅವಳು ಬೆಳೆದ ಪುರುಷನಂತೆಯೂ ಭಾಸವಾಯಿತು.

ಕುರ್ಚಿಯಲ್ಲಿ ಕೂತು, ಸಿಗರೇಟ್ ಹಚ್ಚಿ ಮಾತು ಆರಂಭಿಸಿದಳು.

"ನಾನೇಕೆ ಬಂದೆನೆಂದು ಚಿಂತಿಸುತ್ತಿರಬಹುದು. ನಾನು ನ್ಯಾಯದಿಂದ ಇನ್ನೂ ದೇಶಭ್ರಷ್ಟೆಯಲ್ಲ.ವಿಧಿ ನಮ್ಮಿಬ್ಬರನ್ನು ಕೂಡಿಸಿತು. ನಾವು ಜೊತೆಯಾಗಿಯೇ ತೇಲಬೇಕು ಇಲ್ಲವೆ ಮುಳುಗಬೇಕು. ನೀನು ನನಗೆ ಮಾಡಿದ್ದೇನೆಂದರೆ ನನ್ನಲ್ಲಿ ಸ್ತ್ರೀತ್ವ ತುಂಬುವ ಪ್ರಯತ್ನ. ನಾನು ನಿನ್ನಲ್ಲಿ ಪುರುಷತ್ವ ತುಂಬಿಸುವೆ."

ಬಹಳ ದಣಿದಿರುವವಳಾಗಿ ಹೇಳಿದಳು. ಆಕ್ಸ್ ಫರ್ಡ್ ಹಾಗೂ ಅಲ್ಲಿನ ಭ್ರಮನಿರಸ ಜೀವನದ ಬಗ್ಗೆ ಹೇಳಿದಳು. ಅವಳಲ್ಲಿ ತೀವ್ರ ಬದಲಾವಣೆಯಾ ಗಿತ್ತು. ನನ್ನೊಂದಿಗೆ ರಾತ್ರಿ ಇದ್ದಳು. ಆ ಎರಡು ದಿನ ನಮ್ಮ ಬದುಕಿನ ಹರ್ಷದ ದಿನಗಳು. ಹೊರ

ಡುವ ಮುನ್ನ ಸವಾಲೊಂದನ್ನು ಎಸೆದಳು. "ಉಳ್ಳವರ ವಿರುದ್ಧ ಇಲ್ಲದವರು ನಡೆಸುವ ಸಾವು ಬದುಕಿನ ಹೋರಾಟಕ್ಕೆ ಸೇರುತ್ತೀಯಾ?" ಒಪ್ಪಿದೆ. ನಾನೇನು ಮಾಡಬೇಕು? ಉದ್ಯೋಗ ಬಿಟ್ಟು ಲಂಡನ್‌ನಲ್ಲಿ ಅವಳನ್ನು ಕೂಡಬೇಕು.

ಅನಿರೀಕ್ಷಿತವಾಗಿ ಭಾರತಕ್ಕೆ ಮರಳಬೇಕೆಂದು ತಿಳಿಸಿ ರಾಜೀನಾಮೆ ಇತ್ತೆ. ಅಭಿಲಾಷಾ ಕಾದಿದ್ದಳು.

ಅಭಿಲಾಷಾಳ ಉಳಿದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಬಹುದು. ಉತ್ತರ ಐರ್ಲೆಂಡಿನೊಡನೆ ತೀವ್ರ ಸಂಪರ್ಕಹೊಂದಿದ್ದ ಬಲಾಢ್ಯವಾದ ಕ್ರಾಂತಿಕಾರಿ ಭೂಗತ ಗುಂಪೊಂದನ್ನು ನಾವು ಸೇರಿದೆವು. ನಮ್ಮ ಪಾಸ್‌ಪೋರ್ಟನೊಂದಿಗೆ ಅಭಿಲಾಷಾ, ನಾನು ಬೆಲ್‌ಫಾಸ್ಟ್‌ಗೆ ಹೋಗಿ ಕಮ್ಯಾಂಡೋ ಕಾರ್ಯಾಚರಣೆಯಲ್ಲಿ ಆರು ತಿಂಗಳ ಕಠಿಣ ಶಿಕ್ಷಣ ಪಡೆದೆವು. ಈ ವೇಳೆಗೆ ಬ್ರಿಟನ್ನಿನ ಅಧಿಕೃತ ವಲಯಗಳಲ್ಲಿ ನಮ್ಮ ಚಟುವಟಿಕೆ ಗಮನ ಸೆಳೆದಿತ್ತು.

ನಾವು ಸಿಕ್ಕಿಹಾಕಿಕೊಳ್ಳುವ ಮುನ್ನ ಅಲ್ಲಿಂದ ಹೊರಬರಲು ನಮ್ಮ ಸ್ನೇಹಿತರು ನೆರವಾದರು. ಗಯಾನಾ ಪಾಸ್‌ಪೋರ್ಟಿನ ನೆರವಿನೊಂದಿಗೆ ನಾವು ಸಿಲೋನಿಗೆ. ನಂತರ ಚೀನಕ್ಕೆ ಹೋದೆವು. ಈಶಾನ್ಯ ಗಡಿಯಲ್ಲಿ ನಾವು ಇತರ ನಲವತ್ತು ಮಂದಿಯೊಂದಿಗೆ ಭಾರತಕ್ಕೆ ಅತಿ ಸನಿಹದಲ್ಲಿ ಮೂರು ವರ್ಷ ಇದ್ದೆವು. ನಮ್ಮ ಕೆಲಸ ಅಪಾಯಕರವಾಗಿತ್ತು. ಭೂಗತ ದಂಗೆಕೋರರಿಗೆ ನಾವು ಶಸ್ತ್ರಾಸ್ತ್ರ ಸರಬರಾಜು ಮಾಡಬೇಕಿತ್ತು. ಭಾರತದ ಸೈನ್ಯಬಲ ಹಾಗೂ ರಕ್ಷಣಾ ಬಲಗಳನ್ನು ಹೆಚ್ಚು ಬಲಪಡಿಸಿದಾಗ ನಮ್ಮ ಕೈಸೆರೆ ಹೆಚ್ಚು ದಿನ ದೂರ ಉಳಿಯಲಿಲ್ಲ.

ದೊಡ್ಡ ಪೋಲೀಸ್ ಠಾಣೆಯ ಮೇಲೆ ದಾಳಿ ನಡೆಸಿದಾಗ ನಮ್ಮ ಆಟ ಮುಗಿದಿತ್ತು. ನಮ್ಮ ಕೈದಿಯೊರ್ವ ತಪ್ಪಿಸಿಕೊಂಡು, ಸುಳಿವು ನೀಡಿದ್ದರಿಂದ ನಾವು ಸಿಕ್ಕಿಬಿದ್ದೆವು.

ನಮ್ಮನ್ನು ಅತ್ಯಂತ ಅಪಾಯಕಾರಿ ಕ್ರಾಂತಿಕಾರರ ಗುಂಪಿಗೆ ಸೇರಿಸಲಾಗಿತ್ತು. ನಮ್ಮ ಚಟುವಟಿಕೆಗಳಿಗೆ ಸಾಕಷ್ಟು ಪುರಾವೆಗಳಿದ್ದವು. ಅಭಿಲಾಷಾಳನ್ನು ಪ್ರಶ್ನಿಸುವುದಕ್ಕೆಂದು ಒಯ್ಯಲಾಗಿತ್ತು. ನಂತರ ಆಕೆ ತನ್ನನ್ನು ಅನೇಕರು ಒಂದಲ್ಲ ಒಂದು ರೀತಿ ಪೀಡಿಸಿದ್ದಾರೆಂದು ಹೇಳಿಕೊಂಡಳು. ಆದರೆ ಈ ವೇಳೆಗೆ ಎಲ್ಲವೂ ಆಟದ ಅಂಕಗಳಾಗಿ ಹೋಗಿದ್ದವು.

ನಮ್ಮನ್ನು ಶಿಕ್ಷೆಗೆ ಗುರಿಪಡಿಸುವ ಹಿಂದಿನ ದಿನ ಅಭಿಲಾಷಾಳಿಗೆ ಸ್ಮರಣೆ ಮೂಡಿತು. ತನ್ನ ತಂದೆ–ತಾಯಿಯರ ನೆನಪು. ತಾನು ಲಂಡನ್ ಸೇರಿದ ಮೇಲೆ ಬರೆದ ಒಂದೇ ಒಂದು ಪತ್ರದ ನಂತರ ಅವರ ಸ್ಥಿತಿ ಏನಾಗಿದೆಯೋ ಎಂದು ಹೇಳಿಕೊಂಡಳು. ಪತ್ರ ಟಪಾಲಿನಲ್ಲಿಲ್ಲವೆಂದು ನಾನು ಆಗ ಅವಳಿಗೆ ತಿಳಿಸಿದೆ. ಒಂದು ನಿಮಿಷ ಮೌನದಿಂದಿದ್ದ ಅವಳು ಕಣ್ಣೀರೊರಿಸಿಕೊಂಡು, "ಎಲ್ಲ ವಿಧದಲ್ಲಿಯೂ ನನ್ನ ತಂದೆ–ತಾಯಿಗಳಿಗೆ ನಾನು ಸತ್ತಿರುವೆ, ಮೋಹನ್, ಆ ಅಭಿಲಾಷಾಳನ್ನು ಕೊಂದವರು ಯಾರು? ನಾನು. ನನಗೆ ನೋವುಂಟು ಮಾಡಬೇಕೆಂದು ನೀನು ಬಯಸಿರಲಿಲ್ಲ. ಆದರೆ



"ನಿನಗೆ ಬೇಕಾದ್ದು ತೊಗೊಂಡು ಹೋಗು, ಆದರೆ, ಸಿಕ್ಕಿ ಹಾಕ್ಕೊಂಡುಬಿಟ್ರೆ ದಯಮಾಡಿ, ನಮ್ಮನೆ ತೋರಿಸಬೇಡ ಮಾರಾಯ..."

ನನಗೆ ನೋವಾಗಿ ಗಾಸಿಯಾಯಿತು. ಅದೇ ಸ್ತ್ರೀಗೆ ಆಗುವ ರೀತಿ ಇದು. ಅನಾಗರಿಕ, ಬಾಲಿಶ. ಆದರೆ ಅದು ನಿಜ. ಆರೋಪ ಎಂದಿಗೂ ಮಾಸು-ವುದೇ ಇಲ್ಲ. ಆದ್ದರಿಂದ ಹಳೇ ಅಭಿಲಾಷಾ ಸಾಯುವುದು ಉತ್ತಮ."

ನಮಗೆಲ್ಲ ಜೀವಾವಧಿ ಶಿಕ್ಷೆ ಕೊಡಲಾಗಿದೆ ಎಂದು ತೀರ್ಪು ಬಂದಿತು. ನಮ್ಮನ್ನು ಕಾಶ್ಮೀರಕ್ಕೆ ಒಯ್ಯು ವರೆಂದಾಗ ನಕ್ಕೆ. ಎಷ್ಟೋ ಬಂಧು-ಭಾಂಧವರು ಭೇಟಿಗಾಗಿ ಬಂದಿರುವುದಾಗಿ ಅಧಿಕಾರಿಗಳು ತಿಳಿಸಿ ದರು. ನಮ್ಮ ಇರುವಿಕೆ ಯಾರಿಗೂ ಗೊತ್ತಿಲ್ಲ ವೆಂದೂ ನಾನೂ ಅಭಿಲಾಷಾ ಸುಮ್ಮನಿದ್ದೆವು. ಅಭಿಲಾಷಾಳನ್ನು ಕಾಣಲು ಅವಳ ತಂದೆ-ತಾಯಿ ಬಂದಿದ್ದಾರೆಂದಾಗ ನಾವು ಚಕಿತರಾದೆವು. ನನ್ನತ್ತ ನೋಟ ಬೀರಿದಳು. ಅವರನ್ನು ನೋಡಲಿಷ್ಟ ಪಡುವುದಿಲ್ಲವೆಂದು ಹೇಳಿ ಕಳುಹಿಸಿಬಿಟ್ಟಳು. ಸ್ಟೇಷನ್ನಿಗೆ ಹೋದಾಗಲೂ ಅವಳು ವಿಮುಖಿ ಳಾಗಿಯೇ ಇದ್ದಳು.

ಕೊನೆಗೆ ಘಟನೆ ನಡೆದದ್ದು ರೈಲಿನಲ್ಲಿ. ಪಟ್ನಾ ದತ್ತ ತೆರಳುತ್ತಿದ್ದಾಗ ಅಭಿಲಾಷಾ ತೀವ್ರ ಅಸ್ವಸ್ಥಳಾದಂತೆ ಕಂಡಳು. ಕುಸಿದು ಬಿದ್ದವಳಂತೆ ಆದಾಗ ಪೋಲೀಸಿನವರು ಅವಳ ಕೈ ಬೇಡಿಗಳನ್ನು ತೆಗೆದರು. ಒಬ್ಬ ಪೋಲೀಸು ತನ್ನ ಪಿಸ್ತೂಲನ್ನು ಬೆಲ್ಟ್‌ಗೆ ಸೇರಿಸಿ ಗಾಳಿ ಹಾಕಲಾರಂಭಿಸಿದ. ಇದ್ದಕ್ಕಿದ್ದಂತೆ ಅಭಿಲಾಷಾ ಬೆಕ್ಕಿನಂತೆ ಪುಟಿದೆದ್ದಳು. ರಿವಾಲ್ವರ್ ಕಿತ್ತುಕೊಂಡು, ಅವನ ತಲೆ ಮೇಲೆ ಹಿಡಿದು, "ಈ ಕ್ಷಣ ನಮ್ಮೆಲ್ಲರ ಬಿಡುಗಡೆಮಾಡು. ಇಲ್ಲವಾದರೆ ಇಲ್ಲಿ ರಕ್ತದ ಕೋಡಿ ಹರಿಯುತ್ತೆ" ಎಂದು ಅಧಿಕಾ ರವಾಣಿಯಿಂದ ನುಡಿದಳು. ಆದರೆ ಆ ಕೂಡಲೇ ಗುಂಡೊಂದು ಹಾರಿತು. ತನ್ನ ಕೈಯಲ್ಲಿ ಪಿಸ್ತೂಲು ಹಿಡಿದುಕೊಂಡಿದ್ದ ಅಭಿಲಾಷಾ ಕೆಳಗುರುಳಿದಳು. ಅವಳ ಎದೆಗೆ ಗುಂಡೇಟು ಬಿದ್ದಿತ್ತು. ಅವಳು ಸ್ವಲ್ಪ ಕಾಲ ಮೇಲುಸಿರು ಬಿಟ್ಟಳು. ನನ್ನತ್ತ ಕೊನೇ ದೃಷ್ಟಿ ಬೀರಿ ಕಣ್ಣು ಮುಚ್ಚಿದಳು.

ಅವಳಿಲ್ಲದೆ ನಾನು ಕಳೆದುಹೋಗಿದ್ದೇನೆ. ✡

(ಶ್ರೀನಗರದ ಸೆಂಟ್ರಲ್ ಬಂದೀಖಾನೆಯಲ್ಲಿ ಬರೆದದ್ದು)

ಇದು ಹೀಗೆಯೇ ಸರಿ !........

ಮೇಲಕ್ಕೆತ್ತಿ ಎಸೆದ ಕಲ್ಲು
ಅಲ್ಲೇನೂ ಆಧಾರ ಸಿಕ್ಕದಾಗ
ಕೆಳಕ್ಕೆ ಕುಸಿಯಲೇಬೇಕು
ನೆಲಕ್ಕೆ ಬೀಳಲೇಬೇಕು
ಇದು ನ್ಯೂಟನ್ನನ 'ಗುರುತ್ವ ಕೇಂದ್ರದ ಸಿದ್ಧಾಂತ'-
ಇರಬಹುದು;
ಇಲ್ಲಿನದು-
ಸಂಪಾದಿಯಾಗಿರುವ 'ಕಾಣ್ಕೆ' ಸ್ವಂತ.
ತನ್ನ ಶಕ್ತಿ ಏನೂ ಇಲ್ಲದೆ
ತಳ್ಳಿದ ತ್ರಾಣ ಬಲವಾಗಿ ನಿಲ್ಲದೆ
ರಭಸದಿಂದ ಕೆಳಗೆ ಉರುಳಬೇಕಾಗುತ್ತದೆ.
ಹಾಗೆ ಬಿದ್ದಾಗ
ಸಣ್ಣ ಸದ್ದಾಗಬಹುದು,
ಅಷ್ಟಾಗಿ ಕೇಳಿಸದು.

-ಹರಿನಾರಾಯಣ ಮಾಡಾವು

ರಜತಕಲಾಪ್ರವೀಣ

ಅಂಕಪ್ಪಾಚಾರ್ಯ



ಪಿ. ಆರ್. ತಿಪ್ಪೇಸ್ವಾಮಿ

೧೯೨೭ರಲ್ಲಿ—ಅದೊಂದು ಸವಿನೆನಪು - ಜೀವನದಲ್ಲಿ ಎಂದೆಂದಿಗೂ ಮರೆಯದಂಥ ಘಟನೆಯೊಂದು ನಡೆಯಿತು. ಮೈಸೂರಿನ ಶಿಲ್ಪಿಗಳೊಬ್ಬರ ಸತ್ತ್ವಪರೀಕ್ಷೆಯ ದಿನ ಕೂಡಿಬಂದಿತ್ತು. ಗ್ವಾಲಿಯರ್ ಅರಮನೆಯ ಶಿಲ್ಪಾಲಯದಲ್ಲಿ ಅಲ್ಲಿನ ಕಲಾಭಿಮಾನಿಗಳೂ ಶಿಲ್ಪಿಗಳೂ ಹೊಸದಾಗಿ ಬರುವ ದೂರದ ಮೈಸೂರಿನ ಶಿಲ್ಪಿಯನ್ನು ನೋಡಲು ಕುತೂಹಲದಿಂದ ಕಾದಿದ್ದರು. ಗ್ವಾಲಿಯರ್‌ನಲ್ಲಿ ಕೆಲಸಮಾಡುತ್ತಿದ್ದ ಇಂಜಿನಿಯರ್ ಒಬ್ಬರ ಜೊತೆಯಲ್ಲಿ ಸಾಧಾರಣ ಉಡುಪಿನ ವ್ಯಕ್ತಿಯೊಬ್ಬರು ಅಲ್ಲಿಗೆ ಬಂದಾಗ, ಶಿಲ್ಪಿಗಳ ಕಡೆ ಕೆಲವರ ದೃಷ್ಟಿ ಹರಿಯಿತು. ಸಾಮಾನ್ಯ ವಸ್ತ್ರಗಳಲ್ಲಿ ಏನನ್ನೂ ಅರಿಯದಂತೆ ಹೊಸ ಸ್ಥಳ ಎಂಬಂತೆ ಮುಖದಲ್ಲಿ ಸಂಕೋಚವನ್ನು ವ್ಯಕ್ತಪಡಿಸುತ್ತ, ಒಳಗೆ ಬಂದ ಮೈಸೂರು ಕಚ್ಚೆಯ, ಕರಿಯ ಕುಲಾವಿಯ, ಗೌರವರ್ಣದ ವ್ಯಕ್ತಿಯನ್ನು ನೋಡುತ್ತಿದ್ದಂತೆ-ಯೇ ಕೆಲವರು ಮುಸಿ ಮುಸಿ ನಕ್ಕರು. ಕೆಲವರು ಮುಖ ಮುಖ ನೋಡಿಕೊಂಡರು, ಕೆಲವರು ವ್ಯಂಗ್ಯವಾಗಿ ಗೊಣಗಿಕೊಂಡರು. ಮೈಸೂರಿನಿಂದ ಕರೆಸಿಕೊಂಡಿರುವ ಮಹಾಶಿಲ್ಪಿಯೋ ಎಂಬಂತೆ ಕುಹಕ ನೋಟವನ್ನು ಬೀರಿದರು. ಈ ನೂರು ಕಣ್ಣುಗಳ ನಡುವೆ ಆ ಹೊಸ ಶಿಲ್ಪಿಯ ಮೈ ಬೆವರಿಟ್ಟಿತು. ಕೆಲ ನಿಮಿಷ ಕಕ್ಕಾಬಿಕ್ಕಿಯಾಗಿ ನಿಂತರು. ತನ್ನಿಂದ ಮೈಸೂರಿನ ಕೀರ್ತಿ ಉಳಿಯುವುದೋ ಇಲ್ಲವೋ ಎಂಬ ಸಂಶಯ ತಲೆದೋರಿತು. ತಮ್ಮ ಗುರುವಿನಿಂದ ಆಶೀ-ರ್ವಾದವನ್ನು ಪಡೆದು ಯಶಸ್ವಿಯಾಗಿ ಬರುತ್ತೇನೆಂದು ಬಂದವರಿಗೆ ಮೊದಲ ಪರೀಕ್ಷೆ ಇದಾಯಿತು. ಗ್ವಾಲಿಯರ್‌ನ ಅರಮನೆಗೆ ಬೆಳ್ಳಿಯ ಸಿಂಹಾಸನವನ್ನು ಮಾಡಿಸುವುದಕ್ಕಾಗಿಯೇ ಬರಮಾಡಿಕೊಂಡ ವ್ಯಕ್ತಿ ಅವರಾಗಿದ್ದರು.

ಇವರ ಹಸ್ತಕೌಶಲವನ್ನು ಪರೀಕ್ಷಿಸುವ ಹಂಬಲ ಹುಟ್ಟಿತು ಅಲ್ಲಿನ ಅಧಿಕಾರಿಗಳಿಗೆ. ಮೈಸೂರಿನವರೊಬ್ಬರು ಅಲ್ಲಿ ಇಂಜಿನಿಯರರಾಗಿದ್ದರು. ಇವರನ್ನು ಕರೆಸಿಕೊಳ್ಳಲು ಅವರೇ ಮುಖ್ಯ ಕಾರಣರು. ಕರೆಸಿಕೊಂಡ ನಂತರ ಕೆಲಸವನ್ನು ಆರಂಭಿಸುವ ಮುನ್ನ ಗೋಡೆಯ ಮೇಲೆ ದೊಡ್ಡದಾದ ಸಿಂಹಾಸನದ ಚಿತ್ರವೊಂದನ್ನು ಇದ್ದಿಲಿನಲ್ಲಿ ಸ್ಕೆಚ್ ಮಾಡು

ವಂತೆ ತಿಳಿಸಿದರು. ಇದರಲ್ಲಿ ಅವರು ಯಶಸ್ವಿಯಾದರೆ ಮುಂದಿನ ಅವಕಾಶ. ಶ್ರೀಯುತರು ಗೋಡೆಯ ಬಳಿ ಬಂದು ನಿಂತಾಗ ಏನೋ ಒಂದು ಬಗೆಯ ದಿಗಿಲುಂಟಾಯಿತು. ಕೈಕಾಲುಗಳು ನಡುಗಹತ್ತಿದವು. ಆದರೂ ಧೈರ್ಯವನ್ನು ತಂದುಕೊಂಡು ಮನಸ್ಸಿನಲ್ಲಿ ತಮ್ಮ ಗುರುವನ್ನು ನೆನೆದು. ದೂರದ ತನ್ನ ನಾಡಿನ ಕೀರ್ತಿಗೌರವದ ಬಗ್ಗೆ ಅಭಿಮಾನ ತೋರಿ ರೇಖೆಯನ್ನೆಳೆಯಲು ಆರಂಭಿಸಿದರು. ಇವರ ಒಂದೊಂದು ರೇಖೆಯ ವೈಖರಿಯನ್ನು ನೋಡುತ್ತ ಪರೀಕ್ಷಕ ಮಹಾಶಯರ ಮುಖಗಳು ಗಂಭೀರವಾಗಹತ್ತಿದವು. ಸ್ಕೆಚ್ ಮುಗಿದ ಮೇಲೆ ಅದರ ವೈಶಿಷ್ಟ್ಯಕ್ಕೆ ಬೆರಗಾದ ಅವರು ಶಿಲ್ಪಿಯ ಮಹತ್ತ್ವ ಹಿರಿದಾದುದೇ ಎಂದು ತಿಳಿದರು. ಅವರ ಬಗ್ಗೆ ಗೌರವ ಭಾವವನ್ನು ತಾಳತೊಡಗಿದರು.

ಮೈಸೂರಿನ ಆ ತರುಣ ಶಿಲ್ಪಿಯೇ ಅಂಕಪ್ಪಾಚಾರ್ಯರು. ಆಗ ೨೬ ವರ್ಷಗಳ ಗಡಿಯನ್ನು ದಾಟುತ್ತಿದ್ದ ಶ್ರೀಯುತರು ತಮ್ಮ ಅಂದಿನ ಅನುಭವಗಳನ್ನು ಆಗಾಗ ನೆನೆಯುತ್ತಿದ್ದರು. ಅಲ್ಲಿನ ತಮ್ಮ ಸಾಧನೆಯನ್ನು ಕಲಾಗೌರವಕ್ಕೆ ಹೆಮ್ಮೆಪಡುತ್ತಿದ್ದರು.

ಗ್ವಾಲಿಯರ್ ಮಹಾರಾಜರು ಬೆಳ್ಳಿಯ ಸಿಂಹಾಸನವನ್ನು ಮಾಡಲು ಶಿಲ್ಪಿಗಳ ತೌರೂರೆನಿಸಿರುವ ಮೈಸೂರಿನ ಒಬ್ಬರನ್ನು ಕರೆಸಿಕೊಳ್ಳಬೇಕೆಂಬ ಅಭಿಲಾಷೆ ಮೂಡಿ, ಮೈಸೂರಿನಲ್ಲಿ ರಜತ ಶಿಲ್ಪ ಕಲೆಯಲ್ಲಿ ಹೆಸರಾದ ಒಬ್ಬರನ್ನು ಕರೆತರುವಂತೆ ತಮ್ಮ ಅಧಿಕಾರಿಗಳನ್ನು ಕಳುಹಿಸಿದ್ದಾಗ ತಮ್ಮ ತಾರುಣ್ಯದಲ್ಲಿಯೇ ಖ್ಯಾತಿಯ ಶಿಖರವನ್ನೇರುತ್ತಿದ್ದ ಅಂಕಪ್ಪಾಚಾರ್ಯರು ತಮ್ಮ ಗುರುಗಳ ಆದೇಶದಂತೆ ಗ್ವಾಲಿಯರ್‌ಗೆ ಹೊರಡುವ ಧೈರ್ಯ ಮಾಡಿದರು. ಅವರಿಗೆ ದೊರೆತ ಈ ಗೌರವವನ್ನು ತಿರಸ್ಕರಿಸದೆ ಜಯಿಸಿಕೊಂಡು ಬಂದೇನು ಎಂಬಂತೆ ಧೈರ್ಯ ತಾಳಿ ಹೋಗಿದ್ದರು. ಶಿಲ್ಪ ಪಿತಾಮಹ ಸಿಂಗಣ್ಣಾಚಾರ್ಯರ ಕೈಕೆಳಗೆ ಪಳಗಿಬಂದ ಇವರಿಗೆ ಈ ಕಾರ್ಯ ನಿರ್ವಹಣೆಯೇನೂ ಅಷ್ಟು ಕಷ್ಟಕರವಾದುದಾಗಿ ತೋರಲಿಲ್ಲ. ಮೈಸೂರಿನ ಅರಮನೆಯ ಸಿಂಹಾಸನಾದಿ–ಗಳನ್ನು ಮಾಡಿ ಪ್ರಖ್ಯಾತರಾಗಿರುವ ಸಿಂಗಣ್ಣಾಚಾರ್ಯರು ತಿಮ್ಮ ಶಿಷ್ಯನಿಗೆ ಗ್ವಾಲಿಯರ್‌ನ ಈ ಅವಕಾಶವನ್ನು ಬಿಟ್ಟುಕೊಟ್ಟರು. ಅಂತೆಯೇ ಅಂಕಪ್ಪಾಚಾರ್ಯರು ಗುರುವಿನ ಕೀರ್ತಿಯನ್ನು ಉಳಿಸಿ ತುಂಬ ಯಶಸ್ವಿಯಾಗಿ ಉತ್ತಮ ಶಿಲ್ಪಿ ಎಂಬ ಕೀರ್ತಿಯನ್ನು ಗಳಿಸಿ ಹಿಂದಿರುಗಿದರು.

ಗ್ವಾಲಿಯರ್‌ನಲ್ಲಿ ಐದು ಸಾವಿರ ತೊಲೆ ಬೆಳ್ಳಿಯನ್ನು ಬಳಸಿ ಮನೋಹರವಾಗಿ ಸಿಂಹಾಸನವನ್ನು ಮಾಡಿ ಮುಗಿಸಿದ ಮೇಲೆ ಇವರ ಕೌಶಲವನ್ನು ಮೆಚ್ಚಿಕೊಂಡ ಗ್ವಾಲಿಯರ್‌ನ ರಾಜರು ಇವರನ್ನು ಮತ್ತೂ ಉಪಯೋಗಿಸಿಕೊಳ್ಳುವ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಅಂಬಾರಿ, ಸಾರೋಟುಗಳನ್ನೂ ಅನೇಕ ವಿಗ್ರಹಗಳನ್ನೂ ಇವರಿಂದಲೇ ಮಾಡಿಸಿದರು. ಈ ಕೆಲಸಗಳು ಮುಗಿಯುವ ವೇಳೆಗಾಗಲೇ ಅಲ್ಲಿನ ಕಲಾವೇತ್ತರು ಇವರಲ್ಲಿ ಒಂದು ಪೂಜ್ಯ ಭಾವನೆಯನ್ನು ತಳೆದಿದ್ದರು. ಇವರ ಹಸ್ತ ಕೌಶಲ, ಲೋಹದಲ್ಲಿ ಇವರು ತೋರುತ್ತಿದ್ದ ಅಪೂರ್ವ ಕಲಾವೈಖರಿ ಮುಂತಾದವುಗಳಿಗೆ ಅಚ್ಚರಿಗೊಂಡ ಅವರು "ಆಪ್ ಗುರುಜಿ ಹೈಂ" ಎಂದು ಗೌರವದ ನುಡಿಗಳನ್ನು ಆಡಿದ್ದರು. ಅಲ್ಲದೆ ಶ್ರೀಯುತರು ಗ್ವಾಲಿಯರನ್ನು ಬಿಡುವಾಗ ಈ ಸಹೋದ್ಯೋಗಿ ಶಿಲ್ಪಿಗಳೆಲ್ಲಾ ಸೇರಿ ಒಂದು ಔತಣಕೂಟವನ್ನು ಏರ್ಪಡಿಸಿ ಅಂಕಪ್ಪಾಚಾರ್ಯರನ್ನು ಸತ್ಕರಿಸಿ ಬೀಳ್ಕೊಟ್ಟರು. ಹೀಗೆ ಶ್ರೀಯುತರ ಕೀರ್ತಿ ಮೈಸೂರಿನಿಂದ ಗ್ವಾಲಿಯರಿನವರೆಗೂ ಹರಡಿ ಅವರ ಶ್ರೇಷ್ಠ ಮಟ್ಟದ ಶಿಲ್ಪಕಲೆಯನ್ನು ಮೆರೆಯಿತು.

ಗ್ವಾಲಿಯರ್‌ನಲ್ಲಿ ಅಂಕಪ್ಪನವರ ಕಲಾಸೇವೆಗೆ ಒಂದೇ ಒಂದು ಉದಾಹರಣೆಯನ್ನು ಕೊಡಬೇಕಾದರೆ ಕಲಾತ್ಮಕವಾಗಿ ನಿರ್ಮಿತವಾಗಿರುವ ಬೆಳ್ಳಿಯ ಸಾರೋಟು. ಪ್ರಾಚೀನ ಕಾಲದಿಂದಲೂ ಸುಂದರ ರಥಗಳನ್ನು ಉತ್ತಮ ಶಿಲ್ಪಿಗಳಿಂದ ನಿರ್ಮಿಸುತ್ತಾ ಅದನ್ನು ವಾಹನವಾಗಿ ಬಳಸಿಕೊಳ್ಳುತ್ತ ಬಂದಿದ್ದಾರೆ, ನಮ್ಮ ಪುರಾತನ ರಾಜಮಹಾರಾಜರುಗಳು. ಅಂಥ ರಥಗಳಲ್ಲಿ ನಾವು ಅತ್ಯುತ್ತಮವಾದ ಕಲಾಕೌಶಲವನ್ನು ಕಾಣಬಹುದಾಗಿತ್ತು. ಆಧುನಿಕವಾಗಿ ಆಂಗ್ಲರ

ಪ್ರಭಾವದಿಂದ ಭಾರತದಲ್ಲಿ ಸಾರೋಟುಗಳು ಬಳಕೆಗೆ ಬಂದವು. ಅವು ಆಕಾರದಲ್ಲಿ ಪಾಶ್ಚಿಮಾತ್ಯ ರೀತಿಯಲ್ಲಿ ಇದ್ದರೂ ಅದರ ಮೇಲಿನ ಕಲೆಗಾರಿಕೆ ಮಾತ್ರ ನಮ್ಮ ಸಂಪ್ರದಾಯಕ್ಕೆ ಸೇರಿದುದು. ಇಂಥ ಒಂದು ಅಪೂರ್ವ ಸಾರೋಟನ್ನು ಅಂಕಪ್ಪಾಚಾರ್ಯರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನಿರ್ಮಿಸಿದ್ದಾರೆ. ಮೂರು ಭಾಗಗಳಾಗಿ ಸಾರೋಟನ್ನು ವಿಂಗಡಿಸಿಕೊಂಡು ಮುಂದೆ ಸಾರಥಿಯೂ, ನಡುವೆ ರಾಜರು, ಹಿಂಬದಿಯಲ್ಲಿ ಬೆಂಗಾವಲಿಗರು ಕೂರುವಂತೆ ಅಳವಡಿಸಲಾಗಿದೆ. ಒಂದೊಂದು ಭಾಗದ ಹಿಂಬದಿಯಲ್ಲೂ ಮನೋಹರವಾದ ಕಲಾಕೌಶಲ್ಯವನ್ನು ತೋರಲಾಗಿದೆ. ಹಿಂಬದಿಯಲ್ಲಿ ಗರಿಗೆದರಿ ನಿಂತಿರುವ ಸುಂದರವಾದ ಮಯೂರವೊಂದನ್ನು ಬಿಡಿಸಲಾಗಿದೆ. ಅದರ ಕೆಳ ಭಾಗದಲ್ಲಿ ದ್ರಾಕ್ಷಿಯ ಎಲೆ ಬಳ್ಳಿಗಳ ಅಲಂಕಾರ ಪ್ರಾಯವಾದ ಬಳ್ಳಿ ವರಸೆ ಇದೆ. ಅಲ್ಲಲ್ಲಿ ದ್ರಾಕ್ಷಿಯ ಗೊಂಚಲೂ ತೂಗುತ್ತಿದೆ. ಎಡ ಬಲ ಪಾರ್ಶ್ವಗಳಲ್ಲಿ ರಮ್ಯವಾದ ಪ್ರಕೃತಿ ಚಿತ್ರದ ದೃಶ್ಯಗಳು ದೃಷ್ಟಿಯನ್ನು ಸೆಳೆಯುತ್ತವೆ. ದೂರದಿಗಂತದಲ್ಲಿ ಸರೋವರದ ಅಲೆಗಳ ನಡುವೆ ಸೂರ್ಯೋದಯವಾಗಿದೆ. ಅವನ ಪ್ರಖರ ಕಿರಣಗಳು ಸುತ್ತಲೂ ಹರಡಿಕೊಂಡಿದೆ. ಒಂದು ದಿವ್ಯ ಮನೋಹರವಾದ ಕಂಜಾಸವು



ಅಂಕಪ್ಪಾಚಾರ್ಯರನ್ನು ಬೆಳಕಿಗೆ ತಂದ ಗ್ವಾಲಿಯರ್ ಸಾರೋಟು

ಅರಳಿ ರವಿಕಿರಣಗಳಿಂದ ಮಿಂದು ನಿಂತಿದೆ. ಕಮಲದ ಇಬ್ಬದಿಗಳಲ್ಲೂ ನಾಗಕನ್ನಿಕೆಯರು ವಾರಿ ಮಿಂದೆದ್ದು ದಿನಮಣಿಗೆ ವಂದಿಸುತ್ತಿದ್ದಾರೆ. ಸಾರೋಟಿನ ನಾಲ್ಕು ಮೂಲೆಗಳಲ್ಲೂ ಒಂದೊಂದು ಗದೆಯಾಕಾರದ ಬೆಳ್ಳಿಯ ದೀಪಸ್ತಂಭಗಳನ್ನು ಕಾಣಬಹುದು. ಈ ಕಂಬಗಳಲ್ಲಿಯೂ ಆಕರ್ಷಕವಾದ ಕಲಾನೈಪುಣ್ಯವನ್ನು ತೋರಿದ್ದಾರೆ. ಒಂದೊಂದು ಕಂಬದ ನಾಲ್ಕು ಮೂಲೆಗಳಲ್ಲೂ ಜಡೆ ಹೆಣೆದಂತೆ ಹೆಡೆ ಎತ್ತಿದ ನಾಗರಗಳನ್ನೂ, ಸುಂದರ ಗೋಪುರಗಳನ್ನೂ ನೋಡಬಹುದಾಗಿದೆ. ಈ ರೀತಿಯಲ್ಲಿ ಕಲಾತ್ಮಕವಾದ ಈ ಸಾರೋಟು ಅಂಕಪ್ಪಾಚಾರ್ಯರ ಉತ್ತಮ ಮಟ್ಟದ ಶಿಲ್ಪಚಾತುರ್ಯವನ್ನೂ, ಕಲಾದೃಷ್ಟಿಯನ್ನೂ ಸಾರುತ್ತದೆ. ಹೀಗೆಯೇ ಅವರ ಇತರ ಕೃತಿಗಳಲ್ಲಿಯೂ ನಾವು ವೈಶಿಷ್ಟ್ಯವನ್ನು ಕಾಣಬಹುದಾಗಿದೆ.



ಆಚಾರ್ಯರು ಬೆಳ್ಳಿ ತಗಡಿನಲ್ಲಿ ಮಾಡಿದ 'ಸೂರ್ಯದೇವ'

ಅಂಕಪ್ಪಾಚಾರ್ಯರು ೧೮೬೧ರಲ್ಲಿ ಮೈಸೂರಿನಲ್ಲಿ ಜನಿಸಿದರು. ಅವರ ತಂದೆಯವರ ಹೆಸರೂ ಅಂಕಪ್ಪಾಚಾರ್ಯರೆಂದೇ. ಅವರು ಉತ್ತಮ ಬಡಗಿಗಳಾಗಿದ್ದರು. ಮರದಲ್ಲಿ ಅನೇಕ ಕಲಾಪೂರ್ಣವಾದ ವಸ್ತುಗಳನ್ನು ಮಾಡುವುದರಲ್ಲಿ ಇವರು ಹೆಸರಾಗಿದ್ದರು. ಇವರ ಹಿರಿಯ ಮಗ ಲಿಂಗಣ್ಣಾಚಾರ್ಯರು (ತಮ್ಮ ತಂದೆಯವರು ತೀರಿಕೊಂಡ ಮೇಲೆ) ತನ್ನ ಸೋದರರಾದ ಅಂಕಪ್ಪಾಚಾರ್ಯರನ್ನು ಅವರ ಹದಿಮೂರನೆ ವರ್ಷದಲ್ಲಿ ಅವರ ಬಂಧುಗಳು ಅರಮನೆಯ ಶಿಲ್ಪಿಗಳಾಗಿದ್ದ ಸಿಂಗಣ್ಣಾಚಾರ್ಯರ ಕೈಕೆಳಗೆ ಬಿಟ್ಟರು. ಉತ್ತಮ ಸ್ವರ್ಣಶಿಲ್ಪಿಗಳೆಂದು ಆ ವೇಳೆಗಾಗಲೇ ಹೆಸರು ಪಡೆದಿದ್ದ ಸಿಂಗಣ್ಣಾಚಾರ್ಯರು ಸೋದರಳಿಯಂದಿರಾದ ಇವರನ್ನು ಶಿಷ್ಯವೃತ್ತಿಗೆ ಸಂತೋಷದಿಂದಲೇ ಬರಮಾಡಿಕೊಂಡರು.

ಸಿಂಗಣ್ಣಾಚಾರ್ಯರು ತುಂಬ ನಿಷ್ಠೆಯುಳ್ಳವರಾಗಿದ್ದರು. ಶ್ರಮಪೂರ್ಣ ಜೀವನ ಅವರದಾಗಿತ್ತು. ಅವರ ಕೈಕೆಳಗೆ ಅಂಕಪ್ಪಾಚಾರ್ಯರು ಬಂದ ಮೇಲೆ ಗುರುವಿಗೆ ತಕ್ಕಂತೆ ನಡೆದುಕೊಳ್ಳಬೇಕಾಯಿತು. ಮಧ್ಯರಾತ್ರಿಯವರೆಗೂ ಕೆಲಸ ನಿರಂತರವಾಗಿ ಸಾಗುತ್ತಿತ್ತು. ಮತ್ತೆ ಬೆಳಗಿನ ಜಾವದಲ್ಲಿ ನಾಲ್ಕೂವರೆ ಗಂಟೆಗೇ

ಎದ್ದು ಮತ್ತೆ ಕಾರ್ಯೋನ್ಮುಖರಾಗಬೇಕಿತ್ತು. ಅಂಕಪ್ಪಾಚಾರ್ಯರು ತಮ್ಮ ಅಭ್ಯಾಸದ ಕಡೆಯೇ ಸದಾ ಮನಸ್ಸುಳ್ಳವರಾಗಿರುತ್ತಿದ್ದರು. ತಮ್ಮ ಗುರುವಿನಲ್ಲಿ ತುಂಬ ಭಯ ಭಕ್ತಿಗಳನ್ನುಳ್ಳವರಾಗಿದ್ದರು. ಎಂಥ ನಿದ್ದೆಯಲ್ಲಿ ಕೂಗಿದರೂ ಗುರುವಿನ ಧ್ವನಿ ಕಿವಿಯ ಮೇಲೆ ಬೀಳುತ್ತಿದ್ದಂತೆಯೇ ಶ್ರದ್ಧೆಯಿಂದ ಎದ್ದು ಕುಳಿತುಬಿಡುತ್ತಿದ್ದರು. ಸೋಮಾರಿತನವಾಗಲಿ ಜಡತ್ವವಾಗಲೀ ಇವರಲ್ಲಿ ಇಲ್ಲದುದನ್ನು ಕಂಡು ಗುರು ಆಶ್ಚರ್ಯಪಟ್ಟಿರಬೇಕು. ಇವರ ಶ್ರದ್ಧಾಸಕ್ತಿಗಳಿಗೆ ಅವರು ಹೆಮ್ಮೆಪಟ್ಟಿದ್ದರು. ಶಿಷ್ಯನಲ್ಲಿ ಪೂರ್ಣವಾದ ನಂಬಿಕೆಯನ್ನು ಇಟ್ಟಿದ್ದರು. ತಾವು ಎಲ್ಲಿಯಾದರೂ ಹೊರಗಡೆ ಹೋಗಬೇಕಾದ ಸಂದರ್ಭ ಬಂದರೆ ಬೆಲೆ ಬಾಳುವ ಚಿನ್ನ ಬೆಳ್ಳಿಯ ಪದಾರ್ಥಗಳನ್ನು ಹಾಗೆ ಹಾಗೆಯೇ ಬಿಟ್ಟು ಹೊರಟು ಹೋಗುತ್ತಿದ್ದರು. ಅಂಕಪ್ಪಾಚಾರ್ಯರಿಗೆ ಆಗ ಎರಡು ಬಗೆಯ ಅಂಜಿಕೆಯಿದ್ದಿತು. ತಮ್ಮ ಕಾರ್ಯದಲ್ಲಿ ಅಚಲ ಶ್ರದ್ಧೆಯನ್ನು ತೋರಿ ಕೆಲಸವನ್ನು ಕಲಿಯುವುದೊಂದಾದರೆ ತಮ್ಮನ್ನು ನಂಬಿ ಗುರುವು ಈ ರೀತಿ ಬಿಟ್ಟುಹೋದ ಪದಾರ್ಥಗಳನ್ನು ಕಾಯುವುದು ಇನ್ನೊಂದು. ಇಂಥ ಸಂದರ್ಭಗಳಲ್ಲಿ ಬಹಳ ಜಾಗರೂಕರಾಗಿರುತ್ತಿದ್ದ ಇವರು ತಮ್ಮ ಗುರುವು ಮಾಡಿಬಿಟ್ಟ ಪ್ರತಿ ಕಲಾವಸ್ತುವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ, ಅಭ್ಯಸಿಸುತ್ತಾ ತಾವು ಅಂಥ ನೈಪುಣ್ಯವನ್ನು ಪಡೆದುಕೊಳ್ಳಬೇಕೆಂದು ಅಭಿಲಾಷೆಯುಳ್ಳವರಾಗಿ ಕೆಲವೇ ದಿನಗಳಲ್ಲಿ ಅದನ್ನು ಗಳಿಸಿಕೊಂಡರು.

ಮೊದಮೊದಲು ಅರಮನೆಗೆ ಸಂಬಂಧಪಟ್ಟಂಥ ಅಭರಣಾದಿಗಳನ್ನು ಮಾಡುತ್ತಾ ಬಂದು ಕೊನೆಗೆ ತಮ್ಮ ಗುರು ವಹಿಸಿಕೊಂಡ, ಅರಮನೆಯ ದೊಡ್ಡ ದೊಡ್ಡ ಕೆಲಸಗಳಿಗೆ ಇವರೂ ನೆರವಾಗುತ್ತಾ ಬಂದರು. ಇದರಿಂದ ಉತ್ತಮ ಮಟ್ಟದ ಅನುಭವ ದೊರೆತು ಸಿಂಹಾಸನಾದಿಗಳ ಪರಿಚಯವನ್ನು ಪಡೆದುಕೊಂಡರು. ಅವುಗಳ ನಿರ್ಮಾಣದ ಮೂಲ ಸೂತ್ರಗಳನ್ನೂ ಕರಗತಮಾಡಿಕೊಂಡರು. ಗ್ವಾಲಿಯರ್‌ನ ಅವರ ಕೀರ್ತಿಗೆ ಇಲ್ಲಿನ ಈ ಅನುಭವವೇ ಪೂರಕವಾಯಿತು.

ತಮ್ಮ ಕೈಕೆಳಗೆ ಬೆಳೆದುಬಂದ ಅಂಕಪ್ಪಾಚಾರ್ಯರಿಗೆ ಸಿಂಗಣ್ಣಾಚಾರ್ಯರು ಮೊದಲಿನಿಂದಲೂ ನೆರವಾಗುತ್ತಾ ಬಂದರು. ಇವರು ಪ್ರಾಪ್ತವಯಸ್ಕರಾದಾಗ ಶಿಷ್ಯನ ವಿವಾಹವನ್ನು ಸಹ ಮಾಡಿ ಸಂಸಾರರಥವನ್ನು ಹೂಡಿಕೊಟ್ಟರು.

ಅಂಕಪ್ಪಾಚಾರ್ಯರದು ದುಃಖಮಯವಾದ ಜೀವನ. ತಂದೆಯ ಹೆಸರೂ ಅಂಕಪ್ಪಾಚಾರ್ಯರೆಂದೆ. ತಾಯಿ ಸರಸಮ್ಮ: ಇವರಿಗೆ ಲಿಂಗಣ್ಣಾಚಾರ್ಯ ಮತ್ತು ಅಂಕಪ್ಪಾಚಾರ್ಯ ಎಂಬ ಇಬ್ಬರು ಪುತ್ರರು. ಅಂಕಪ್ಪಾಚಾರ್ಯರೇ ಕಿರಿಯವರು. ಇವರಿಗೆ ಪ್ರಾಪ್ತವಯಸ್ಸಿನಲ್ಲಿ ಲಗ್ನವಾಯಿತು. ಇವರಿಗೆ ಜನಿಸಿದ ಎರಡು ಗಂಡು ಕೂಸೂ ಉಳಿಯಲಿಲ್ಲ. ಪತ್ನಿಯೂ ತೀರಿಕೊಂಡರು. ಈ ವೇಳೆಯಲ್ಲಿ ಆಚಾರ್ಯರಿಗೆ ಎರಡು ಸ್ವಂತ ಮನೆಗಳಿದ್ದವು. ಮನೆಯ ಕಷ್ಟದಲ್ಲಿ ಒಂದು ಕೈ ಬಿಟ್ಟಿತು. ಮತ್ತೆ ಅಂಕಪ್ಪಾಚಾರ್ಯರಿಗೆ ಎರಡನೆ ಲಗ್ನ ಗೌರಮ್ಮನೊಂದಿಗೆ ಆಯಿತು. ಇವರಿಗೆ ನಾಲ್ಕು ಜನ ಗಂಡು ಮಕ್ಕಳೂ ಓರ್ವ ಪುತ್ರಿಯೂ ಹುಟ್ಟಿದರು. ನಾಲ್ಕು ಗಂಡುಮಕ್ಕಳೂ ಎಳೆಯದರಲ್ಲೇ ತೀರಿಕೊಂಡವು. ಇದು ತಂದೆ ತಾಯಿಗಳಿಗೆ ಅಪಾರ ದುಃಖ ತಂದಿತು. ಏಕಮಾತ್ರ ಪುತ್ರಿ ಪಾರ್ವತಮ್ಮ ಇವರ ವಂಶಕ್ಕೆ ಉಳಿದಳು. ಈಕೆಯ ಲಗ್ನವನ್ನು ಸೋಮಣ್ಣಾಚಾರ್ಯರೊಡನೆ ಮಾಡಿ ನೆಮ್ಮದಿ ತಂದುಕೊಂಡರು. ಇದೇ ಸಂದರ್ಭದಲ್ಲಿ ಮತ್ತೊಂದು ಆಚಾತುರ್ಯ ವ್ಯವಹಾರದಿಂದಾಗಿ ಇದ್ದ ಮನೆಯನ್ನು ಕೇವಲ ೪೫೦ ರೂ.ಗಳಿಗೆ ಕೊಡಬೇಕಾಯಿತು. ಕಾಳಮ್ಮನ ಬೀದಿಯ ಮನೆಯೊಂದನ್ನು ಭೋಗಕ್ಕೆ ಪಡೆದು ಅಲ್ಲಿ ಸಂಸಾರ ಸಾಗಿಸುತ್ತಾ ಬಂದರು. ಗುರು ಸಿಂಗಣ್ಣಾಚಾರ್ಯರ ನೆರವಿನಿಂದ ಅನೇಕ ಕೆಲಸಗಳನ್ನು ಹಿಡಿದರು. ಹಣವನ್ನು ಸಂಪಾದಿಸಿದರು. ಹುಣಸೂರು ತಾಲ್ಲೂಕು ಚಿಳ್ಳಿಕೆರೆ ಬಳಿಯ ಚಲ್ಲಹಳ್ಳಿಯಲ್ಲಿ ಇವರಿಗೆ ಮೂವತ್ತು ಎಕರೆ ಜಮೀನು ಇದ್ದಿತು. ಕಲೆಯಲ್ಲಿ ಮಗ್ನರಾಗಿದ್ದ ಆಚಾರ್ಯರಿಗೆ ಹಳ್ಳಿಯ ಹೊಲದ ಕಡೆ ನಿಗ

ಕಡಿಮೆ ಆಯಿತು. ಹೊಲದ ಸವಲತ್ತನ್ನು ಬೇರೆಯವರೇ ಅದ್ದೂರಿಯಾಗಿ ಅನುಭವಿಸುತ್ತಿದ್ದರು. ಆಚಾರ್ಯರ ಕೈತಪ್ಪಿನಿಂದಾಗಿ ಕೇವಲ ಕೆಲವೇ ರೂ.ಗಳಿಗೆ ಅಷ್ಟು ಭೂಮಿಯನ್ನು ಕೊಡುವಂತಾದುದು ಇವರ ದುರದೃಷ್ಟ. ಎರಡು ಎಕರೆಯನ್ನಾದರೂ ತನ್ನ ಪುತ್ರಿಗೆ ನೀಡುವಂತೆ ಆ ವ್ಯಕ್ತಿಯನ್ನು ಆಚಾರ್ಯರು ಅಂಗಲಾಚಿದರೂ ಪ್ರಯೋಜನವಾಗಲಿಲ್ಲ. ಸತ್ಯಸಂಧರಾದ ಆಚಾ-ರ್ಯರಿಗೆ ಕೋರ್ಟಿನ ವ್ಯವಹಾರಕ್ಕೆ ಕೈಹಾಕುವ ಮನಸ್ಸಾಗಲಿಲ್ಲ. ಈ ದುರಂತ ಸನ್ನಿವೇಶಕ್ಕೆ ಮನಸ್ಸು ಕೆಡಿಸಿಕೊಳ್ಳಲಿಲ್ಲ. ಶಾಂತಚಿತ್ತರಾಗಿ ಇವರ ಮನಸ್ಸನ್ನು ಶಿಲ್ಪಕಲೆಯ ಕಡೆ ಸೆಳೆದರು. ಇವರ ಭೋಗ್ಯದ ಮನೆಯೂ ಇವರಿಂದ ಕೈಬಿಟ್ಟಿತ್ತು. ಕೊನೆಗೆ ಇವರ ಸಂಸಾರಕ್ಕೆ ದೇವಾಂಗದವರಾದ ಚಿಕ್ಕ ಸುಬ್ಬಯ್ಯನವರ ಛತ್ರದ ಒಂದು ಪುಟ್ಟ ಕೋಣೆ ನೆಲೆ ಆಯಿತು. ಇಲ್ಲಿ ಅಂಕಪ್ಪಾಚಾರ್ಯರ ಪತ್ನಿ ಅವರ ೭೮ ನೇ ವಯಸ್ಸಿನಲ್ಲಿ ತೀರಿಕೊಂಡರು. ಆಚಾರ್ಯರಿಗೆ ಮಾನಸಿಕ ಯಾತನೆ ಪ್ರಾರಂಭವಾಯಿತು. ಊಟ ಸೇರದಾಯಿತು. ಚಿಂತೆ ಹೆಚ್ಚಾಯಿತು. ನಿತ್ರಾಣದಲ್ಲಿ ದೇಹ ಕುಗ್ಗಿತು. ಎದೆ ನೋವಿನಿಂದ ಒಮ್ಮೆ ರಕ್ತಕಾರಿದರು. ಸ್ಯಾನಿಟೋರಿಯಂ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಒಂದೂವರೆ ತಿಂಗಳು ಚಿಕಿತ್ಸೆ ಪಡೆದರು. ಕೊನಗೆ ೨–೧೧–೧೯೬೩ರಲ್ಲಿ ತೀರಿಕೊಂಡರು. ಈಗ ಅವರ ಮೊಮ್ಮಗ ಕಾಂತರಾಜನಲ್ಲಿ ಆಚಾರ್ಯರ ಕಲಾಕಿರಣ ಅಂಕುರಿಸಿದ್ದು ಅದು ಮರದ ಕೆತ್ತನೆ ಕೆಲಸದಲ್ಲಿ ಹೊರಹೊಮ್ಮಿದೆ. ಅಂಕಪ್ಪಾಚಾರ್ಯರ ಕಲಾಜೀವನ ಸ್ಮರಿಸುವಂತಹದು.

ಸ್ವತಂತ್ರ ಜೀವನವನ್ನು ಅವಲಂಬಿಸಿದ ಮೇಲೆ ಅಂಕಪ್ಪಾಚಾರ್ಯರು ತಮ್ಮ ಅಣ್ಣಂದಿರ ಜೊತೆಯಲ್ಲಿ ಬೆರೆತು ಕೆಲಸ ಮಾಡತೊಡಗಿದರು. ಅಣ್ಣ ತಮ್ಮಂದಿರಿಬ್ಬರೂ ಕೂಡಿ ಹೊಸ ಬಗೆಯ ವೃತ್ತಿ-ಯೊಂದನ್ನು ಅವಲಂಬಿಸಬೇಕೆಂದು ಯೋಚಿಸತೊಡಗಿದರು. ಲಿಂಗಣ್ಣಾಚಾರ್ಯರು ಸಹ ಬೆಳ್ಳಿಯ ಕೆಲಸದಲ್ಲಿ ನುರಿತ ಅನುಭವಿಗಳಾಗಿದ್ದರು. ನಮ್ಮ ನಾಡಿನ ಮನೆ ಮನೆಗಳಲ್ಲಿಯೂ ಬೆಳಗುತ್ತಿರುವ ಬೆಳ್ಳಿಯ ಫೋಟೋಗಳು ಆರಂಭವಾದುದು ಅಂದು ಈ ಇಬ್ಬರು ಅಣ್ಣತಮ್ಮಂದಿರ ಸಾಹಸದಿಂದ. ಹೊಸ ಬಗೆಯ ಈ ವೃತ್ತಿ ಆಗ ಎಲ್ಲೆಲ್ಲಿಯೂ ಕ್ರಾಂತಿಯನ್ನುಂಟುಮಾಡಿತು. ಕೇವಲ ವರ್ಣಚಿತ್ರಗಳೇ ಎಲ್ಲೆಲ್ಲಿಯೂ ತುಂಬಿಕೊಂಡಿದ್ದ ಕಡೆ ಸುಂದರವಾದ ಬೆಳ್ಳಿಯ ದೇವರಪಟಗಳು ಕಾಣಿಸಿಕೊಳ್ಳತೊಡಗಿದವು. ಕಲಾತ್ಮಕವಾಗಿ, ಆಕರ್ಷಕವಾಗಿ ಕಂಡುಬಂದ ಈ ಚಿತ್ರಪಟಗಳನ್ನು ಸಾವಿರಾರು ಜನ ಕೊಂಡು ತಮ್ಮ ಮನೆಗಳನ್ನು ಅಲಂಕರಿಸಿಕೊಂಡರು. ಪೂಜಾದಿಗಳಿಗೆ ಇವುಗಳನ್ನೇ ಇರಿಸಿಕೊಂಡರು. ಈ ಯೋಜನೆಯಲ್ಲಿ ಲಕ್ಷಾಂತರ ರೂಪಾಯಿಗಳ ವಹಿ-ವಾಟವೂ ನಡೆದುಹೋಯಿತು. ಮನೆಯ ಸ್ಥಿತಿಗತಿಗಳೂ ಉತ್ತಮಗೊಂಡವು. ಈ ವೃತ್ತಿಯನ್ನು ಇತರರೂ ಅನುಸರಿಸತೊಡಗಿ ಬೆಳ್ಳಿಯ ಪಟಗಳು ಎಲ್ಲೆಲ್ಲಿಯೂ ಹರಡಿಕೊಂಡವು. ಅವುಗಳ ಬೆಲೆಯೂ ಇಳಿಮುಖವಾಗುತ್ತಾ ಬಂದಿತು. ಇದರಿಂದ ಹೆಚ್ಚು ಬಂಡವಾಳವನ್ನು ಹಾಕಿದ್ದ ಲಿಂಗಣ್ಣ ಸೋದರರಿಗೆ ಸ್ವಲ್ಪ ಪೆಟ್ಟು ಬಿದ್ದಂತೆಯೇ ಆಯಿತು. ಆದರೂ 'ಫೋಟೋ ಅಂಕಪ್ಪ' 'ಫೋಟೋ ಲಿಂಗಣ್ಣ' ಎಂಬ ಹೆಸರು ಮಾತ್ರ ಇಂದಿಗೂ ನಿಂತಿದೆ. ಹಾಗೆಯೇ ಮೈಸೂರಿನಲ್ಲಿ ಕಲಾತ್ಮಕ ಬೆಳ್ಳಿಯ ಫೋಟೋಗಳ ಜನಕರಾಗಿ ಈ ಅಣ್ಣತಮ್ಮಂದಿರು ಕೀರ್ತಿಯನ್ನು ಪಡೆದರು.

ಅಂಕಪ್ಪಾಚಾರ್ಯರು ತಯಾರಿಸಿದ ಅತ್ಯುತ್ತಮ ಬೆಳ್ಳಿಯ ಚಿತ್ರಪಟಗಳಲ್ಲಿ ಒಂದನ್ನು ಇಲ್ಲಿ ನೆನೆಯ-ಬಹುದು. "ಸಪ್ತಾಶ್ವಗಳ ರಥವೇರಿ ಅಂತರಿಕ್ಷದಲ್ಲಿ ಸಾಗುತ್ತಿರುವ ಸೂರ್ಯದೇವನ ಚಿತ್ರಪಟ" ತುಂಬಾ ಆಕರ್ಷಕವಾದುದು. ತನ್ನ ಅಪೂರ್ವ ರಥವನ್ನೇರಿ ರವಿದೇವನು ತನ್ನ ಎರಡು ಕೈಗಳಿಂದಲೂ ಜಗತ್ತನ್ನು ಹರಿಸುತ್ತಾ ಸಾಗಿದ್ದಾನೆ. ಅವನ ಕಿರೀಟದ ಕಾಂತಿ ಅವನ ಮುಖದ ತೇಜಸ್ಸು ಜಗತ್ತನ್ನು ಬೆಳಗುವಂಥ ಕಿರಣಗಳನ್ನು ಸುತ್ತಲೂ ಚೆಲ್ಲುತ್ತವೆ. ಸಾರಥಿ ಎರಡು ಕೈಗಳಲ್ಲಿಯೂ ಅಶ್ವವಾಘೆಯನ್ನು ಹಿಡಿದು ರಥವನ್ನು ವೇಗವಾಗಿ ಓಡಿಸುತ್ತಿದ್ದಾನೆ. ಆ ಏಳು ಕುದುರೆಗಳೂ ತಮ್ಮ ಮುಖವನ್ನು ಒಂದೊಂದು ಕಡೆ ಚಾಚಿ, ಆ ಹಿಡಿತಕ್ಕೆ ತಮ್ಮ ವೇಗವನ್ನು ಹೆಚ್ಚಿಸಿದಂತೆ ತೋರುತ್ತಿದೆ. ಅವುಗಳ ಕಾಲುಗಳೂ ರಭಸದ ಒಂದೊಂದು ಭಂಗಿಯನ್ನು ಸೂಚಿಸುತ್ತವೆ. ಸಾರಥಿಯು ಕುಳಿತ ರೀತಿ, ಸೂರ್ಯ

ದೇವನು ನಿಂತ ಮನೋಹರ ಭಂಗಿ, ಎರಡು ದೇವ ಶಿಶುಗಳು ಹೂಮಾಲೆಯನ್ನು ಹಿಡಿದು ಎರಡು ಕಡೆಯೂ ಸ್ವಾಗತವನ್ನು ಕೋರುತ್ತಿರುವ ರೀತಿ ಮುಂತಾದುವು ಮನೋಜ್ಞವಾಗಿ ಈ ಚಿತ್ರದಲ್ಲಿ ಬಿಡಿಸಲ್ಪಟ್ಟಿದೆ. ಇದು ಬೆಳ್ಳಿಯ ತಗಡಿನ ಅಚ್ಚಾದರೂ, ಸಹಜವಾಗಿ ಕಡೆದಂತೆಯೇ ಎದ್ದುತೋರುವ ಒಂದು ವೈಶಿಷ್ಟ್ಯ ಈ ಚಿತ್ರದಲ್ಲಿದೆ. ಅಂಕಪ್ಪಾಚಾರ್ಯರ ಎಲ್ಲಾ ಚಿತ್ರಪಟಗಳಲ್ಲಿಯೂ ಈ ಅದ್ಭುತ ಜೀವಕಳೆಯನ್ನು ಕಾಣಬಹುದು.

ಅಂಕಪ್ಪಾಚಾರ್ಯರ ಕಲಾಕೃತಿಗಳು ನಾಡಿನ ನಾನಾ ಕಡೆಗಳಲ್ಲಿವೆ. ಬೆಳ್ಳಿಯಲ್ಲಿ ನಾನಾ ಬಗೆಯ ವಿಗ್ರಹವಸ್ತುಗಳನ್ನೂ, ಕವಚಗಳನ್ನೂ, ಪಲ್ಲಕ್ಕಿಗಳನ್ನೂ. ಚಿತ್ರಪಟಗಳನ್ನೂ ಸಿಂಹಾಸನಾದಿಗಳನ್ನೂ ಇನ್ನೂ ಅನೇಕ ಬಗೆಯ ಸಲಕರಣೆಗಳನ್ನು ನಿರ್ಮಿಸಿ ತಮ್ಮ ಜೀವಮಾನವನ್ನು ಕಲೆಗಾಗಿ ಸವೆಸಿದ್ದಾರೆ. ಮದರಾಸು ಪ್ರಾಂತ್ಯದ ಕೊಲ್ಲಂಗೋಡು ರಾಜರಿಗೆ ೧೯೩೨ರಲ್ಲಿ ಕೊಂಜನಾಕಾರದಲ್ಲಿ ಒಂದು ದೊಡ್ಡ ಸಪ್ತಸ್ವರತರಂಗವೊಂದನ್ನು ಬಹು ಚಾಕಚಕ್ಯತೆಯಿಂದ ಮಾಡಿ ಕೊಟ್ಟಿದ್ದಾರೆ. ಇವರ ಕೀರ್ತಿಯನ್ನು ಕೇಳಿ ಬಾಳೆಹೊನ್ನೂರು ಮಠದ ಶ್ರೀ ಶ್ರೀಗಳವರು ಶ್ರೀಯುತರನ್ನು ಕರೆಸಿಕೊಂಡು ಸತ್ಕರಿಸಿ ಇವರಿಂದ ಬಂಗಾರದ ಒಂದು ರೇಣುಕಾಚಾರ್ಯ ಚಿತ್ರಪಟವನ್ನು ಮಾಡಿಸಿದರು. ಅದನು ಆ ಮಠದ ಹಿಂದಿನ ಪ್ರಭುಗಳಾದ ಶ್ರೀಕೃಷ್ಣರಾಜೇಂದ್ರ ಒಡೆಯರಿಗೆ ಅರ್ಪಿಸಿದಾಗ ಪ್ರಭುಗಳು ಆ ಕಲೆಗಾರಿಕೆಯನ್ನು ಮೆಚಿಕೊಂಡು ಶಿಲ್ಪಿಗಳನ್ನು ಗೌರವಿಸಿದರು. ಅನಂತರ ಚಾಮುಂಡೇಶ್ವರಿ ದೇವಾಲಯದ ಬಾಗಿಲುವಾಡ, ಚಾಮುಂಡೇಶ್ವರಿಯ ಬೃಹದಾಕಾರದ ಬೆಳ್ಳಿಯ ಚಿತ್ರಪಟ, ಕೋಟೆಬಾಗಿಲು ಆಂಜನೇಯಸ್ವಾಮಿಯ ಕವಚ ಮುಂತಾದವುಗಳನ್ನು ಮಾಡುವ ಸದವಕಾಶ ಇವರ ಪಾಲಿಗೇ ಮೀಸಲಾಯಿತು. ಮೈಸೂರಿನ ಪರಕಾಲಸ್ವಾಮಿಯ ಬೆಳ್ಳಿಯ ಮಂಟಪದ ಕೆಲಸದಲ್ಲಿ ಇವರದೂ ಮುಖ್ಯ ಪಾತ್ರವಾಗಿತ್ತು. ಕೂಡಲಿ ಮಠದ ಶ್ರೀ ಶ್ರೀ ಅವರು ಅಂಕಪ್ಪಾಚಾರ್ಯರ ಶಿಲ್ಪ ಚಾತುರ್ಯಕ್ಕೆ ಮೆಚ್ಚಿ ತಮ್ಮ ಮಠಕ್ಕೆ ಇವರನ್ನು ಕರೆಸಿಕೊಂಡರು. ಅಲ್ಲಿಗೆ ಶ್ರೀಯುತರು ನಿರ್ಮಿಸಿಕೊಟ್ಟಿರುವ ನಾಲ್ಕುಸಾವಿರ ತೊಲೆಯ ಬೆಳ್ಳಿಯ ಸಿಂಹಾಸನ ಅಪೂರ್ವ ಕಲಾವೈಖರಿಯನ್ನು ಹೊಂದಿದೆ. ಇವರ ಕೀರ್ತಿ ಹೈದರಾಬಾದಿನವರೆಗೂ ಹರಡಿತು. ನೈಜಾಮರ ಬೆಳ್ಳಿಯ ರಿಲೀಫ್ ಪ್ಲೇಟವನ್ನು ಸಹಜ ಸುಂದರವಾಗಿ ಮಾಡಿಕೊಟ್ಟು ಅಲ್ಲೆಲ್ಲಾ ಮೈಸೂರಿನ ಕೀರ್ತಿಯನ್ನು ಸಾರಿದರು. ಮಹದೇಶ್ವರ ಬೆಟ್ಟದ ವೃಷಭವಾಹನವನ್ನು ಹತ್ತು ಸಾವಿರ ತೊಲಿ ಬೆಳ್ಳಿಯಲ್ಲಿ ಮಾಡಿಕೊಟ್ಟು ಈ ದಿಕ್ಕಿನಲ್ಲಿಯೂ ಹೆಸರುಗಳಿಸಿದರು. ಹೀಗೆಯೇ ಬೆಂಗಳೂರಿನ ಶ್ರೀ ರಂಗನಾಥ ದೇವಾಲಯಕ್ಕೆ ವಿಶೇಷವಾಹನವನ್ನು ಕಿಲಾರಿ, ರೋಡಿನಲ್ಲಿರುವ ಶ್ರೀ ಆಂಜನೇಯ ಸ್ವಾಮಿಗೆ ಬೆಳ್ಳಿಯ ಹೊದಿಕೆಯನ್ನೂ, ಕರ್ನೂಲಿನ ದೇವಾಲಯಕ್ಕೆ ಬೆಳ್ಳಿಯ ಬಾಗಿಲುವಾಡವನ್ನೂ, ಯಡಿಯೂರು ಶ್ರೀ ಶಿದ್ಧಲಿಂಗೇಶ್ವರ ದೇವಾಲಯಕ್ಕೆ ಮತ್ತು ಮೈಸೂರಿನ ಕಾಳಮ್ಮನ ಗುಡಿಗೆ ಗದ್ದಿಗೆ ಪೀಠವನ್ನೂ, ನಾಗಲಿಂಗ ಸ್ವಾಮಿಮಠಕ್ಕೆ ಈಶ್ವರ ಜಟಾಮುಕುಟವನ್ನೂ ಮಾಡಿಕೊಟ್ಟಿರುತ್ತಾರೆ.

ಹೀಗೆಯೇ ಹೆಸರಿಸುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ಆದೀತು. ಅಲ್ಲದೆ ಶ್ರೀಯುತರು ತಾವು ಮಾಡಿದ ಕೆಲಸಗಳಲ್ಲಿ ಎಷ್ಟನ್ನೋ ಮರೆತಿದ್ದಾರೆ. ತಮ್ಮ ಎಂಬತ್ತೈದು ವರ್ಷಗಳ ಬಾಳಿನ ನೂರಾರು ಅನುಭವಗಳ ತೆರೆಮರೆಯಲ್ಲಿ ಎಷ್ಟೋ ಮುಚ್ಚಿಹೋಗಿರಬಹುದು. ನಾನಾ ದೇವಾಲಯಗಳಿಗೆ ಗುರುಮನೆ ಅರಮನೆಗಳಿಗೆ ಅಷ್ಟೇ ಏಕೆ ಮನೆಮನೆಗಳಿಗೆ ಇವರ ರಜತಶಿಲ್ಪ ಕಲಾವಾಹಿನಿ ಹರಿದಿದೆ. ಇವರ ಹೆಸರನ್ನು ಕೇಳದ ಬಹಳ ಮಂದಿ ಇರಬಹುದು; ಆದರೆ ಇವರ ಕೃತಿಗಳನ್ನು ಪೂಜಿಸುವವರು ನೋಡಿ ಆನಂದಿಸುವವರು ಬಹುಮಂದಿ ಇದ್ದಾರೆ.

ತುಂಬ ಸಂಪ್ರದಾಯಶರಣರಾಗಿದ್ದ ಇವರು ದೈವಭಕ್ತಿಗೆ ಪ್ರಾಶಸ್ತ್ಯವನ್ನಿತ್ತಿದ್ದರು. ಪುರಾಣ ಶಾಸ್ತ್ರವನ್ನು ಕೇಳುವುದರಲ್ಲಿ ತುಂಬಾ ಅಭಿರುಚಿಯುಳ್ಳವರಾಗಿದ್ದರು. ದಿನವೆಲ್ಲಾ ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಸಂಜೆಯ ವೇಳೆ ತಮ್ಮ ಪುಟ್ಟ ಜಾಡಿಗೆ ಮನೆಯಲ್ಲಿಯೇ ಪ್ರಶಾಂತವಾಗಿ ಕುಳಿತು ಏನನ್ನಾದರೂ ಮಾಡುತ್ತಿದ್ದರು. ಇಂಥ ವೃದ್ಧ ಶಿಲ್ಪಿಗಳು ನಮ್ಮಿಂದ ಕಣ್ಮರೆಯಾಗಿ ಬೀಳದೆ ಹೋದದ್ದು ಆಶ್ಚರ್ಯ.

ಶಿಶು ಗೀತದ ಜೀವನ

ಮೂಲ : ಮರಿಯಾ ಝುನ್ಮೃತ್ರೋ
ಕನ್ನಡಕ್ಕೆ : ವೆಂಕಟರಾಜ ಪಾನಸೆ

ಹದಿನಾರು ವರ್ಷದ ಪಾಲ್ ಮೆಟ್ಟಿಲ ಮೇಲೆ ನಿಂತುಕೊಂಡು ಜೋರಾಗಿ ಕಿಟಕಿ, ಬಾಗಿಲು ಗುದ್ದುತ್ತಿದ್ದ.

"ಹಿ" ಎಂದೆ ನಾನು.

ಆತ ನೇರವಾಗಿ ನಿಂತುಕೊಂಡ. ಬಾರಿಸುವುದನ್ನು ನಿಲ್ಲಿಸಿದ. ಅಷ್ಟೇಕೆ. ಸ್ವಲ್ಪ ನಗೆಯನ್ನೂ ತುಳು ಕಿಸಿದ.

"ಹಿ" ಎಂದನಾತ.

ಮೆಟ್ಟಿಲ ಬಳಿ ಯಾಕೆ ನಿಂತುಕೊಂಡಿದ್ದೀಯಾ?

"ನನಗೆ ಬೀಗದ ಕೈ ಕೊಡೊಲ್ಲ ಅವರು," ಎಂದ.

"ಯಾಕೆ ?"

"ನಾನು ಯಾವಾಗಲೂ ಕಳೆದುಕೊಂಡು ಬಿಡು ತ್ತೇನೆಂದು ಅಮ್ಮ ಹೇಳ್ತಾಳೆ."

"ಹೌದಾ ?"

"ಒಮ್ಮೊಮ್ಮೆ ಹಾಗಾಗುತ್ತೆ."

ಆತ ಮತ್ತೆ ಕಿಟಕಿ ಬಾಗಿಲನ್ನು ಗುದ್ದತೊಡಗಿದ. ಏನೋ ಯೋಚನೆ ಮಾಡುತ್ತಿರುವುದು ಸ್ಪಷ್ಟ-ವಾಗಿದ್ದಿತು. ಜೇಟ್ ಆರ್ಕೆಸ್ಟ್ರಾದಲ್ಲಿ ಡ್ರಮ್ಮರ್ ಆಗಬೇಕೆಂದು ಆತ ಖಂಡಿತ ಯೋಚಿಸುತ್ತಿರ-ಬಹುದು.

"ಆದರೆ ಕಳೆದಾಗಲೆಲ್ಲ ಮತ್ತೆ ಹುಡುಕಿ-ಕೊಂಡಿರುತ್ತೇನೆ"– ಎಂದನಾತ.

"ತುಂಬಾ ಒಳ್ಳೇದು"– ಎಂದೆ ನಾನು.

"ಆದರೆ ಬೀಗವನ್ನೇ ಬದಲಾಯಿಸಿಬಿಟ್ಟಿರು-ತ್ತಾರೆ ಈ ಮಧ್ಯೆ."

"ಹೋಗಲಿ, ನಮ್ಮ ಫ್ಲ್ಯಾಟಿಗೆ ಬಾ, ಇಲ್ಲೇ ಸ್ವಲ್ಪ ಹೊತ್ತು ಕಾದಿರಬಹುದು."

ನಮ್ಮ ಫ್ಲ್ಯಾಟಿನೊಳಕ್ಕೆ ಬಂದೆವು.

ನನ್ನ ಕೋಣೆಯಲ್ಲಿ ಬರುವಂತೆ ಕೇಳಿದೆ. ಎದುರುಬದುರಾಗಿ ಕುಳಿತೆವು. ಆತನ ಷೂ ಕಡೆಗೆ ನೋಡಿದೆ. ನೀರು, ರೊಜ್ಜು ಸೋರುತ್ತಿತ್ತು. ಈತ ಎದ್ದು ಹೋದ ಬಳಿಕ ಮತ್ತೆ ನಾನು ನೆಲ ತೊಳೆಯಬೇಕೆಂದುಕೊಂಡೆ.

"ನಿಮ್ಮ ತಾಯಿ ತುಂಬ ಒಳ್ಳೆಯವಳೆಂದು ಕಾಣುತ್ತೆ"– ಎಂದೆ. ಒಂದಿಷ್ಟು ಸಹಾಯಕಳಾಗುವ ಧ್ವನಿಯಲ್ಲಿ.

"ಹೌದಾ?"

"ತಂದೆ ಮತ್ತೆ ಊರಲ್ಲಿ ಇಲ್ವಾ?"

"ಯಥಾ ಪ್ರಕಾರ ಇನ್ಸ್‌ಪೆಕ್ಷನ್ ಟೂರ್."

"ಈ ಬಾರಿ ಏನು ಇನ್ಸ್‌ಪೆಕ್ಷನ್?"

"ವಿದ್ಯುಚ್ಛಕ್ತಿ ಸ್ಥಾವರ,"

"ಏನಾಯಿತಂತೆ ಅದಕ್ಕೆ ?"

"ಅದಕ್ಕೇನಾಗಿಲ್ಲ. ಒಂದು ಹೂದೋಟಕ್ಕೆ ಇಪ್ಪತ್ತು ಸಹಸ್ರ ಖರ್ಚು ಮಾಡಿಬಿಟ್ಟಿದ್ದಾರಂತೆ."

"ಅಷ್ಟೆ ? ಯಾಕೊ ?"

"ಅದನ್ನೇ ಪತ್ತೆ ಮಾಡಲು ಹೋಗಿದ್ದಾರೆ."

"ಏನಾದರೂ ಕೆಲ್ಸ ಇರಲೇಬೇಕಲ್ಲ."

ಕ್ಷಣಕಾಲ ಇಬ್ಬರೂ ಮೌನವಾಗಿ ಕುಳಿತೆವು.

"ಕೈ ಖರ್ಚಿಗೆಂದು (ಪಾಕೆಟ್ ಮನಿ) ನೀವು ಎಷ್ಟು ಕೊಡುತ್ತೀರಾ?" ಹಠಾತ್ತನೆ ಆತ ಕೇಳಿದ.

"ಯಾರಿಗೆ?"

"ಅಲ್ಲ ನಿಮಗೇ ಹದಿನಾರು ವರ್ಷದ ಮಗನಿದ್ದರೆ ಎಂದೆ!"

"ಗೊತ್ತಾಗೊಲ್ಲಪ್ಪಾ. ನಿನಗೆಷ್ಟು ಕೊಡ್ತಾರೆ?"

"ಅವರು ಕೊಡೋದು ಸಾಲೊದಿಲ್ಲ"– ಎಂದ ಒಂದಿಷ್ಟು ಗಟ್ಟಿ ದನಿಯಲ್ಲಿ.

"ಬೇರೆ ಹುಡುಗರಿಗೆ ಜಾಸ್ತಿ ಕೊಟ್ಟಿರ್ತಾರೆಯೆ?"

"ಎಲ್ಲರಿಗೂ ಸ್ವಲ್ಪವೆ"–ಎಂದನಾತ, ಆದರೆ ನನ–ಗಿಂತ ಜಾಸ್ತೀನೆ, ಅವರು ಹಾಗೆ ಹೇಳೋಲ್ಲ ಅಷ್ಟೆ."

"ಹಾಗಿದ್ದರೆ ಅಪ್ಪ–ಅಮ್ಮನ ಬಗ್ಗೆ ನಿನಗೆ ಅಷ್ಟು ಸಂತೋಷ ಇಲ್ಲ?"–ಅತ ಸುಮ್ಮನೆ ಭುಜ ಕುಣಿಸಿದ.

"ಅಮ್ಮ ಯಾವಾಗಲೂ ಗಲಾಟೆ ಮಾಡ್ತಾಳೆ–ಒಮ್ಮೆಲೆ ಅಬ್ಬರಿಸಿದ, ಮತ್ತೆ ಅಪ್ಪ ಪ್ರವಾಸ ದಿಂದ ಹಿಂತಿರುಗಿ ಬಂದಾಗಲೆಲ್ಲ ನನ್ನ ಕೋಣೆ ಇನ್ಸ್‌ಪೆಕ್ಷನ್ ಮಾಡ್ತಾರೆ. ಆ ಬಳಿಕ ಒಂದು ಭಾಷಣಾನೆ ಕೊಡ್ತಾರೆ. ಇದು ತುಂಬಾ ಗಡುಚಾದ ಬಾಳು."

"ಅಮ್ಮ ಅದೇಕೆ ಗಲಾಟೆ ಮಾಡ್ತಾಳೆ?"–ನಾನು ಕೇಳಿದೆ.

"ನನ್ನೆ, ನನ್ನ ಕತ್ತು ತೊಳೆಯಬೇಕೆಂದು ಹೇಳಿದಳು... ಮತ್ತೆ... ಆತನ ಕತ್ತಿನ ಕಡೆಗೆ ನಾನು ನೋಡಿದೆ. ಖಂಡಿತ ತೊಳೆಯಲೇಬೇಕು."

"ನೀನು ಮಾತನಾಡೋದು ನನಗೆ ಅರ್ಥವಾ ಗ್ತದೆ...ಎಂದೆ," ವಿಷಯ ಮನ ಮುಟ್ಟಿದವರಂತೆ.

"ನಾನು ಇನ್ನೂ ಚಿಕ್ಕ ಮಗೂ ಅಂತ ಆಕೆ ಭಾವಿಸ್ತಾಳೆ"–ಎಂದ ಪಾಲ್.

"ಹೌದು ನಾವು ಎಲ್ಲರೂ ಮೈ ತೊಳೆದುಕೊಳ್ಳ ಲೇಬೇಕು"– ನನ್ನ ಮಾತಿನಲ್ಲಿ ಎಚ್ಚರಿಕೆ ಇದ್ದಿತು.

"ಆದರೆ ಯಾವಾಗಲೂ ಅದನ್ನೇ ಮಾಡಿಕೊಂಡಿರ ಬೇಕೇ? ಪ್ರತಿ ಗುರುವಾರ ನಾನು ಈಜೋ ದಕ್ಕೆ ಹೋಗುತ್ತೇನೆ. ಎರಡು ಗಂಟೆ ನೀರಲ್ಲಿ ತೇಲ್ತೆನೆ, ಸಾಲದೆ ?"

ಈ ಪ್ರಶ್ನೆಗೆ ನಾನು ಉತ್ತರ ಕೊಡಲಿಲ್ಲ.

"ಬೇರೆ ಇನ್ನೇನಾದರೂ ಕಾರಣವಿರಬಹುದು ?"

"ಅದಕ್ಕೇನಂತೆ, ಬೇಕಾದಷ್ಟು. ಯಾವಾಗಲೂ ನಾನು ಮುಖ ತೊಳೆಯುತ್ತಲೆ ಇರಬೇಕೆಂದು ಹೇಳುತ್ತಾಳೆ. ನಾನು ಕೂದಲು ಬೆಳೆಸುತ್ತಿ–ದ್ದೇನೆ. ಗಡ್ಡ ಬರುತ್ತಿದೆ ಎಂಬುದು ಅವಳಿಗೆ ಅರ್ಥವೇ ಆಗುವುದಿಲ್ಲ ನೋಡಿ. ನಾನು ಆಗಾಗ ಮುಖ ತೊಳೆದುಕೊಳ್ಳುತ್ತಿದ್ದರೆ ಮುಖದ ಮೇಲಿನ ಕೂದಲು ಬೆಳೆಯದೆ ಅಷ್ಟಕ್ಕೆ ನಿಲ್ಲುತ್ತಯೆಂದು ಆಕೆ ತಿಳಿದಂತಿದೆ."

"ಹಾಗಿದ್ದರೆ ಬೋಳಿಸಿಕೊಳ್ಳಬಹುದಲ್ಲ"–ಒಂದಿ-ಷ್ಟು ದುಡುಕಿ ಮಾತನಾಡಿದೆ.

"ಅಪ್ಪ ಬಿಡೋಲ್ಲ. ಒಮ್ಮೆ ಬೋಳಿಸಿಕೊಂಡರೆ ಜೀವನ ಪರ್ಯಂತ ನಿತ್ಯವೂ ಅದನ್ನು ಮಾಡ ಬೇಕಾಗುತ್ತದೆಯೆಂದು ಅಪ್ಪ ಹೇಳ್ತಾನೆ."

ಹುಡುಗನಿಗೆ ಜೀವನ ಸುಲಭವಾಗಿಲ್ಲ ಎಂಬು ದಂತೂ ನನಗೆ ಸ್ಪಷ್ಟವಾಗಿದ್ದಿತು.

"ಹದಿನೇಳು ವರ್ಷದವನಾಗುವವರೆಗೂ ನಾನೇ ಬೋಳಿಸಿಕೊಂಡಿರಲಿಲ್ಲವೆಂದು ಅವನೆ ಹೇಳ್ತಾನೆ"–ಎಂದ ಪಾಲ್, "ಅಂದರೆ ನಾನು ಇನ್ನೂ ಒಂದು ವರ್ಷ ಕಾದುಕೊಂಡಿರಬೇಕು. ಈಗ ನನ್ನನ್ನು ನೀವೇ ಕೊಂಚ ನೋಡಿ."

"ನೀವು ಯಾವತ್ತು ಬೋಳಿಸಲಾರಂಭಿಸಿದರೆ ಹೇಗೆ ಏನು ಎಂತ ನನ್ನ ಯಜಮಾನರನ್ನೆ ಕೇಳ್ತೇನೆ"– ಎಂದು ನುಡಿದೆ.

ಅವನು ಉತ್ಸಾಹ ತೋರಿಸಲಿಲ್ಲ.


ಈಗ ನಿಜವಾಗಿ ಅವನ ಬಗ್ಗೆ ತುಂಬಾ ವ್ಯಥೆ ಅನಿಸಿತು.

"ಗಡ್ಡ ಬೋಳಿಸುವ ಈ ವ್ಯವಹಾರಾನ ನಾನೇ ಇತ್ಯರ್ಥ ಪಡಿಸಲು ಪ್ರಯತ್ನಿಸುತ್ತೇನೆ. ಒಂದು ಭಾನುವಾರ ನಿಮ್ಮ ಅಮ್ಮ, ಅಪ್ಪನನ್ನು ನಮ್ಮ ಮನೆಗೇ ಚಹಾಪಾನಕ್ಕೆ ಕರೆಯುತ್ತೇನೆ. ಆಗ ಮಾತನಾಡೋಣ"– ಎಂದು ಭರವಸೆ ನೀಡಿದೆ.

ಆತನ ಕಣ್ಣಲ್ಲಿ ಬೆಳಕು ಚಿಮ್ಮಿತು.

"ತುಂಬಾ ಒಳ್ಳೇದು"–ಎಂದನಾತ. "ನನ್ನ ಸ್ನೇಹಿ ತನೊಬ್ಬನನ್ನು ರಿಕಾರ್ಡ್ ತರುವಂತೆ ಕೇಳಿ ಕೊಳ್ಳುತ್ತೇನೆ. ಜಾಜ್ ಸಂಗೀತವೂ ಅಪ್ಪ ಅಮ್ಮನಿಗೆ ಆಗೋದಿಲ್ಲ ನೋಡಿ. ಎಷ್ಟು–ಹೊತ್ತು ಬೇಕಾದರೂ ಅವರನ್ನು ನಿಮ್ಮಲ್ಲಿ ಇರಿ ಸಿಕೊಳ್ಳಿ. ಎರಡು ಗಂಟೆ ಇರಿಸಿಕೊಳ್ಳುತ್ತೀರಾ?"

"ಓಹೊ, ಎರಡು ಗಂಟೆ," ಎಂದು ನಾನು ಭರ ವಸೆ ನೀಡಿದೆ, "ಆದರೆ ಸ್ನೇಹಿತರೊಡನೆ ರಿಕಾರ್ಡ್ಸ್ ಕೇಳುತ್ತಾ ಕುಳಿತರೆ ನಿಮ್ಮ ತಾಯಿ ಆಕ್ಷೇಪಿಸ–ಬಹುದಲ್ಲವೆ?"



"ಇಲ್ಲ, ಬದಲು, ಯಾವಾಗಲೂ ಒಂದು ಚಾಕ್ಲೇಟ್‌ಬಾರ್ ಕೊಡುತ್ತಾಳೆ, ಸಣ್ಣಗಾಗಿ ಮಾತನಾಡುತ್ತಾಳೆ. ಮತ್ತೆ ಸ್ಕೂಲ್ ಬಗ್ಗೆ ಕೇಳ್ತಾಳೆ."

"ಇದು ಕಷ್ಟ"–ಎಂದು ನಾನು ಒಪ್ಪಿಕೊಂಡೆ. ಆತ ಜಗಿದು ಜೋಲಿ ಹೊಡೆದ. ಅವನ ಕೈಹಿಡಿದೆ. ಅದು ಒಂದಿಷ್ಟು ಒದ್ದೆ ಆಗಿದ್ದಿತು.

"ಮನೆಗೆ ಯಾರಾದರೂ ಬಂದಿದ್ದಾರೆಯೆ, ನೋಡ್ತೀನಿ"– ಎಂದ ಪಾಲ್. "ನೀವು ತುಂಬ ಒಳ್ಳೆಯೋರು"– ವಿದಾಯದ ಮಾತು ಹೇಳಿದೆ.

ಯಜಮಾನರು ಕಚೇರಿಯಿಂದ ಮನೆಗೆ ಹಿಂತಿರುಗಿದಾಗ ನೇರವಾಗಿ ಒಮ್ಮೆಲೆ ಕೇಳಿದ.

"ಗಡ್ಡ ಜೋಳಿಸಲಾರಂಭಿಸಿದಾಗ ನಿಮಗೆ ಎಷ್ಟು ವರ್ಷವಾಗಿದ್ದಿತು?"

"ಏನೋ ಗೊತ್ತಿಲ್ಲ"– ಎಂದ. ಅವರು ಯಾಕೊ ಒಂದು ತರಹ ಅನುಮಾನದಿಂದ ನನ್ನನ್ನೇ ನೋಡತೊಡಗಿದರು. ಆದರೆ ಅದೆಲ್ಲ ಈಗೇಕೆ ಬೇಕು?"

"ಹೋಗಲಿ ಬಿಡಿ. ಸುಮ್ಮನೆ ಕೇಳಿದೆ" ಎಂದೆ. ಸ್ವಂತ ಮಕ್ಕಳು ಇದ್ದರೆ ತಾನೆ ಇಂಥದೆಲ್ಲ ನೆನಪಿರಲು ಸಾಧ್ಯ! ✡

ತನ್ನ ಹದಿನೇಳು ವರ್ಷದ ಮಗ ಅಭಿಜಾತ ಕಲಾವಿದನೆಂದು ವರ್ಣಿಸುತ್ತಾ ಆಕೆ ಆತ ತೆಗೆದ ಚಿತ್ರಗಳನ್ನು ತನ್ನ ಗೆಳತಿಯರಿಗೆ ತೋರಿಸುತ್ತಿದ್ದಾಗ, ಅಲ್ಲಿ ಕೆಲವು ಮಹಿಳೆಯರ ನಗ್ನಚಿತ್ರಗಳಿದ್ದುದನ್ನು ನೋಡಿ ಅವರು, "ಅಂ! ಮಾಡೆಲ್‌ಗಳನ್ನು ಎದುರಿಗೆ ಕೂಡಿಸಿಕೊಂಡು ನಿಮ್ಮ ಮಗ ಇಂಥ ಚಿತ್ರಗಳನ್ನು ಬಿಡಿಸುತ್ತಾನೆಯೆ?" ಎಂದು ಏಕ ಕಂಠದಿಂದ ಕೇಳಿದರು. ಆಗ ಆ ಮಹಾತಾಯಿ, "ಬರೇ ಮಾಡೆಲ್ಲುಗಳನ್ನು ಎದುರಿಗೆ ಕೂಡಿಸಿಕೊಂಡು ತೆಗೆಯುವುದರಲ್ಲೇನು ಬಂತು ಜಾಣ್ಮೆ? ನನ್ನ ಮಗ ಅವುಗಳನ್ನು ನೆನಪಿನಿಂದಲೆ ತೆಗೆದಿದ್ದಾನೆ," ಎಂದು ಅಭಿಮಾನದಿಂದ ಉತ್ತರಿಸಿದಳು.

ನ್ನ ಕೊಲೆ



"ಅಶ್ವತ್ಥ"

ಹೌದು, ಒಪ್ಪಿಕೊಂಡು ಬಿಡುತ್ತೇನೆ.

ಇವಳನ್ನು ಕೊಲೆ ಮಾಡಿದವನು ನಾನೇ.

ನಾನೇ, ಸಭ್ಯಸ್ಥ, ಸಜ್ಜನ, ನಾಗರಿಕ–ಹಾಗೆ ಅಂದುಕೊಂಡವನು, ಅನ್ನಿಸಿಕೊಂಡವನು.

ಒಂದು ದುರ್ಬಲ ಗಳಿಗೆಯಲ್ಲಿ, ಹಾಗೆ ಮಾಡಿಬಿಟ್ಟೆ.

ಹ್ನ್! ಈಗ ಹಾಗೆಂದುಕೊಂಡು ಏನು ಪ್ರಯೋಜನ.

ಈ ಹೆಣದ ಸುತ್ತಮುತ್ತ ಇಲ್ಲಿ, ಅಲ್ಲಿ, ಸಣ್ಣ ಗುಂಪುಗಳಲ್ಲಿ ನಿಂತು ಮಾತಾಡುತ್ತಿರುವ ಜನರ ಬಳಿ ಸುಳಿದಾಡುತ್ತ, ನಿಂತು ನಿಂತು, ಅವರು ಆಡುತ್ತಿರುವುದನ್ನು ಕೇಳಿಸಿಕೊಳ್ಳುತ್ತೇನೆ.

'ಪಾಪ, ಎಂಥ ಆಕರ್ಷಕ ಹೆಣ್ಣು!'

'ಹೌದು, ಹಾಗೆ ಸೀರೆ ಬ್ಲೌಸ್ ಹರಿದು ಅಸ್ತವ್ಯಸ್ತವಾಗಿ, ಕೂದಲು ಕೆದರಿ, ರಕ್ತದ ಮಡುವಿನಲ್ಲೇ ಹೇಗೆ ಹೇಗೋ ಬಿದ್ದಿದ್ದರೂ ಹೇಗೆ ಕಾಣಿಸ್ತಾಳೆ! ಕತ್ತು ಎದೆ ಹೊಟ್ಟೆ ತೊಡೆ ಇಲ್ಲೆಲ್ಲ ಏಳೆಂಟು ತಿವಿತದ ಗಾಯ ಇವೆಯಂತೆ.'

'ಇನ್ನೂ ಇಪ್ಪತ್ತೈದು ಕೂಡ ಆಗಿಲ್ಲ ಅಂತ ಕಾಣುತ್ತೆ. ಛೆ! '

'ಕತ್ತು ಬೋಳಾಗಿದೆ, ಮದುವೆಯೂ ಆಗಿಲ್ಲ.'

'ಅಯ್ಯೋ, ಇಷ್ಟೆಲ್ಲ ಮಾಡಿದೋರು ಕತ್ತಿನಲ್ಲಿದ್ದದ್ದನ್ನು ಬಿಡ್ತಾರೇನ್ರೀ? ಮಾಂಗಲ್ಯ, ಬೇರೆ ಸರ ಆಭರಣ ಎಲ್ಲಾನೂ ದೋಚಿಕೊಂಡೇ ಹೋಗಿರ್ತಾರೆ.'

'ಹೌದು, ಈ ಪಾಪಿ ಮುಂಡೆ ಮಕ್ಕಳು ಬೈಸಿಕಲ್ ಮೇಲೆ ಹೋಗ್ತಾಲೇ ಹೆಣ್ಣುಮಕ್ಕಳ ಕತ್ತಿನಲ್ಲಿದ್ದದ್ದನ್ನು ಕಿತ್ತುಕೊಂಡು ಹೋಗುವುದು ಹೊಸದೇ? ಯಾರಾದರೂ ಒಬ್ಬಳೇ ಇದ್ದಾಗ, ನೋಡಿ ಮನೆ ನುಗ್ಗಿ ಅವಳ ಮೈ ಮೇಲಿದ್ದದ್ದನ್ನೆಲ್ಲ ತಗೊಂಡು ಹೋಗುವುದಿಲ್ಲವೆ? ಯಾವುದು ತಾನೆ ಆಗೋದಿಲ್ಲ, ಎಲ್ಲಿ ತಾನೆ ಆಗೋದಿಲ್ಲ?'

'ಮೊನ್ನೆ ಮೊನ್ನೆ ತಾನೆ ದೊಡ್ಡ ಹೋಟಲಿನಲ್ಲಿ ಗಂಡ ಹೆಂಡತಿ ಕೂತಿರಬೇಕಾದ್ರೆ ಮೂರು ನಾಲ್ಕು ಪುಂಡರು ಅವಳನ್ನು ಕೆಣಕಿ, ಗಂಡ ಮ್ಯಾನೇಜರಿಗೆ ಹೇಳಿ ಪ್ರಯೋಜನವಾಗದೆ.ರಿವಾಲ್ವರ್ ಇದ್ದದ್ದರಿಂದ ನೆಲಕ್ಕೆ ಹೊಡೆದ ಮೇಲೆ ಅವರು ಓಡಿಹೋದದ್ದನ್ನು ಪತ್ರಿಕೇಲಿ ಓದಿಲ್ಲವೆ? ಇನ್ನೂ ಎಂಥೆಂಥಾದ್ದೆಲ್ಲ ನಡೀತಾ ಇದೆಯೋ, ರಾಮರಾಮ!'

'ಆಫೀಸ್ ಹುಡುಗಿಯೋ ಇನ್ನೂ ಯಾರೋ ಇವಳು?'

'ಹುಂ, ಎಲ್ಲೋ ಹೊತ್ತಾಗಿ, ಬಸ್ಸುಗಿಸ್ಸು ಸಿಕ್ಕದೆ, ಮನೆಗೆ ಹೋಗ್ತಾ ಇದ್ದಳೇನೋ, ಒಬ್ಬಳೆ?

'ಅಥವಾ ಸಿನಿಮಾಗಿನಿಮಾ ಮುಗಿಸಿಕೊಂಡು ಲೇಟಾಗಿದ್ರೂ ಆಗಿರಬಹುದು. ಅದಕ್ಕೇನು, ನೂರೆಂಟು ಕಾರಣ ಸಾಧ್ಯ.'

'ವಾರಸದಾರರು ಇನ್ನೂ ಹುಡುಕಿಕೊಂಡು ಬರದೇ ಈವರೆಗೂ ಇರೋದನ್ನು ನೋಡಿದರೆ ಇವಳು ಊರಿನ ಈ ಕಡೇಲಿ ವಾಸವಾಗಿರೋಳಲ್ಲವೇನೋ. ಅವರು ದೂರದಲ್ಲಿ. ಬೇರೆ ಊರಿನಲ್ಲೇ ಇದ್ದಾರೋ ಏನೋ. ಇವಳು ಇಲ್ಲಿ ಯಾಕೆ ಯಾರನ್ನು ನೋಡೋದಕ್ಕೆ ಬಂದಿದ್ದಳೋ ಏನೋ, ಪಾಪ!'



'ಅಂತೂ ಸಿಕ್ಕಿಬಿದ್ದಳು, ಯಾವನೋ ಒಬ್ಬ ನೀಚನ ಕೈಯಿಗೆ.'

'ಒಬ್ಬನೇಯೋ ನಾಲ್ಕು ಜನಾನೋ, ಯಾರಿಗೆ ಗೊತ್ತಪ್ಪ.'

'ಅಯ್ಯೋ ಈಗೇನ್ರಿ, ಆಟೋ, ಕಾರು, ಜೀಪು ಯಾತ ಯಾತರಲ್ಲೋ ಎಷ್ಟೆಷ್ಟೊ ಪುಂಡರು ಪೋಕರಿಗಳು ಅಲೆದಾಡ್ತಾ ಹೊಂಚು ಕಾಯ್ತಾ ಇದ್ದು, ಗಂಡನ ಜತೆಗೆ ಹೋಗ್ತಾ ಇರೋ ಹೆಂಡತೀನೂ ಬಿಡದೆ ಎಳೆದು ಹಾಕಿಕೊಂಡು ಹೋಗಿಬಿಡ್ತಾರೆ. ಸುಲಿಗೆ, ಅತ್ಯಾಚಾರ, ಕೊಲೆ ಏನೇನೋ ಮಾಡಿ ಹೆಣ ಬಿಸಾಡಿಹೋಗ್ತಾರೆ–ಹಣ್ಣು ತಿಂದು ಸಿಪ್ಪೆ ಬಿಸಾಡಿದ ಹಾಗೆ. ಅವರಿಗೇನು ಒಂದು ಲೆಕ್ಕವೆ? ದಯೆ, ಧರ್ಮ, ನಾಚಿಕೆ ಹೇಸಿಕೆ, ಪಾಪ, ಪುಣ್ಯ, ಅರಸನ ಭಯ, ದೇವ್ವದ ಕಾಟ, ಯಾವುದೂ ಇಲ್ಲದ ಗುಂಡಾ ನನ್ನ ಮಕ್ಕಳು! ಮನೆ ಜೈಲು ಎರಡೂ ಒಂದೇ.'

'ಹೌದ್ರಿ, ಅವರಿಗೇನು ಹೇಳಿ. ಇಹ ಪರ ಎರಡರಲ್ಲೂ ಸುಖಪಡ್ತಾರೆ. ಅಂದ್ರೆ ಇಲ್ಲಿ, ಇಹದಲ್ಲಿ, ಹೊರಗೆ ಇದ್ದಷ್ಟು ಕಾಲವೂ ಅಪರಾಧವಾಗಿ ಹಣ, ಜೂಜು, ಕುಡಿತ, ಕುಣಿತ, ಹೆಣ್ಣು ಅಂತ ಎಲ್ಲ ಬೇಕು ಬೇಕಾದಷ್ಟು ಮೋಜು. ಸಿಕ್ಕಿಬಿದ್ದರೊ, ಅಲ್ಲಿ ಜೈಲಿನಲ್ಲಿ ಅಂದ್ರೆ ಪರದಲ್ಲಿ, ಆನಂದವಾಗಿರ್ತಾರೆ. ಈಗಂತೂ ಸರಕಾರದ ಔದಾರ್ಯದಲ್ಲಿ, ಜೈಲುಗಳು ಪಂಚತಾರಾ ಹೋಟಲುಗಳಾಗ್ತವೆ. ಮಾನ ಮರ್ಯಾದೆ ಒಂದು ಬಿಟ್ರೆ, ಹೊರಗಡೆ ಇದ್ದು ಜೀವನದ ಹೋರಾಟದಲ್ಲಿ ಭಂಗಪಡ್ತಾ ಇರೋರು, ಏನಾದರೂ ಒಂದು ಮಾಡಿ ಅಲ್ಲಿಗೆ ಸೇರಿ ಪರಸುಖ ಪಡೆಯಬಹುದು. ಇನ್ನು ಯಾವುದರ ಭಯ ಅವರಿಗೆ, ಎಲ್ಲಿ, ಹೇಳಿ.'

'ಏನು ಮಾಡೋದು ಸಾರ್, ಒಟ್ಟು ವಾತಾವರಣವೇ ಈ ವಿಷಾಮೃತಮಯವಾಗಿ ಹೋಗಿದೆ. ಎಲ್ಲೆಲ್ಲಿ ಕೇಳ್ತೀರ. ರಾಜಕೀಯದಿಂದ ಹಿಡಿದು ಸರಕಾರ, ಕಚೇರಿ, ವ್ಯಾಪಾರ ಸಾಪಾರ, ಆಸ್ಪತ್ರೆ, ಸ್ಕೂಲು ಕಾಲೇಜು, ಮಠ ಆಶ್ರಮಗಳವರೆಗೂ ಎಲ್ಲ ಕ್ಷೇತ್ರಗಳಲ್ಲೂ ಮೋಸ, ದಗಾ, ಲಂಚ,ಸುಲಿಗೆ, ಸರ್ವೇಸಾಮಾನ್ಯ, ಎಲ್ಲಿಲ್ಲ ಹೇಳಿ. ಅದೇ ಜನಜೀವನದ ಮರ್ಯಾದೆ ಮಾರ್ಗವಾಗಿ ಹೋಗಿವೆ. ಎಗ್ಗಿಲ್ಲ ಪಾಪವಿಲ್ಲ. ಏನು? ಒಂದು ಸಿನಿಮಾ ನೋಡಿದ್ರಾ

ಒಂದು ಪತ್ರಿಕೆ ಎತ್ತಿಕೋತೀರಾ, ಒಂದು ಪುಸ್ತಕ ಓದ್ತೀರಾ, ಎಲ್ಲೆಲ್ಲೂ ಮುಚ್ಚುಮರೆಲಿ, ರಾಜಾರೋಷವಾಗಿಯೇ ಹಿಂಸೆ, ಕ್ರೌರ್ಯ, ಗ್ರಾಮ್ಯತನ, ಸೆಕ್ಸ್, ಅತ್ಯಾಚಾರ ಏನೆಲ್ಲ ಅಪರಾಧ, ವಿಷಮಯ ವಿಲಾಸ ಜೀವನ, ಹೀಗೆಲ್ಲಾನೂ ಕಲೆ ಸೋಗಿನಲ್ಲಿ ರುಚಿರುಚಿಯಾಗಿ ಉಣ್ಣಿಸ್ತಾರೆ. ಅಂದ ಮೇಲೆ ಈ ಸುತ್ತಮುತ್ತ ಕಾಣೋದು, ನಡೆಯೋದು ಎಲ್ಲ ನೋಡಿ ಕೇಳಿ ಓದಿ ಕಲಿತ ಪಾಠಾನೇ. ಜನಸಾಮಾನ್ಯರು, ಸಭ್ಯಸ್ಥರಾಗೇ ಇರ್ತಾ ಇದ್ದೋರೂ ಕೂಡ, ಕಾಪಿ ಮಾಡಿ ಸಮಾಜಕ್ಕೆ ಮತ್ತೆ ಒಪ್ಪಿಸ್ತಾರೆ, ಅಷ್ಟೆ, ಅವರೇನು ಮಾಡ್ತಾರೆ ಪಾಪ! ಇನ್ನು ಅಂಥಿಂಥ ಜನದ ವಿಚಾರ ಅಂದ್ರೆ ಹೇಳೋ ಹಾಗೇ ಇಲ್ಲ. ಏನು ಬೇಕಾದ್ರೂ ಮಾಡ್ತಾರೆ–ಕೆಟ್ಟ ವಿದ್ಯೇನೆಲ್ಲ ಕಲಿತು.'

'ಅಲ್ಲಾ ಊರು ಅಂದ್ರೆ ಹೀಗೆ ಆಗಿ ಹೋಯ್ತಲ್ಲ ತೀರಾ! ದಿನ ಬೆಳಗಾದರೆ ನೂರು ಕಳ್ಳತನ–ಇಲಿ ಕಾಟ ಬೆಕ್ಕಿನ ಕಾಟದ ಹಾಗೆ. ಮಾತಾಡಿದರೆ ಮೋಸ ಒಂದಲ್ಲ ಒಂದು ತರಹ, ಸಣ್ಣ ಪುಟ್ಟದಕ್ಕೆಲ್ಲ ಬಡೆತ, ಹೊಡೆತ, ಚಾಕು ತಿವಿತ, ಲೆಖ್ಖವೇ ಇಲ್ಲ. ಒಂದು ಸಿನಿಮಾಕ್ಕೆ ಟಿಕೆಟ್ ಇಲ್ಲದೆ ಒಳಗೆ ಬಿಡಲಿಲ್ಲ ಅಂದರೆ ಟಿಕೆಟ್ ಬ್ಲ್ಯಾಕ್ ಮಾರಾಟ ಹಿಡಿದರೆ, ಚಾಕು ಇರಿತವೇ. ಜನಸಂಚಾರ ಕಡಿಮೆ ಇರೋ ಕಡೆ ಓಡಾಡೋ ಹಾಗೇ ಇಲ್ಲ. ಯಾವ್ನೋನೋ ಬಂದ ಅಂತ ಇಟ್ಟುಕೊಳ್ಳಿ; ಕೇಳಿದ್ದು ಕೊಟ್ಟಿರೋ ಬಚಾವ್ ಆದ್ರೂ ಆದ್ರಿ. ಅದೂ ಅನುಮಾನ ಅನ್ನಿ; ಕೊಡೋದಕ್ಕೆ ಹಿಂತೆಗೆದ್ರೋ. ಪ್ರಾಣಾಪಾಯವೇ ಕಾದಿರುತ್ತೆ. ಹುಂ, ಒಂದು ಜೀವ ಅಂದ್ರೆ ಕೂಡ ಎಷ್ಟು ಸುಲಭ ಆಗಿಹೋಯ್ತು ಅಂತೀನಿ, ಅಂ?–ಬಾಕಿದು ಇರಲಿ.'

'ಅಲ್ಲಾ ಹೀಗೆಲ್ಲಾ ಏನೇನೋ ದಿನದಿನ ಘಂಟೆ ಘಂಟೆ ನಿಮಿಷ ನಿಮಿಷಕ್ಕೆ ಅನ್ನೋಹಾಗೆ ಅಕೃತ್ಯಗಳು ಹೇಳಬಾರದಂಥೋವು ನೋಡಬಾರದಂಥೋವು ಘೋರ ಭಯಂಕರ ಕರುಣಾಜನಕ ಅಪರಾಧಗಳು ಸರ್ವೇ ಸಾಮಾನ್ಯ ಆಗಿಬಿಟ್ಟು ನಡೀತಾ ಇವೆ; ಇಷ್ಟು ದೊಡ್ಡ ಊರು, ಇಷ್ಟೊಂದು ಜನ, ಭಾರಿ ಆಡಳಿತ, ಸಿಬ್ಬಂದಿ, ಮಣ್ಣು ಮಸಿ ಅಂತ ಎಲ್ಲವೂ ಇವೆ. ಆದ್ರೂ ಹೇಳೋರು ಕೇಳೋರು ಯಾರೂ ಇಲ್ಲವಲ್ಲಾಂತ, ಏನು ಸಾರ್?'

'ಯಾಕಿಲ್ಲಾರೀ? ಇವಾರೆ ಇದಾರೆ ಅಂಥ ಲಕ್ಷಣವಾಗಿ ಈಗ ನೋಡ್ತಾ ಇರಿ–ಪೋಲೀಸನೋರಿಗೆ ಸಮಾಚಾರ ಹೋಗಿದೆಯಂತೆ; ಈಗಲೋ ಆಗಲೋ ಬರ್ತಾರೆ, ಊರು ಕೊಳ್ಳೆಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರೂ ಅಂತ ಅಂದ ಹಾಗೆ. ಇನ್ನು ಪಂಚನಾಮೆ, ಪೋಸ್ಟ್‌ಮಾರ್ಟಂ, ಪತ್ತೆ, ವಿಚಾರಣೆ, ಮೊಕದ್ದಮೆ ಅಂತ ಎಲ್ಲ ಆಗುತ್ವೆ, ಕ್ರಮವಾಗಿ, ಚಾಚೂ ತಪ್ಪದೆ–ಹೋದ ಜೀವ ಬರ್ಲ್ವೇ ಹೋದರೂ.'

'ಅಯ್ಯೋ ಪೋಲೀಸರು ತಾನೆ ಏನು ಮಾಡ್ತಾರ್ರೀ? ಅವರಾದ್ರೂ ಎಷ್ಟು ಜನ ಇದಾರೆ ಮಹಾ, ಊರಿನ ವಿಸ್ತಾರ ಜನಸಂಖ್ಯೆ ಯೋಚಿಸಿಕೊಂಡ್ರೆ ಪಾಪ! ಅವರೇನು ಸರ್ವಾಂತರ್ಯಾಮಿಗಳೆ? ಎಲ್ಲೆಲ್ಲೂ ಹೇಗಿದ್ದು ನೋಡ್ತಾ ಇರೋದಕ್ಕಾಗುತ್ತೇ, ಇಂಥ ಭಾರಿ ಊರಿನಲ್ಲಿ? ಏನೋ ಆದದ್ದು ಅಷ್ಟೊ ಇಷ್ಟೊ ಮಾಡ್ತಾರೆ, ಅಷ್ಟೆ.'

'ಏನೋ ಮಾಡಿಕೋತಾರೆ, ಮಾಡಿಕೊಳ್ಳಲಿ ಬಿಡಿ ಅಪ್ಪ, ನಮಗೆ ಯಾಕೆ ಅದೆಲ್ಲ? ಬನ್ನಿ ಹೋಗೋಣ. ಇನ್ನು ಪೋಲೀಸಿನೋರು ಬಂದ್ರೆ ಸಾಕ್ಷ್ಯ, ವಿಚಾರಣೆ, ಪೋಲೀಸ್ ಸ್ಟೇಷನ್, ಕೋರ್ಟು ಗೀರ್ಟು ಅಂತ ಯಾರಿಗೆ ಬೇಕು, ಸುಮ್ಮನೆ ಸಿಕ್ಕಿ ಹಾಕಿಕೊಳ್ಳೋದು, ಹಾಯಾಗಿರೋದು ಬಿಟ್ಟು ರಾಮಾ ಕೃಷ್ಣಾ ಅಂತ. ನೋಡಿದ್ದು ಮಾಡಿದ್ದು ಆಯ್ತಲ್ಲ. ನಾಳೆ ಪೇಪರ್‌ನಲ್ಲಿ ಹೇಗೊ ವಿವರಗಳೆಲ್ಲ ಬಂದೇ ಬರ್ತವೆ. ಈಗ ಬನ್ನಿ ಹೋಗೋಣ ನಮ್ಮ ಪಾಡಿಗೆ ನಾವು.'

'ಹೌದಪ್ಪಾ ಅದೂ ಸರಿಯೆ, ನಡೀರಿ, ನಗರ ಜೀವನ ಅಂದ್ರೆ ಹೀಗೆಲ್ಲ, ಇದ್ದೇ ಇರುತ್ತೆ. ನಾವು ಮರುಗಿ ಇಲ್ಲದ್ದೂ ಮಾಡೋದು ಏನಿದೆ ಮಣ್ಣು!'

ಈ ಗುಂಪಿನವರು ಹೊರಟು ಹೋದರು. ಇನ್ನೊಂದು ಗುಂಪಿನ ಬಳಿಗೆ ಹೋದೆ.

'ಹಾಗಾದರೆ ಕಾಲ್‌ಗರ್ಲೋ ಪ್ರೊಫೆಷನಲ್ ಪ್ರಾಸೊ ಅಲ್ಲ ಅಂತೀರಾ?'

'ಇಲ್ಲ ಸಾರ್, ಹಾಗೆ ಕಾಣೋದಿಲ್ಲ. ಒಳ್ಳೇ ಮನೆತನದ ಹುಡುಗಿಯೇ ಇರಬೇಕು.'

'ಈಗೇನ್ರೀ ಅವರುಗಳೂ ಉನ್ನತ ಮಟ್ಟದ ಮನೆತನದೋರ ತಲೆ ಮೇಲೆ ಹೊಡೆದ ಹಾಗೆ ಇರ್ತಾರೆ.'

'ಹೌದು ಹೌದು, ಈಗ ನಮ್ಮ ಅನೀತಿಯೂ ಕೂಡ ಉನ್ನತ ಮಟ್ಟದಲ್ಲೇ ನಡೆಯುತ್ತೆ ಬಿಡ್ರಿಲ್ಲೂ'

'ಏನಕ್ಕೆ ಒರಿ ರಾತ್ರಿಗೇ. ಸಾವಿರಾರು ರೂಪಾಯಿ ಆದ್ರೂ ಆದೀತು. ಒಬ್ಬೀಗೆ–ಹಾಗೆ ಅಂತಾರಪ್ಪ.'

'ಅದೆಲ್ಲ ನಿಜ ಇರಬಹುದು. ಇಲ್ಲ ಅನ್ನೋದಿಲ್ಲ. ಈಗ ಹಣಕ್ಕೇನು ಬೆಲೆ, ಜನಕ್ಕೇನು ಬೆಲೆ ಹೇಳಿ. ಆದ್ರೆ ಇವಳನ್ನು ನೋಡಿದರೇ ಗೊತ್ತಾಗೊದಿಲ್ವೆ ಒಂದು ಲಿಪ್‌ಸ್ಟಿಕ್ಕೇ ಐ ಬ್ರೊ ತಿದ್ದೇ, ಪೌಡರೇ, ಹೊಕ್ಕಳು ಕೆಳಗೂ ಮುಂದೆ ಹಿಂದೆ ಕಾಣೋ ಇದ್ರೂ ಇರದ see-through ಸಾರೀನೇ ಮೀಟರ್‌ಗೆ ಹನ್ನೆರಡಾಗೋ ನೆಪಮಾತ್ರ ಬ್ಲೌಸೇ–ಯಾವ ಫ್ಯಾಷನ್ನೂ ಇದ್ದ ಹಾಗಿಲ್ಲ ಅನ್ನಿ ಸುತ್ತೆ–ಇಂಥ ದುಸ್ಥಿತೀಲೂ. ಅವಳಿಗೆ ಅದೊಂದೂ ಬೇಕಿಲ್ಲ ಅನ್ನೋ ಹಾಗಿದ್ದಾಳೆ: ಅಷ್ಟು ಚೆನ್ನಾಗಿ ಆಕಾರ ಬಣ್ಣ ಲಕ್ಷಣ ಎಲ್ಲ– ಅದು ಬೇರೆ ಮಾತು ಬಿಡಿ.'

'ಹೌದು ಸಾರ್. ಅದಲ್ಲದೆ ಕಾಲ್‌ಗರ್ಲ್ ಸೂಳೆಗೀಳೇ ಆಗಿದ್ರೆ ಕೊಲೆ ಯಾಕೆ ಆಗ್ತಾಳೆ ಹೇಳಿ–ಅವಳು ಎಲ್ಲಾದಕ್ಕೂ ಸಿದ್ಧವೇ ಆಗಿರುವಾಗ? ಬೀದಿ ನಾಟಕ ನಡೆದಿದ್ದರೆ ಅದರಲ್ಲಿ ತನ್ನ ಪಾತ್ರ ವಹಿಸಿ ತನ್ನ ಭಾಗದ ಲಾಭ ಪಡೆದು ಅಂಥ ಚೆನ್ನಾಗಿ ಜೀವಂತವಾಗಿ ಇರ್ತಾ ಇದ್ದಳು, ಇನ್ನೆಲ್ಲೋ ಈಗಲೂ ಮಜಾ ಮಾಡ್ತಾ.'

'ಹೌದು ಹೌದು. ನಿಜ. ಈಚೀಚೆಗೆ ಪತ್ರಿಕೇಲಿ ಬಂದಿರಲಿಲ್ವೆ ಅಂಥ ಒಂದು ಬೀದಿ ನಾಟಕ?'

ಹ್ಞ ಹ್ಞ, ನಾನೂ ಅದನ್ನು ಓದಿದೆ. ನಾವೆಲ್ಲ ಓದಿಯೇ ಇದೀವಿ ಅನ್ನಿ. ಎಂಥ ಚಂಡಾಲರು ಸಾರ್ ಅವರು, ಅವಳು! ತದ್ವತ್ ಸಿನಿಮಾನೇ ಆಡಿಬಿಟ್ಟರಲ್ಲ, ಆ ಹೋಲ್ಡ್ ಅಪ್ ಪ್ರಕರಣದಲ್ಲಿ! ಬನ್ನಿ, ಹಾಗೇ ಮಾತಾಡಿಕೊಂಡು ಹೋಗೋಣ. ಇನ್ನು ಇಲ್ಲಿದ್ದೇನು ಪ್ರಯೋಜನ? ಹಾಗೆ ನೋಡಿದರೆ ಇನ್ನೇನಾದರೂ ಫಜೀತಿ ಗಿಜೀತಿಯೇ ಬಂದೀತು.'

ಅವರೂ ಹೊರಟು ಹೋದರು.

ಪತ್ರಿಕೆಯಲ್ಲಿ ನಾನೂ ಆ ಪ್ರಸಂಗವನ್ನು ಓದಿದ್ದೆ. ಆಗ ಅದು ನನಗಾಗಿದ್ದ ಒಂದು ಕಹಿ ಅನುಭವವನ್ನು ನೆನಪಿಗೆ ತಂದಿತ್ತು. ಆ ಅನುಭವ ಈಗಲೂ ಮನಸ್ಸಿಗೆ ಬಂದಿತು– ಆಗ ಈಗ ಎಷ್ಟೋ ಬಾರಿ, ನಿನ್ನೆ ರಾತ್ರಿಯಲ್ಲೂ ಕೂಡ ಆಗಿದ್ದಂತೆ.

ಆ ಪ್ರಸಂಗ ನಡೆದ ರಾತ್ರಿ ಮೊದಲನೆಯ ಷೊ ಮುಗಿಸಿಕೊಂಡು ನನ್ನ ಲ್ಯಾಂಬ್ರೆಟಾದ ಮೇಲೆ ಮನೆಯ ಕಡೆಗೆ ಬರುತ್ತಿದ್ದೆ. ನಿರ್ಜನವಾದ ದಾರಿ, ದೊಡ್ಡ ಬಯಲು. ಏನೋ ಯೋಚಿಸಿಕೊಳ್ಳುತ್ತ ಹೋಗುತ್ತಿದ್ದವನು ನನ್ನ ವಾಹನದ ಬೆಳಕಿನಲ್ಲಿ ಮುಂದೆ ಹತ್ತಿರದಲ್ಲೇ ದಾರಿಯಲ್ಲಿ ಏನನ್ನೋ ಕಂಡು ತಟ್ಟನೆ ಬ್ರೇಕ್ ಹಾಕಿದ್ದೆ. ದೀಪದ ಕಂಬಕ್ಕೆ ಕೊಂಚ ದೂರವಾಗಿ ರಸ್ತೆಯ ಅಂಚಿನಿಂದ ಕೊಂಚ ಅಡ್ಡಲಾಗಿ ಬಿದ್ದಿದ್ದ ಹೆಂಗಸಿನ ದೇಹ ಕಂಡಿತ್ತು. ಸ್ಕೂಟರನ್ನು ಅಂಚಿನಲ್ಲಿ ನಿಲ್ಲಿಸಿ, ಆ ದೇಹದ ಕಡೆಗೆ ಹೋಗಿದ್ದೆ. ಬಗ್ಗಿ ನೋಡಿದ್ದೆ. ಯುವತಿ. ಗರತಿಯ ಲಕ್ಷಣ... ಏನಾಗಿತ್ತು? ಅಪಘಾತವೆ? ಕಾಹಿಲೆಯೆ? ಬದುಕಿದ್ದಳೆ? ಸತ್ತುಹೋಗಿದ್ದಳೆ? ಮೈ ಬೆಚ್ಚಗಿತ್ತೆ? ಉಸಿರುಡಾತ್ತಿದ್ದಳೆ? ಮೈ ಕೈ ಮುಟ್ಟಲು ಮನಸ್ಸಾಗದು. ಮೂಗಿನ ಮುಂದೆ ನನ್ನ ಮುಂಗೈ ಹಿಡಿದರೆ ಜೋರಾಗಿ ಬೀಸುತ್ತಿದ್ದ ಗಾಳಿಯಲ್ಲಿ ಸ್ಪಷ್ಟವಾಗಿ ಯಾವುದೂ ತಿಳಿಯಲಿಲ್ಲ. ಆ ಮಂಕುಬೆಳಕಿನಲ್ಲಿ ಆ ಶರೀರ ನಿಶ್ಚೇಷ್ಟಿತ. ಏನನ್ನೂ ಹೇಳುವಂತಿರಲಿಲ್ಲ. ನಾನೇನು ಮಾಡಬೇಕು? ಸುಮ್ಮನೆ ನನ್ನ ಪಾಡಿಗೆ ನಾನು ಹೊರಟು ಹೋಗಲೆ? ಅದು ಹೇಗಾದೀತು. ನಾನು ನಾಗರಿಕನಲ್ಲವೆ? ಹೋಗಿ ಯಾರಿಗಾದರೂ– ಪೋಲೀಸಿನವರಿಗೇ– ಸುದ್ದಿ ಕೊಡಲೆ? ಅಷ್ಟು ಹೊತ್ತಿಗೆ ಇದ್ದಿರಬಹುದಾದ ಕುಟುಕು ಜೀವ ಹೋಗಿಬಿಟ್ಟರೆ?

"ಅಮ್ಮಾ!... ತಾಯೀ!" ಜೋರಾಗಿ ಕೂಗಿದೆ, ಇನ್ನೂ ಹತ್ತಿರ ಬಗ್ಗಿ.

ಉತ್ತರವಿಲ್ಲ.

"ನಿನಗೆ ಏನಾಗಿದೆಯಮ್ಮಾ?"

ಅವಳು ಮೆಲ್ಲಗೆ ಅಗಲವಾಗಿ ಕಣ್ಣು ಬಿಟ್ಟಳು.

"ಅಯ್ಯೋ! ಅಯ್ಯೋ!..." ಭೂತವನ್ನು ಕಂಡಂತೆ ಕೂಗಿಕೊಂಡಳು. "ಕಾಪಾಡಿ! ಕಾಪಾಡಿ! ಅಯ್ಯೋ, ಅತ್ಯಾಚಾರ, ಅತ್ಯಾಚಾರಾ! ಅಯ್ಯಯ್ಯೋ!..." ಚೀರುತ್ತ ನನ್ನ ಕೈ ಹಿಡಿದುಕೊಂಡಳು. ಅದೇನು ನನ್ನನ್ನು ತಳ್ಳುತ್ತಿದ್ದಳೋ ಜಗ್ಗಿ ಎಳೆದುಕೊಳ್ಳುತ್ತಿದ್ದಳೋ ಗೊತ್ತಾಗುತ್ತಿರಲಿಲ್ಲ.

ಅದೇ ಚೀರಾಟವನ್ನು ಮುಂದುವರಿಸುತ್ತಿದ್ದಳು. ಅವಳ ಬ್ಲೌಸ್ ಕಿತ್ತಂತೆ ಬಿಚ್ಚಿಕೊಂಡಿದ್ದು, ಸೀರೆ ಮೇಲಾಗಿದ್ದರೂ ಮೊದಲ ಬಾರಿಗೆ ಕಣ್ಣಿಗೆ ಬಿದ್ದಿತ್ತು.

"ಗಾಬರಿಯಾಗಬೇಡಮ್ಮಾ, ನೋಡು, ಸರಿಯಾಗಿ ನೋಡು; ನಾನು ಈಗ ತಾನೆ ಬಂದಿದ್ದೇನೆ- ನೀನು ಬಿದ್ದಿದ್ದನ್ನು ಕಂಡು, ಸಹಾಯ ಮಾಡೋದಕ್ಕೆ, ಅಷ್ಟೆ. ಇನ್ನು ಯಾರೋ ಏನೋ ಮಾಡಿರಬೇಕು. ವಿಚಾರಿಸೋಣಃ ಕೂಗಬೇಡ, ಕೂಗಬೇಡ ಎಚ್ಚೆತ್ತುಕೋ... ನಿನಗೆಲ್ಲೊ ಭ್ರಾಂತಿಯಾಗಿರಬೇಕು ಯಾರು ಯಾರೋಂತ..."

ನಾನು ಹೇಳುತ್ತಿದ್ದೆನಾದರೂ ಅದು ಅವಳ ಕಿವಿಗೇ ಹೋದಂತಿರಲಿಲ್ಲ. ಅವಳು ಅದೇ ಚೀತ್ಕಾರ ಮಾಡುತ್ತಲೇ ಇದ್ದಳು; ಅವಳ ಜಗ್ಗಾಟ- ನೂಕಾಟ ನಡೆಯುತ್ತಲೇ ಇತ್ತು. ವಿಪರೀತ ಗಾಬರಿ, ಭ್ರಾಂತಿ, ಗೊಂದಲ. ನಾನು ಸಮಾ- ಧಾನಪಡಿಸುತ್ತಲೇ ಇದ್ದೆ; ಕೈ ಕೊಸರಿಕೊಳ್ಳಲು ಯತ್ನಿಸುತ್ತಲೇ ಇದ್ದೆ – ವ್ಯರ್ಥವಾಗಿ.

ಇದು ಎಷ್ಟು ಕ್ಷಣ ನಡೆದಿತ್ತೋ ಕಾಣೆ; ಅಷ್ಟರಲ್ಲಿ ಮುಂದಿನ ಅಡ್ಡರಸ್ತೆಯಿಂದ ಜೀಪೊಂದು ತಿರುಗಿಕೊಂಡು ಬಂದು ನಮ್ಮ ಬಳಿ ನಿಂತಿತ್ತು. ಪೋಲೀಸ್ ಸಮವಸ್ತ್ರದ ಅಧಿಕಾರಿ, ಬೆತ್ತ ಹಿಡಿದಿದ್ದ ಸಮವಸ್ತ್ರದ ಕಾನ್‌ಸ್ಟಬಲ್ ಮತ್ತು ಸಾಮಾನ್ಯ ಪ್ಯಾಂಟ್ ಬುಷ್‌ಷರಟಿನ ಮೂರು ಜನರು ಆತುರದಿಂದ ಕೆಳಗಿಳಿದು ನಮ್ಮನ್ನು ಸುತ್ತಿ ನಿಂತಿದ್ದರು.

"ಬಿಡ್ರೋ ಅವಳನ್ನ, ಬಡಪಾಯೀನಾ!..." ಅಧಿಕಾರಿ ನನ್ನ ತೋಳನ್ನು ಹಿಡಿದು ಜಗ್ಗಿ ಅವಳಿಗೂ ನನಗೂ ಮಧ್ಯೆ ಕೈಹಾಕಿ ನಮ್ಮನ್ನು ಬೇರ್ಪಡಿಸಿದ್ದ. ಅವಳು ಎದ್ದು ಕುಳಿತಿದ್ದಳು.

"ಏನೋ ಸಭ್ಯಸ್ಥರಂತೆ ಬಟ್ಟೆ ಬರೆ ಹಾಕಿಕೊಂಡಿದೀರಿ. ಹೀಗೇಯೇನ್ರಿ ಮಾಡೋದು ಒಬ್ಬಳು ಒಂಟಿ ನಿರಪರಾಧಿ ಮಹಿಳೆ ಸಿಕ್ಕಿಸಿದರು. ಅತ್ಯಾಚಾರ?" ಅಧಿಕಾರಿ ನನ್ನನ್ನು ಗದರಿಸ್ಸಿದ್ದ.

"ಸಾರ್, ಇಲ್ಲಿ ಕೇಳಿ, ನಡೆದದ್ದನ್ನು, ಆಮೇಲೆ ಹೇಳಿ..." ನಾನು ವಿವರಿಸಲು ಶುರುಮಾಡಿದ್ದೆ.

"ಸುಳ್ಳು, ಸುಳ್ಳು! ಒಬ್ಬಳೇ ಬರ್ತಾ ಇದ್ದೆ ನಂಗೆ ಇವರು ಲಿಫ್ಟ್ ಕೊಡ್ತೀನಿ ಅಂದ್ರು. ಏನೋ ದೊಡ್ಡ ಮನುಷ್ಯರು ಅಂತ ಒಪಿಕೊಂಡ್ರೆ, ಇಲ್ಲಿ ನಿರ್ಜನವಾದ ಸ್ಥಳದಲ್ಲಿ ನಿಲ್ಲಿಸಿ, ಸ್ಕೂಟರ್‌ನಲ್ಲೇನೋ ತೊಂದರೆಯಾಗಿದೆ ಅಂತ ಹೇಳಿ ಇಳಿದು, ನನ್ನ ಕಡೆಗೆ ವಕ್ರವಾಗಿ ನಕ್ಕು, ನನ್ನ ಕೈ ಹಿಡಿದುಕೊಂಡು, ನಾನು ವಿರೋಧಿಸಿ ಕೂಗಿದಾಗ ನನ್ನ ಬಾಯಿ ಮುಚ್ಚಿ, ಅಗೋ ಆ ದೊಡ್ಡ ಚರಂಡಿ ಕಡೆಗೆ ಎಳೆದುಕೊಂಡು ಹೋಗ್ತಾ ಇದ್ರು. ನಾನು ಬಿದ್ದುಕೊಂಡು ಮೊಂಡಾಟ ಮಾಡಿದರೂ ಬಿಡದೆ, ನನ್ನ ಮೇಲೆ... ನನ್ನ ಮೇಲೆ- ಅಯ್ಯಯ್ಯೋ ರಾಮರಾಮಾ..." ಅವಳು ಮುಖ ಮುಚ್ಚಿಕೊಂಡು ಗಳಗಳನೆ ಅತ್ತಿದ್ದಳು.

"ಸಾರ್, ಅವರನ್ನು ನಂಬಬೇಡಿ, ಯಾರಿಂದಲೋ ಎಲ್ಲೋ ಏನೋ ನಡೆದು, ಅವರಿಗೆಲ್ಲೋ ಭ್ರಾಂತಿಯಾಗಿದೆ; ಇಲ್ಲವೆ ಈಕೆ ಎಂಥಾದ್ದೋ ಹೆಂಗಸು...' ನಾನು ಹೇಳುತ್ತಿದ್ದೆ.

"ಸಾಕು ಸುಮ್ಮನಿರ್ರೀ. ನಾವೇ ಇಷ್ಟು ಜನ ಕಣ್ಣಾರೆ ನೋಡಿದೀವಿ. ಇನ್ನೇನು ಬೇಕು? ನಡಿರ್ರೀ ಸ್ಟೇಷನ್‌ಗೆ. ಅಲ್ಲಿ ನಿಮ್ಮನ್ನು ಸರಿಯಾಗಿ ವಿಚಾರಿಸಿಕೋತೀವಿ" ಎನ್ನುತ್ತ, ಕಾನ್‌ಸ್ಟಬಲ್‌ಗೆ "ಏ ಭೈರಪ್ಪ, ಹಾಕ್ಕೋಳೋ ಇವರನ್ನ ಜೀಪ್‌ಗೆ. ಈ ತಾಯೀನೂ ಕರೆದುಕೊಂಡು ಹೋಗೋ" ಎಂದು ಆಜ್ಞಾಪಿಸಿ, ಇನ್ನೊಬ್ಬಾತನಿಗೆ "ನೀವು ಅವರ ಸ್ಕೂಟರ್ ತಗೊಂಡು ಬನ್ರೀ" ಎಂದು ಹೇಳಿದ್ದ.

ಕಾನ್‌ಸ್ಟಬಲ್ ಮುಂದೆ ಬರುವುದರೊಳಗೆ ನಾನು, "ನಾನಾಗಿಯೇ ಬರ್‍ತೀನಿ. ಬಲವಂತವೇನೂ ಬೇಕಿಲ್ಲ' ಎನ್ನುತ್ತ ಜೀಪ್ ಕಡೆಗೆ ಹೊರಟಿದ್ದೆ.

"ಸ್ವಲ್ಪ ತಾಳಿ ಇನ್‌ಸ್ಪೆಕ್ಟರ್ ಸಾಹೇಬರೆ. ಅದೆಲ್ಲ" ಬೇಡ. ಏನೋ ಕೆಟ್ಟ ಘಳಿಗೆ. ಆದ್ರೆ ಉತ್ತಮ ವರ್ಗದೋರು ಅಂತ ಕಾಣಿಸುತ್ತೆ." ಅವರ ಪೈಕಿ ಒಬ್ಬಾತ ಹೇಳುತ್ತ, ನನ್ನ ಬಳಿಗೆ ಬಂದು, "ನೀವು ಕೊಂಚ ಹೀಗೆ ಬನ್ನಿ ಸಾರ್" ಎಂದು ನನ್ನನ್ನು ನಾಲ್ಕು ಹೆಜ್ಜೆ ದೂರ ಕರೆದುಕೊಂಡು ಹೋಗಿ, "ಸಾರ್, ತಮಗೆ ಗೊತ್ತೇ ಇದೆ, ಪೋಲೀಸ್ ಸ್ಟೇಷನ್ ಎಂಥ ಮಹಾ ನರಕ ಅಂತ. ಅಲ್ಲಿ ಏನು ಬೇಕಾದರೂ ನಡೀಬಹುದು, ಆಗಬಹುದು. ಎಮರ್ಜನ್ಸಿ ಕಾಲದಲ್ಲಿ ಅದನ್ನೆಲ್ಲ ನೋಡೇ ಇರ್‍ತೀರಿ. ಹಿಂದೆಯೂ ಹಾಗೇ ಇತ್ತು ಅನ್ನಿ..."

"ನಂಗೇನು ಭಯ? ನಾನೇನು ಮಾಡಿದೀನಿ? ಏನೋ ಉಪಕಾರ ಮಾಡೋದಕ್ಕೆ ಹೋದೆ, ನನ್ನೇನು ಮಾಡ್ತಾರೆ? ಯಾಕೆ?" ನಾನು ಆತನ ಮಾತನ್ನು ತಡೆದು ಹೇಳಿದ್ದೆ.

"ಅದು ಸರಿ ಸಾರ್. ಆದ್ರೆ ಪೋಲೀಸ್ ನೋರು ಪೋಲೀಸ್‌ನೋರೇ. ಗೊತ್ತಲ್ಲ."

"ಆಗ್ಲಿ, ಎದುರಿಸ್ತೀನಿ ಬಂದದ್ದನ್ನೆಲ್ಲ."

"ಅಯ್ಯಯ್ಯೋ, ನಿಮಗೆ ತಿಳಿಯೋದೇ ಇಲ್ಲ ವಲ್ಲ ಸಾರ್. ಆಗ್ಲಿ. ನೀವು ಎದುರಿಸ್ತೀರಿ ಅಂದು ಕೊಳ್ಳಿ. ಏನೂ ಅಂಥಾದ್ದು ಆಗಲೇ ಇಲ್ಲ ಅಂದುಕೊಳ್ಳಿ; ಇನ್ನು ಹೇಳಿಕೆ ಕೇಳಿಕೆ, ಸ್ಟೇಷನ್‌ಗೆ ನೂರೆಂಟು ಸಾರಿ ಅಲೆಯೋದು, ಕೋರ್ಟು ಕಚೇರಿಗೆ ಸಾವಿರ ಸಾರಿ, ಇದೆಲ್ಲ ಇದ್ದೇ ಇರು ತ್ತೋ? ಅಲ್ಲಿ ಸಾಕ್ಷಿಗೀಕ್ಷಿ ಮೇಲೆ ಹೋಗುತ್ತೆ, ಪಾಠ ಕಲಿಸಿ ಸುಳ್ಳು ಹೇಳಿಸೋದಕ್ಕೆ ಆಗೋದಿಲ್ವೆ? ಅದರಲ್ಲಿ ಪೋಲೀಸ್‌ನೋರೂ ಲಾಯರುಗಳೂ ಪ್ರವೀಣರು. ಕೇಸ್ ಹೇಗಾಗುತ್ತೆ ಅಂತ ಯಾರು ಕಂಡಿದಾರೆ."

"ನಾನು ನಿರಪರಾಧಿ. ಅದನ್ನೆಲ್ಲ ನಾನು, ನಮ್ಮ ಲಾಯರು ನೋಡಿಕೋತೀವಿ."

"ಹಾಗೇ ಆಗಲಿ ಸಾರ್, ನೀವು ನಿರಪರಾಧಿ ಅಂತಲೇ ಆಯ್ತು ಕೋರ್ಟಿನಲ್ಲಿ ಅಂತ ಇಟ್ಕೊಳ್ಳಿ. ಆದರೆ ಅದಕ್ಕೆ ಮುಂಚೆ, ಮೊಕದ್ದಮೆ ನಡೆ ಯೋವಾಗ ಪೇಪರ್‌ನಲ್ಲೆಲ್ಲ ಏನೇನೋ ಬಂದು ಮಾನ ಮರ್ಯಾದೆ ಹೋಗುತ್ತೋ? ಜನ ಕೆಟ್ಟ ದನ್ನು ನಂಬೋ ಹಾಗೆ, ಒಳ್ಳೇದನ್ನು ನಂಬೋ ದಿಲ್ಲ ಇನ್ನೊಬ್ಬರ ಬಗ್ಗೆ..."

"ಜನ ಏನಾದರೂ ಹೇಳಿಕೊಳ್ಳಲಿ ಮಾಡಿ ಕೊಳ್ಳಲಿ. ನಾನು ಹೆದರೋದಿಲ್ಲ."

"ನೋಡಿದ್ರಾ ನೋಡಿದ್ರಾ, ತಮಗೆ ಪ್ರಪಂಚದ ಅನುಭವವೇ ಇಲ್ಲವಲ್ಲ. ಸುಲಭದ ದಾರಿ ಹುಡು ಕೋದು ಬಿಟ್ಟು ಕಷ್ಟಾನೇ ಆರಿಸ್ಕೋತಾರೇ? ಅಷ್ಟೆಲ್ಲ ಭಂಗ ಯಾಕೆ ಪಡಬೇಕು? ನಾ ಹೇಳೋದು ಸ್ವಲ್ಪ ಕೇಳಿ. ತಮ್ಮ ಹತ್ರ ಏನಿ ದೆಯೋ ಅಷ್ಟಿಷ್ಟು ಕೊಟ್ಟುಬಿಡಿ, ನಾನು ಇನ್ ಸೆಕ್ಟರ್ ಸಾಹೇಬ್ರನ್ನ ಸರಿಮಾಡ್ತೀನಿ, ಆಯ್ತೆ? ಅವರು ಆ ಹೆಂಗಸನ್ನು ಸರಿಮಾಡ್ತಾರೆ, ಹೇಗಾದ್ರೂ. ಅವರಿಗೆ ಅದೆಲ್ಲ ಗೊತ್ತು. ನೀವೂ ಹಾಯಾಗಿ ಹೋಗಿ ನಿಶ್ಚಿಂತೆಯಿಂದ ಇರ ಬಹುದು."

"ಉಹುಂ, ನಾನು ಏನೂ ಕೊಡೋದಿಲ್ಲ. ಯಾಕೆ ಕೊಡಬೇಕು ? ಏನು ಮಾಡಿದ್ದಕ್ಕೆ? ಬೇಕಾದ್ದು ಆಗಲಿ."

"ಖಂಡಿತವೋ ?"

"ಖಂಡಿತ."

"ಹಾಗಾದ್ರೆ ತಮ್ಮ ಇಷ್ಟ. ಅನುಭವಿಸಿ, ನಾನೇನು ಮಾಡಲಿ" ಎಂದು ಆತ ಇನ್ಸ್ಪೆಕ್ಟರ ಕಡೆಗೆ ತಿರುಗಿ "ಪ್ರಯೋಜನ ಇಲ್ಲ ಸಾರ್" ಎಂದಿದ್ದ.

"ಸರಿ. ಮತ್ತೆ. ಆಗ್ಲೆ ಬಹಳ ಸಮಯ ಹೋಯ್ತು. ಕೆಲಸ ಕೆಟ್ಟು ಹೋಗುತ್ತೆ. ಇನೂ ತಡೆದರೆ. ಬನ್ರೊ."

ಇನ್ಸ್ಪೆಕ್ಟರ್ ಮನುಷ್ಯ ಹೇಳುತ್ತಿದ್ದಂತೆ ಅವ ರೆಲ್ಲರೂ ನನ್ನನ್ನು ಸುತ್ತಿಕೊಂಡಿದ್ದರು. ಒದ್ದಾ ಡುತ್ತಿದ್ದ ನನ್ನನ್ನು ಹಿಡಿದು ನನ್ನ ಬಾಯಿಗೆ ಬಟ್ಟೆ ಬಿಗಿದು, ಕೈಗಳನ್ನು ಹಿಂದೆ ಕಟ್ಟಿ, ಎಳೆದುಕೊಂಡು ಹೋಗಿ. ಹತ್ತಿರದ ಮರಕ್ಕೆ ಬಿಗಿದಿದ್ದರು; ನನ್ನ ರೋಲೆಕ್ಸ್ ಕೈಗಡಿಯಾರ, ಪಾರ್ಕರ್ ಪೆನ್, ಉಂಗುರ, ಅದೇ ದಿನ ಬಂದಿದ್ದ ಸಂಬಳದ ಹಣ. ಸ್ಕೂಟರಿನ ಸ್ವಿಚ್ ಕೀ ಎಲ್ಲವನ್ನೂ ಕಸಿದು ಕೊಂಡಿದ್ದರು. ಒಬ್ಬ ನನ್ನ ಸ್ಕೂಟರನ್ನು ಹಿಡಿದ. ಇತರರು ಆ ಹೆಂಗಸು ಎಲ್ಲರೂ ಜೀಪ್ ಹತ್ತಿ ದ್ದರು. ಜೀಪ್ ಸ್ಕೂಟರ್‌ಗಳು ಹೊರಟು ಹೋಗಿದ್ದುವು. ಕೇವಲ ಕೆಲವು ನಿಮಿಷಗಳಲ್ಲಿ ಎನ್ನುವಂತೆ ಎಲ್ಲವೂ ನಡೆದುಹೋಗಿತ್ತು. ನಾನು ಅವರು ಇಟ್ಟಿದ್ದ ಬೋನಿಗೆ ಬಿದ್ದಿದ್ದೆ.

ಇನ್ನು ಕೆಲವು ನಿಮಿಷಗಳ ಮೇಲೆ ಬೈಸಿ ಕಲ್ ಮೇಲೆ ಬಂದ ಇಬ್ಬರು ಹಳ್ಳಿಯವರು ನನ್ನನ್ನು ಬಿಡುಗಡೆ ಮಾಡಿದ್ದರು. ನನ್ನ ಕತೆಯನ್ನು ಕೇಳಿದ್ದರು.

"ಪ್ಲು, ಇದೂ ಒಂದು ಊರಾ? ಇವ್ರೂ ಒಂದು ಜನಾನಾ? ತಳ್ಳು ಬೆಳ್ಕಿನ ಕಾಡಾ ಗೋಯ್ತು, ಪರಾಣಿಗಳ್ದು. ಏನ್ ಶಿವಣ್ಣ, ಇಂತ ಪರಸಂಗ ಮೂವತ್ತೊಲಾಯ್ತಾ ಐತಲ್ಲ ಈ ದೊಡ್ ದೊಡ್ ಊರ್‌ಗೋಳ್‌ನಾಗೆ. ಎಲ್ಲಿ ಮಾತಾಡಿದ್ರೂ ಇಂತಾ ಒಂದಲ್ಲ ಒಂದು ಏನಾದ್ರೂ

ಏಳ್ತಾನೇ ಇರ್ತಾರೆ–ಒಬ್ರುನ್ ಒಬ್ರು ಕಿತ್ಕೊಂಡು ತಿನ್ನೋದು."

"ಔದು ಕಣಣ್ಣಾ, ನಮ್ಮ ಅಳ್ಳಿಗಾಡೇ ಇನ್ನೂ ವಸಿ ವಾಸಿ ಅನ್ನು. ಇಂತ ಇಸಯ ಕೇಳಿ ಕೇಳಿ, ಪೇಪರ್‌ನಾಗ ಓದೀ ಓದೀ ಸಿನಿಮಾದಾಗ ನೋಡೀ ನೋಡೀ ಜನ ಮರಗಟ್ಟಿಬುಟ್ಟವ್ರೆ. ಏಚಣೇನೇ ಮಾಡಾಕಿಲ್ಲ, ಅಲ್ವ? ಇಲ್ಲವಾದ್ರೆ ದಿನ್ ದಿನಾ ಇಂಗ್ ನಡೀತಾ ಇತ್ತಾ? ನಡ ಸ್ಟೋರು ಆಯಾಗಿ ಜೀರ್ಣಸ್‌ಕಂಡು ದಿವಮ್ ರಂಗಾ ಅಂತಾ ಇರ್ತಾ, ಇದ್ರಾ? ನೋಡಪ್ಪ ಇಲ್ಲಿ ಜೀವ್‌ಣಾನ. ಇಂಗೂ ಉಂಟಾ ದ್ಯಾವ್ರೆ. ಇಂದಕ್ಕೆ ಅಂತಾ ಇದ್ರು ಕೆಟ್ಟು ಪಟ್ಣ ಸೇರು ಅಂತ. ಈಗ ನೋಡು ಪಟ್ಣಾನೇ ಏಟು ಕೆಟ್ ಓಗ್ತಾ ಅವೆ.''

"ಉ್ನ, ಈಗ ಒಳ್ಳೆಯೋರ್ಗೆ ಒಳ್ಳೇದು ಮಾಡೋರ್ಗೆ, ಕಾಲ ಅಲ್ಲ ಬುಡು. ಪಾಪ ಈ ಐನೋರ ಪಾಡು ನೋಡು... ತಕ್ಕಳ್ಳಿ ಐನೋರೆ ಈ ಸುಣ್ಣಾನ, ಒಸಿ ಆಕ್ಕಳ್ಳಿ ನಿಮ್ ಗಾಯ್ ಗೋಳ್ಗೆ" ಸುಣ್ಣದ ಡಬ್ಬಿಯನ್ನು ನೀಡಿದ.

"ಎಲ್ಲೀಗ್ ವಾಗ್‌ಬ್ಯಾಕು ಐನೋರೆ? ಬೈಸ್ಕಲ್ ಹಿಂದಾಗಡೆ ಕುಂತ್‌ಕಳ್ಳಿ, ಬುಟ್ಟು ಬುಡ್ತೀವಿ.''

'ನಾನು ಮೊದಲು ಪೋಲೀಸ್ ಸ್ಟೇಷನ್ನಿಗೆ ಹೋಗಬೇಕು–ದೂರು ಕೊಡೋದಕ್ಕೆ.''

"ಏನು ಟೇಶನ್ಗಾ? ಬ್ಯಾಡಿ ಐನೋರೆ ಆ ಪೋಲೀಸ್‌ನೋರ ಸಾವಾಸ ಮಾತ್ರ ನಮ್ಗೆ ಅದಾಗಾಕಿಲ್ಲ. ತೆಪ್ ತಿಳ್ಕಾಬ್ಯಾಡಿ...ಏನಣ್ಣ?"

"ಮತ್ತೆ ಓಟಲ್ವೆ. ಉಂಟಾ? ಅವ್ರು ತಾವ್ಕೆ ಹ್ವಾದಾರುಂಟಾ? ಕಾಣೆಸ್‌ಕಂಡ್ರೆ ಆತು, ಇಂಡ್ ಬುಡ್ತಾರೆ. ಏನೇ ಆಗ್ಲಿ ಬುಡ್ಲಿ, ಈ ಪೋಲೀಸ್ ನೋರ ತಾವ ಲಾಯರ್‌ಗೋಳ್ ತಾವ ಎಂದ್ಗೂ ಓಗ್‌ಬಾರ್ದು, ಬುದ್ಧಿ ಇರೋರು. ಆಮ್ಯಾಕೆ ಏನೂ ಉಳಿಯಾಕಿಲ್ಲ ನಮ್ ತಾವ, ಅದೂ ಜೀವ್ ಸೈತ ಇದ್ರೆ ಅನ್ನು. ಬನ್ನಿ ಐನೋರೆ, ನಿಮ್ ಮನೆ ತಾವ ಬುಟ್ಟುಬುಡ್ತೀವಿ. ಆಮ್ಯಾಕೆ ಎಲ್ಲಿಗಾದ್ರೂ ಹ್ವಾಗಿ, ಬುಡಿ, ಆಯ್ತೆ? ನಮ್ಮನ್ ಮಾತ್ರ ಅಂತಿಂತಾದಕ್ಕೆ ಸಿಕ್‌ಆಕಸ್ ಬ್ಯಾಡಿ, ಅಟ್ಟೊಂದು ಉಪ್ಕಾರ ಮಾಡಿ.''

ನಾವು ಹೊರಟಿದ್ದೆವು. ಮನೆಯನ್ನು ತಲುಪಿದಾಗ ಅವರನ್ನು ನಿಲ್ಲಿಸಿಕೊಂಡು, ಒಳಗೆ ಹೋಗಿ ಎರಡು ಐದು ರೂಪಾಯಿ ನೋಟುಗಳನ್ನು ತಂದು, "ನಿಮ್ಮಿಂದ ತುಂಬ ಉಪಕಾರವಾಯ್ತು, ನೀವು ತುಂಬ ಸಜ್ಜನರು. ದಯವಿಟ್ಟು ತಗೊಳ್ಳಿ. ಇದು ಸ್ವಲ್ಪ'' ಎಂದು ಕೊಡಹೋಗಿದ್ದೆ.

'ಐ ಇದೂ ಮಾತಾ ಐನೋರೇ? ಇಸ್ಕಾ ಚೌದಾ ನಾವು? ಬಾಳ ಚೆನ್ನಾತು ಬುಡಿ. ನಾವು ಮನ್‌ಸಾರಲ್ವಾ? ಒಬ್ಬರ್ಗೊಬ್ರು ಈಟು ಮಾಡಾಕಿಲ್ವಾ? ಏನ್ ನಾವ್ ಮಾಡಿದ್ದು, ಎಲ್ಲಾರೂ ಮಾಡೋದೇ. ಬ್ಯಾಡಿ ಬ್ಯಾಡಿ. ಬಾರಣ್ಣ, ಓಗಾವಾ?''

''ನಂಗೆ ಸಂತೋಷವಾಗುತ್ತೆ ಕಣಪ್ಪಾ. ತಗೊಳ್ಳಿ.''

"ಇರ್ಲಿ ಬುಡಿ, ಇದ್ ತಗಂಡ್ ಯಾವ್ ಪಾಪಕ್ಕೆ ಓಗಾವಾ? ನೀವ್ ಏಟು ಬಂಗಪಟ್ಟಿವ್ರಿ, ಏನೆಲ್ಲ ಕಳ್ಕಂಡಿವ್ರಿ. ಸಾಕು ಸಾಕು. ಅಣ ಏನು ಎಚ್ಚು. ಆ ಸಿವ ಕೊಡ್ತಾನೆ ಎಂಗೋ, ಬ್ಯಾಕಾದಾಗ.''

"ಇನ್‌ಮ್ಯಾಕೆ ಒಸಿ ಎಚ್ ಉಸಾರಾಗಿರಿ. ಕೆಟ್ ಕಾಲ ಕೆಟ್ ಜನ್‌ದಾಗೆ. ತಟಕ್‌ನ ಓಗ್‌ಬ್ಯಾಡಿ, ಸಾಯಾ ಪಾಯ ಮಾಡಾಕೆ ಅಂತ.''

ಅವರು ಹೊರಟು ಹೋಗಿದ್ದರು. ನಾನು ಅವರನ್ನೇ ನೋಡುತ್ತ ನಿಂತಿದ್ದೆ. ಅವರು ಮರೆಯಾಗುವವರೆಗೂ.

ಪೋಲೀಸ್ ಸ್ಟೇಷನ್ನಿಗೆ ಹೊರಟಾಗ, ನನ್ನ ಸ್ನೇಹಿತರು ನಿವೃತ್ತ ಪೋಲೀಸ್ ಇನ್‌ಸ್ಪೆಕ್ಟರ್ ಕರಿಯಪ್ಪನವರು ಹೇಳುತ್ತಿದ್ದುದು ನೆನಪಿಗೆ ಬಂದಿತ್ತು:

'ಯಾರ ಮನೇಲಿ ಏನಾದರೂ ಅಪರಾಧ ನಡೆದರೆ ಜನ ನನ್ನ ಕೇಳೋದಕ್ಕೆ ಬರ್ತಾರೆ. ಏನು ಮಾಡೋಣ ಅಂತ. ಆಗ ಅವರಿಗೆ ನಾನು ಹೇಳೋದು ಪೋಲೀಸ್‌ನೋರ ಹತ್ತಿರ ಹೋಗಬೇಡಿ, ಪ್ರಯೋಜನವಿಲ್ಲ, ಸುಮ್ಮನೆ ಇಪ್ಪತ್ತೆಂಟು ಸಲ ಅಲೆದಾಡಿ ಮಾಡಿ ಕಷ್ಟ ಅನುಭವಿಸ್ತೀರಿ, ಅಷ್ಟೆ. ಹೋದದ್ದೇನೂ ಪತ್ತೆಯಾಗೋದಿಲ್ಲ. ಅದಕ್ಕೆ ಕಾರಣ ಇದೆ. ಸುಮ್ಮನೆ ಮುಂದೆ ನಿಮ್ಮ ಎಚ್ಚರದಲ್ಲಿ ನೀವು ಇರಿ. ಮನೇನ ಭದ್ರ ಮಾಡಿ

ಕೊಳ್ಳಿ. ಕಳ್ಳರನ್ನು ಕಂಡರೂ ಬಾಗಿಲು ತೆಗೆದು ಕೊಂಡು ಹೊರಗೆ ಓಡಿಹೋಗಬೇಡಿ. ಅದು ಅಪಾಯ. ಅದಕ್ಕೆಲ್ಲ ಅವರು ಸಿದ್ಧವಾಗಿಯೇ ಬಂದಿರ್ತಾರೆ. ಆದ್ದರಿಂದ ಸುಮ್ಮನೆ ಕಾಗೆಪಾಗೆ ಓಡಿಸಿದ ಹಾಗೆ ಹುಶ್‌ಪಶ್ ಅಂತ ಓಡಿಸಿ, ಅಷ್ಟೆ. ಹೇಗೋ ಕಾಲ ಹಾಕಿಕೊಂಡಿರಿ ಅಂತ...''

ಆದರೆ ಪರಿಸ್ಥಿತಿ ಅಷ್ಟೊಂದು ಹದಗೆಟ್ಟಿತ್ತೆಂಬುದು ನನ್ನ ನಂಬಿಕೆಯಾಗಿರಲಿಲ್ಲ. ಆಗ ಈಗ ನಗರದಲ್ಲಿ ನಡೆದಿದ್ದ ಅಕೃತ್ಯಗಳು, ಪತ್ತೆದಾರಿ ಕಾರ್ಯ, ಕಳುವಾದ ಮಾಲುಗಳ ಮೌಲ್ಯ, ಪತ್ತೆಯಾದ ಮಾಲುಗಳ ಮೌಲ್ಯ, ಹೀಗೆಲ್ಲ ಪತ್ರಿಕೆಗಳಲ್ಲಿ ಬರುತ್ತಿರಲಿಲ್ಲವೆ? ಅದಲ್ಲದೆ ಅದೆಲ್ಲ ಏನೇ ಆಗಲಿ ಬಿಡಲಿ, ನಾನು ನಾಗರಿಕ, ನನ್ನ ಕರ್ತವ್ಯವನ್ನು ಮಾಡಬೇಕಾಗಿತ್ತು. ಹೋಗಿ ದೂರು ಕೊಟ್ಟಿದ್ದೆ. ಸ್ಥಳ ಪರೀಕ್ಷೆ, ಸುಲಿಗೆಯಾಗಿದ್ದ ಪದಾರ್ಥಗಳ ಬೆಲೆಗಳೂ ಸೇರಿದಂತೆ ವಿವರವಾದ ಹೇಳಿಕೆ ಮುಂತಾಗಿ ಎಲ್ಲವೂ ಆಗಿದ್ದುವು. ಅನಂತರ ಎಷ್ಟೋ ಬಾರಿ ಹೋಗಿ ಹೋಗಿ ವಿಚಾರಿಸಿದ್ದೆ. ಏನೂ ಆಗಿರಲಿಲ್ಲ. ಎಷ್ಟೋ ದಿನಗಳು ಆಗಿದ್ದುವು. ತಾಳ್ಮೆ ಕಳೆದುಕೊಂಡು ಮೇಲಿನ ಅಧಿಕಾರಿಗಳಿಗೆ ಬರೆದಿದ್ದೆ.

ಅದೇನು ಕಾಕತಾಲೀಯ ನ್ಯಾಯವೋ. ಮೇಲಿನವರಿಗೆ ಬರೆದದ್ದರ ಫಲವೋ ಅಂತೂ ಎರಡು ದಿನಗಳಲ್ಲೇ ಅಪಾದಿತರು ಪತ್ತೆಯಾಗಿದ್ದರು. ಅಷ್ಟರಲ್ಲೇ ಹೆಂಗಸೂ ನನ್ನ ಮೇಲೆ ದೂರು ಕೊಟ್ಟಿದ್ದಳಂತೆ—ಆ ಆತ. ರಾತ್ರಿ ಹೇಳಿದ್ದಂತೆ. ದೂರು ತಡವಾದುದಕ್ಕೆ ಕಾರಣ ಅವಳೂ ಅವಳ ಗಂಡನೂ ಮರ್ಯಾದಸ್ಥರು; ಮಾನಭಂಗ ಪುಕಾರಾಗುವುದು ಬೇಕಿರಲಿಲ್ಲ; ಆದರೆ ನಾನು ದೂರು ಕೊಟ್ಟುದುದರಿಂದ ಎಲ್ಲ ಹೇಗೂ ಬಯಲಾಗುವುದರಿಂದ ಅವಳೂ ದೂರು ಕೊಡಲು ನಿಶ್ಚಯಿಸಿ ಹಾಗೆ ಮಾಡಿದ್ದಳಂತೆ.

ಆಗಲೂ ನಾನು ನನ್ನ ದೂರನ್ನು ವಾಪಸು ತೆಗೆದುಕೊಂಡು, ಸ್ವಲ್ಪ ದುಡ್ಡು ಖರ್ಚುಮಾಡಿದರೆ ನನ್ನ ಮೇಲಿನ ದೂರೂ ರದ್ದಾಗುವುದು ಸಾಧ್ಯವೆಂದು ಇನ್ನು ಯಾರಿಂದಲೋ ನನಗೆ ಸಲಹೆ ಬಂದಿತ್ತು—ಆ ರಾತ್ರಿ ಮಾಡಿದ್ದಂತೆ. ನನಗೆ ಸಹಜವಾಗಿಯೇ ನಾನು ಆ ಸಲಹೆಯನ್ನು ನಿರಾಕರಿಸಿದ್ದೆ. ಎರಡು ಮೊಕದ್ದಮೆಗಳೂ ಕೋರ್ಟಿಗೆ ದಾಖಲಾಗಿದ್ದುವು. ಅವರೂ ಭಾರಿ ಲಾಯರನ್ನು ಗೊತ್ತು ಮಾಡಿಕೊಂಡಿದ್ದರು. ನಾನೂ ಹಾಗೆಯೇ ಮಾಡಬೇಕಾಗಿತ್ತು.

ಹೀಗಾಗಿ ಎರಡು ಮೊಕದ್ದಮೆಗಳಲ್ಲಿ ಸಿಕ್ಕಿ ಹಾಕಿಕೊಂಡು ಪೋಲೀಸ್ ಸ್ಟೇಶನ್ನಿಗೆ ಹೇಗೆ ಎಷ್ಟು ಬಾರಿ ಅಲೆದಾಡಿದ್ದೆನೋ, ಅದಕ್ಕೂ ಹೆಚ್ಚಾಗಿ ಅನಂತರ ಅದೆಷ್ಟು ಬಾರಿ ಕೋರ್ಟಿಗೆ ಅಲೆದಿದ್ದೆನೋ, ಸಾಕ್ಷಿ ಕಟ್ಟೆಯಲ್ಲಿ ನಿಂತಿದ್ದೆನೋ, ಪಾಟಿ ಸವಾಲನ್ನು ಎದುರಿಸಿದ್ದೆನೋ. ಎಷ್ಟು ದಣಿದಿದ್ದೆನೋ ಎಷ್ಟು ಜನ ಪರಿಚಿತ ಅಪರಿಚಿತರ ಸಂಶಯಕ್ಕೆ ಒಳಗಾಗಿ ಹಿಂಸೆಯನ್ನು ಅನುಭವಿಸಿದ್ದೆನೋ! ತಿಂಗಳುಗಳು ಕಳೆದಿದ್ದುವು. ನನ್ನ ಕಡೆಯ ಲಾಯರು, ಕೋರ್ಟು ಖರ್ಚುಗಳಿಗಾಗಿ ಹತ್ತಿರ ಹತ್ತಿರ ಮೂರು ಸಾವಿರ ರೂಪಾಯಿ ಕೈಬಿಟ್ಟಿತ್ತು. ನನ್ನಿಂದ ಸುಲಿಗೆಯಾಗಿದ್ದು ಪತ್ತೆಯಾಗಿರದಿದ್ದ ಮಾಲುಗಳ ನಷ್ಟ ಬೇರೆ.

ಫಲಿತಾಂಶ ಇಷ್ಟು: ಮೊದಲು ಮೊಕದ್ದಮೆಯಲ್ಲಿ ಆಪಾದಿತರನ್ನು ಸರಿಯಾಗಿ ಗುರುತಿಸುವುದು ನನ್ನಿಂದ ಸಾಧ್ಯವಾಗಿರಲಿಲ್ಲ (ಅದು ನಿಜವಿದ್ದರೂ ಇರಬಹುದು); ಅವರೆಲ್ಲರೂ ಮರ್ಯಾದಸ್ಥರು, ಆ ರಾತ್ರಿ ಆ ಹೊತ್ತಿನಲ್ಲಿ ಅವರು ಬೇರೆ ಬೇರೆ ಕಡೆಗಳಲ್ಲಿದ್ದರೆಂದು ಇತರ ಮರ್ಯಾದಸ್ಥರಿಂದ ಸಾಬೀತಾಗಿತ್ತು; ಹೀಗಿದ್ದು ಅವರ ಮೇಲೆ ಅಪರಾಧವನ್ನು ನಿಸ್ಸಂಶಯವಾಗಿ ಸ್ಥಿರಪಡಿಸುವುದರಲ್ಲಿ ಪೋಲೀಸರು ಅಸಮರ್ಥರಾಗಿದ್ದರು ಎಂದು ಘನವಾದ ಕೋರ್ಟು ತೀರ್ಮಾನಿಸಿ ಎಲ್ಲರನ್ನೂ ಖುಲಾಸೆ ಮಾಡಿದ್ದಿತು. ನನ್ನ ಮೇಲಿನ ಮೊಕದ್ದಮೆಯೂ ನಿಲ್ಲಲಿಲ್ಲವೆಂಬುದೊಂದೇ ನನಗೆ ಆಗಿದ್ದ ಸಮಾಧಾನ. ನನ್ನಿಂದ ಸುಲಿಗೆಯಾಗಿದ್ದ ಪದಾರ್ಥಗಳು ನನಗೆ ಸಿಕ್ಕಿರಲಿಲ್ಲ.

೨

ಈಗಲೂ ಈ ಕೊಲೆ ದೃಶ್ಯದ ಜನ ಗುಂಪುಗಳ ಮಧ್ಯೆ ಆಗಿನ ಆ ಅಧ್ಯಾಯ ವಿವರಗಳ ಚಿತ್ರವನ್ನು ಕಣ್ಣಿನ ಮುಂದೆ ಕಾಣುತ್ತ, ಹಿಂದಿನ ಸಂಕಟ, ನಷ್ಟ, ಸಿಟ್ಟುಗಳನ್ನೆಲ್ಲ ಮತ್ತೊಮ್ಮೆ

ಅನುಭವಿಸುತ್ತ ಹೆಜ್ಜೆಹಾಕುತ್ತಿದ್ದೆ: ಇಲ್ಲಿ ನಿಂತಿದ್ದ ಮತ್ತೊಂದು ಗುಂಪಿನ ಬಳಿಗೆ ಬಂದಿದ್ದೆ.

'ಹಾಗಾದ್ರೆ ಇವಳ್ನ ಇನ್ನೆಲ್ಲೋ ಏನೇನೋ ಮಾಡಿಗೀಡಿ, ಹೊಡೆದು ಹಾಕಿ, ಯಾತರಲ್ಲೋ ತಂದು ಇಲ್ಲಿ ಹಾಕಿ ಹೋಗಿಲ್ಲ ಅಂತೀರಾ?'

'ಏನೋ ಹಾಗೆ ಕಾಣೋದಿಲ್ಲ ಸಾರ್. ತರಹ ನೋಡಿದರೆ ಅಕೃತ್ಯ ಇಲ್ಲೇ ನಡೆದಿದೆ ಅನ್ನೋ ಹಾಗಿದೆ. ಅಷ್ಟೊಂದು ರಕ್ತ ಸುರಿದಿರುವಾಗ. ರಸ್ತೆಯಿಂದಲಾದರೂ ರಕ್ತ ತೊಟ್ಟಿಕ್ಕಿರೋದೆ, ಯಾತರಲ್ಲೋ ಹಾಕಿ ಅಥವಾ ಸುತ್ತಿ ತಂದು ಇಟ್ಟ ಹಾಗೆ ಯಾವುದೂ ಕಾಣಿಸ್ತಾ ಇಲ್ಲ. ಇಲ್ಲೇ ನಿಂತವಳನ್ನು ಹಾಗೇ ಬೀಳಿಸಿದ ಹಾಗಿದೆ. ನಿಂತೋಳನ್ನೋ ಹೋರಾಡ್ತಾ ಇದ್ದೋಳನ್ನೋ ತಿವಿದು ಸಾಯಿಸಿದರೋ, ಬೀಳಿಸಿ ಏನಾದರೂ ಮಾಡಿ, ಅವಳ ಬಾಯಿ ಮುಚ್ಚಿ ನೋಡಕ್ಕೆ ಆಮೇಲೆ ಕೊಂದರೋ ಕಾಣೆ. ಇಷ್ಟರ ಮೇಲೆ ಹೇಗೋ ಏನೋ, ನಾವೇನು ಡಿಟೆಕ್ಟಿವ್ಸ್ ಅಲ್ಲವಲ್ಲ.'

'ಇಲ್ಲೇ ಏನಾದ್ರೂ ಆಗಿದ್ರೆ ಅವಳು ಕೂಗಿ ಕಿರುಚಿ ಮಾಡಿ, ಯಾರಿಗಾದರೂ ಕೇಳ್ಸಿಗೀಳ್ಸಿ, ಅವರು ಬಂದು ಮಾಡಿ ಆಗ್ತಿರಲಿಲ್ವೆ ಅಂತ.'

'ಅವಳು ಕೂಗಿರಬಹುದು ಕಿರುಚಿರಬಹುದು. ಆದ್ರೆ ಕೇಳೋರು ಬರೋರು ಯಾರು? ನೋಡಿ, ಎಂಥ ನಿರ್ಜನ ಸ್ಥಳ ಆರಿಸಿಕೊಂಡಿದ್ದಾರೆ ಆ ಪಾಪಿಗಳು. ಹತ್ತಿರ ಹತ್ತಿರ ಮನೆಯೇಗಿನೆಯೇ ಒಂದೂ ಇಲ್ಲ. ಎಲ್ಲ ಕಟ್ಟದೆ ಇರೋ ಸೈಟುಗಳೇ ಬರೀ...ಹ್ನಾ, ಅಂದ ಹಾಗೇ ಆಗೋ, ಆ ಮನೆ, ಅಲ್ಲಿದೆಯಲ್ಲ ಒಂಟಿ ಮನೆ, ಅದರಲ್ಲಿದ್ದೋರಿಗೇನಾದರೂ–ಅದರಲ್ಲೂ ಯಾರಾದ್ರೂ ಇದ್ರೆಗಿದ್ರೆ ಅನ್ನಿ–ಕೇಳಿಸಿದ್ದರೂ ಕೇಳಿಸಿರಬಹುದು. ಹೇಗೋ ಅದೂ ಅನುಮಾನ ಅನ್ನಿ. ಅವರನ್ನು ಕೇಳಿದರೆ ಗೊತ್ತಾಗಬೇಕು,' ಅತ ಸುತ್ತಲೂ ನೋಡುತ್ತ ಮನೆಯ ಕಡೆಗೆ ಕೈ ತೋರಿಸಿದ.

'ಹೌದು, ಅಷ್ಟೆ. ಆ ಮನೆ ಬಿಟ್ಟರೆ ಆ ಕಡೆ ಅಷ್ಟು ದೂರ, ಈ ಕಡೆ ಇಷ್ಟೊಂದು ದೂರ, ಒಂಟಿಗೆ. ಯಾವ ಮನೆಯೂ ಇಲ್ಲ. ನಿಜ. ಇನ್ನು ರಸ್ತೇಲಿ ಅಕಸ್ಮಾತ್ತಾಗಿ ಆ ಹೊತ್ತಿನಲ್ಲೇ ಅಷ್ಟಿಷ್ಟು ದೂರದಲ್ಲಿ ಎಲ್ಲಾದರೂ ಹೋಗ್ತಾ ಬರ್ತಾ ಇದ್ದೋರಿಗೆ ಏನಾದರೂ ನೋಡಿದ ಹಾಗೆ ಕೇಳಿಸಿದ ಹಾಗೆ ಆಗಿ ಮಾಡಿ...'

'ಹಾಗೆ ತಾನೇ ಆಗಿದ್ರೆ ಏನು? ಎಷ್ಟು ಜನ ಸಹಾಯಕ್ಕೆ ಬರ್ತಾರೆ ಅಂತ ತಿಳಿದುಕೊಂಡ್ರಿ? ಅವರವರ ಜೀವ ಅವರವರಿಗೆ ಹೆಚ್ಚಪ್ಪ. ಅಪರಾಧಿ ಒಬ್ಬನೇ ಆದ್ರೆ ಅವರಿವರು ಏನಾದ್ರೂ ಒಂದು ಕೈ ನೋಡಬಹುದೇನೋ. ಅದೂ ಏನು ಸುಲಭ, ಅಪಾಯದ್ದಲ್ಲ, ಅಂತಲೇ ಅಂದುಕೊಳ್ಳೋ ಹಾಗಿಲ್ಲ, ತಿಳೀತೆ? ಇಷ್ಟರ ಮೇಲೆ, ಆ ಪಾಪಿ ಮುಂಡೇಮಕ್ಕಳು ಎಷ್ಟು ಜನರೋ ಎಂಥೆಂಥ ಘೋರರೋ ಯಾವ ಯಾವುದಕ್ಕೆ ಸಿದ್ಧವಾಗಿ ಬಂದಿದ್ದರೋ, ಯಾರು ಬಲ್ಲರು? ಅವರನ್ನು ತಡೆಯೋದಕ್ಕೆ ಆಗಬೇಕಲ್ಲ. ಸುಮ್ಮನೆ ಜೀವ ಯಾರು ಕೊಡ್ತಾರೆ? ಅಥವ ಆಮೇಲಾದರೂ ಸಾಕ್ಷಿ ಹೇಳಿ ಅಂಥ ಜನರ ವಿರೋಧ ಯಾರು ಕಟ್ಟಿಕೋತಾರೆ ಹೇಳಿ. ಆ ಜನ ಇವತ್ತು ಜೈಲಿನಲ್ಲಿ ಇರ್ತಾರೆ ಅನ್ನಿ–ಅದೂ ಖಿಲಾಸೆಯೇ ಆಗದೆ ಇದ್ರೆ–ನಾಳೆ ಹೊರಗೆ ಬಂದುಬಿಡ್ತಾರೆ. ಅಥವಾ ಒಬ್ಬಿಬ್ಬರನ್ನ ಗಲ್ಲಿಗೇ ಹಾಕಿದರು ಅನ್ನಿ, ಅವರ ಕಡೆಯೋರು ರಕ್ತಬೀಜಾಸುರರು. ಹತ್ತು ಜನ ಹೇಗೂ ಹೊರಗಿದ್ದೇ ಇರ್ತಾರೆ, ಅಂಥ ಕಾಲ ಈಗ. ಅವರು ವಕ್ರ ಕಣ್ಣು ಇಟ್ಟಿರ್ತಾರೆ ಇವರ ಮೇಲೆ, ನೋಡಿಕೋತಾರೆ ಅನ್ನೋ ಭಯವಂತೂ ಇದ್ದೇ ಇರುತ್ತೊ? ಅದೆಲ್ಲ ಯಾಕಪ್ಪ ಫಜೀತಿ, ಗಂಡಾಂತರ ಅಂತ ಜನ ಗಪ್ ಚುಪ್ಪಾಗಿ ಸುಮ್ಮನೆ ಇರ್ತಾರೆ, ಕಣ್ಣಿಗೆ ಕಂಡರೂ, ಕಿವಿಗೆ ಕೇಳಿಸಿದರೂ ದಾರೀಲಿ ಹೋಗೋ ಮಾರೀನ ಮನೆ ಹೊಕ್ಕು ಹೋಗು ಅಂತಾರೇ ಯಾರಾದರೂ ಮೂರ್ಖರಾಗದೇ ಇರೋರು? ಬರಿ ಭ್ರಾಂತಿ... ಅದಕ್ಕೆಲ್ಲ ಗುಂಡಿಗೆ ಬೇಕು 'ಸಾರ್ ಭಾರಿ ಗುಂಡಿಗೆ, ಹಾಗೂ ವಿಪರೀತ ಕರ್ತವ್ಯಬುದ್ಧಿ. ನಾಗರಿಕ ಕರ್ತವ್ಯಬುದ್ಧಿ–ಅವಶ್ಯಾಗಲಿ ಅಂತ. ಅಂಥ ಜನ ಎಷ್ಟಿದ್ದಾರೆ ಹೇಳಿ ?'

'ಹೌದು ಸಾರ್, ಒಪ್ಪಿದೆ. ಇಷ್ಟಕ್ಕೂ ಎಂಥ ಜನ, ಎಷ್ಟು ಜನ, ಯಾವ ಕಡೇಲಿ, ಇದ್ದರೇನು ಬಿಟ್ಟರೇನು – ಯಾರಿಗೆ ಯಾರೋ ಪುರಂದರ ವಿಠಲ ಅಂದ ಹಾಗೆ, ಯಾರು ಆಗ್ತಾರೆ ಸಮಯ

ದಲ್ಲಿ, ಹೇಳಿ. ಆಗೋದಂತೂ ಆಗೇ ಆಗುತ್ತೆ. ಅದನ್ನ ತಪ್ಪಿಸೋದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ಎಂಥ ಧೈರ್ಯಸ್ಥರೇ ಆಗಲಿ, ಏನೇ ಆಗಲಿ. ಹಣೇಲಿ ತಾನೇ ಬರೆದದ್ದನ್ನು ಅಳಿಸೋದಕ್ಕೆ ಆ ಬರೆದ ಬ್ರಹ್ಮನಿಗೆ ಸಾಧ್ಯವಿಲ್ಲ ಅಂದಮೇಲೆ ? ಎಲ್ಲ ಕರ್ಮಾನುಸಾರವೇ ನಡೆಯುತ್ತೆ. ಛಾಚೂ ಬೇರೆ ಆಗೋದಿಲ್ಲ. ಪ್ರಾರಬ್ಧಾನ ಅನುಭವಿಸಿಯೇ ತೀರಬೇಕು ಎಲ್ಲಾರೂ. ಹ್ಞ್, ಏನು ಮಾಡೋದಕ್ಕೆ ಆಗುತ್ತೆ ಬಿಡಿ. ಪಾಪ, ಹೀಗೆ ಹೋದ್ಲು ಹುಡುಗಿ. ಯಾವ ಜನ್ಮದಲ್ಲಿ ಏನಾಗಿ ಹುಟ್ಟಿದಳೋ, ಯಾರಿಗೆ ಏನು ಅನ್ಯಾಯ ಮಾಡಿದ್ದಳೋ, ಈಗ ಅನುಭವಿಸಿದಳು, ಅಷ್ಟೆ. ಅಂತೂ ಬಹಳ ಅನ್ಯಾಯ ಆಯ್ತು ಸಾರ್, ಏನೇ ಆಗಲಿ.'

'ಹ್ಞ್, ಎಷ್ಟು ಆಡಿದರೂ ಅಷ್ಟೆ, ನೋಡಿದರೂ ಅಷ್ಟೆ... ಬನ್ನಿ ಹೋಗೋಣ; ಇಲ್ಲಿದ್ದು ಮಾಡಿ ನಮಗೇನು ಕೆಲಸ. ಮಾಡಬೇಕಾದೋರು ಬರ್ತಾರೆ, ಮಾಡಿಕೋತಾರೆ, ಇನ್ನು ಎಲ್ಲಾನೂ. ಹೋದ ಜೀವ ಬರುತ್ತೆಯೇ ಎಷ್ಟೇ ಮಾತಾಡಿದರೂ ಏನೇ ಮಾಡಿದರೂ? ಮತ್ತೆ ಏನು ಪ್ರಯೋಜನ?'

ಈ ಗುಂಪೂ ಹೊರಟಿತು.

ನಾನು ಮೊಗದೊಂದು ಗುಂಪನ್ನು ಸಮೀಪಿಸಿದಾಗ ದೂರ ವಾಹನದ ಹಾರನ್ ಕೇಳಿಸಿತು. ಜೀಪ್ ಒಂದು ಬರುತ್ತಿತ್ತು.

'ಅಗೋ, ಅವರು ಪೋಲೀಸಿನೋರೇ ಇರಬೇಕು.'

'ಹೌದು, ಹೌದು ಅನ್ನೋಹಾಗಿದೆ. ಇನ್ನು ಇಲ್ಲಿದ್ದು ಯಾಕೆ ಫಜೀತಿ.'

'ಅಪಾಯವೇ ಆಗಬಹುದು. ಕೆಟ್ಟ ಸಹವಾಸ. ಹೇಗೆ ಹೇಳೋದು. ಬನ್ನಿ ಮತ್ತೆ.'

ಗುಂಪು ಅವಸರ ಅವಸರವಾಗಿ ಹೊರಟಿತು.

ಇತರ ಗುಂಪುಗಳೂ ಕರಗಲಾರಂಭಿಸಿದುವು.

ನಾನೂ ಮೆಲ್ಲಗೆ ಅಲ್ಲಿಂದ ಸರಿದು ನನ್ನ ಮನೆಯನ್ನು ಸೇರಿಕೊಂಡೆ.

ಸ್ನಾನ ಹೇಗೆ ಮಾಡಿದೆನೋ, ದೇವರ ಪೂಜೆ ಹೇಗೆ ಆಯಿತೋ, ಮಾಡಿಕೊಂಡಿದ್ದ ಕಾಫಿ ಏನಾಗಿತ್ತೋ, ರೇಡಿಯೋದಲ್ಲಿ ಏನು ಬರುತ್ತಿತ್ತೋ, ಕೈಯಲ್ಲಿ ಹಿಡಿದಿದ್ದ ಪತ್ರಿಕೆಯಲ್ಲಿ ಏನಿತ್ತೋ.

ಮೆತ್ತೆಯ ಕುರ್ಚಿ ಒತ್ತುತ್ತಿತ್ತು: ಮನಸ್ಸೂ ಕೂಡ. ಏಳಬೇಕೆಂದು ಕಾಲು ಕಡಿಯುತ್ತಿತ್ತು; ಕಿಟಕಿಯಿಂದ ಹೊರಗೆ, ಆ ಕಡೆಗೆ, ನೋಡಬೇಕೆಂದು ಕಣ್ಣು ಕಿಟಕಿಯ ದಿಕ್ಕಿಗೆ ಹೋಗುತ್ತಲೇ ಇತ್ತು; ಏನಾದರೂ ಕೇಳಿಸಿತೇ ಎಂದು ಕಿವಿಯೂ ಅತ್ತಲೇ ಆಲಿಸುತ್ತಿತ್ತು.

ಎಷ್ಟು ಹೊತ್ತಾಗಿತ್ತೊ..

"ಟ್ರಣ್!... ಟ್ರಣ್!" ಕರೆಗಂಟೆ ಎಚ್ಚರಿಸಿತು.

ಎದ್ದು ಬಾಗಿಲು ತೆಗೆದೆ– ಪೋಲೀಸಿನವರು. ಎದೆಯ ಬಡಿತ ಒಂದು ತಪ್ಪಿತ್ತು. ಮುಖ ಹೇಗಿತ್ತೊ.

"ಏನು?..." ಸಾವರಿಸಿಕೊಳ್ಳುತ್ತ ಹೇಳಿದೆ.

"ಏನೂ ಇಲ್ಲ ಸಾರ್. ಇಲ್ಲಿ ಹತ್ತಿರ ಆಗಿರೋ ಕೊಲೆ ತಮಗೆ ಗೊತ್ತಿರಬೇಕಲ್ಲ?" ಅಪರಿಚಿತ ಅಧಿಕಾರಿ ಕೇಳಿದ.

"ಹುಂ."

"ತಮ್ಮದೊಂದು ಹೇಳಿಕೆ ತಗೊಳ್ಳೋಣ ಅಂತ. ನಮಗೆ ಸ್ವಲ್ಪ ಸಹಾಯವಾಗಬಹುದು."

"ಓ... ಒಳಗೆ ಬನ್ನಿ."

ಅಧಿಕಾರಿಯೂ, ಅವನ ಸಹಾಯಕರಲ್ಲಿ ಒಬ್ಬನೂ ನನ್ನ ಹಿಂದೆ ಡ್ರಾಯಿಂಗ್ ರೂಮ್‌ಗೆ ಬಂದು ಕುಳಿತರು.

ನನ್ನ ಹೆಸರು, ತಂದೆಯ ಹೆಸರು, ನನ್ನ ಉದ್ಯೋಗ, ಮನೆಯಿಂದ ಹೋಗಿ ಬರುವ ಹೊತ್ತು, ಮನೆಯಲ್ಲಿ ಇನ್ನೂ ಯಾರು ಯಾರು ಇದ್ದಾರೆ (ಸಧ್ಯದಲ್ಲಿ ನಾನು ಒಬ್ಬನೆ; ಹೆಂಡತಿ ತೌರು ಮನೆಗೆ ಹೋಗಿದ್ದಾಳೆ.), ಈ ಮನೆಯಲ್ಲಿರುತ್ತ ಎಷ್ಟು ದಿನವಾಯಿತು (ಒಂದೂವರೆ ತಿಂಗಳು), ಇತ್ಯಾದಿ ಹಲವಾರು ಪ್ರಶ್ನೋತ್ತರಗಳಾದುವು. ಸಹಾಯಕ ಬರೆದುಕೊಳ್ಳುತ್ತಿದ್ದ.

"ನಿನ್ನೆ ತಾವು ಆಫೀಸಿನಿಂದ ಮನೆಗೆ ಬಂದಾಗ ಎಷ್ಟು ಹೊತ್ತಾಗಿತ್ತು?"

"ಸರಿಯಾಗಿ ನೋಡಿಕೊಳ್ಳಲಿಲ್ಲ, ಸುಮಾರು ಐದೂ ಮುಕ್ಕಾಲು ಆರು ಇರಬಹುದು."

"ಆಮೇಲೆ ಎಲ್ಲಾದರೂ ಹೊರಗಡೆ

ಹೋಗಿದ್ರಾ?"

"ಇಲ್ಲ."

"ಕಾಂಪೌಂಡ್‌ನಲ್ಲಿ, ಬೀದಿ ಹತ್ತಿರ?"

"ಇಲ್ಲ, ಒಳಗೇ ಇದ್ದೆ."

"ಬಹಳವಾಗಿ ಎಲ್ಲಿ, ಯಾವ ರೂಮ್‌ನಲ್ಲಿ ಇದ್ರಿ, ಮಲಗೋವರೆಗೂ ?"

"ಇಲ್ಲೇ."

"ಏನು ಮಾಡ್ತಾ ಇದ್ರಿ—ವಿಶೇಷವಾದ್ದೇನಾದರೂ ?"

"ಏನಿಲ್ಲ; ಮಾಮೂಲಿನಂತೆ ಓದ್ತಾ, ರೇಡಿಯೋ ಕೇಳ್ತಾ ಇದ್ದೆ."

"ಎಷ್ಟು ಹೊತ್ತಿಗೆ ಬೆಡ್‌ರೂಮ್‌ಗೆ ಹೋದ್ರಿ, ಮಲಗೋದಕ್ಕೆ, ಇಲ್ಲಿಂದ?"

"ಹನ್ನೊಂದು ಗಂಟೆ, ರಾಷ್ಟ್ರೀಯ ಸಂಗೀತ ಪ್ರೋಗ್ರಾಂ ಆದ ಮೇಲೆ."

"ಕೂಡಲೆ ನಿದ್ದೆ ಮಾಡಿಬಿಟ್ರಿ ? ಅಂದ್ರೆ ಎಷ್ಟು ಹೊತ್ತಿನವರೆಗೂ ಎಚ್ಚರವಾಗಿದ್ರಿ ಅಂತ?"

"ಓ, ಆಗ ಹನ್ನೆರಡೇ ಆಗಿರಬಹುದು."

"ಯಾಕೆ, ತಮಗೇನಾದ್ರೂ ನಿದ್ರೆ ತೊಂದರೆಯೆ ?"

"ಹ್ಞ. ಆಗ ಈಗ. ನಿನ್ನೆಯೂ ನಿದ್ದೆ ಹತ್ತಲಿಲ್ಲ ಬೇಗ. ಕಾಂಪೋಸ್ ಮಾತ್ರೆ ತಗೊಳ್ಳಬೇಕಾಯ್ತು."

"ಸರಿ, ಸರಿ. ಅಂದ್ರೆ ಸುಮಾರು ಆರು ಗಂಟೆಯಿಂದ ಮಧ್ಯ ರಾತ್ರಿವರೆಗೂ ತಾವು ಮನೇಲೇ ಎಚ್ಚರವಾಗಿದ್ರಿ ಅಂತ ಆಯ್ತು. ಒಳ್ಳೇದು. ಮತ್ತೆ ಈ ಮಧ್ಯೆ ತಾವು ಇಲ್ಲೇ ಇದ್ದಾಗ, ಮತ್ತೆ ಇನ್ನೆಲ್ಲಾದರೂ, ಅಂದ್ರೆ, ಅಡಿಗೆ ಮನೆ ಬಚ್ಚಲು ಮನೆ ಇತ್ಯಾದಿಗೆ ಹೋಗಿದ್ದಾಗ, ಹೊರಗಡೆ ಹತ್ತಿರದಿಂದ ದೂರದಿಂದ ಏನಾದ್ರೂ ವಿಶೇಷವಾದ ಶಬ್ದ ಗಲಾಟೆ, ಅಂದ್ರೆ, ಯಾರಾದ್ರೂ ಜೋರು ಜೋರಾಗಿ ಮಾತಾಡ್ತಾ ಇದ್ದದ್ದು, ಹೆಂಗಸಿನ ಕೂಗಾಟ ಕಿರಿಚಾಟ ಇಂಥಾದ್ದು ಏನಾದ್ರೂ, ಕೇಳಿಸಿತ್ತೆ ?"

"ಅ...ಇಲ್ಲ... ಉಹುಂ, ಇಲ್ಲ."

"ಮತ್ತೆ ತಾವು ಇಲ್ಲಿ, ಡ್ರಾಯಿಂಗ್ ರೂಮ್‌ನಲ್ಲಿ ಇದ್ದಾಗ. ಆಗ ಅದಕ್ಕೆ ಇದಕ್ಕೆ ಎದ್ದಾಗ ಅತ್ತ ಇತ್ತ ತಿರುಗಿದಾಗ ನೋಡಿದಾಗ ಮಾಡಿದಾಗ ಕಿಟಕಿಯಿಂದ, ಆ ದಕ್ಷಿಣದ ಕಿಟಕಿಯಿಂದ ಹೊರಗಡೆ ಅಲ್ಲಿ ಇಲ್ಲಿ ಏನಾದರೂ ವಿಶೇಷವಾದದ್ದು, ಅನುಮಾನ ಬರೋ ಅಂಥಾದ್ದು ಕಣ್ಣಿಗೆ ಬಿದ್ದಿತ್ತೆ—ನಿನ್ನೆ ಬೆಳದಿಂಗಳೂ ಅಷ್ಟು ಇತ್ತಲ್ಲ ?"

"ಇಲ್ಲ." ತಲೆಯಾಡಿಸಿದೆ.

ಮುಂದೆಯೂ ಆತ ಏನೇನೋ ಪ್ರಶ್ನೆಗಳನ್ನು ಕೇಳಿದ್ದ. ಸೂಕ್ತ ಉತ್ತರ ಕೊಟ್ಟಿದ್ದೆ. ಇನ್ನೊಬ್ಬಾತ ಬರೆದುಕೊಂಡಿದ್ದ. ಅವುಗಳೆಲ್ಲ ಸರಿಯಾಗಿ ನೆನಪಿಸಲ್ಲಿಲ್ಲ. ಹೇಳಿಕೆಗೆ ಸಹಿ ಹಾಕಿಸಿಕೊಂಡು ಅವರು ಮೇಲೆದ್ದರು.

"ಹ್ಞೂ, ಸರಿ ಸಾರ್. ಥ್ಯಾಂಕ್ಯೂ. ತಮಗೆ ತೊಂದರೆ ಕೊಟ್ಟೆ; ಕ್ಷಮಿಸಬೇಕು."

"ಏನಿಲ್ಲ, ಅದಕ್ಕೇನು."

"ನೋಡಿ, ಕೊಲೆ ಇಲ್ಲೇ ಆಯ್ತೊ, ಇನ್ನೆಲ್ಲೊ ಆಯ್ತೊ ಅಂತ ನಾವು ನಿರ್ಧರಿಸಬೇಕಲ್ಲ...ಬರ್ತೀನಿ ಸಾರ್. ನಮಸ್ಕಾರ."

"ನಮಸ್ಕಾರ."

ಅವರು ಹೊರಟು ಹೋದರು. ನನ ಕಣ್ಣು ಅವರನ್ನು ಹಿಂಬಾಲಿಸುತ್ತಿತ್ತು. ಕಿವಿ ಅವರ ಮಾತುಗಳನ್ನು ಆಲಿಸುತ್ತಿತ್ತು. ಬಾಗಿಲನ್ನು ಹಾಕಿ ಒಳಗೆ ಬಂದವನೇ ಸೋಫಾದ ಮೇಲೆ ಕುಕ್ಕರಿಸಿಕೊಂಡೆ.

ನೆನಪು, ಆ ನೆನಪು, ಹಿಂದಿನ ರಾತ್ರಿಯದು ಒತ್ತಿ ಬಂದಿತ್ತು—ಕಾಂಪೋಸ್ ನಿದ್ದೆಗುಳಿಗೆಗಳನ್ನು ನುಂಗಿದ್ದರೂ ರಾತ್ರಿ ನಿದ್ದೆಯನ್ನು ಪೂರ್ತಿಯಾಗಿ ಕಸಿದುಕೊಂಡಿದ್ದ ಆ ನೆನಪು. ಈಗ ಮತ್ತೆ. ಎಷ್ಟನೆಯ ಬಾರಿಗೋ.

ನಿನ್ನೆ ಸಂಜೆ ಏಳೂವರೆಯ ಸಮಯ. ಇಲ್ಲೇ ಕುಳಿತು, ರೇಡಿಯೋವನ್ನು ಮೆಲ್ಲಗೆ ಹಾಕಿಕೊಂಡು, ಆಫೀಸಿನಿಂದ ಬರುವಾಗ ತಂದಿದ್ದ 'ಫಿಲ್ಮ್‌ಫೇರ್' ಪತ್ರಿಕೆಯನ್ನು ನೋಡುತ್ತಿದ್ದೆ.

"ಓ! ಅಯ್ಯೋ! ಅಯ್ಯೋ!" ಹೆಣ್ಣಿನ ಚೀತ್ಕಾರ ಕೂಗು ಕಿರಿಚು!

ಪತ್ರಿಕೆ ಕೆಳಗೆ ಬಿದ್ದಿತು. ತಟ್ಟನೆ ಮೇಲೆದ್ದೆ.

"ಕಾಪಾಡಿ! ಕಾಪಾಡಿ!..."

ಶಬ್ದ ಬಂದ ಆ ಕಿಟಕಿ, ಅದೇ ದಕ್ಷಿಣದ ಕಿಟಕಿಯ ಕಡೆಗೆ ಧಾವಿಸಿದೆ.

ಬೆಳದಿಂಗಳಿನಲ್ಲಿ ಕುಳಿತ್ತು. ಸ್ವಲ್ಪ ದೂರದಲ್ಲಿ, ರಸ್ತೆಯ ಅಂಚಿನಲ್ಲಿ ದೃಶ್ಯ. ಧಾಂಡಿಗ ಗಂಡು ಒಬ್ಬ. ಹೆಣ್ಣೊಬ್ಬಳನ್ನು ಹಿಡಿದುಕೊಂಡಿದ್ದ. ಅವನ ಆಕ್ರಮಣ; ಅವಳ ವಿರೋಧ, ಹೋರಾಟ.

ಹತ್ತಿರದಲ್ಲಿದ್ದ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಬಾಗಿಲಿನ ಕಡೆಗೆ ಹೆಜ್ಜೆಯಿಟ್ಟೆ, ಒಂದೆರಡು.

"ಅಯ್ಯಯ್ಯೋ! ಬಿಡಿಸಿಕೊಳ್ಳಿ!" ಅವಳ ಕೂಗಾಟ ಮುಂದುವರಿಯುತ್ತಿತ್ತು.

ತಟ್ಟನೆ ನಿಂತೆ.

ಅವಳೂ, ಆ ಹಿಂದಿನ ಕಟು ಪ್ರಸಂಗದ ಹೆಂಗಸೂ ಹಾಗೆಯೇ ಕೂಗಿಕೊಂಡಿದ್ದಳು... ಹೌದು... ನಾಟಕ... ಕಟಕಟನೆ ವಾಕಿಂಗ್ ಸ್ಟಿಕ್ ಕೆಳಗೆ ಬಿದ್ದಿತ್ತು.

ಹುಂ, ಆ ನಾಟಕ–ಆ ನನ್ನ ಭಾಗ–ಅಷ್ಟೊಂದು ಸಪ್ಪ–ತಿಂಗಳುಗಟ್ಟಲೆ ಮೊಕದ್ದಮೆಗಳು–ಪರದಾಟ–ವೃಥಾ ಖರ್ಚು... ವಿವರಗಳು ಅಲೆಯಲೆಯಾಗಿ ಕ್ಷಣದಲ್ಲಿ ಮಿಂಚಿ ಮಾಯವಾಗುತ್ತಿದ್ದುವು.

"ಅಯ್ಯಪ್ಪಾ–ಅಯ್ಯಪ್ಪಾ! ಕೊಲೆ! ಕೊಲೆ!–ಕಾಪಾಡಿ!–ಅಯ್ಯೋ ಕೊಲ್ಲುತ್ತಿ..."

ನನ್ನ ಹೆಜ್ಜೆ ಹಿಂತಿರುಗಿತು, ಕಿಟಕಿಯ ಬಳಿಗೆ; ಕಣ್ಣು ಅತ್ತ ನೋಡಲಿಲ್ಲ; ಕೈ, ಮರದ ಕಿಟಕಿಯನ್ನು ಮುಚ್ಚಿತು; ನನ್ನ ಕಿಟಕಿಗಳೆಲ್ಲವನ್ನೂ ಮುಚ್ಚಿಕೊಂಡೆ: ರೇಡಿಯೋವನ್ನು ಪೂರ್ತಿಯಾಗಿ ಜೋರು ಮಾಡಿದೆ: ಆರಾಮ ಕುರ್ಚಿಯಲ್ಲಿ ಕುಸಿದು ಬಿದ್ದುಕೊಂಡೆ.

ಆಗ ಆಗಿತ್ತು – ನನ್ನ ಕೊಲೆ. ✡

ಶುನಕೋಪಾಖ್ಯಾನ

ಸ್ವಾಮಿಭಕ್ತಿಗೆ ಅನ್ವರ್ಥನಾಮ ನಾಯಿ. ಪಾಂಡವರಲ್ಲಿ ದೊಡ್ಡವನಾದ ಧರ್ಮರಾಯ ನಾಯಿಯ ಸ್ವಾಮಿಭಕ್ತಿಗೆ ಮೆಚ್ಚಿ ಸ್ವರ್ಗವನ್ನು ಕೂಡ ನಿರಾಕರಿಸಿದನಂತೆ. ಪ್ರಾಗೈತಿಹಾಸಿಕ ಶೋಧನೆಗಳಿಂದ ರಷ್ಯದಲ್ಲಿ ಒಂದನೇ ಶತಮಾನದಲ್ಲಿಯೇ ನಾಯಿಗಳಿದ್ದುವೆಂಬುದು ಸಿದ್ಧವಾಗಿದೆ. ಇಂದಿನ ಮಾಸ್ಕೋ ಆಗ ಹಿಮಾಚ್ಛಾದಿತ ಶೂನ್ಯ ಮೈದಾನವಾಗಿತ್ತು. ಅಲ್ಲಿ ಕಾಡು ನಾಯಿಗಳಿದ್ದವು. ಅವು ಆಕಾರದಲ್ಲಿ ತೋಳದಂತೆ ಕಾಣಿಸುತ್ತಿದ್ದವು. ತಾಮ್ರಯುಗದಲ್ಲಿ ಹಾಲೆಂಡಿನ ಉತ್ತರದಲ್ಲಿ ಮತ್ತು ತುರ್ಕಸ್ಥಾನಗಳಲ್ಲಿ ನಾಯಿಗಳಿದ್ದವೆಂಬುದಕ್ಕೆ ಆಧಾರಗಳಿವೆ. ನಾಯಿಯನ್ನು ಮೊಟ್ಟ ಮೊದಲ ಬಾರಿಗೆ ಪತ್ತೇದಾರಿ ಕೆಲಸಕ್ಕೆ ನೇಮಿಸಿಕೊಂಡಿದ್ದು ೧೯೧೨ ರಲ್ಲಿ ಇಂಗ್ಲೆಂಡಿನ ಪೋಲೀಸರು. ೧೯೧೪ ರಲ್ಲಿ ನಾಯಿಗಳ ಪ್ರದರ್ಶನವೂ ಲಂಡನ್ನಿನಲ್ಲಿ ಏರ್ಪಟ್ಟಿತು. ಆಗ ಸರ್ಕಾರ "ನಾಯಿ ವಿಭಾಗ" ಒಂದನ್ನು ಆರಂಭಿಸಿತು. ಅಲ್ಲಿನ ರಾಲ್ಫ್ ಎಂಬ ಹೆಸರಿನ ನಾಯಿ ಪತ್ತೇದಾರಿಕೆಗೆ ಪ್ರಸಿದ್ಧವಾಗಿತ್ತು. ಹಸು, ಹಂದಿ, ಕೋಳಿಗಳಿಂದ ಹಿಡಿದು ವಜ್ರದ ಉಂಗುರ, ಹಣ, ಗಡಿಯಾರ, ಆಭರಣಗಳವರೆಗೆ ಅದು ಪತ್ತೇ ಮಾಡಿಕೊಟ್ಟಿದೆ. ಜರ್ಮನಿಯ ಅಲ್ಸೇಷಿಯನ್ ಜಾತಿಯ ಡೋಕ್ಸ್ ಎಂಬ ನಾಯಿ ರಾಲ್ಫ್ ನಷ್ಟೇ ಪ್ರಸಿದ್ಧವಾಗಿತ್ತು. ಅದು ಸಾಯುವವರೆಗೆ ತನ್ನ ಯಜಮಾನನನ್ನು ಬಿಟ್ಟು ಇರಲಿಲ್ಲ. ಅಪರಾಧ ನಡೆದ ಸ್ಥಳದಿಂದ ೧೨ ಮೈಲಿಗಳವರೆಗೆ ವಾಸನೆ ಹಿಡಿವ ಅದರ ಶಕ್ತಿ ಅದ್ಭುತವಾಗಿತ್ತು. ಅದು ೪೦೦ ಕ್ಕೂ ಹೆಚ್ಚು ಅಪರಾಧಿಗಳನ್ನು ಹಿಡಿದುಕೊಟ್ಟಿದೆ. ನಾಯಿಯ ಕೌಶಲ ಪತ್ತೇದಾರಿಕೆಗೆ ಮಾತ್ರ ಸೀಮಿತವಾಗಿರಲಿಲ್ಲ. ಈ ನಾಯಿ ತೋಟಾ ತುಂಬಿದ ಪಿಸ್ತೂಲಿನಿಂದ ತೋಟಿಗಳನ್ನು ತೆಗೆದು ಪಿಸ್ತೂಲನ್ನು ಖಾಲಿ ಮಾಡುತ್ತಿತ್ತು; ಅಪರಾಧಿಗಳನ್ನು ಕುರ್ಚಿಗೆ ಕಟ್ಟಿಹಾಕುತ್ತಿತ್ತು.

ಹೀಗೆಯೇ ಅಮೇರಿಕದ ರಿನ್‌ಟಿನ್‌ಟಿನ್, ರಷ್ಯದ ವಿಮಾನವಿಹಾರಿ ಶ್ವಾನಗಳು ಬೆಲ್ಕಾ ಮತ್ತು ಸ್ಟ್ರೆಲ್ಕಾ, ಜಪಾನಿನ ಹಶಿಕೋ, ಭಾರತದ ಹೈರೀ ಜಾತಿಯ ನಾಯಿಗಳು ವಿಶ್ವವಿಖ್ಯಾತವಾಗಿವೆ.

– ಆನಂದ ದಂಡಾಪುರ

ನಿಮ್ಮ ಶಬ್ದಭಾಂಡಾರ ಬೆಳಸಿರಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಪಲಿತ

(ಅ) ಹಣ್ಣು ಬಿಟ್ಟ (ಆ) ಕ್ಷಣ ಹೊತ್ತು (ಇ) ಒಡಿಹೋದ (ಈ) ನರೆಗೂದಲು

೨. ಫಲಿತ

(ಅ) ನರೆತ (ಆ) ಕಾರ್ಯಸಿದ್ಧಿ (ಇ) ನೊರೆ ಬಿಡುವಿಕೆ (ಈ) ಸೊಗ ಹೂಡಿದ

೩. ಆಂಶಿಕ

(ಅ) ಹೆಗಲೇರಿದ (ಆ) ಹತ್ತಿರದ (ಇ) ಪೂರ್ಣವಲ್ಲದ (ಈ) ಗುಟ್ಟಾದ

೪. ವಾಂಶಿಕ

(ಅ) ಕುಲಕ್ರಮದಿಂದ ಬಂದ (ಆ) ಬಯಕೆ (ಇ) ಭ್ರಮೆ ಹಿಡಿದವ (ಈ) ಕಾರಿಕೊಂಡ

೫. ಕುಮಂತ್ರ

(ಅ) ಕೆಟ್ಟ ಬೋಧನೆ (ಆ) ಪಿತನುಡಿ (ಇ) ಗಟ್ಟಿ ಮಾತು (ಈ) ಕಹಿ ಔಷಧ

೬. ಅಭಿಮಂತ್ರಿತ

(ಅ) ಗುಟ್ಟಿನ ಅಪ್ಪಣೆ (ಆ) ಏಮರು ಬಿದ್ದ (ಇ) ಮೇಲಕ್ಕೆ ಹೋದ (ಈ) ಮಂತ್ರ ಮೂಲಕ ಶಕ್ತಿ ಕೊಟ್ಟ

೭. ಹಿಡುವಳಿ

(ಅ) ಒಸುಕುವುದು (ಆ) ಸ್ವಾಧೀನದಲ್ಲಿರುವ ಭೂಮಿ (ಇ) ಅಡವಿಟ್ಟ ಸೊತ್ತು (ಈ) ಛಲ

೮. ಹುತಾತ್ಮ

(ಅ) ಹಣ (ಆ) ಮೈಸುಟ್ಟ (ಇ) ಒಳ್ಳೇ ಉದ್ದೇಶಕ್ಕೆ ಜೀವ ತೆತ್ತವ (ಈ) ಭ್ರಷ್ಟ ಜೀವಿ

೯. ಹೂಲಿ

(ಅ) ಕೆಸರು (ಆ) ಘಟಿಂಗ (ಇ) ಬೊಬ್ಬೆ (ಈ) ಪ್ರತಿಜ್ಞೆ

೧೦. ಜಾಳು

(ಅ) ಸರಿದು ಹೋಗು (ಆ) ಮನೆಗಳ ಸಾಲು (ಇ) ಕೆಟ್ಟ ಅಭ್ಯಾಸ (ಈ) ದೂರ ದೂರ ನೇಯ್ಗೆ

೧೧. ಗಾಳ

(ಅ) ಕೆಲಸಕ್ಕೆ ಬಾರದ (ಆ) ಗಾಬರಿ (ಇ) ಮೀನು ಹಿಡಿಯುವ ಕೊಕ್ಕೆ (ಈ) ಆಳ

೧೨. ಜಾಸ್ತಿ

(ಅ) ಪವಿತ್ರ (ಆ) ವಿಳಂಬ (ಇ) ಬಾಣ ಬಿಡುವಿಕೆ (ಈ) ಮೋಸ

೧. **ಪಲಿತ** (ಈ) ನರೆಗೂದಲು, ಕೂದಲು ಹಣ್ಣಾಗುವಿಕೆ; ಮುಪ್ಪು. ಉದಾ:— ಮುಂದಲೆ ಪಲಿತವಾದರೂ ಬುದ್ಧಿ ಬರಲಿಲ್ಲ. [ಸಂಸ್ಕೃತ]

೨. **ಫಲಿತ** (ಅ) ಕಾರ್ಯಸಿದ್ಧಿ; ಪರಿಣಾಮ; ಪ್ರಯೋಜನ; ಅಭಿವೃದ್ಧಿ. ಉದಾ.— ಪ್ರಯತ್ನ ಫಲಿತಕ್ಕೆ ಬರಲಿಲ್ಲ. [ಸಂ.-ಫಲ = ಹಣ್ಣು-ಇಂದ]

೩. **ಆಂಶಿಕ** (ಇ) ಪೂರ್ಣವಲ್ಲದ, ಅರ್ಧಮರ್ಧ, ಸ್ವಲ್ಪ ಮಾತ್ರ; ಉದಾ.— ಮಾತುಕತೆ ಆಂಶಿಕ ಪ್ರಯೋಜನ ಕೊಟ್ಟಿತು. [ಸಂ, ಅಂಶ-ಇಂದ]

೪. **ವಾಂಶಿಕ** (ಅ) ಕುಲಕ್ರಮದಿಂದ ಬಂದ, ಪಾರಂಪರ್ಯದಿಂದ ಬಂದ. ಉದಾ.— ಪೌರೋಹಿತ್ಯ ಅವನ ವಾಂಶಿಕ ವೃತ್ತಿ; [ಸಂ. ವಂಶ = ಕುಲ-ಇಂದ]

೫. **ಕುಮಂತ್ರ** (ಅ) ಗುಟ್ಟಿನಲ್ಲಿ ಕೊಟ್ಟ ಕೆಟ್ಟ ಬೋಧನೆ, ದುರುಪದೇಶ; ದುರಾಲೋಚನೆ. ಉದಾ.— ಅವನ ಕುಮಂತ್ರ ಕೇಳಿ ಇವನು ಕುಣಿಯುತ್ತಾನೆ. [ಸಂ. ಕು = ಕೆಟ್ಟ, ಮಂತ್ರ = ಗುಟ್ಟಿನ ಆಲೋಚನೆ.]

೬. **ಅಭಿಮಂತ್ರಿತ** (ಈ) ಮಂತ್ರದಿಂದ ಶಕ್ತಿ ಪಡೆದ, ಮಂತ್ರ ಹೇಳಿ ಪವಿತ್ರಗೊಳಿಸಿದ. ಉದಾ.— ಅಭಿಮಂತ್ರಿತವಾದ ನೀರು ತಳಿದು ರೋಗ ಗುಣಪಡಿಸಿದ. [ಸಂ. ಅಭಿ = ಎದುರಾಗಿ, ಮಂತ್ರಿತ = ಮಂತ್ರ ಹೇಳಿದ.]

೭. **ಹಿಡುವಳಿ** (ಅ) ಸ್ವಾಧೀನದಲ್ಲಿರುವ ಭೂಮಿ, ಒಬ್ಬನ ಕೃಷಿಯಲ್ಲಿರುವ ಭೂಮಿ. ಉದಾ.— ಚಿಕ್ಕ ಹಿಡುವಳಿಯ ರೈತ. [ಕನ್ನಡ. ಹಿಡಿ = ವಶಮಾಡಿಕೋ ಇಂದ.]

೮. **ಹುತಾತ್ಮ** (ಇ) ಒಳ್ಳೇ ಕೆಲಸಕ್ಕಾಗಿ ಪ್ರಾಣಕೊಟ್ಟವ. ಉದಾ.— ಸ್ವಾತಂತ್ರ್ಯ ಯುದ್ಧದಲ್ಲಿ ಹುತಾತ್ಮನಾದ. [ಸಂ= ಹುತ = ಅಗ್ನಿಗೆ ಅರ್ಪಿಸಿದ, ಆತ್ಮ = ಜೀವ.]

೯. **ಹೂಲಿ** (ಇ) ಬೊಬ್ಬೆ, ಕೂಗಾಟ, ಗಲಾಟೆ, ಗೊಂದಲ. ಉದಾ.— ಊರಲ್ಲೆಲ್ಲ ಹೂಲಿ ಎದ್ದಿತು. [ಕನ್ನಡ— ಹುಯಿಲು ಶಬ್ದದ ರೂಪಾಂತರ?]

೧೦. **ಜಾಳು** (ಈ) ಬಟ್ಟೆಯಲ್ಲಿ ದೂರ ದೂರ ನೇಯ್ಗೆ ಇರುವುದು, ಆದ್ದರಿಂದ ಯಾವುದೇ ಅಧಮ ಮಟ್ಟದ ಕೆಲಸ, ನಿರುಪಯೋಗಿ. ಉದಾ: ಜಾಳು ಬಟ್ಟೆ, ಜಾಳು ಕೆಲಸ. [ಸಂ. ಜಾಲ = ಬಲೆ—ಇಂದ?]

೧೧. **ಗಾಳು** (ಅ) ಕೆಲಸಕ್ಕೆ ಬಾರದ; ಹಾಳು; ವ್ಯರ್ಥ; ತುಚ್ಛ; ಒರಟ. ಉದಾ.— ಹೋದ ಕೆಲಸ ಗಾಳಾಯ್ತು; ಗಾಳು ಮನುಷ್ಯ. [ಕನ್ನಡ-ಕಾಳ್ = ಕೆಟ್ಟದ್ದು-ಇಂದ]

೧೨. **ಜಾಪ್ಯ** (ಅ) ವಿಳಂಬ. ಕಾಲಹರಣ; (ಕೆಲಸ ಮಾಡದೆ) ಬರೇ ಎಣಿಕೆ ಹಾಕುವಿಕೆ; ಸೋಮಾರಿತನ. ಉದಾ.— ಸರಕಾರೀ ಕಚೇರಿಯ ಜಾಪ್ಯ; [ಸಂ. ಜಪ್ = ಜಪಮಾಡು—ಇಂದ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂಬುದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	”	...	ಉತ್ತಮ
೧೧—೧೨	”	...	ಅತ್ಯುತ್ತಮ

ಕೋಕೋ

ಡಾ. ವೈ. ಎಸ್. ಲೂಯಿಸ್

ಮೈಸೂರು–ಮಂಗಳೂರು ರಸ್ತೆಯಲ್ಲಿ ಕೊಡಗನ್ನು ದಾಟಿ ಸುಳ್ಯ.ಸಂಪಾಜೆ ಪುತ್ತೂರು ಮುಂತಾದ ಊರುಗಳನ್ನು ಕಂಡಾಗ ನಮ್ಮ ಗಮನಕ್ಕೆ ಬರುವುದು ಅಲ್ಲಿನ ಅಡಿಕೆ. ತೆಂಗು ಮುಂತಾದ ತೋಟಗಳ ನಡುವೆ ಈಗ ಸೊಂಪಾಗಿ ಬೆಳೆಯುತ್ತಿರುವ ಕೋಕೋ ಗಿಡಗಳು. -ದೊಡ್ಡ ಎಲೆಗಳೂ ಮರದ ಕಾಂಡಕ್ಕೆ ಕಚ್ಚಿಕೊಂಡ ಉದ್ದವಾದ ಹಸಿರು–ಹಳದಿ ಹಣ್ಣುಗಳೂ ಈ ಚಿಕ್ಕ ಮರವನ್ನು ಸುಂದರವಾಗಿಡುತ್ತವೆ. ಹಣ್ಣಿನೊಳಗಣ ಬೀಜಗಳಿಗೆ ಹಸಿ ಸ್ಥಿತಿಯಲ್ಲೇ ಕಿಲೋಗೆ ೧೨–೧೪ ರೂಪಾಯಿಗಳು ದೊರೆಯುತ್ತಿರುವುದರಿಂದ ಈಗ ಎಲ್ಲಾ ತೋಟಗಾರರೂ ಸಸಿ ಮಾರುವವರಿಂದ ಸಾವಿರಾರು ಸಸಿಗಳನ್ನು ಕೊಂಡು ತಮ್ಮ ತೋಟಗಳಲ್ಲಿ ತೆರವಿದ್ದ ಸ್ಥಳಗಳಲ್ಲೆಲ್ಲಾ ನೆಟ್ಟು ಬಹಳ ಆಸಕ್ತಿಯಿಂದ ಬೆಳೆಸುತ್ತಿದ್ದಾರೆ. ಈ ಹೊಸ ಬೆಳೆ ದಕ್ಷಿಣ ಕನ್ನಡದ ರೈತರಿಗೆ ಬಂಗಾರವಾಗಿದೆ.

ಕೋಕೋ ಬೆಳೆ ಕೇರಳ, ತಮಿಳುನಾಡು, ಕೊಡಗು ಮುಂತಾದ ಪ್ರದೇಶಗಳಲ್ಲೂ ದಿನ ದಿನಕ್ಕೆ ಹೆಚ್ಚುತ್ತಿದೆ. ಉತ್ತಮ ನೆಲ, ತಂಪು ವಾತಾರಣ, ಒಳ್ಳೆ ಮಳೆ ಅಥವಾ ನೀರಾವರಿಯಲ್ಲಿ ಮಾತ್ರ ಚೆನ್ನಾಗಿ ಬೆಳೆ ತೆಗೆಯಬಹುದೆಂಬ ನಂಬಿಕೆ ಹಿಂದೆ ಇತ್ತು. ಆದರೆ ಈಗ ಕೋಕೋ ಹಲವಾರು ತೆರನ ವಾತಾವರಣಗಳಿಗೆ ಸುಲಭವಾಗಿ ಒಗ್ಗಿಕೊಳ್ಳಬಹುದೆಂದು ತಿಳಿದುಬಂದಿದೆ. ಸಮುದ್ರ ಮಟ್ಟದಲ್ಲಿ, ಎತ್ತರದಲ್ಲಿ, ಉಷ್ಣವಲಯದ ಹವೆಯಲ್ಲಿ, ಸಮಶೀತೋಷ್ಣ ವಾತಾವರಣದಲ್ಲಿ ಕೂಡ ಇದು ಚೆನ್ನಾಗಿ ಬೆಳೆಯಬಲ್ಲದು. ನೀರಿನ ಸೌಲಭ್ಯ ಚನ್ನಾಗಿರಬೇಕಷ್ಟೆ. ಮೈಸೂರಿನ ಮಾನಸಗಂಗೋತ್ರಿಯ ತೋಟದಲ್ಲಿ ಹಾಕಿದ ೩೦–೪೦ ಗಿಡಗಳೂ ಸಮೃದ್ಧವಾಗಿ ಬೆಳೆದು ಈಗ ಫಲ ಬಿಡುತ್ತಿವೆ.

ಥೀಯೋಬ್ರೋಮ ಕಕಾವೊ ಎಂಬ ಶಾಸ್ತ್ರೀಯ ಹೆಸರಿನ ಕೋಕೋ ಗಿಡದ ತವರು ಮಧ್ಯ ಅಮೇರಿಕ, ಆದರೆ ಈಗ ಅದನ್ನು ಹೆಚ್ಚಾಗಿ ಬೆಳೆಯುತ್ತಿರುವುದು



ಕೋಕೋ ಗಿಡ ಕಾಯಿ, ಹೂವು ಮತ್ತು ಬೀಜ

ಆಫ್ರಿಕದ ಘಾನಾ, ಇಂಡೋನೇಶಿಯ, ಮಲಯ ಮುಂತಾದ ದೇಶಗಳಲ್ಲಿ ಪ್ರಪಂಚದ ಇಪ್ಪತ್ತು ಲಕ್ಷ ಟನ್ನುಗಳ ಕೋಕೋ ಬೀಜಗಳ ಬೇಡಿಕೆಯಲ್ಲಿ ಅರ್ಧಕ್ಕೂ ಹೆಚ್ಚು ಘಾನಾ ದೇಶದಿಂದಲೇ ಬರುತ್ತವೆ.

ಮೆಕ್ಸಿಕೋ ದೇಶವನ್ನು ಅಜಟೆಕ್ಕರು ಆಳುತ್ತಿದ್ದ ಕಾಲದಲ್ಲಿ ಕೋಕೋ ಬೀಜಗಳು ಬಹಳ ಶ್ರೇಷ್ಠವಾಗಿ ಪರಿಗಣಿಸಲ್ಪಡುತ್ತಿದ್ದವು. ಆ ಬೀಜಗಳನ್ನು ಅಜಟೆಕ್ ಇಂಡಿಯ ನ್ನರು ಚಲಾವಣೆ ನಾಣ್ಯಗಳಂತೆ ಉಪ ಯೋಗಿಸುತ್ತಿದ್ದರು. ಹುರಿದ ಬೀಜಗಳಿಂದ ತಯಾರಿಸಿದ ಚಾಕ್ಲೆಟ್ ಎಂಬ ಪಾನೀಯ ವನ್ನು ಶ್ರೀಮಂತರು ಕುಡಿಯುತ್ತಿದ್ದರು. ಮಾಂಟೆ ಜ್ಯೂಮ ಚಕ್ರವರ್ತಿಯು ದಿನಕ್ಕೆ ಹಲವಾರು ಬಾರಿ ಈ ಪಾನೀಯವನ್ನು ತೆಗೆದುಕೊಳ್ಳುತ್ತಿ ದ್ದನಂತೆ. ಅವನನ್ನು ಅಜಟೆಕ್ ಜನರು ದೇವತೆ ಯೆಂದು ಕರೆಯುತ್ತಿದ್ದುದರಿಂದ ಕೋಕೋ, "ದೇವತೆಗಳ ಆಹಾರ" ಎಂದು ಕರೆಯಲ್ಪಟ್ಟಿತು. ಥೀಯೋಸ್ ಎಂದರೆ ಗ್ರೀಕ್ ಭಾಷೆಯಲ್ಲಿ ದೇವತೆಯೆಂದು ಅರ್ಥ. ಆದುದರಿಂದಲೆ ಕೋಕೋ ಮರದ ಶಾಸ್ತ್ರೀಯ ಹೆಸರನ್ನು ಥೀಯೋ ಬ್ರೋಮ ಕಕಾವೊ ಎಂದಿಟ್ಟರು.

ಅಜಟೆಕ್ ಇಂಡಿಯನ್ನರು ಕೋಕೋ ಬೀಜ ಗಳನ್ನು ಹುರಿದು, ಸಿಪ್ಪೆ ತೆಗೆದು, ನುಣ್ಣಗೆ ಅರೆದು ಒಂದು ಕಡೆಯುವ ಪಾತ್ರೆಯಲ್ಲಿ ಹಾಕಿ, ನಂತರ ಸಾಕಷ್ಟು ನೀರು, ಕೆಂಪು ಮೆಣಸಿನ ಕಾಯಿ, ವೆನಿಲ್ಲಾ ಬೆರೆಸಿ ಕಡೆಯುತ್ತಿದ್ದರು. ಇದು ನಾವು ಮಜ್ಜಿಗೆ ಕಡೆಯುವಂತೆಯೇ ಇರುತ್ತಿತ್ತು. ಕಡೆದಾಗ ನೊರೆನೊರೆಯಾದ ಪಾನೀಯ ದೊರೆಯುವುದು. ಹೀಗೆ ಕಡೆಯುವಾಗ ಚಾಕ್ಲೆಟ್ ಎನ್ನುವಂತೆ ಶಬ್ದ ಬರುತ್ತಿದ್ದುದರಿಂದ ಪಾನೀಯಕ್ಕೆ ಅದೇ ಹೆಸರು ಬಂದಿತು. ಈಗ ನಾವು ತಿನ್ನುವ ಚಾಕಲೇಟ್ ಎಂಬ ಮಿಠಾಯಿಯ ಹೆಸರೂ ಹೀಗೇಯೇ ಬಂದದ್ದು.

ಅಮೇರಿಕದಿಂದ ಸ್ಪೇನ್ ದೇಶಕ್ಕೆ ಸೈನಿಕರು ಕೋಕೋ ಬೀಜಗಳನು ತಂದರು. ಆದರೆ ಇಲ್ಲಿ ಅದನ್ನು ಮೆಣಸಿನಕಾಯಿ ಜೊತೆ ಬೆರೆಸಿ ಖಾರದ ಪಾನೀಯ ಮಾಡದೆ, ಸಕ್ಕರೆ, ಹಾಲು ಬೆರೆಸಿ ಸಿಹಿ ಪಾನೀಯ ತಯಾರಿಸಿದರು. ಕೋಕೋ ಪಾನೀಯ ಶೀಘ್ರದಲ್ಲೇ ಯುರೋಪಿನಾದ್ಯಂತ ಜನಪ್ರಿಯವಾಯಿತು. ಕಾಲಕ್ರಮೇಣ ಬೀಜ ಗಳಿಂದ ಚಾಕಲೇಟ್ ಮಿಠಾಯಿಯನ್ನೂ ತಯಾ ರಿಸಿದರು. ಪ್ರಪಂಚದಲ್ಲೆಲ್ಲ ಈಗ ಚಾಕಲೇಟ್ ಪ್ರಸಿದ್ಧವಾಗಿವೆ. ಕೇಕ್, ಐಸ್‌ಕ್ರೀಮ್, ಮಿಠಾಯಿಗಳು ಮುಂತಾದವುಗಳಲ್ಲಿ ಇದನ್ನು ಯಥೇಚ್ಛವಾಗಿ ಬಳಸುತ್ತಿದ್ದಾರೆ. ಇಪ್ಪತ್ತು ಲಕ್ಷ ಟನ್ನುಗಳಷ್ಟು ಕೋಕೋ ಬೀಜ ಗಳು ಹಲವಾರು ದೇಶಗಳಲ್ಲಿ ಉತ್ಪತ್ತಿ ಯಾಗುತ್ತಿವೆ. ಭಾರತದಲ್ಲಿ ಈಗ ವರ್ಷಕೆ ಕೇವಲ ಒಂದು ಸಾವಿರ ಟನ್ನು ಬೀಜ ಉಪ ಯೋಗವಾಗುತ್ತಿದೆ. ಇದೆಲ್ಲ ಹೊರಗಿನಿಂದ ಆಮದಾಗುತ್ತಿತ್ತು. ಒಂದು ವ್ಯಾಪಾರಿ ಸಂಸ್ಥೆಯ ಸತತ ಪ್ರಯತ್ನದಿಂದ ಭಾರತದಲ್ಲೂ ಕೋಕೋ ಬೆಳೆಯಲು ಪ್ರಾರಂಭಿಸಲಾಯಿತು. ಈಗ ವರ್ಷಕ್ಕೆ ೧೫೦–೨೦೦ ಟನ್ನು ಬೀಜ ಉತ್ಪತ್ತಿಯಾಗುತ್ತಿದೆ. ಇದು ಇನ್ನು ಕೆಲವೇ ವರ್ಷಗಳಲ್ಲಿ ಅಧಿಕವಾಗಿ, ನಾವು ಬೀಜಗಳನ್ನು ರಫ್ತು ಮಾಡುವ ಹಂತ ಮುಟ್ಟಬಹುದು.

ಕೋಕೋ ಮರ ವರ್ಷವೆಲ್ಲಾ ಹಣ್ಣು ಬಿಡುತ್ತಿರುತ್ತದೆ. ಆದರೆ ಮಳೆಗಾಲದಲ್ಲೇ ಅಧಿಕ ಫಸಲು. ಇದರಲ್ಲಿ ಕ್ರಿಯುಲ್ಲೊ, ಫಾರೆಸ್ಟಿರೊ ಎಂದು ಎರಡು ಜಾತಿ. ಕ್ರಿಯುಲ್ಲೊ ಗುಲಾಬಿ ಬಣ್ಣದ್ದು, ಹೊರಗೆ ತರಿತರಿ ಯಾಗಿರುತ್ತದೆ. ಬೀಜಗಳು ಒಳಗೆ ಬಣ್ಣ ಹೊಂದಿರುವದಿಲ್ಲ. ಫಾರೆಸ್ಟಿರೋ ಹಣ್ಣು ಕಿತ್ತಳೆ ಹಳದಿ ಬಣ್ಣ, ಹೊರಗೆ ನುಣುಪಾಗಿರು ತ್ತದೆ. ಬೀಜಗಳು ಒಳಗೆ ನೇರಳೆ ಬಣ್ಣ ಹೊಂದಿ ರುತ್ತವೆ. ಭಾರತದಲ್ಲಿ ಫಾರೆಸ್ಟಿರೋ ಜಾತಿಯ ಬೆಳೆಯೇ ಪ್ರಧಾನವಾದದ್ದು.

ಪಕ್ವವಾದ ಹಣ್ಣುಗಳನ್ನು ಕಿತ್ತು, ಮರದ ತುಂಡಿನಿಂದ ಮಧ್ಯಭಾಗದಲ್ಲಿ ಹೊಡೆದಾಗ ಎರಡು ಭಾಗವಾಗಿ ಒಳಗಣ ತಿರುಳೂ ಬೀಜ ಗಳೂ ಹೊರಬರುತ್ತವೆ. ಒಂದು ಅಡಿ ಉದ್ದದ ಈ ಹಣ್ಣುಗಳಿಂದ ೨೫ರಿಂದ ೪೦ ರಷ್ಟು ಬಾದಾಮಿ ಯಾಕಾರದ, ಒಂದು ಅಂಗುಲ ದಪ್ಪವಿರುವ ಬೀಜಗಳನ್ನು ಪಡೆಯಬಹುದು–ಬೀಜಗಳ ಮೇಲೆ

ಸಿಹಿ ರುಚಿಯ ಹಣ್ಣಿನ ತಿರುಳು ಇರುತ್ತದೆ. (ಇವನ್ನು ತಿನ್ನಲು ಅಳಿಲುಗಳು ಹಣ್ಣುಗಳನ್ನು ನಷ್ಟಮಾಡುವುದು ಸಾಮಾನ್ಯ.) ಹೊರತೆಗೆದ ಬೀಜಗಳನ್ನು ಆದಷ್ಟು ಬೇಗ ಹುದುಗು ಬರಲು ಹಾಕಬೇಕು. ಇದಕ್ಕಾಗಿ ೩೦–೪೦ ಕಿಲೋ ಬೀಜಗಳನ್ನು ತಳದಲ್ಲಿ ರಂಧ್ರಗಳಿರುವ ಮರದ ಪೆಟ್ಟಿಗೆಯಲ್ಲಿ ತುಂಬಿಡುತ್ತಾರೆ. ಕಡಿಮೆ ಇದ್ದರೆ ಚಿಕ್ಕ ಪೆಟ್ಟಿಗೆಗಳಲ್ಲೋ ಬಿದಿರಿನ ಬುಟ್ಟಿಗಳಲ್ಲೋ ಹಾಕಿ ಇಡಬಹುದು. ಶಾಖವಿರುವಂತೆ ಮೇಲೆ ಗೋಣಿ ತಟ್ಟು ಹೊದಿಸುತ್ತಾರೆ. ಜೀವಾಣುಗಳ ಕ್ರಿಯೆಯಿಂದ ಹುದುಗು ಬಂದು, ಶಾಖ ಉತ್ಪತ್ತಿಯಾಗಿ, ಮೇಲಿನ ತಿರುಳು ಕರಗಿ ರಂಧ್ರಗಳ ಮೂಲಕ ಕಸ ಕೆಳಗೆ ಹರಿದುಹೋಗುತ್ತದೆ. ೫–೬ ದಿನಗಳ ಈ ಸಂಸ್ಕರಣೆಯಿಂದ ಹಲವು ಅಪೇಕ್ಷಿತ ಪರಿಣಾಮಗಳು ಉಂಟಾಗುತ್ತವೆ. ಶಾಖದಿಂದ ಬೀಜದ ಮೊಳಕೆ ಸತ್ತುಹೋಗುತ್ತದೆ. ಒಗಚಿನ ರುಚಿಯ ನೇರಳೆ ಬಣ್ಣದ ಪದಾರ್ಥಗಳು ನಷ್ಟ ಹೊಂದಿ ಒಳಗೆ ಕಡು ಕಂದು ಬಣ್ಣ ಉಂಟಾಗುತ್ತದೆ ಹಾಗೂ ಹಲವಾರು ಸುವಾಸನೆಯ ಪದಾರ್ಥಗಳು ಉತ್ಪತ್ತಿಯಾಗುತ್ತವೆ.

ಹೀಗೆ ಸಂಸ್ಕರಿಸಿದ ಬೀಜಗಳನ್ನು ಬಿಸಿಲಿನಲ್ಲಿ ಅಥವಾ ಮಳೆಗಾಲವಾದರೆ ಒಲೆಗಳ ಶಾಖದಿಂದ ಒಣಗಿಸುತ್ತಾರೆ. ಈ ಕಡು ಕಂದು ಬಣ್ಣದ ಬೀಜಗಳೇ ಪ್ರಪಂಚದ ಮಾರುಕಟ್ಟೆಗಳಿಗೆ ಬರುವ ಕೋಕೋ. ಸರಿಯಾಗಿ ಹುದುಗು ಬರಿಸಿ ಒಣಗಿಸಿದರೇನೇ ಅದಕ್ಕೆ ಒಳ್ಳೆ ಬೆಲೆ ಬರುವುದು. ತಜ್ಞರು ಅವುಗಳನ್ನು ಪರೀಕ್ಷಿಸಿ ಬೆಲೆ ಕಟ್ಟುತ್ತಾರೆ. ಕೋಕೋ ಬೀಜಕ್ಕೆ ಈಗ ಒಳ್ಳೆ ಬೇಡಿಕೆ. ಸಸಿ ಹಾಕಿ ಚೆನ್ನಾಗಿ ಬೆಳೆಸಿದರೆ ಕೋಕೋ ಮರ ೨–೩ ವರ್ಷಗಳಲ್ಲಿ ಫಲ ಕೊಟ್ಟು ೩೦–೪೦ ವರ್ಷ ಜೀವಂತವಾಗಿರುತ್ತದೆ. ಆದುದರಿಂದ ಕರ್ನಾಟಕ, ಕೇರಳಗಳಲ್ಲಿ ಅನೇಕರು ಇದರ ಸಾಗುವಳಿಗೆ ಕೈಹಾಕಿದ್ದಾರೆ.

ಕೋಕೋ ಉಪಯೋಗಿಸುವವರು ತಮ್ಮ ಕಾರಖಾನೆಗಳಲ್ಲಿ ಬೀಜಗಳನ್ನು ಮೊದಲು ಶಾಖದಲ್ಲಿ ಹುರಿಯುತ್ತಾರೆ. ಆಗ ಬೀಜದ ಹೊರಗಣ ಸಿಪ್ಪೆ ಬಿಟ್ಟುಕೊಳ್ಳುತ್ತದೆ. ಯಂತ್ರಗಳಲ್ಲಿ ಸಿಪ್ಪೆಯನ್ನು ಬೇರ್ಪಡಿಸುತ್ತಾರೆ. ಹುರಿಯುವುದರಿಂದ ಬೀಜವು ಇನ್ನೂ ಕಂದು ಬಣ್ಣಕ್ಕೆ ತಿರುಗಿ ಒಳಗಡೆ ಹಲವಾರು ಸುವಾಸನೆಯ ಪದಾರ್ಥಗಳು ಉತ್ಪತ್ತಿಯಾಗುತ್ತವೆ. ಕೋಕೋದ ವಿಶಿಷ್ಟ ವಾಸನೆಯುಳ್ಳ ಈ ಬೀಜಗಳಿಗೆ 'ನಿಬ್ಸ್' ಎಂದು ಹೆಸರು (ಲೇಖಣಿಯ ನಿಬ್ಬಿನ ಆಕಾರವಲ್ಲಿರುತ್ತವೆ). ಇವುಗಳಲ್ಲಿ ಕಡು ಕಂದು ಬಣ್ಣವುಳ್ಳ ಕಹಿ ರುಚಿಯ ರಾಸಾಯನಿಕಗಳೂ ಉತ್ತೇಜಕ ಗುಣವುಳ್ಳ ಥಿಯೋಬ್ರೋಮಿನ್ ಮತ್ತು ಕ್ಯಾಫೀನ್ ಪದಾರ್ಥಗಳೂ ಶೇಕಡ ೫೦ ಭಾಗದಷ್ಟು ಜಿಡ್ಡೂ ಇರುತ್ತವೆ. ಈ ಜಿಡ್ಡು ಸುಲಭವಾಗಿ ಮೈ ಶಾಖಕ್ಕೆ ಕರಗುವ ಮತ್ತು ಉತ್ತಮ ರುಚಿಯುಳ್ಳ ಗುಣಗಳನ್ನು ಹೊಂದಿರುತ್ತದೆ.

ಹುರಿದ ಕೋಕೋ 'ನಿಬ್'ಗಳನ್ನು ಯಂತ್ರದಲ್ಲಿ ಅರೆದು, ಶಾಖದಿಂದ ಮಿದುವಾಗಿಸಿ ಬಹು ಹೆಚ್ಚಿನ ಒತ್ತಡ ಕೊಟ್ಟು ಹೆಚ್ಚು ಭಾಗ ಜಿಡ್ಡನ್ನು ತೆಗೆದುಬಿಡುತ್ತಾರೆ. ಇವಕ್ಕೆ ಕೋಕೋ ಬೆಣ್ಣೆ ಎಂದು ಹೆಸರು. ಜಿಡ್ಡು ತೆಗೆದ ಕೋಕೋವನ್ನು ಪುಡಿ ಮಾಡಿದಾಗ ದೊರೆಯುವುದು ಕೋಕೋ ಪುಡಿ. ಇದನ್ನು ಮಿಠಾಯಿಗಳು, ಪಾನೀಯಗಳು ಮತ್ತು ಬೇಕರಿ ತಿಂಡಿಗಳಲ್ಲಿ ಉಪಯೋಗಿಸುತ್ತಾರೆ. ಪುಡಿಯನ್ನು ಸಕ್ಕರೆಯೊಂದಿಗೆ ಬೆರೆಸಿ ಕುಡಿಯುವ ಚಾಕಲೇಟ್ ತಯಾರಿಸುತ್ತಾರೆ. ಈ ಪುಡಿಯನ್ನು ಹಾಲಿನ ಜೊತೆ ಕದಡಿ ಕುಡಿಯುವುದು ವಾಡಿಕೆ. ಆದರೆ ಕಾಫೀ, ಟೀ ಪಾನೀಯಗಳಲ್ಲಿ ಪುಡಿಗಳಿಂದ ಸಾರ ತೆಗೆದು ಉಪಯೋಗಿಸುವಂತೆ ಇಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲ. ಕೋಕೋ ನೀರಿನಲ್ಲಿ ಸಾರ ಬೀಡುವುದಿಲ್ಲ. ಅದನ್ನು ಸುಮ್ಮನೆ ಕದಡಿ ಹಾಗೇ ಕುಡಿಯಬೇಕು.

ದಕ್ಷಿಣಕನ್ನಡದ ಬೆಳೆಗಾರರು ಹಸಿ ಕೋಕೋ ಬೀಜಗಳನ್ನು ಸುಳ್ಯ, ಪುತ್ತೂರು ಮುಂತಾದ ಕಡೆ ಕಂಪನಿಗಳವರ ಡಿಪೋಗಳಿಗೆ ತಂದು ಮಾರುತ್ತಿದ್ದಾರೆ. ಇದು ಶ್ರಮದ ಕೆಲಸ. ಹಣ್ಣಿನಿಂದ ಬೀಜ ತೆಗೆದ ಕೆಲವೇ ಗಂಟೆಗಳೊಳಗೆ ಡಿಪೋ ತಲಪಬೇಕು. ಇಲ್ಲವಾದರೆ ಹುದುಗ ಬರಲು ಪ್ರಾರಂಭವಾಗುತ್ತದೆ. ದೂರದಿಂದ ಬರುವವರಿಗೆ ಹೆಚ್ಚು ಕಾಲ, ಹಣ ವ್ಯಯವಾಗುತ್ತದೆ. ಬೀಜ ಸರಿಯಿಲ್ಲದಿದ್ದರೆ

ಡಿಪೋದವರು ತಿರಸ್ಕರಿಸಬಹುದು. ಇಲ್ಲ, ಬೆಲೆ ಕಡಿಮೆ ಕೊಡಬಹುದು. ದಿನೇ ದಿನೇ ಕೋಕೋ ಬೆಳೆ ಅಧಿಕವಾಗುತ್ತಿರುವುದರಿಂದ ಡಿಪೋಗಳವರು ಬಂದ ಬೀಜಗಳನ್ನೆಲ್ಲಾ ಕೊಂಡು ಸಂಸ್ಕರಿಸುವುದೂ ಕಷ್ಟವಾಗುತ್ತದೆ.

ಈ ಕಾರಣಗಳಿಂದ — ಬೆಳೆಯುವವರೇ ಬೀಜಗಳನ್ನು ಹುದುಗು ಬರಿಸಿ, ನಂತರ ಅದನ್ನು ಒಣಗಿಸಿದರೆ ಎಲ್ಲರಿಗೂ ಅನುಕೂಲ. ಕಂಪನಿಗಳವರು ಒಣಗಿಸಿದ ಬೀಜಗಳನ್ನು ಕೊಳ್ಳಲು ಇಷ್ಟ ಪಡುತ್ತಾರೆ. ಅವನ್ನು ಹೆಚ್ಚು ಕಾಲ ಸಂಗ್ರಹ ಮಾಡಬಹುದು. ಬೆಳೆಯುವವರಿಗೂ ಇದು ಅನುಕೂಲ. ತಮಗೆ ಬೇಕಾದಾಗ, ಬೀಜಗಳಿಗೆ ಹೆಚ್ಚು ಬೆಲೆ ಸಿಗುವ ಸಮಯದಲ್ಲಿ ಮಾರಿಕೊಳ್ಳಬಹುದು. ಆದರೆ ಬೀಜಗಳನ್ನು ಸರಿಯಾದ ರೀತಿಯಲ್ಲಿ ಹುದುಗು ಬರಿಸಿ, ಸರಿಯಾದ ಹದಕ್ಕೆ ಒಣಗಿಸಬೇಕು.

ಈ ಕೆಲಸಕ್ಕೆ ಬೇಕಾದ ತಂತ್ರಜ್ಞಾನ ನಮ್ಮ ಬೆಳೆಗಾರರಿಗೆ ತಿಳಿಯದು. ಕೆಲವು ಕಂಪನಿಗಳವರ ಡಿಪೋಗಳಲ್ಲೂ ಈ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಿಂದ ಒಣಗಿಸಿದ ಬೀಜಗಳನ್ನು ಹುರಿದು ಕೋಕೋ ಪುಡಿ ಮುಂತಾದುವನ್ನು ತಯಾರಿಸಿದಾಗ ಅವು ಉತ್ತಮವಾದ ಸುವಾಸನೆಯನ್ನು ಹೊಂದಿರುವುದಿಲ್ಲ.

ಈ ದಿಶೆಯಲ್ಲಿ ಮೈಸೂರಿನ ಆಹಾರ ಸಂಶೋಧನಾಲಯವು ಇತ್ತೀಚೆಗೆ ಹೆಚ್ಚು ಕೆಲಸ ಮಾಡಿದೆ. ಬೆಳೆಗಾರರು ಚಿಕ್ಕ ಮತ್ತು ದೊಡ್ಡ ಪ್ರಮಾಣಗಳಲ್ಲಿ ತಾವೇ ಯಾವ ರೀತಿ ಬುಟ್ಟಿ–ತಟ್ಟಿ ಮುಂತಾದವುಗಳಲ್ಲಿ ಬೀಜಗಳನ್ನು ತುಂಬಿ ಹುದುಗು ಬರಿಸಬಹುದು, ಅನುಸರಿಸಬೇಕಾದ ಕ್ರಮಗಳೇನು ಎನ್ನುವುದನ್ನು ಅದು ತಿಳಿಸುತ್ತಿದೆ; ಮಾಡಿ ತೋರಿಸುತ್ತಿದೆ. ಅನಂತರ ಆ ಬೀಜಗಳನ್ನು ಒಣಗಿಸಲು ಉಪಯೋಗಿಸಬಹುದಾದ ಯಂತ್ರ ಸಲಕರಣೆಗಳ ಬಗೆಗೂ ತಿಳಿವಳಿಕೆ ನೀಡುತ್ತಿದೆ. ಕಂಪನಿಗಳವರೂ ಬೆಳೆಗಾರರೂ ಈ ಕೆಲಸದಲ್ಲಿ ಸಹಕರಿಸುತ್ತಿದ್ದಾರೆ.

ನುಣುಪಾಗಿ ಅರೆದ ಕೋಕೋ ಬೀಜಗಳು 'ಚಾಕ್‌ಲೇಟ್ ಲಿಕರ್' ಎಂಬ ಸುಲಭವಾಗಿ ಕರಗುವ ಪದಾರ್ಥ ಕೊಡುತ್ತದೆ. ಇದಕ್ಕೆ ಸಕ್ಕರೆ ಬೆರೆಸಿ, ಕೋಕೋವಿನ ಕಹಿ ರುಚಿಯನ್ನು ಒಡೆದು ಸಾಧಾರಣ ಚಾಕಲೇಟ್ ತಯಾರಿಸುವುದನ್ನು ಐರೋಪ್ಯರು ಕಲಿತರು. ಡೆನ್‌ಮಾರ್ಕಿನ ಒಬ್ಬ ಬುದ್ಧಿವಂತ ಇದಕ್ಕೆ ಗಟ್ಟಿ ಮಾಡಿದ ಹಾಲನ್ನು ಬೆರೆಸಿ 'ಮಿಲ್ಕ್ ಚಾಕ್‌ಲೇಟ್' ತಯಾರಿಸಿದ. ಇದು ಬಹು ಜನಪ್ರಿಯವಾಯಿತು. ಈಗ ನಾವು ಅಂಗಡಿಯಲ್ಲಿ ಕೊಳ್ಳುವ ಮಧುರ ರುಚಿಯ 'ಚಾಕಲೇಟ್ ಬಾರ್' ಹಾಲು, ಸಕ್ಕರೆ ಚಾಕಲೇಟ್ ಲಿಕರ್ ಬೆರೆಸಿ ತಯಾರಿಸಿದ್ದು. ಇದರ ರುಚಿಗೆ ಹೆಚ್ಚು ಜಿಡ್ಡು ಅಗತ್ಯ. ಆದುದರಿಂದ ಕೋಕೋ ಪುಡಿ ತಯಾರಿಸುವಾಗ ಹೊರ ತೆಗೆದ ಕೋಕೋ ಬೆಣ್ಣೆಯನ್ನು ಈ ಮಿಶ್ರಣಕ್ಕೆ ಹದವರಿತು ಬೆರೆಸುತ್ತಾರೆ. ಈ ಮಿಠಾಯಿ ಹೊರಗಿನ ವಾತಾವರಣದಲ್ಲಿ ಕರಗಿ ಹೋಗುತ್ತದೆ. ಆದುದರಿಂದ ಬೆಣ್ಣೆ ಕಾಗದ, ಅಲ್ಯುಮಿನಿಯಂ ಫಾಯಿಲ್ ಸುತ್ತಿ ರಕ್ಷಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಚಾಕ್‌ಲೇಟ್ ಮಿಶ್ರಣವನ್ನು ಕೇಕ್, ಮಿಠಾಯಿ, ಪಾನೀಯಗಳು ತಯಾರಿಸುವವರ ತಯಾರಿಕೆಯಲ್ಲಿ ಅಧಿಕವಾಗಿ ಉಪಯೋಗಿಸುತ್ತಾರೆ.

ಮಧ್ಯ ಮತ್ತು ದಕ್ಷಿಣ ಅಮೇರಿಕಗಳಲ್ಲಿ ಹುಟ್ಟಿದ ಕೋಕೋ ಗಿಡ ಈಗ ದಕ್ಷಿಣ ಕನ್ನಡದಲ್ಲಿ ವೃದ್ಧಿಸಿ ಫಲ ಕೊಡುತ್ತಿದೆ. ✡

ಸ್ತ್ರೀಯರಿಗೆ ಆರನೇ ಇಂದ್ರಿಯವೊಂದಿರುತ್ತದೆಂಬುದನ್ನಾಗಲಿ ಅವರು ಸೂಕ್ಷ್ಮಮತಿಗಳೆಂಬುದನ್ನಾಗಲಿ ನಾನು ಸುತರಾಂ ಒಪ್ಪುವುದಿಲ್ಲ. ಹಾಗಿದ್ದದ್ದೇ ಆದರೆ ಅವರು ತಿಂಗಳ ಕೊನೆಯಲ್ಲಿ ಗಂಡನ ಕಿಸೆಯಲ್ಲಿ ಕೈಯನ್ನೇಕೆ ಆಡಿಸುತ್ತಿದ್ದರು?

–ಎಸ್. ಡಿ. ಎಂ.

ಹೆಡ್‌ಲೈನ್ ಹೀರೊ

ಎನ್ಕೆ

ಅಹೋರಾತ್ರಿ ದುಡಿದು ತಪಶ್ಚರ್ಯೆ ಮಾಡಿ ತಮ್ಮ ತಪಸ್ಸಿನ ಫಲವಾಗಿ ಪತ್ರಿಕೆಗಳಲ್ಲಿ ಅವರ ಬಗ್ಗೆ ಹೆಡ್‌ಲೈನ್ ಸುದ್ದಿಗಳು ಬಂದರೆ ಅದೇನೂ ಮಹತ್ವದ್ದಲ್ಲ. ಆದರೆ ರಾತ್ರೋರಾತ್ರಿ ಏನೂ ಗೊತ್ತಿಲ್ಲದ ಅಪರಿಚಿತ ವ್ಯಕ್ತಿಯೊಂದು ಹೆಡ್‌ಲೈನ್ ಹೀರೊ ಆದರೆ ಅದು ಪ್ರಶಂಸನೀಯ. ಅಂಥವರು ಯಾರು? ಎಂದು ನೀವು ಹುಬ್ಬೇರಿಸಬಹುದು.

ಸುಮಾರು ಎರಡೂವರೆ ದಶಕಗಳ ಹಿಂದೆ ತೇನ್‌ಸಿಂಗ್ ಎವರೆಸ್ಟ್ ಶಿಖರ ಮುಟ್ಟಿ ರಾತ್ರೋರಾತ್ರಿ ಹೆಡ್‌ಲೈನ್ ಹೀರೋ ಆದ! ಅದರ ಹಿಂದಿನ ದಿನ ಈ ತೇನ್‌ಸಿಂಗ್ ಯಾರು ನಿಮಗೆ ಗೊತ್ತಿತ್ತೆ? ಸುಮಾರು ದಶಕದ ಹಿಂದೆ ನೀಲ್ ಆರ್ಮ್‌ಸ್ಟ್ರಾಂಗ್ ಪ್ರಥಮ ಚಂದ್ರಮಾನವನಾಗಿ ತನ್ನ ಪ್ರಥಮ ವಾಮನ ಪಾದಾರ್ಪಣ ಚಂದ್ರನ ಮೇಲ್ಭಾಗದ ಮೇಲೆ ಮಾಡಿ ವಿಶ್ವಮಾನವನಾಗಿ ಪತ್ರಿಕೆಗಳಲ್ಲಿ ಬೆಳಗಿದ. ಅವನ ಬಗ್ಗೆ ಆ ಮುಂಚೆ ನೀವು ಕೇಳಿದ್ದಿರಾ?

ಇದು ಸಿದ್ಧಿಯ ಯುಗವಲ್ಲ, ಪ್ರಸಿದ್ಧಿಯ ಯುಗ. ಅಂತೆಯೆ ಏನಕೇನ ಪ್ರಕಾರೇಣ ಮನುಷ್ಯ ಪ್ರಸಿದ್ಧ ಪಡೆಯಬೇಕು. ಇಂದಿನ ವಿಜ್ಞಾನಯುಗದಲ್ಲಿ ಕ್ಷಣದಲ್ಲಿ ಜಾಗತಿಕ ಪ್ರಸಿದ್ಧಿಯನ್ನು ಪಡೆಯಬಹುದು–ರೇಡಿಯೋದಲ್ಲಿ ಪತ್ರಿಕೆಗಳಲ್ಲಿ ಹೆಡ್‌ಲೈನ್ ಹಿಟ್ ಮಾಡಿದರೆ. ಮೊನ್ನೆ ಮೊನ್ನೆ ನೋಡಿದಿರಲ್ಲವೆ 'ಬಿಲ್ಲಾ' ಎಂಬ ಹೆಸರು ರಾತ್ರೋರಾತ್ರಿ ದೇಶದ ಮನೆಮನೆಗೂ ಬಾಯ್ಮಾತಾಗಿ ಬಿಟ್ಟಿತು. ಅವನ ಜೊತೆಗೆ 'ರಂಗಾ'ನೂ ಪ್ರಸಿದ್ಧಿ ಪಡೆದ.

ಏನಾದರೂ ಮಾಡಿ ಪ್ರಸಿದ್ಧಿ ಪಡೆಯಬೇಕು. ಇದು ಇಂದಿನ ಯುಗಧರ್ಮ. ದೈವದ ಬೆಂಬಲವಿದ್ದವರು ಹಬ್ಬದ 'ಬಂಪರ್ ಡ್ರಾ'ನಲ್ಲಿ ಬಹುಮಾನ ಪಡೆದು ಹತ್ತು ಲಕ್ಷಾಧೀಶರಾಗಿ ಹೆಡ್‌ಲೈನ್ ಹೀರೊ ಆಗಬಹುದು. ಆದರೆ ಎಲ್ಲರಿಗೂ ದೈವ ಮಾಲೆ ಹಾಕೀತೆ? ತೇನ್‌ಸಿಂಗ್, ಹಿಲ್ಯಾರಿ, ಆರ್ಮ್‌ಸ್ಟ್ರಾಂಗ್‌ರಂತೆ ಪ್ರಸಿದ್ಧಿ ಪಡೆದವರೂ ಕೇವಲ ದೈವಾನುಕೂಲದಿಂದಲೆ ಪ್ರಸಿದ್ಧಿ ಪಡೆದವರಲ್ಲ. ಅದರ ಹಿಂದೆ ಅವರ ಪುರುಷ ಪ್ರಯತ್ನವೂ ಇದೆ. ಇನ್ನುಳಿದದ್ದು 'ಬಿಲ್ಲಾ' ಪ್ರಸಿದ್ಧಿ. ಅಂತಹ ಸಾಹಸ ಮಾಡುವ ಧೈರ್ಯವಾದರೂ ಯಾರಿಗೆ? ಖೂನಿ, ದರೋಡೆಗಳ ಹೆಡ್‌ಲೈನ್ ಹೀರೊ ಆಗುವುದಕ್ಕೆ ತಲೆಯೂ ಬೇಕು, ಕಲೆಯೂ ಬೇಕು. ಅದು ನಮಗೆ ಆಳವಲ್ಲ ಬಿಡಿ.

ಮತ್ತೆ? ಕಾರಂತರ ಹಾಗೆ ಜ್ಞಾನಪೀಠ ಸಂಪಾದಿಸಲು ಶಕ್ಯವೆ? ಹಾ! ಹೊಳೆಯಿತು. ಮೊದಲೆ ಸಿದ್ಧಿ–ಪ್ರಸಿದ್ಧಿಗಳನ್ನು ಪಡೆದ ಕಾರಂತರು ಜ್ಞಾನಪೀಠದಿಂದ ಇನ್ನೂ ಪ್ರಸಿದ್ಧ ಪಡೆದರಷ್ಟೆ? ಹಾಗಾದರೆ ಒಂದು ಕೆಲಸ ಮಾಡಿರಿ. 'ಕಾರಂತರು ಕಾದಂಬರಿಕಾರರೆ?' ಎಂಬ ಹೆಡಿಂಗ್‌ನಲ್ಲಿ ಕಾರಂತರಿಗೆ ಕಾದಂಬರಿ ಬರೆಯುವುದೆ ಗೊತ್ತಿಲ್ಲ ಎಂದು ವಾಚಕರ ಕಾಲಂನಲ್ಲಿ ಒಂದು ಓಲೆ ಬರೆಯಿರಿ. ಅದಕ್ಕೆ

ಪ್ರತ್ಯುತ್ತರಗಳ ಸುರಿಮಳೆಯೆ ಸುರುವಾಗುತ್ತದೆಂಬಲ್ಲಿ ಸಂದೇಹವೇ ಇಲ್ಲ. ರಾತ್ರೋರಾತ್ರಿ ಪ್ರಸಿದ್ಧಿ ಪಡೆಯಲು ಇದಕ್ಕಿಂತ ಬೇರೆ ಹಾದಿ ಇದೆಯೆ? ಎಲ್ಲರೂ ಜನ್ಮ ಹೆಸರು ಎತ್ತಿಯೆ ನಿಮಗೆ ಉತ್ತರ ಬರೆಯಬೇಕಷ್ಟೆ? ಸಹಜವಾಗಿಯೆ ನೀವು ಹೆಡ್‌ಲೈನ್ ಹೀರೊ ಆಗುತ್ತೀರಿ.

ಈಗ ಕನ್ನಡ ಮ್ಯಾಟನಿ ಮೂರ್ತಿ ರಾಜಕುಮಾರ ಅಲ್ಲವೆ? ಅವರು ಹಾಡುಗಾರರಾಗಿಯೂ ಕನ್ನಡಿಗರ ಮನ ಸೂರೆಗೊಳ್ಳುತ್ತಿದ್ದಾರೆ. ಇದೇ ಸಂದರ್ಭ ನಿಮಗೆ ರಾಜಕುಮಾರರ ನಟನೆ ಒಂದು ಅಭಿನಯವೆ? ರಾಜಕುಮಾರರ ಹಾಡುಗಾರಿಕೆ ಒಂದು ಸಂಗೀತವೆ?

–ಬರೆಯಿರಿ ವಾಚಕರ ಕಾಲಂಗೆ ಒಂದು ಓಲೆ! ಕೀರ್ತಿಯ ಜೋಕಾಲಿಯ ಮೇಲೆ ಕೊಂಡೊಯ್ಯುತ್ತದೆ ಆ ಓಲೆ! ಆಗ ಹೆಡ್‌ಲೈನ್ ಹೀರೊ ಆಗೇ ಆಗುತ್ತೀರೆಂದು ಬೇರೆ ಹೇಳಬೇಕೆ?

ಆದರೆ ಒಂದು ಮಾತು. ಸ್ವರಗಳಲ್ಲಿ ಅಪಸ್ವರ ಎದ್ದು ಕಾಣುವಂತೆ ನಿಮ್ಮ ಓಲೆ ನಿಮ್ಮನ್ನು ಪ್ರಸಿದ್ಧಿಯ ಜೋಕಾಲಿಯ ಮೇಲೆ ಕೂರಿಸಿ, ಏರಿಸಿ, ಹಾರಿಸಬಹುದು. ಆದರೆ ಕರ್ಮಧರ್ಮ ಸಂಯೋಗದಿಂದ ಆ ಜೋಕಾಲಿಯ ಹಗ್ಗವೆ ನಿಮ್ಮ ಕುತ್ತಿಗೆಗೆ ಉರುಲಾದರೆ ನಾನು ಜವಾಬುದಾರನಲ್ಲ.

ವ್ಯ ತ್ಯ ಯ

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ! ದಿನ ಬೆಳಗಾದರೆ ಪತ್ರಿಕೆಯಲ್ಲಿ ಕಾಣುವ ಹೆಡ್‌ಲೈನ್ ಇದೇ. ಏನೋ ಒಂದು ವಿಶೇಷ ರೇಡಿಯೊ ಕಾರ್ಯಕ್ರಮ ಇರುತ್ತದೆ. ಕೇಳಬೇಕೆಂದು ಪೈರಿಯಲ್ಲಿ ಗುರುತಿಸಿಕೊಂಡಿರುತ್ತೇನೆ. ಆದರೆ ಅಂದೇ ಕರೆಕ್ಟ್ ಆಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ!

ಹಾಗೆಯೆ ಮನೆಯಲ್ಲಿ ವಿಶೇಷ ಸಮಾರಂಭ. ಹತ್ತು ಜನ ಅತಿಥಿಗಳು ಬಂದಿರುತ್ತಾರೆ. ಅಂದೇ ನಳದ ನೀರಿನ ಪೂರೈಕೆಯಲ್ಲಿ ವ್ಯತ್ಯಯ. ರೇಡಿಯೋದಲ್ಲೂ ಅದೇ ಸುದ್ದಿ. ಪತ್ರಿಕೆಯಲ್ಲೂ ಅದೇ.

ಕಂದೀಲಿನ ದೀಪ, ಭಾವಿಯ ನೀರು ಬಳಸುತ್ತಿದ್ದ ನಮ್ಮ ಹಿರಿಯರಿಗೆ ಇಂತಹ ವ್ಯತ್ಯಯಗಳು ಬರುತ್ತಲೆ ಇರಲಿಲ್ಲ. ವಿಜ್ಞಾನ ಬೆಳೆದಂತೆಲ್ಲ ಪರಾವಲಂಬಿತ್ವವೂ ಬೆಳೆಯುತ್ತಬಂತು. ಪರಾವಲಂಬಿತ್ವ ಬೆಳೆಯುತ್ತ ಬಂದಂತೆ ವ್ಯತ್ಯಯಗಳೂ ಬೆಳೆಯುತ್ತ ಬಂದವು. ವಿದ್ಯುತ್ ವ್ಯತ್ಯಯ, ನಳದ ವ್ಯತ್ಯಯ, ರೇಲ್ವೆ ವ್ಯತ್ಯಯ, ಬಸ್ ಓಡಾಟದಲ್ಲಿ ವ್ಯತ್ಯಯ! ಅವರಲ್ಲೂ ಈ ಸಲದ ಮನ್ಸೂನ್ ಮಾರಿಗೌತಣ! ವ್ಯತ್ಯಯ ಕೇಳಬೇಕೆ? ಸಿನಿಮಾಕ್ಕೆಂದು ಹೋದ ಮೂರು ನೂರು ರಸಿಕರು ತೇಲಿಕೊಂಡು ಕೊಚ್ಚಿಕೊಂಡು ಹೋಗಬೇಕೆ? ಇದು ಪ್ರಕೃತಿ ವಿಕೋಪದಿಂದಾದ ವ್ಯತ್ಯಯ. ರವ್‌ಜಾನಿನ ಇರಾಣದಲ್ಲಿ ಇಂತಹದೇ ಸಿನಿಮಾ ಥೇಟರ್‌ನಲ್ಲಿ ರಕ್ತಪಾತ! ಅದು ಒಂದು ಬಗೆಯ ವಿಪರೀತ ವ್ಯತ್ಯಯ.

ಹೇಳಿದೆನಲ್ಲ ಇದು ವ್ಯತ್ಯಯಗಳ ಯುಗ! ಕೇಂದ್ರ 'ಕಿಚಡಿ' ಕ್ಯಾಬಿನೆಟ್‌ನಲ್ಲಿ ವ್ಯತ್ಯಯ! ವಿಶ್ವವಿದ್ಯಾಲಯಗಳಲ್ಲಿ ಆಡಳಿತ, ವಿದ್ಯಾರ್ಥಿ, ಪ್ರಾಧ್ಯಾಪಕರಲ್ಲಿ ವ್ಯತ್ಯಯ. ಅಷ್ಟೇ ಏಕೆ–ಸಮಾಜ ಸಮಾಜದಲ್ಲಿ ವಿಷಮತೆಯ ವ್ಯತ್ಯಯ! ಮನೆ ಮನೆಯ ಸಂಸಾರದಲ್ಲಿ ವಿರಸ ವ್ಯತ್ಯಯ!

ಸಾಮರಸ್ಯ ಎಲ್ಲಾದರೂ ಉಂಟೆ? ಹುಡುಕಬೇಕು. ಹುಡುಕುವುದೆ ಬದುಕಿನ ಗುಟ್ಟು. ಸಿಗದಿದ್ದರೆ? ಇಲ್ಲ–ಸಿಗುವವರೆಗೂ ಹುಡುಕಬೇಕು. ಸಿಕ್ಕ ಮೇಲೆ ಸ್ವಾರಸ್ಯವೇನು ಬಂತು? ಸ್ವಾರಸ್ಯವಿರುವುದು ಸಾಮರಸ್ಯವನ್ನು ಹುಡುಕುವವರಲ್ಲಿ ರಸವಿದ್ದಲ್ಲಿ ಸಾರಸವಿರುತ್ತದೆ. ರಸವೇ ಬ್ರಹ್ಮ. ರಸೋ ವೈ ಸಃ

ರಸವೆ ಜನನ
ವಿರಸ ಮರಣ
ಸಮರಸವೆ ಜೀವನ!

ನಿಜ. ಆದರೆ ವ್ಯತ್ಯಯಗಳಿಂದ ಕೂಡಿದ ಈ ಜೀವನದಲ್ಲಿ ಸಮರಸ ಹೇಗೆ ಸಾಧ್ಯ? ಸಂಸಾರದ ರಥದ ಗಾಲಿಗಳು ಸಮನಾಗಿ ಓಡುತ್ತಿದ್ದರೆ ವ್ಯತ್ಯಯ ಬರುವುದಿಲ್ಲ. ಗಂಡ–ಹೆಂಡಿರಲ್ಲಿ ಹೊಂದಾಣಿಕೆ ಇದ್ದರೆ ಸಾಕು, ಸಂಸಾರದಲ್ಲಿ ವ್ಯತ್ಯಯವಿಲ್ಲ. ಸಂಸಾರದಲ್ಲಿ ವ್ಯತ್ಯಯವಿಲ್ಲದ ಮೇಲೆ ವಿದ್ಯುತ್ ಪೂರೈಕೆ, ನಳದ ಪೂರೈಕೆಯಲ್ಲಿ ವ್ಯತ್ಯಯವಾದರೆ ಅಭ್ಯಂತರವೇನೂ ಇಲ್ಲ. ಜಾತಿ–ಜಾತಿಗಳಲ್ಲಿ ಸಹಕಾರ, ಸಮಭಾವ ಇದ್ದರೆ ಸಮಾಜದಲ್ಲಿ ವ್ಯತ್ಯಯವಿಲ್ಲ. ದೇಶ ದೇಶಗಳ ನಡುವೆ ತಿಳುವಳಿಕೆಯ ತಿಳಿಬೆಳಗು ಮೂಡಿದರೆ ಪ್ರಪಂಚದ ಸ್ವಾಸ್ಥ್ಯಕ್ಕೆ ವ್ಯತ್ಯಯವಿಲ್ಲ. ವಿಜ್ಞಾನದಿಂದ ಅಜ್ಞಾನದ ಕೇಡಾದಾಗ ಆತ್ಮಾನಂದವುಂಟಾಗಿ ಸತ್ತೆಯಲ್ಲಿ ಸಾತ್ವಿಕತೆ ತಲೆದೋರಿ ತಮೋ–ರಜಗಳ ವ್ಯತ್ಯಯ ಏನೂ ಮಾಡಲಾರದು. ✡



ಅತಿ ದೊಡ್ಡ ಸಂಖ್ಯೆ

ಯಾವ ಮೂರು ಅಂಕೆಗಳಿಂದ ಅತಿ ದೊಡ್ಡ ಸಂಖ್ಯೆಯನ್ನು ಬರೆಯಬಹುದು? ಇದಕ್ಕೆ ಉತ್ತರ: $9^{9^9} \cdot 9^9$-387420489 ಗೆ ಸಮ. ಇನ್ನು $9^{387420489}$ ಇದರಿಂದ ಬರುವ ಸಂಖ್ಯೆಯು ಯಾರಿಗೂ ತಿಳಿಯದು. ಆದರೆ 428124773 ರಿಂದ ಪ್ರಾರಂಭವಾಗಿ 89 ರಿಂದ ಅಂತ್ಯಗೊಳ್ಳುತ್ತದೆ. ಆ ಪೂರ್ಣ ಸಂಖ್ಯೆಗೆ ಮೂವತ್ತಾರು ಕೋಟಿ ಒಂಬತ್ತು ಲಕ್ಷ ಅಂಕಿಗಳಿದ್ದು ಅದನ್ನು ಬರೆದರೆ 500 ಮೈಲಿ ಉದ್ದದ ಹಾಳೆಯನ್ನು ಆಕ್ರಮಿಸುವುದು.

–ಕ. ಶಿ. ಕುಡಗುಂಟಿ

ಬಂಗಾರದ ಹಲ್ಲು

ಇದು ಸುಮಾರು ನಲವತ್ತೈದು ವರ್ಷಗಳ ಕೆಳಗೆ ನಡೆದದ್ದು. ವೃದ್ಧರೊಬ್ಬರು ನಿಧನರಾಗಿದ್ದರು. ಅವರ ಮೃತದೇಹದ ಹತ್ತಿರ ಅವರ ಬಂಧುವೊಬ್ಬರು ಮೌನವಾಗಿ ದುಃಖಪಡುತ್ತಾ ಕುಳಿತಿದ್ದರು. ಅವರ ಸಂಬಂಧಿಕರು ವೃದ್ಧರ ಕಳೇಬರವನ್ನು ಎತ್ತಿ ಹೊರಕ್ಕೆ ಸಾಗಿಸಲು ಇಬ್ಬರು ಅದನ್ನು ಹಿಡಿದರು. ಆಗ ಅವರ ಹತ್ತಿರ ಮೌನವಾಗಿ ಕಣ್ಣೀರು ಸುರಿಸುತ್ತಾ ಕುಳಿತಿದ್ದವರು, "ತೆಗೆಯಬೇಡಿ, ಹಲ್ಲು ಹಲ್ಲು" ಎಂದು ಕಳೇಬರವನ್ನು ಬಲವಾಗಿ ಹಿಡಿದರು– "ಮೆಲ್ಲಗೆ ತೆಗೆದುಕೊಂಡು, ಹೋಗುತ್ತೇವೆ, ಬಿಟ್ಟುಬಿಡಿ," ಎಂದು ಆ ಇಬ್ಬರು ಅವರಿಗೆ ಹೇಳಿದರು.

"ಇವರಿಗೆ ಬಾಯಿನಲ್ಲಿ ಎರಡು ಬಂಗಾರದ ಹಲ್ಲು ಇವೆ. ಅದನ್ನು ತೆಗೆಯಬೇಕು" ಅಂದರು ಆ ದುಃಖತಪ್ತ ಬಂಧು.

ಬಂಗಾರದ ಹಲ್ಲು. ಕಳೇಬರದ ಬಾಯಿ ಬಿಡಿಸಿ ತೆಗೆಯಲು ಆಗಲಿಲ್ಲ. "ಹೋಗಲಿ ಬಿಡಿ ಅಂಥಾ ಬಂಗಾರದಂತಹ ಮನುಷ್ಯನೇ ಹೋದಾಗ, ಬಂಗಾರದ ಹಲ್ಲಿನಿಂದೇನು?" ಎಂದು ನಂತರ ಎಲ್ಲರೂ ವೈರಾಗ್ಯಕ್ಕೆ ಶರಣು ಬರಬೇಕಾಯಿತು.

–ಎನ್.ಎಸ್. ಕೃಷ್ಣಮೂರ್ತಿ

ಹಿಂದೂ ಪುರಾಣಗಳಲ್ಲಿ ಲಿಂಗಬದಲಾವಣೆ

ರಮೇಶ ಗೋಡಬೋಲೆ

ಹದಿನೇಳರ ಹರೆಯದ 'ಹರಿಣಿ' 'ಹರಿ'ಯಾದಳು; ಶಿಕಾಗೋದ ಪ್ಯಾಕ್ಲಿನ್ ಮಾರ್ಗರೆಟ್ ಎಂದು ಪುನರ್ನಾಮಕರಣ ಮಾಡಿಕೊಂಡ; ಜಪಾನಿನ ಚಿಕಿತ್ಸಕರ ಸಫಲ ಶಸ್ತ್ರಕ್ರಿಯೆಯಿಂದ ಹುಡುಗಿ ಹುಡುಗನಾದ ಮುಂತಾದ ಸುದ್ದಿಗಳು ಪತ್ರಿಕೆಗಳಲ್ಲಿ ಅನೇಕ ಸಲ ಚಿತ್ರಸಹಿತವಾಗಿ ಬರುತ್ತಲೇ ಇವೆ. ಹೊಸ ವಿಷಯಗಳಿಗಾಗಿ ಕಾತರಿಸುತ್ತಿರುವ ಜನರಿಗೆ ಸಂತೋಷದ ಸಂಗತಿಗಳಿವು. ಅದರಲ್ಲೂ ಲಿಂಗ ಬದಲಾವಣೆಯಂಥ ವಿಷಯಗಳು ಯಾವಾಗಲೂ ರೋಚಕವೆ.

ಲಿಂಗ ಬದಲಾವಣೆ ಹೇಗೆ ಸಾಧ್ಯ? ಎಂಥ ಸಂದರ್ಭಗಳಲ್ಲಿ ಈ ಶಕ್ಯತೆ ಇದೆ? ಮುಂತಾದ ಪ್ರಶ್ನೆಗಳಿಗೆ ಜೀವವಿಜ್ಞಾನಿಗಳು ಈಗ ಸಾಕಷ್ಟು ವಿವರಣೆ ಕೊಡಲು ಶಕ್ತರಾಗಿದ್ದಾರೆ. ಅವರೆಲ್ಲರ ಸಾಮಾನ್ಯ ಅಭಿಪ್ರಾಯದಂತೆ ಹಾರ್ಮೋನುಗಳ ಕೊರತೆ ಅಥವಾ ಆಧಿಕ್ಯ ಈ ಲಿಂಗಬದಲಾವಣೆಗೆ ವಿವರಣೆ ನೀಡುತ್ತವೆ. ಕೆಲವು ಸ್ತ್ರೀಯರಲ್ಲಿ ಪುರುಷರ ಲಕ್ಷಣಗಳನ್ನೂ ಗಂಡಸರಲ್ಲಿ ಸ್ತ್ರೀಯರ ಧ್ವನಿ, ಭಾವವನ್ನೂ ಕಾಣುತ್ತೇವಲ್ಲ! ಇವೆಲ್ಲ ಹಾರ್ಮೋನುಗಳ ಆಟ.

ಲಿಂಗ ಬದಲಾವಣೆಯ ಇಂಥ ಸುದ್ದಿಗಳು ಈ ಇಪ್ಪತ್ತನೆಯ ಶತಮಾನಕ್ಕಷ್ಟೇ ಸೀಮಿತವಾಗಿಲ್ಲ. ನಮ್ಮ ಪ್ರಾಚೀನ ಪುರಾಣಗಳಲ್ಲಿ ಇಂಥ ಅಂಶಗಳು ಸಾಕಷ್ಟು ದೊರೆಯುತ್ತವೆ. ಸಾವಿರಾರು ವರ್ಷಗಳ ಹಿಂದೆಯೂ ಸಮಾಜದಲ್ಲಿ ಲಿಂಗ ಬದಲಾವಣೆ ಹೊಂದಿದ ಜನರು ಇದ್ದುದರ ದಾಖಲೆಗಳಿವೆ. ಆದರೆ ವೈಜ್ಞಾನಿಕ ವಿವರಣೆ ಅಥವಾ ವಿಶ್ಲೇಷಣೆ ಆ ಕಾಲದಲ್ಲಿ ಇರುವ ಸಾಧ್ಯತೆ ಕಡಿಮೆಯೆ. ಅಂಥ ಕೆಲ ವಿವರಗಳನ್ನು ನೋಡಬಹುದು.

(೧) ಮನುವಿಗೆ ಮಕ್ಕಳಿರಲಿಲ್ಲ. ಗಂಡು ಸಂತಾನಕ್ಕಾಗಿ ಸೂರ್ಯನನ್ನು ಕುರಿತು ಯಜ್ಞ ಮಾಡಿದ. ಇದಕ್ಕಾಗಿ ನೇಮಕಗೊಂಡ ಪುರೋಹಿತ ವಸಿಷ್ಠ. ವಸಿಷ್ಠನ ಸಣ್ಣ ತಪ್ಪಿನಿಂದಾಗಿ ಯಜ್ಞಲೋಪವಾಗಿ ಮನುವಿಗೆ ಹೆಣ್ಣು ಶಿಶು ಹುಟ್ಟಿತು. ಅವಳ ಹೆಸರು ಇಳಾ. ಈ ದೋಷಕ್ಕಾಗಿ ಮನುವು ವಸಿಷ್ಠನನ್ನು ದೂಷಿಸುತ್ತಾನೆ. ಬಹಳ ನೊಂದುಕೊಂಡ ವಸಿಷ್ಠ ಬ್ರಹ್ಮನನ್ನು ಪ್ರಾರ್ಥಿಸಿದ. ಬ್ರಹ್ಮನ ಕೃಪೆಯಿಂದಾಗಿ ಇಳಾ ಪುರುಷನಾಗುತ್ತಾಳೆ. ಈತನ ಹೆಸರು 'ಸದ್ಯುಮ್ನ.' ಬೆಳೆದು ದೊಡ್ಡವನಾದ ಸದ್ಯುಮ್ನ

ಒಂದು ಅರಣ್ಯದಲ್ಲಿ ಅಲೆಯುತ್ತಿರುವಾಗ ಪವಿತ್ರವಾದ ಸ್ಥಳವೊಂದನ್ನು ಪ್ರವೇಶಿಸಿದ. ಅಲ್ಲಿ ಶಿವ ಪಾರ್ವತಿಯರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಕುಳಿತಿರುವದನ್ನು ಕಂಡ. ಈ ಅಚಾತುರ್ಯಕ್ಕಾಗಿ ಪಾರ್ವತಿ ಕೋಪಗೊಂಡು ತಕ್ಷಣವೇ ಸದ್ಯುಮ್ನನನ್ನು ಹೆಣ್ಣಾಗುವಂತೆ ಶಪಿಸಿದಳು. ಸದ್ಯುಮ್ನ ಕೂಡಲೇ ಇಳಾ ಆಗಿ ಮಾರ್ಪಟ್ಟ.

ಸುಂದರಿಯಾದ ಇಳೆಯನ್ನು ಬುಧ ಪ್ರೀತಿಸಿ ಲಗ್ನವಾದ. ಅವನಿಂದ ಒಂದು ಗಂಡು ಮಗುವನ್ನೂ ಇಳೆ ಪ್ರಸವಿಸಿದಳು. ಈಗ ಇಳೆಗೆ ಪುನಃ ಪುರುಷನಾಗುವ ಬಯಕೆ ಹುಟ್ಟಿತು. ಅದಕ್ಕಾಗಿ ಅವಳು ವಿಷ್ಣುವನ್ನು ಪ್ರಾರ್ಥಿಸಿದಳು. ಅವಳ ಕೋರಿಕೆಯನ್ನು ಅಂಗೀಕರಿಸಿದ ವಿಷ್ಣುವು ಪಾರ್ವತಿಯ ಶಾಪಕ್ಕೆ ಭಂಗ ಬಾರದ ಹಾಗೆ ಇಳೆಯು ಒಂದು ತಿಂಗಳು ಗಂಡಸೂ ಇನ್ನೊಂದು ತಿಂಗಳು ಹೆಂಗಸೂ ಆಗುತ್ತಿರುವಂತೆ ವರ ನೀಡಿದ.

(೨) ಮಹಾಭಾರತದ ಶಿಖಂಡಿಯೂ ಒಂದು ವಿಚಿತ್ರ ಪಾತ್ರ. ಭೀಷ್ಮ ಆಜನ್ಮ ಬ್ರಹ್ಮಚಾರಿ. ವಿಚಿತ್ರವೀರ್ಯನಿಗಾಗಿ ಕಾಶಿರಾಜನ ಕುಮಾರಿಯಾದ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರನ್ನು ಗೆದ್ದು ಹಸ್ತಿನಾವತಿಗೆ ಕರೆತರುತ್ತಾನೆ. ಅಂಬೆ ವಿಚಿತ್ರವೀರನನ್ನು ವರಿಸಲು ಒಪ್ಪುವದಿಲ್ಲ. ಅವಳಾಗಲೇ ಶಾಲ್ವನಿಗೆ ಮನಸ್ಸನ್ನೊಪ್ಪಿಸಿದುದರಿಂದ ಹಾಗೆ ಹೇಳಿ ಭೀಷ್ಮನ ಅಪ್ಪಣೆ ಪಡೆದು ಹೊರಡುತ್ತಾಳೆ. ಆಕೆ ಭೀಷ್ಮ ಮುಟ್ಟಿದ ಕನ್ಯೆಯೆಂದು ಶಾಲ್ವ ಅವಳನ್ನು ಮದುವೆಯಾಗಲು ಒಪ್ಪುವುದಿಲ್ಲ. ಆಜನ್ಮ ಬ್ರಹ್ಮಚರ್ಯ ಸ್ವೀಕರಿಸಿದ್ದರಿಂದ ಭೀಷ್ಮನೂ ಅವಳನ್ನು ವರಿಸಲು ನಿರಾಕರಿಸುತ್ತಾನೆ. ಅಂಬೆಯ ಕೋಪವೆಲ್ಲ ಭೀಷ್ಮನ ಮೇಲೆ ತಿರುಗುತ್ತದೆ. ಅವನ ಅಂತ್ಯಕ್ಕೆ ಕಾರಣವಾಗುವಂತೆ ತಪಶ್ಚರ್ಯಕ್ಕೆ ತೊಡಗುತ್ತಾಳೆ. ಮಹಾದೇವನಿಂದ ವರ ಪಡೆದು ಮುಂದಿನ ಜನ್ಮದಲ್ಲಿ ದ್ರುಪದರಾಜನ ಮಗಳಾಗಿ, ಶಿಖಂಡಿನಿಯಾಗಿ ಜನ್ಮ ಪಡೆಯುತ್ತಾಳೆ.

ಚಿಕ್ಕಂದಿನಿಂದಲೇ ಅವಳನ್ನು ಗಂಡುಮಗುವಿನಂತೆ ಉಡುಗೆ ತೊಡುಗೆಗಳನ್ನಿಟ್ಟು ಬೆಳೆಸಲಾಗುತ್ತದೆ. ದೊಡ್ಡವಳಾದ ಮೇಲೆ ಸ್ತ್ರೀಯೊಬ್ಬಳೊಡನೆ ಲಗ್ನವೂ ಆಗುತ್ತದೆ. ನಂತರದ ಸಂಕಟವನ್ನು ತಡೆಯಲಾರದೆ 'ಶಿಖಂಡಿನಿ' ವನಕ್ಕೆ ಹೋಗಿ 'ಸ್ಥಾನುಕರ್ಣ'ನೆಂಬ ಯಕ್ಷನನ್ನು ಪ್ರಾರ್ಥಿಸಿ ಅವನ ಪುರುಷತ್ವವನ್ನು ಪಡೆದು 'ಶಿಖಂಡಿ'ಯಾಗುತ್ತಾಳೆ. ಶಿಖಂಡಿಯೂ ಮಹಾವೀರನೇ. ಆದರೆ ಭೀಷ್ಮನಿಗೆ ಅವನ ಹುಟ್ಟು ಗೊತ್ತಿದ್ದರಿಂದ ಅವನನ್ನು ನಪುಂಸಕನೆಂದೇ ಬಗೆದು ಭಾರತ ಸಂಗ್ರಾಮದಲ್ಲಿ ಶಸ್ತ್ರಗಳನ್ನು ಕೆಳಗಿಟ್ಟು ಬಿಡುತ್ತಾನೆ.

ಎಲೆ ಮಹಾದೇವೀ ನಪುಂಸಕ
ನಲಿ ನಿರಂತವೆಮಗೆ ಸಮರವೆ
ಗೆಲುವಿದೊಳ್ಳಿತೆ ಸುಡು ಶಿಖಂಡಿಯ ಕೂಡೆ
ಬಿಲುವಿಡಿದು
ಅಳುಕದೆಚ್ಚನಲಾ ದುರಾತ್ಮನ
ನಿಲುವ ತೆಗೆ ತೆಗೆಯುನುತ ಚಾಪವ
ನಿಳುಹಿದನು ರಥದೊಳಗೆ ಗಂಗಾಸೂನು
ವಹಿಲದಲಿ

(ಭೀಷ್ಮಪರ್ವ: ಕುಮಾರವ್ಯಾಸ.)

(೩) ಇಂದ್ರನ ವೈರಿಗಳೊಂದಿಗೆ ಪಾರ್ಥ ಯುದ

ಪುರುಷನ ಬೀಜಾಣು, ಸ್ತ್ರೀಯ ಅಂಡಾಣುವಿನೊಡನೆ ಸಂಯೋಗಗೊಂಡು ಗರ್ಭಧಾರಣೆಯಾಗುತ್ತದೆ. ಬೀಜಾಣು ಮತ್ತು ಅಂಡಾಣುಗಳೆರಡರಲ್ಲೂ ಅವರ ಹಿಂದಿನ ತಲೆಮಾರುಗಳ ಗುಣಗಳನ್ನು ಬಳುವಳಿಯಾಗಿ ತರುವ ಕ್ರೋಮೋಸೋಮುಗಳಿರುತ್ತವೆ. ಲಿಂಗ ನಿರ್ಧಾರಕ್ಕಾಗಿ X ಮತ್ತು Y ಎಂಬ ಕ್ರೋಮೋಸೋಮುಗಳು ಮುಖ್ಯವಾಗಿವೆ. ಸ್ತ್ರೀಯ ಅಂಡಾಣು X ಕ್ರೋಮೋಸೋಮ್ ಮಾತ್ರ ಹೊಂದಿರುತ್ತದೆ. ಪುರುಷ ಬೀಜಾಣು X ಅಥವಾ Y ಗಳನ್ನು ಹೊಂದಿರುತ್ತದೆ. ಪುರುಷನ ಬೀಜಾಣುವಿನಲ್ಲಿಯ X ಮತ್ತು ಸ್ತ್ರೀಯ ಅಂಡಾಣುವಿನಲ್ಲಿಯ X ಜೊತೆಗೂಡಿದರೆ X X ಅಥವಾ ಹೆಣ್ಣು ಭ್ರೂಣ ಉತ್ಪನ್ನವಾಗುತ್ತದೆ. ಅದೇ ಗಂಡಸಿನ ಬೀಜಾಣುವಿನಲ್ಲಿಯ Y ಮತ್ತು ಹೆಂಗಸಿನ ಅಂಡಾಣುವಿನ X ಕೂಡಿಕೊಂಡಾಗ X Y ಅಥವಾ ಗಂಡು ಶಿಸು ಹುಟ್ಟುತ್ತದೆ.

ಮಾಡಿ ದೇವತೆಗಳಿಗೆ ಜಯ ದೊರಕಿಸಿಕೊಡುತ್ತಾನೆ. ಇಂದ್ರ ಈ ವೀರನ ಮನೋರಂಜನೆಗೆಂದು ದೇವ ಸಭೆಯಲ್ಲಿ ಉರ್ವಶಿಯ ನೃತ್ಯವೇರ್ಪಡಿಸುತ್ತಾನೆ. ಅವಳನ್ನೇ ತದೇಕಚಿತ್ತನಾಗಿ ಅರ್ಜುನ ನೋಡು ತ್ತಿರುವಾಗ, ಇಂದ್ರ ಅಪಾರ್ಥ ಮಾಡಿಕೊಂಡು ಅರ್ಜುನನಿಗೆ ಉರ್ವಶಿಯ ಮೇಲೆ ಅನುರಾಗ ವುಂಟಾಗಿದೆಯೆಂದು ತಿಳಿಯುತ್ತಾನೆ. ಅವನ ಆಸೆ ಯನ್ನು ಪೂರೈಸಲು ಉರ್ವಶಿಗೆ ಆಜ್ಞೆ ಮಾಡು ತ್ತಾನೆ. ರಾತ್ರಿಯಲ್ಲಿ ಅಲಂಕರಿಸಿಕೊಂಡು ಉರ್ವಶಿ ಅರ್ಜುನನೆಡೆಗೆ ಬರುತ್ತಾಳೆ. ಆಗ ಅರ್ಜುನ ಅವ ಳನ್ನು 'ಮಾತೆ' ಎಂದೇ ಸಂಬೋಧಿಸುತ್ತಾನೆ. (ಇಂದ್ರನ ಉಪಪತ್ನಿ ಉರ್ವಶಿ;ಇಂದ್ರನು ಅರ್ಜುನನ ತಂದೆ) ಉರ್ವಶಿಗೂ ಅರ್ಜುನನ ಮೇಲೆ ಮೋಹ ಉಂಟಾಗಿದ್ದ ಸಮಯ. ಅರ್ಜುನ ಒಡಂಬಡದಿದ್ದು ದರಿಂದ ಅವನನ್ನು ನಪುಂಸಕನಾಗುವಂತೆ ಶಪಿಸು ತ್ತಾಳೆ.

ನರಮೃಗಾಧಮ ನಿಮ್ಮ ಭಾರತ
ವರುಷ ಭೂಮಿಯೊಳೊಂದು ವರುಷಾಂ
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ
ಹರಿಯ ಮರೆಹೊಗು ಹರನ ನೀನನು
ಸರಿಸು ನಿಮ್ಮಯ್ಯಂಗೆ ಹೇಳಿದು
ನಿರುತ ತಪ್ಪದು ಹೋಗೆನುತ ಮೊಗದಿರು–
ಹಿದಳು ಚಪಲೆ

(ಅರಣ್ಯಪರ್ವ–ಕುಮಾರವ್ಯಾಸ)

ವಿರಾಟಪರ್ವದಲ್ಲಿ ಅಜ್ಞಾತವಾಸದ ಒಂದು ವರುಷವನ್ನು ಅರ್ಜುನ ನಪುಂಸಕನಾಗಿಯೇ ಕಳೆಯ ಬೇಕಾಗುತ್ತದೆ–ಬೃಹನ್ನಳೆಯಾಗಿ.

(೪) ಜೈಮಿನಿ ಭಾರತದಲ್ಲಿ ಬರುವಂತೆ ಧರ್ಮ ರಾಜ ಅಶ್ವಮೇಧಯಾಗವನ್ನು ನಡೆಸಲು ಸಂಕಲ್ಪಿ ಸುತ್ತಾನೆ. ಯಜ್ಞಾಶ್ವದ ಹಿಂದೆ ಅರ್ಜುನ, ವೃಷ ಕೇತು, ಮೇಘನಾದ ಮುಂತಾದ ವೀರರೆಲ್ಲ ಹೊರ ಡುತ್ತಾರೆ. ಅನೇಕ ಗೆಲುವಿನ ಯುದ್ಧಗಳ ನಂತರ ಕುದುರೆ ಪಾಂಡ್ಯದ ಪ್ರದೇಶಕ್ಕೆ ಬರುತ್ತದೆ. ಆ ಭಾಗ ವನ್ನು ಹೊಕ್ಕೊಡನೆಯೆ ಅದು ಹೆಣ್ಣು ಕುದುರೆ ಯಾಗಿ ಮಾರ್ಪಾಡುತ್ತದೆ. ಇದಕ್ಕೆ ಕಾರಣ ಆ ಪ್ರದೇಶ ಹಿಂದಕ್ಕೆ ಪಾರ್ವತಿಯಿಂದ ಶಪಿತವಾದದ್ದು.

ಅದು ಪಾರ್ವತಿಯ ತಪೋಭೂಮಿಯಾಗಿತ್ತು. ಶಿವನ ಧ್ಯಾನದಲ್ಲಿ ನಿರತಳಾಗಿರುವಾಗ ರಕ್ಕಸನೊಬ್ಬ ಕಾಮಾಂಧನಾಗಿ ಪಾರ್ವತಿಯ ಬಳಿ ಬರುತ್ತಾನೆ. ಧ್ಯಾನಭಂಗವಾಗಿ ಪಾರ್ವತಿ ಅವನನ್ನು ಕೋಪ ದಿಂದ ನಿಟ್ಟಿಸುತ್ತಾಳೆ. ರಾಕ್ಷಸ ಸುಟ್ಟು ಬೂದಿ ಯಾಗುತ್ತಾನೆ. ಇಂಥ ಪ್ರಸಂಗ ಪುನಃ ಒದಗಬಾರ ದೆಂದು ಪಾರ್ವತಿ ಆ ಪ್ರದೇಶಕ್ಕೆ ಬರುವ ಗಂಡು ಪ್ರಾಣಿಗಳೆಲ್ಲ ಹೆಣ್ಣಾಗಲಿ ಎಂದು ಶಪಿಸುತ್ತಾಳೆ.

ಬೆಂದು ಪೋದಂ ದಾನವಂ ಬಳಿಕ ದೇವಿ ಖತಿ
ಯಿಂದ ನುಡಿದಳೆ ಶಾಪರೂಪದಿಂದೀ ವನ
ಕ್ಕೆಂದು ಮೊದಲಾಗಿ ಪುರುಷ ಪ್ರಾಣಿಗಳೊಳೆ
ಪೊಕ್ಕೊಡಾಗಲೇ ಸ್ತ್ರೀತ್ವಮವಕ್ಕೆ
ಬಂದು ಸಮನಿಸಲಿ ತನ್ನಾಜ್ಞೆ ತಪ್ಪದೆ ನಡೆಯ
ಲೆಂದು ಸಕಲ ಸ್ಥಾವರರಾಧಿದೇವತೆಯರೊಡ
ನೆಂದು ಸಾರಿದಳಲ್ಲಿ ಚಿರಕಾಲಮಿರ್ದು
ಪೂರೈಸಿದಳ್ ಕಲ್ಪಿತವನು

(ಜೈಮಿನಿ ಭಾರತ–ಲಕ್ಷ್ಮೀಶ)

ಇನ್ನೂ ಅನೇಕ ಉದಾಹರಣೆಗಳು ನಮ್ಮ ಪುರಾ ಣಗಳಲ್ಲೂ ಗ್ರೀಕ್ ಪುರಾಣಗಳಲ್ಲೂ ದೊರೆಯು ತ್ತವೆ. ಲಿಂಗ ಬದಲಾವಣೆಯ ಅತಿರಂಜಿತ ಕಾವ್ಯ ಮಯ ವರ್ಣನೆಗಳನ್ನು ಪುನರ್ಜನ್ಮದ (ಶಿಖಂಡಿ, ಅಂಬೆ) ಸಂಚಿಕೆಗಳನ್ನೂ ಬದಿಗಿಟ್ಟರೂ ಕಾಲದಲ್ಲಿ ಜನರು ಇಂಥ ಸಮಸ್ಯೆಗಳನ್ನು ಗಮನಿಸಿದ್ದರೆಂಬುದು ಬಹು ಮುಖ್ಯ. ✡

ಕಾರಣ ಗೊತ್ತೆ ?

ಸಭೆ ನಡೆಯುತ್ತಿತ್ತು. ಒಬ್ಬ ಸದಸ್ಯರು ಮಾತನಾಡುವಾಗ, ಜಂಟಲ್‌ಮನ್ ಎಂಬ ಪದವನ್ನು ಬಳಸಿದ ಕೂಡಲೇ ಇನ್ನೊಬ್ಬರು ಎದ್ದು ನಿಂತು ಅವರ ಮಾತನ್ನು ಉಗ್ರವಾಗಿ ಪ್ರತಿಭಟಿಸಿದರು! ಕಾರಣ: ಸಭೆಗೆ ಸಂಬಂಧಪಡದ ಯಾವುದೇ ಪದವನ್ನು ಸದಸ್ಯರು ಬಳಸಕೂಡದೆಂದು ಹಿಂದಿನ ಸಭೆಯಲ್ಲಿ ಠರಾವು ಮಾಡಲಾಗಿತ್ತು.

–ಭಾರತಿ



ಜೇನು ಕರಡಿ

ಜಿ. ಎಸ್. ಭಟ್ಟ

ದಕ್ಷಿಣ ಮೆಕ್ಸಿಕೋದಿಂದ ಬ್ರೆಜಿಲ್ ವರೆಗಿನ ಕಾಡಿನಲ್ಲಿ ಸಾಮಾನ್ಯವಾಗಿ ಕಾಣಸಿಗುವ ಜೇನು ಕರಡಿಗಳಿಗೆ ಕಿಂಕಜೂ, ಕಪಿಸಿಂಹ ಎಂದೂ ಹೆಸರಿದೆ. ಜೇನುತುಪ್ಪ ಇವಕ್ಕೆ ಇಷ್ಟವಾದ್ದರಿಂದಲೋ ಏನೋ ಇವಕ್ಕೆ ಜೇನು ಕರಡಿ ಎಂಬ ಹೆಸರು ಬಂದಿದೆ. ಅತ್ಯಂತ ಶಕ್ತವಾದ ನೀಳ ಬಾಲ ಇರುವುದು ಈ ಪ್ರಾಣಿಯ ವೈಶಿಷ್ಟ್ಯ. ಇದರ ಬಾಲದ ಉದ್ದ ೨೨ ಅಂಗುಲಗಳು—ಅರ್ಥಾತ್ ಶರೀರಕ್ಕಿಂತ ಹೆಚ್ಚು. ಜೇನುಕರಡಿ ಸ್ವೇಚ್ಛೆಯಾಗಿ ತನ್ನ ಬಾಲವನ್ನು ಸುರಳಿ ಸುತ್ತ ಬಲ್ಲುದು. ಬಾಲವನ್ನು ಬಲವಾಗಿ ಮರದ ರೆಂಬೆಗೆ ಸುತ್ತಿಕೊಂಡುಬಿಟ್ಟರೆ ಈ ಪ್ರಾಣಿಯನ್ನು ಅಲ್ಲಾಡಿಸುವುದು ಕಷ್ಟ. ಮರದಿಂದ ಹಣ್ಣನ್ನು ಕೀಳಲೂ ಇದು ತನ್ನ ಬಾಲವನ್ನು ಜಾಣಾಕ್ಷತನದಿಂದ ಉಪಯೋಗಿಸುತ್ತದೆ.

ಜೇನು ಕರಡಿಯದು ಕೋಲುಮುಖ. ದುಂಡಾದ ಪುಟ್ಟ ಕಿವಿಗಳೂ ಅದಕ್ಕಿವೆ. ಬೆಕ್ಕಿನಂತೆ ಕಾಣುವ ಇದರ ಕಣ್ಣುಗಳು ಪಳಪಳನೆ ಹೊಳೆಯುತ್ತಿರುತ್ತವೆ. ಮೈಮೇಲೆ ಕೂದಲುಗಳಿದ್ದು ಅವು ನಯವಾಗಿವೆ. ಇವುಗಳ ಬಣ್ಣ ತಿಳಿಹಳದಿ.

ಜೇನು ಕರಡಿಗಳು ಸಾಮಾನ್ಯವಾಗಿ ಮರದ ಮೇಲೆ ವಾಸಿಸುವವು. ಈ ಪ್ರಾಣಿ ನಿಶಾಚರ. ರಾತ್ರಿಯ ವೇಳೆ ಜೊತೆಜೊತೆಯಾಗಿಯೋ ಒಂಟಿ

ಯಾಗಿಯೋ ಸಂಚರಿಸುವವು. ಜೇನು ಕರಡಿಗಳು ಗುಂಪಿನಲ್ಲಿ ಹೊರಟಿವೆ ಎಂದರೆ ಯಾವುದೋ ಮರದಲ್ಲಿ ಅವು ಹಣ್ಣುಗಳನ್ನು ಕಂಡಿವೆ ಎಂದು ಊಹಿಸಬಹುದು. ಮಂಗಸಂತೆ ಮರದಿಂದ ಮರಕ್ಕೆ ಇವು ಜಿಗಿಯಬಲ್ಲವಾದರೂ ಬಲು ಎಚ್ಚರಿಕೆ ಯಿಂದ ಸಾವಧಾನವಾಗಿ ಇವು ಜಿಗಿಯುತ್ತವೆ. ಹಗಲು ಹೊತ್ತಿನಲ್ಲಿ ಮೈಯನ್ನು ಉಂಡೆ ಮಾಡಿ ಕೊಂಡು ಮರದ ಪೊಟರೆಯಲ್ಲಿ ಅಡಗಿರುತ್ತವೆ. ಸಂಚಾರ ಮುಗಿದ ನಂತರ ಇವು ತಮ್ಮ ತಮ್ಮ ವಾಸದ ಮರಗಳಿಗೆ ಮರಳುತ್ತವೆ. ಕಾಡು ಹಣ್ಣು ಗಳೆಂದರೆ ಇವಕ್ಕೆ ಬಲು ಪ್ರೀತಿ. ಇದಲ್ಲದೆ ಹುಳ–ಹುಪ್ಪಡಿ, ಪಕ್ಷಿಗಳ ಮೊಟ್ಟೆಗಳನ್ನೂ ತಿನ್ನುವುದುಂಟು. ಅಮೇರಿಕದ ಕಾಡಿನಲ್ಲಿರುವ ಜೇನು ಕರಡಿಗಳು ಹೆಚ್ಚಾಗಿ ಕಾಡು ಹಣ್ಣು–ಗಳನ್ನೇ ತಿಂದು ಜೀವಿಸುವವು.

ಹಸಿದಾಗ ಅಥವಾ ಅವಸರದಲ್ಲಿದ್ದಾಗ ತಮ್ಮ ಹಿಂಗಾಲು ಮತ್ತು ಮುಂಗಾಲುಗಳೆರಡರಿಂದಲೂ ಇವು ಹಣ್ಣನ್ನು ಕಿತ್ತು ತಿನ್ನುತ್ತವೆ. ಮರದ ಮೇಲಿನ ಹಣ್ಣುಗಳನ್ನು ಕೀಳಲು ಬಾಲವನ್ನು ಬಲ ವಾಗಿ ಬೀಸುತ್ತವೆ. ಜೇನು ಕರಡಿ ಆಗಾಗ ಮೃದುವಾಗಿ ಕಿರುಚುವುದೂ ಉಂಟು. ಆದರೆ ಸಾಮಾನ್ಯವಾಗಿ ಇದು ಸಭ್ಯ ಪ್ರಾಣಿ. ಇವು ಹಣ್ಣಿನ ತೋಟಗಳಿಗೆ ನುಗ್ಗಿ ಅವನ್ನು ನಷ್ಟ ಮಾಡುವುದಿಲ್ಲ. ಇದನ್ನು ಮೆಕ್ಸಿಕೋ ನಿವಾಸಿ ಗಳು ಕಪಿ ಸಿಂಹ ಎಂದೂ ದಕ್ಷಿಣ ಅಮೇರಿಕದ ಇಂಡಿಯನ್ನರು ಕಿಂಕಜೂ ಎಂದೂ ಕರೆಯುತ್ತಾರೆ. ದಕ್ಷಿಣ ಅಮೇರಿಕದ ಕೆಲವು ಬುಡಕಟ್ಟಿನವರ ಬಾಯಲ್ಲಿ ಇದು ಪೊಟ್ಟೊ ಆಗಿದೆ. ಆಫ್ರಿಕದಲ್ಲೂ ಪೊಟ್ಟೊಗಳುಂಟು. ಇವು ಜೇನುಕರಡಿಯನ್ನು ಹೋಲುವುವಾದರೂ ಇವಕ್ಕೆ ಬಾಲಗಳಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಜೇನುಕರಡಿಗಳು ಮಂಗಗಳ ಮೇಲೆ ದಾಳಿ ಮಾಡುವುದೆಂಬ ಪ್ರತೀತಿ ಉಂಟು. ಆದರೆ ಇದಕ್ಕೆ ಆಧಾರ ದೊರೆತಿಲ್ಲ. ಶಾಂತ ಸ್ವಭಾವದ ಜೇನುಕರಡಿಗಳು ಸಾಕು ಪ್ರಾಣಿಯಾಗಿರಲು ಯೋಗ್ಯವಾಗಿವೆ. ಅಮೇರಿಕ ದಲ್ಲಿ ಬಹಳ ಜನ ಇದನ್ನು ಸಾಕುವುದುಂಟು. ಇವನ್ನು ಪಂಜರದಲ್ಲಿಟ್ಟು ಹಿಡಿದು ಮಾರಾಟ ಮಾಡುವುದುಂಟು.

ಜೇನುಕರಡಿಗಳ ಸರಾಸರಿ ಆಯುಷ್ಯ ೨೦ ವರ್ಷ ಎಂದು ಹೇಳಲಾಗುತ್ತಾದರೂ ಅದು ಖಚಿತವಾಗಿ ನಿರ್ಧಾರವಾಗಿಲ್ಲ. ಲಂಡನ್ನಿನ ಮೃಗಾಲಯದಲ್ಲಿ ಸೆರೆಹಿಡಿದಿದ್ದ ಜೇನು ಕರಡಿ ೧೯ ವರ್ಷ ಬದುಕಿತಂತೆ. ಮೃಗಾಲಯದಲ್ಲಿ ಸಾಮಾನ್ಯವಾಗಿ ಇದು ೧೦ ವರ್ಷ ಬದುಕುವುದು. ಮಿಲ್ವಾಕ್ಕೀ ಮೃಗಾಲಯದಲ್ಲಿ ಒಂದು ಜೊತೆ ಜೇನು ಕರಡಿ ಗಳು ೯ ವರ್ಷ ಸಂಸಾರ ನಡೆಸಿದವು ಮತ್ತು ಅವಳಿ ಮರಿಗಳಿಗೆ ಜನ್ಮ ನೀಡಿದವು.

ಗಂಡು ಮತ್ತು ಹೆಣ್ಣು ಜೇನು ಕರಡಿಗಳು ಸಾಮಾನ್ಯವಾಗಿ ಒಟ್ಟಿಗೇ ಇರುತ್ತವೆ. ಒಂದು ಬಾರಿಗೆ ಇವು ನಾಲ್ಕು ಮರಿಗಳನ್ನು ಈಯು ತ್ತವೆ. ಹುಟ್ಟಿದಾಗ ಜೇನುಕರಡಿಯ ಮರಿ ಗಳು ಬೆಕ್ಕಿನ ಮರಿಯಂತೆ ಕಾಣುತ್ತವೆ. ೧೦ ದಿವಸಗಳ ಅನಂತರ ಕಣ್ಣು ಬಿಡುತ್ತವೆ. ಒಂದು ತಿಂಗಳವರೆಗೂ ಅವುಗಳ ಬಾಲಗಳಿಗೆ ಶಕ್ತಿ ಬಂದಿರುವುದಿಲ್ಲ. ಏಳು ವಾರಗಳ ನಂತರ ಮರಿಗಳು ಮರದಿಂದ ಮರಕ್ಕೆ ಜಿಗಿಯುವ ಸಾಮರ್ಥ್ಯ ಪಡೆಯುತ್ತವೆ.

ಒಲಿಂಗೋ ಎಂಬ ಪ್ರಾಣಿಯೂ ಜೇನು ಕರಡಿಯಂತೆಯೇ ಕಾಣುವುದು. ಸ್ವಭಾವ ಗುಣ ಗಳಲ್ಲಿ ಇದಕ್ಕೂ ಜೇನುಕರಡಿಗೂ ಹೋಲಿಕೆ ಇದೆ. ಈ ಪ್ರಾಣಿ ಜೇನು ಕರಡಿಯೊಂದಿಗೆ ಮರದ ಪೊಟರೆಯಲ್ಲಿ ವಾಸಿಸುವುದು. ಕೆಲವೊಮ್ಮೆ ಜೇನು ಕರಡಿಗಳೊಂದಿಗೆ ಆಹಾರವನ್ನರಸಲು ಹೊರಡು ತ್ತದೆ. ಎಕ್ವಡಾರ್‌ನಿಂದ ನಿಕಾರಾಗುವವರೆಗೂ ಈ ಪ್ರಾಣಿಯ ಸಂತತಿ ಹರಡಿದೆ. ಗಾತ್ರದಲ್ಲಿ ಜೇನು ಕರಡಿಗಿಂತ ಚಿಕ್ಕದಾದ ಈ ಪ್ರಾಣಿಯು ಗಿಡ್ಡವಾಗಿ ದೆಯಷ್ಟೆ ಅಲ್ಲ ಇವಕ್ಕೆ ಬಾಲವೂ ಇಲ್ಲ. ✿

(ಚಿತ್ರ : ಕೆ. ಬಿ. ಸದಾನಂದ)

ಅಗ್ನಿಹಂಸ

ಗೌರೀಶ ಕಾಯ್ಕಿಣಿ

ಅಗ್ನಿಹಂಸ ಎಂದರೇನು ? ಗೊತ್ತಾಯಿತೇ ? ರಾಜಹಂಸವನ್ನು ನಾವು ಬಲ್ಲೆವು. ನಮ್ಮ ಹಳೆಯ ಕವಿಗಳು ಈ ಹಂಸದ ಬಗೆಗೆ ಕೆಲವೊಂದು 'ಸಮಯ'ಗಳನ್ನು ಜಾರಿಯಲ್ಲಿ ತಂದಿದ್ದಾಗಿದೆ. ರಾಜಹಂಸವು ಹಿಮಾಲಯದ ಮಾನಸಸರೋವರದಲ್ಲಿಯೇ ಇರುತ್ತದೆ. ಅದರ ಆಹಾರ ಮುತ್ತುಗಳು. ಸರೋವರದಲ್ಲಿ ಮುತ್ತುಗಳು ಹೇಗೆ ಬಂದಾವು ಎಂದೆಲ್ಲಾ ಕೇಳಬೇಡಿ. ಅದು ಒಂದು ಸುಂದರ ಕವಿಕಲ್ಪನೆ. ಹಂಸದಂಥ ಚೆಂದ ಹಕ್ಕಿಗೆ ಮುತ್ತಿನಂಥ ಚೆಂದ ಕಾಳುಗಳೇ ತಿನ್ನಲು ಬೇಕಾದರೆ ತಪ್ಪೇನೂ ಇಲ್ಲ. ಅದನ್ನು ನಂಬದ ನಾವೇ ಬೆಪ್ಪು !

ಹಾಗೆಯೇ ಆ ಹಂಸ ನಮ್ಮ ಸದರಿ ಕವಿಗಳ ದೃಷ್ಟಿಯಲ್ಲಿ ದೇವರೇ ತಯಾರಿಸಿಕೊಟ್ಟ lactometer. ಹಾಲಲ್ಲಿ ನೀರೋ ನೀರಲ್ಲಿ ಹಾಲೋ, ಏನು ಎಷ್ಟು ಬೆರೆತಿದೆ ಎಂಬುದನ್ನು ಪರೀಕ್ಷಿಸುವ ಯಂತ್ರ! ಅಂದರೆ ಈ ಕುರಿತು ಒಂದು ನ್ಯಾಯವೇ ಪ್ರಸಿದ್ಧವಿದೆ– "ಹಂಸ ಕ್ಷೀರ ನ್ಯಾಯ." ಅಂದರೆ ಹಾಲೂ ನೀರೂ ಬೆರೆಸಿ ಇಟ್ಟರೆ ಹಂಸವು ಹಾಲನ್ನಷ್ಟೇ ನೀರಿನಿಂದ ಬೇರ್ಪಡಿಸಿ ಹೀರುತ್ತದಂತೆ! ನ್ಯಾಯವಾಗಿ ನೋಡಿದರೆ ಹಂಸವನ್ನು ಹಿಡಿದುತಂದು ಈ 'ನೀರಕ್ಷೀರ ವಿವೇಕದ'ಪ್ರಯೋಗ ಈವರೆಗೆ ಯಾರೂ ಮಾಡಿಲ್ಲ. ಮಾಡಬೇಕೆಂದೂ ಯಾರಿಗೂ ಅನಿಸಿದ್ದಿಲ್ಲ. ಕವಿಕಲ್ಪನೆಯೇ ಸುಂದರ. ಸೌಂದರ್ಯಕ್ಕೆ ಸತ್ಯದ ಪ್ರಮಾಣ ಬೇರೆ ಬೇಕೆ ?

ಹಂಸವನ್ನು ಬ್ರಹ್ಮವಾಹನವೆಂದು ಉಪಯೋಗಿಸಿದರೆ ನಲ-ದಮಯಂತಿಯರು ತಮ್ಮ ಪ್ರಣಯ ಪತ್ರವ್ಯವಹಾರಕ್ಕೆ ಅಂಚೆಯಾಳಾಗಿ ಬಳಸಿದರು. 'ಅಂಚೆ' ಎಂಬುದೂ 'ಹಂಸ'ದ ಕನ್ನಡ ತದ್ಭವವಲ್ಲವೇ ? ಹಿಂದೆಲ್ಲ ನಾವು Royal Mail ಪದಕ್ಕೆ 'ರಾಜಹಂಸ' ಇಲ್ಲವೆ 'ಅರಸಂಚೆ' ಎಂದು ಕನ್ನಡ ರೂಪಕೊಟ್ಟು ನಮ್ಮ ಬಡ ಮೇಷ್ಟ್ರನ್ನು ಗೊಂದಲಕ್ಕೆ ಗುರಿಮಾಡುತ್ತಿದ್ದೆವು !

ನಮ್ಮ ರಾಜಮಹಾರಾಜರು ಪುರಾತನ ಕಾಲದಿಂದಲೂ ಹಂಸವನ್ನು ಬೇರೊಂದೇ ವಿನಿಯೋಗಕ್ಕೆ ಬಲಿ ಕೊಡುತ್ತಿದ್ದರು. ಅದು 'ಹಂಸತೂಲಿಕಾತಲ್ಪ'. ಅವರ ಭೋಗಲಾಲಸೆ ಹಿಂಸ್ರವಾಗಿತ್ತು. ತಮ್ಮ ಸುಖನಿದ್ರೆಗಾಗಿ ಈ ರುದ್ರ ರಸಿಕರು ಹಂಸದ ತುಪ್ಪಳ (ಮಿದುವಾದ ಗರಿ) ತುಂಬಿದ ಹಾಸಿಗೆಗಳನ್ನು ಬಳಸುತ್ತಿದ್ದರು. ಅಂದರೆ ಅಂಥ ಒಂದು ಹಾಸಿಗೆ ತಯಾರಿಸಲು ಸಾವಿರಾರು ಹಂಸಗಳನ್ನು ಕೊಲ್ಲಬೇಕು!

ಹೀಗೆಲ್ಲ ನಮಗೆ 'ಹಂಸ' ಹಿಂದಿನಿಂದಲೂ ಪ್ರಿಯವಾದ ಚಿರಪರಿಚಿತ ಪಕ್ಷಿ. ಆದರೆ ಈ 'ಅಗ್ನಿ-ಹಂಸ'? ಇದು ಮೂಲತಃ ನಮ್ಮ ಇನ್ನೊಬ್ಬ ರಾಷ್ಟ್ರಕವಿ ಕುವೆಂಪು ಅವರು ಕಾವ್ಯ ರಸಿಕರಿಗೆ ಇತ್ತ ಕೊಡುಗೆ. ಆಂಗ್ಲ ಸಾಹಿತ್ಯ ಹಾಗು ವಾಕ್ ಪ್ರಯೋಗಗಳ ಸಂಪರ್ಕದಿಂದ ನಮ್ಮಲ್ಲಿ ಅಲ್ಲಿಯ ಕೆಲವು ಪದಗಳು, ಅನುವಾದ ರೂಪಗಳು ಈಚೆಗೆ

ರೂಢವಾಗಿವೆ– 'ನಕ್ರಾಸ್ರು' (Crocodile Tears), 'ಉಚ್ಚ ಭ್ರೂ' (High brow), 'ಶೃಂಗಾಪತ್ತಿ' (Horns of Dilemma), 'ನೀಲನಕ್ಷೆ' (Blue print), 'ಗಗನಸಖಿ' (Air Hostess) ಮುಂತಾದವು. ಅದೇ ರೀತಿ ಹಂಸ ವನ್ನು ಕುರಿತು ಎರಡು ಇಂಗ್ಲೀಷ್ ಪದಗಳು ಕನ್ನಡೀಕರಣ ಹೊಂದಿವೆ. ಅವುಗಳಲ್ಲಿ ಒಂದು 'ಹಂಸಗೀತೆ', ಇನ್ನೊಂದು 'ಅಗ್ನಿಹಂಸ'.

'ಹಂಸಗೀತ' ಶಬ್ದವನ್ನು ಟಂಕಿಸಿದ್ದು ಯಾರೋ. ಅದನ್ನು ಜನಪ್ರಿಯಗೊಳಿಸಿದ್ದು ತ.ರಾ.ಸು. ತಮ್ಮ, ಆ ಹೆಸರಿನ ಮರ್ಮಸ್ಪರ್ಶಿ ಕಾದಂಬರಿ ಯಿಂದ. ಆ ಶಬ್ದ "Swan Song" ಎಂಬ ಒಂದು ಆಂಗ್ಲ ಕವಿಸಮಯದ ಕನ್ನಡೀಕರಣ. ಹಂಸ ಪಕ್ಷಿ ಬಾಳಿನುದ್ದಕ್ಕೂ ಹಾಡುವ ಹಕ್ಕಿಯಲ್ಲ. ಆದರೆ ಅದು ಸಾಯುವ ಮುನ್ನ ಒಮ್ಮೊಮ್ಮೆ ಎದೆದುಂಬಿ ಬಿಚ್ಚುಗೊರಳಿನಿಂದ ಹಾಡಿ ಸಾಯು ತ್ತದೆಂಬುದೇ ಈ ಕಾವ್ಯಮಯ ಕಲ್ಪನೆ. ಬಾಳಿನು ದ್ದದ ಮೌನದಿಂದಲೇ ಈ ಕೊನೆಗೆ ಕೊನರುವ ಹಾಡಿಗೆ ಅಷ್ಟೊಂದು ಸೋಜಿಗ ಮತ್ತು ಸ್ವಾರಸ್ಯ.

ಆದರೆ ಈ 'ಅಗ್ನಿಹಂಸ' ಟಂಕನ ಚೆನ್ನಾಗಿ ಕೇಳಿಸುತ್ತದೆ. ನಮ್ಮಲ್ಲಿ 'ಪರಮಹಂಸ' ಎಂಬ ಮಾತು ಇದೆ. ಯೋಗಿಗಳಿಗೆ ಅನ್ವಯಿಸುವಂತ– ಹದು. ಅದಕ್ಕೆ ಈ 'ಅಗ್ನಿಹಂಸ' ದನಿಗೂಡಿಸು ತ್ತದೆ. ಆಂಗ್ಲ ಪರಿಭಾಷೆಯಲ್ಲಿ 'ಹಂಸ' ಕವಿಗೂ ಪರ್ಯಾಯ. ಶೇಕ್ಸ್‌ಪಿಯರನಿಗೆ 'ಸ್ವಾನ್ ಆಫ್ 'ಅವಾನ್'– 'ಅವಾನ್ ನದಿಯ ಹಂಸ'– ಎಂದು ಕರೆಯುವುದುಂಟು. ನಮ್ಮ ಅಧ್ಯಾತ್ಮ ವಾಙ್ಮಯ ದಲ್ಲಿಯೂ 'ಹಂಸ' ಆತ್ಮದ ಪ್ರತೀಕ. ಶಂಕ ರಾಚಾರ್ಯರು 'ಹಂಸ' ಶಬ್ದವನ್ನು "ಹಂತಿ' ಗಚ್ಛತಿ ಇತಿ ಹಂಸಃ" ಎಂದಿದ್ದಾರೆ. ಸಂಸಾರ ಮಾರ್ಗದಲ್ಲಿ ಹಾಯುತ್ತಿರುವುದರಿಂದ ಆತ್ಮ ಹಂಸ. ಶ್ವೇತಾಶ್ವತರ ಹಾಗೂ ಛಾಂದೋಗ್ಯ ಉಪನಿಷತ್ತುಗಳಲ್ಲಿಯೂ 'ಹಂಸ' ಆತ್ಮಸ್ವರೂಪ ನೆಂಬ ರೂಪಕಾತ್ಮಕ ವರ್ಣನೆಯಿದೆ. "ಸರ್ವಾ ಜೀವೇ ಸರ್ವ ಸಂಸ್ಥೇ ಬೃಹಂತೇ ಅಸ್ಮಿನ್ ಹಂಸೋ ಭ್ರಾಮ್ಯತೇ ಬ್ರಹ್ಮಚಕ್ರೇ" (ಶ್ವೇತಾ ಶ್ವತರ) "ಏಕೋ ಹಂಸ ಸ ಏವ ಅಗಿ। ಸಲಿಲೇ ಸನ್ನಿವಿಷ್ಟಃ" (ಛಾಂದೋಗ್ಯ). ಬಹುಶಃ ಕುವೆಂಪು 'ಅಗ್ನಿಹಂಸ' ವೆಂಬ ಶಬ್ದವನ್ನು ಟಂಕಿಸುವಾಗ ಈ ಛಾಂದೋಗ್ಯದ ವಚನವು ಅವರ ಮನೋ ಭಿತ್ತಿಯಲ್ಲಿ ಇದ್ದಿರಬೇಕು. ಆ ಹಂಸವೇ ಅಗ್ನಿ ಯೆಂಬ ಚಿತ್ರ.

ಹೀಗೆ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಹಂಸ 'ಪರಮಹಂಸ'ವಾಯಿತು – ಯೋಗಿಗೆ ಪರ್ಯಾ ಯವಾಯಿತು. (ನನ್ನ ಒಬ್ಬ ವಯೋವೃದ್ಧ– ಜ್ಞಾನವೃದ್ಧ ಹಿರಿಯ ಮಿತ್ರರು 'ಪರಮಹಂಸ' ಶಬ್ದದ ನಿಷ್ಪತ್ತಿಯನ್ನು "ಪರಂ ಅಹಂ ಸ" ಎಂದು ಅದ್ವೈತಪರವಾಗಿ ಮಾಡಿ ಹೇಳಿದ್ದರು!)

ಆದರೆ 'ಅಗ್ನಿಹಂಸ' ಎಂಬ ಈ ಶಬ್ದಕ್ಕೆ ವ್ಯುತ್ಪತ್ತಿ ಏನು? ಅಗ್ನಿ ಎಂಥ ಉರಿ, ಹಂಸ ಎಂಥ ಮಿದು, ಅವೆರಡರ ಸಂಯೋಗ ಶಾಬ್ದಿಕ ವಾಗಿಯೂ ತೀರ ಅಸಹ್ಯ, ಹಿಂಸ್ರವೆನಿಸುತ್ತದೆ. ಛಾಂದೋಗ್ಯ ಉಪನಿಷತ್ತಿನ ವಚನದಲ್ಲಿ ಹಂಸ ವೆಂಬ ಅಗ್ನಿಯು ನೀರನ್ನು ಪ್ರವೇಶಿಸುತ್ತದೆ. ಆದರೆ ಇಲ್ಲಿ ಹಂಸವೇ ಅಗ್ನಿಯನ್ನು ಆಶ್ರ ಯಿಸಿದೆ. ಅಥವಾ ಅಗ್ನಿಯೇ ಹಂಸವಾಗಿದೆ. ಈ ಪದಪವಣಿಕೆ ಬೆರಗಿನದಾಗಿ, ಬೆಡಗಿನದಾಗಿ ಕಂಡರೂ ಇದರ ಹುರುಳೇನು?

ಈಚೆಗೆ ಹಿರಿಯ ಸಾಹಿತ್ಯವಿಮರ್ಶಕರೂ ಇಂಗ್ಲೀಷ್ ಕಾವ್ಯದ ಅಧಿಕೃತ ಭಾಷ್ಯಕಾರರೂ ಆದ ನಮ್ಮಲ್ಲಿಯ ವಿದ್ವಾಂಸರು ಕುವೆಂಪು ಕಾವ್ಯದ ಕುರಿತು ಒಂದು ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಆದರೂ, ಈ ಮಹನೀಯರು 'ಅಗ್ನಿಹಂಸ'ವನ್ನು 'Fire Swan' ಎಂದು ಅನುವಾದಿಸಿದ್ದಾರೆ! (ಗ್ರಂಥ ಇಂಗ್ಲೀಷಿನಲ್ಲಿದೆ.) ಈ ತರ್ಜುಮೆ ಕಂಡು ತುಂಬ ವಿಚಿತ್ರವೆನಿಸಿತು. ಶಬ್ದಕ್ಕೆ ಪ್ರತಿಶಬ್ದ ಕೊಡುವ ಬರಿಯಾಂತ್ರಿಕ ಕ್ರಿಯೆಯಾಗಿ ಕಂಡಿತು. ಏಕೆಂದರೆ ಮೂಲತಃ 'ಅಗ್ನಿಹಂಸ'ದ ಪಕ್ಷಿ ಹಂಸವೇ ಅಲ್ಲ. ಆ ಶಬ್ದಕ್ಕೆ ಮೂಲ ಗ್ರೀಕ್ ಪುರಾಣ ಕತೆಗಳಲ್ಲಿ ಬರುವ 'ಫೀನಿಕ್ಸ್' (Phoenix) ಇದೊಂದು ವಾಸ್ತವ ಸೃಷ್ಟಿಯ ಪ್ರಾಣಿಯೇ ಅಲ್ಲ. ನಮ್ಮ ಗಂಡಭೇರುಂಡದಂತೆ ಕೇವಲ ಪುರಾಣ ಕಲ್ಪನೆ. ಈ ಹಕ್ಕಿಯು ಸಾಯುವಾಗ ತನ್ನನ್ನು ತಾನೇ ಚಿತೆಯಲ್ಲಿ ಸುಟ್ಟುಕೊಂಡು ತನ್ನ ಬೂದಿ ಯೊಳಗಿಂದಲೇ ಮತ್ತೆ ಹುಟ್ಟಿಬರುತ್ತದಂತೆ.

ಫಿನಿಕ್ಸ್' ಪಕ್ಷಿಗೆ ಮೃತ್ಯುವಿನೊಳಗಿಂದಲೇ ಅಮರತ್ವ. ಇದನ್ನೇ ಪುಟ್ಟಪ್ಪನವರು ಉಪನಿಷತ್ತಿನ ಅರ್ಥಛಾಯೆಯನ್ನು ಧ್ವನಿಸುವ 'ಅಗ್ನಿಹಂಸ'ವಾಗಿ ಕನ್ನಡದಲ್ಲಿ ರೂಪಾಂತರಿಸಿದರು. ಆಂಗ್ಲ ಪದಪಂಕ್ತಿಗಳ ಪ್ರಾಸಾದಿಕ ಕನ್ನಡೀಕರಣಕ್ಕೆ ಕುವೆಂಪು ಸಿದ್ಧಹಸ್ತರು. "Nature red in tooth and claw" ಎಂಬ ಉಕ್ತಿಯನ್ನು ಅವರು "ರಕ್ತಮುಖಿ. ರಕ್ತನಖಿ. ಪ್ರಕೃತಿ ರಾಕ್ಷಸಿ" ಎಂದು ಸೊಗಸಾಗಿ ರೂಪಾಂತರಿಸಿದ್ದುಂಟು.

'ಫಿನಿಕ್ಸ್' ಶಬ್ದದ ಗ್ರೀಕ್ ಮೂಲವನ್ನು ಗಮನಿಸಿದರೆ ಈ ಪಕ್ಷಿ ಸೂರ್ಯ ಪ್ರತೀಕವೆಂಬಂತಿದೆ (ಸೂರ್ಯನೂ ಒಂದು ಪಕ್ಷಿ 'ಮಾರ್ತಾಂಡ'–ಮೃತ ಅಂಡ?)ಗ್ರೀಕ್ ಮೂಲದಲ್ಲಿ ಅದು 'ಫಿನಿಕ್ಸ್' ಅದೇ ಸೂರ್ಯ. ಫಿನಿಕ್ಸ್ ಎಂಬ ಈ ಹೆಸರು ಕವಿಗೂ ಅನ್ವಯಿಸುತ್ತದೆ. ಫಿನಿಕ್ಸ್ ಪಕ್ಷಿಯಂತೆಯೇ ಕವಿಯೂ ಮರಣಿಸಿಯೂ ಮತ್ತೆ ಮತ್ತೆ ಹುಟ್ಟಿಬರುತ್ತಾನೆ. ಅವನ ಕಾವ್ಯ ಕೃತಿ ಒಮ್ಮೆ ಜನಮನದಿಂದ ಸತ್ತಂತೆ ಕಂಡರೂ ಮತ್ತೆ ಅದು ಉಜ್ಜೀವನಗೊಂಡು ತಲೆಮಾರಿನಿಂದ ತಲೆಮಾರಿಗೆ ಅಮರತ್ವತಾಳಿ ಮುಂದುವರಿಯುತ್ತದೆ. ಅದೇನೇ ಇರಲಿ, 'ಅಗ್ನಿಹಂಸ' ಫಿನಿಕ್ಸ್ ಪಕ್ಷಿ–ಗ್ರೀಕ್ ಪುರಾಣಗಳಲ್ಲಿಯ ಒಂದು 'ಮಿಥ್' (ಮಿಥ್ಯಾವಸ್ತು). ಇದು ಕುವೆಂಪು ಕನ್ನಡಕ್ಕೂ ಭಾರತೀಯ ಸಾಹಿತ್ಯ ಪ್ರಪಂಚಕ್ಕೂ ನೀಡಿದ ಒಂದು ಅಪೂರ್ವ ಕೊಡುಗೆ– ಅಲ್ಲ, ತೊಡಿಗೆ.

ನೀರಿನಲ್ಲಿ ನಿಂತೂ ನಿರ್ಲಿಪ್ತವಾಗಿ ನಡೆಯುವ ಹಂಸ ಜೀವನ್ಮುಕ್ತ ಯೋಗಿಗೆ ಯೋಗ್ಯ ಪ್ರತಿಮೆ. ಅದು ಅಗ್ನಿಹಂಸದಲ್ಲಿ ಇನ್ನೂ ಉಜ್ವಲವಾಗಿದೆ. ಚಿತೆಯ ಮೇಲೆ ಕುಳಿತು ಅದರ ಜ್ವಾಲೆಗಳಲ್ಲಿ ಸುಟ್ಟುಕೊಳ್ಳುತ್ತಿದ್ದರೂ ಈ ಹಂಸದ ನಿರ್ಮಲ, ನಿರ್ಲಿಪ್ತ, ನಿರಂಜನ ಸಿದ್ಧಿ ಕಾವ್ಯಾನಂದದಂಥ ಕವಿಕಲ್ಪ ಸಮಾಧಿಗೂ ಒಂದು ಉತ್ತಮ ಆದರ್ಶ. ಧಾರವಾಡದ ಸಾಧನಕೇರಿಯಲ್ಲಿ ವರಕವಿ ಬೇಂದ್ರೆಯವರು ಕೂಡ್ರುವ ಜಗುಲಿಯ ಗೋಡೆಯ ಮೇಲೆ ಒಂದು ವರ್ಣಚಿತ್ರವಿದೆ, ಆ ಮಹಾಕವಿಯ ಭಕ್ತಕಲಾವಿದರೋರ್ವರು ಚಿತ್ರಿಸಿದ್ದು, ಅದರಲ್ಲಿ ಬೆಂಕಿಯ ಜ್ವಾಲೆಗಳ ನಡುವೆ ಕಾವ್ಯಯೋಗಿ ಅಂಬಿಕಾತನಯದತ್ತರು ಪದ್ಮಾಸನ ಹಾಕಿ ಕೂತಿದ್ದಾರೆ. ಅವರ ಮುಖದಲ್ಲಿ ಪ್ರಸನ್ನ ಗಾಂಭೀರ್ಯ ಶೋಭಿಸುತ್ತದೆ. ಚಿತ್ರದ ಕೆಳಗೆ 'ಅಗ್ನಿಹಂಸ' ಎಂದು ಬರೆದಿರುವಂತೆ ನೆನಪು, ಈ ಹಂಸಯೋಗ, ಹಂಸ ಕಲೆ, ಹಂಸಸಿದ್ಧಿ, ರತ್ನಾಕರವರ್ಣಿ ಮನವಾರೆ ಮೆಚ್ಚಿದ್ದು. ಅವನ ನಾಯಕ ಭರತ ಚಕ್ರೇಶನಲ್ಲಿ ಆತ ಕಂಡಿದ್ದು, ಬಾಳಿನ ಕುಲುಮೆಯಲ್ಲಿ ಉರಿದು ಕಿಟ್ಟೆಲ್ಲ ಕರಗಿ, ಕತ್ತು ಹೋಗಿ, ಉಳಿದ ಅಪ್ಪಟ ಅಪರಂಜಿಯ 'ಹಿರಣ್ಯಗರ್ಭ' ಈ ಮಹಾಕವಿಗಳು. ಅದನ್ನು ಕಂಡುಂಡು ತಮ್ಮ ಜೀವನದ ಶುದ್ಧಿಯನ್ನು, ಸಿದ್ಧಿಯನ್ನು 'ಅಗ್ನಿಹಂಸ'ದಲ್ಲಿ ಪ್ರತಿಮಿಸಿದ್ದಾರೆ. ಅದಕ್ಕೆ ತಾವೇ ಪ್ರತಿಬಿಂಬವಾಗಿದ್ದಾರೆ. ✡



"ಮನೆ ಬಾಡಿಗೆಯ ಬಾಕಿ ತೀರಿಸಲು ನಿಮಗೆ ಇನ್ನು ಎರಡು ದಿನಗಳ ಅವಧಿ. ಆದಕ್ಕಿಂತ ಹೆಚ್ಚು ಕಾಲಾವಧಿಯನ್ನು ಕೊಡುವುದು ಇನ್ನು ಸಾಧ್ಯವೇ ಇಲ್ಲ. ತಿಳಿಯಿತೆ?" ಮನೆ ಮಾಲಿಕ ಗುಡುಗಿದ.

"ಓಹ್ ಎಸ್. ಸರಿ ಸರಿ. ಎರಡು ದಿನಗಳಲ್ಲೆ ಬಾಡಿಗೆ ತೀರಿಸುತ್ತೇನೆ. ದಯವಿಟ್ಟು ಆ ಎರಡು ದಿನಗಳ ಪೈಕಿ ಒಂದು ಗಣರಾಜ್ಯೋತ್ಸವದ ದಿನ ಹಾಗೂ ಇನ್ನೊಂದು ಸ್ವಾತಂತ್ರ್ಯದಿನ ಎಂದು ಇಟ್ಟುಕೊಳ್ಳಿ ಸಾಕು." ಬಾಡಿಗೆದಾರ ಶಾಂತನಾಗಿಯೆ ಉತ್ತರಿಸಿದ.

ಇವರು ನಾಗರಿಕರಲ್ಲ!

ಮುರಿಯಾ

ಕೃಷ್ಣಾನಂದ ಕಾಮತ

ನಾವಿಂದು ಆಧುನಿಕ ಜೀವನದ ಸುಳಿಯಲ್ಲಿ ಸಿಕ್ಕು, ದುಡ್ಡೇ ದೇವರೆಂದು ನಂಬಿ ಕೃತಕ ಜೀವನ ನಡೆಸುತ್ತಿದ್ದೇವೆ. ಲೌಕಿಕ ಸ್ಪರ್ಧಾಜೀವನದಲ್ಲಿ ಶಾಂತಿ ನೆಮ್ಮದಿಗಳು ಇಲ್ಲದ್ದರಿಂದ ಏನೋ ಕಳೆದುಕೊಂಡಂತೆ ಅನಿಸಿದರೂ ಅದನ್ನು ತಿರುಗಿ ಪಡೆಯಲಾರದಷ್ಟು ಅಸಹಾಯಕರಾಗಿದ್ದೇವೆ. ಇದರಿಂದಾಗಿ ನಮ್ಮಲ್ಲಿ ಮಾನಸಿಕ ರೋಗಗಳು, ರಕ್ತದ ಒತ್ತಡ, ಹೃದಯವಿಕಾರಗಳು ದಿನೇ ದಿನೇ ಹೆಚ್ಚುತ್ತಿವೆ. ಆಧುನಿಕ ಐಷಾರಾಮದ ಸೋಂಕು ಇಲ್ಲದ ನಮ್ಮ ಪೂರ್ವಜರು ಅರ್ಥಪೂರ್ಣ ಜೀವನವನ್ನು ಹೇಗೆ ನಡೆಸುತ್ತಿದ್ದರು ಎಂದು ತಿಳಿಯಲು ಯತ್ನಿಸಿದರೆ ನಮ್ಮ ಎಷ್ಟೋ ದೈನಂದಿನ ಸೆಳೆತ (tensions) ಕಡಿಮೆ ಮಾಡಿಕೊಳ್ಳಬಹುದು. ಅದಕ್ಕೂ ಪೂರ್ವಯುಗದವರು ಇನ್ನೂ ಬೇರೆ ಬಗೆಯ ಜೀವನ ನಡೆಸುತ್ತಿದ್ದರು. ಮಧ್ಯಪ್ರದೇಶದ ಆದಿವಾಸಿಗಳು ಈ ಜನಾಂಗದ ಪ್ರತೀಕವಾಗಿ ಇಂದಿಗೂ ಅದೇ ರೀತಿಯಲ್ಲಿ ವಾಸಿಸುತ್ತಿದ್ದಾರೆ. ಬಸ್ತರ ಜಿಲ್ಲೆಯ ದಟ್ಟ ಕಾಡುಗಳಲ್ಲಿ, ಹೊರ ಜಗತ್ತಿನ ಸಂಪರ್ಕವಿಲ್ಲದೇ ಕಳೆದ ಎಷ್ಟೋ ಶತಮಾನಗಳಲ್ಲಿ ಯಾವ ಹೆಚ್ಚಿನ ಬದಲಾವಣೆಯಿಲ್ಲದೇ ಮುರಿಯಾ ಆದಿವಾಸಿಗಳು ಜೀವನ ನಡೆಸುತ್ತ ಬಂದಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಇದರಿಂದ ಆಧುನಿಕರು ಕಲಿಯುವಂತಹ ವಿಷಯಗಳು ಅನೇಕ.

ನಮ್ಮ ಜೀವನ ಮಾಪನದಿಂದ ಮುರಿಯರನ್ನು ಅಳೆದರೆ ಅವರು ಅತಿ ಬಡವರಾಗಿದ್ದಾರೆ. ತೀರ ಹಿಂದುಳಿದ ಭಾರತೀಯರು. ಆದರೆ ಅವರ ರಂಗು ರಂಗಿನ, ಬೆಡಗಿನ ಆದರೆ ಸರ್ವವಿಧದಲ್ಲಿ ಸ್ವತಂತ್ರ ಜೀವನ, ಎಂಥ ಮುಂದುವರಿದ ಜನಾಂಗಕ್ಕೂ ಸವಾಲಿನಂತಿದೆ. ಮುರಿಯರ ಹಳ್ಳಿಗಳಿಗೆ ಯಾವ ವಾಹನ ಸೌಕರ್ಯವೂ ಇಲ್ಲ, ರಸ್ತೆಗಳೂ ಇಲ್ಲ. ಅದ್ದರಿಂದ ಗುಡ್ಡಗಳನ್ನು ಹತ್ತಿ ಇಳಿದು. ದಟ್ಟವಾದ ಕಾಡುಗಳಿಂದ ಹಾದು; ಹಳ್ಳ-ಕೊಳ್ಳ ದಾಟಿ ಅಲ್ಲಿ ಮುಟ್ಟುವಾಗ ಆಧುನಿಕರಿಗೆ ಜೀವನದ ಮೇಲೆ ಜಿಗುಪ್ಸೆ ಬಂದರೆ ಆಶ್ಚರ್ಯವಿಲ್ಲ! ಈ ಆದಿವಾಸಿಗಳು ತಮ್ಮವರಲ್ಲದವರನ್ನು ಸದಾಕಾಲ ಸಂಶಯದಿಂದಲೇ ನೋಡುತ್ತಿರುತ್ತಾರೆ. ಆದರೆ ಆಗಂತುಕ, ತಮ್ಮನ್ನು ಸುಲಿಯಲು ಬಂದ ಸರಕಾರಿ ಅಧಿಕಾರಿ, ಅಥವಾ ವ್ಯಾಪಾರಿ ಅಲ್ಲವೆಂದು ಖಾತ್ರಿಯಾಯಿತೆಂದರೆ ಅವರು ಯಾವ ಮುಚ್ಚುಮರೆಯಿಲ್ಲದೇ ಅತಿಥಿಯೊಡನೆ ಬೆರೆಯುವರು. ಹಳ್ಳಿಯ ಹೃದಯಸ್ಥಾನದಲ್ಲಿ ಇರುವ ಸಾಮುದಾಯಿಕ ಕಟ್ಟಡವಾದ 'ಘೋಟುಲ'ದಲ್ಲಿ ಬಂದವನ ಆತಿಥ್ಯವಾಗುವದು. ಈ ಘೋಟುಲದ ಸುತ್ತಲೂ ಮುರಿಯರ ಮನೆಗಳು ಪಸರಿಸಿರುತ್ತವೆ. ಮನೆಗಳಿಗೆ ಹೆಚ್ಚಿನ ಆಡಂಬರವಿರುವದಿಲ್ಲ. ಹುಲ್ಲಿನ ಚಾವಣಿಯ ಒಂದು ಕೊಠಡಿ ಅವರ ಮಲಗುವ ಮನೆ, ಅಡಿಗೆಮನೆ, ಗುದಾಮು ಕೇವಲ ಛಪ್ಪರವಿದ್ದ ಮಂಟಪ ಬೈಠಕಖಾನೆ ಇದ್ದಂತೆ ಇಲ್ಲಿಯೇ ಅವರ ವಾದ್ಯಗಳನ್ನು ತೂಗುಹಾಕಿರುತ್ತಾರೆ. ಅಡಿಗೆಯ ಹೆಚ್ಚಿನ ಸಾಮಾನುಗಳನ್ನು ಪರ್ಣಗಳ ಪೊಟ್ಟಣದಲ್ಲಿಟ್ಟು ಮಾಡಿನಿಂದ ತೂಗುಬಿಟ್ಟಿರುತ್ತಾರೆ. ಮೂಲೆಯೊಂದರಲ್ಲಿ ಒಲೆ ಸದಾ ಉರಿಯುತ್ತಿರುತ್ತದೆ.

ಮುರಿಯರ ದಿನಚರಿ ನಸುಕಿನಲ್ಲೇ ಪ್ರಾರಂಭವಾಗುತ್ತದೆ. ಗೃಹಸ್ಥನು ಮೈಮುರಿದೆದ್ದು ಕಾಡಿಗೆ ಹೋಗಿ ಬಂದು ಮುಖ ತೊಳೆದು ಬೀಡಿ ತಯಾರಿಸಿ ಸೇದುತ್ತಿರುವಾಗ, ಯಜಮಾನಿ, ತಾವೇ ಬೆಳೆಸಿದ ಧಾನ್ಯಗಳ 'ಪೇಜು' (ಗಂಜಿ) ಕುದಿಸುತ್ತಾಳೆ.

ಎಲ್ಲರಿಗಾಗುವಷ್ಟು ದೊನ್ನೆಗಳನ್ನು ರಚಿಸಿದಾಗ ಅವುಗಳಲ್ಲಿ ಗಂಜಿ ಸುರಿದು ಕುಡಿದು ಎಲ್ಲರೂ ತಮ್ಮ ತಮ್ಮ ಕೆಲಸಕ್ಕೆ ಹೊರಡುವದು ವಾಡಿಕೆ. ಪುರುಷರು ಬಿಲ್ಲು ಬಾಣಗಳನ್ನು ಹೆಗಲಿಗೆ ಏರಿಸಿ, 'ಚಾಂಗಿ' (ಕಿರುಕೊಡಲಿ)ಯನ್ನು ಭುಜದ ಮೇಲಿಟ್ಟು ಕಾಡಿಗೆ ಹೊರಟರೆ, ಮಕ್ಕಳು ಮೀನು ಹಿಡಿಯಲು ಇಲ್ಲವೆ ಮನೆಯ ಆವಾರದಲ್ಲಿ ಬೆಳೆಯುವ ಕಾಯಿ ಪಲ್ಲೆ ತೋಟದಲ್ಲಿ ದುಡಿಯಲು ಹೋಗುತ್ತಾರೆ. ಗೃಹಿಣಿ ಅಡಿಗೆಯ ಮಣ್ಣಿನ ಪಾತ್ರೆಗಳನ್ನು ತೊಳೆದು ಹತ್ತಿರದ ಝುರಿಯಿಂದ ತುಂಬಾ ಪೊಳ್ಳುಮಾಡಿದ ಸೋರೆಕಾಯಿಯಲ್ಲಿ ನೀರು ತಂದಿಡುವಳು. ಹಸಿದು ಬರುವ ಗಂಡಸರು–ಮಕ್ಕಳಿಗಾಗಿ ಮನೆಯಲ್ಲಿ ಭತ್ತ ಕುಟ್ಟಿ ಮಾಡಿದ ಅಕ್ಕಿಯ ಅನ್ನ, ತೋಟ ದಲ್ಲಿ ಬೆಳೆದ ಯಾವುದಾದರೂ ತರಕಾರಿ, ಸೊಪ್ಪಿನ ಪಲ್ಯೆ ಮಾಡಿಟ್ಟು, ಸಂಗ್ರಹದಲ್ಲಿದ್ದ ಕಾಳು–ಕಡಿ ಗಳಿಗೆ ಕೀಟಬಾಧೆ ತಗಲದಂತೆ ಬಿಸಿಲಿಗೆ ಹಾಕು



ಹುರಿ ಹಾಕಿ ಹೆಣೆಯುವುದರಲ್ಲಿ ಮೈಮರೆಯುತ್ತಾನೆ

ವಳು. ಸಮಯ ಉಳಿದರೆ, ಪಕ್ಕದ ಕಾಡಿಗೆ ಹೋಗಿ ಉರುವಲಿಗೆ ಒಣಗಿದ ರೆಂಬೆ, ಕಟ್ಟಿಗೆ, ದ್ರೋಣ ಗಳಿಗಾಗಿ ಪರ್ಣಗಳನ್ನು ಸಂಗ್ರಹಿಸಿ ತರುವಳು. ಮುರಿಯರು, ದೇಹದ ಬಟ್ಟೆ ಬರೆಯ ಸ್ವಚ್ಛತೆಗೆ ವಿಶೇಷ ಗಮನಕೊಡುತ್ತಾರೆ. ಪ್ರತಿದಿನವೂ ಹತ್ತಿ ರದ ಕೊಳ, ಹೊಂಡ, ನದಿಗಳಲ್ಲಿ ಸ್ನಾನ ಮಾಡುವರು. ಬಟ್ಟೆ ಒಗೆಯುವರು. ಹೆಂಗಳೆಯರು ಯಾವ ಮುಚ್ಚುಮರೆ ಇಲ್ಲದೆ ನಗ್ನರಾಗಿಯೇ ಸ್ನಾನ ಮಾಡು ವರು. ನಾಲ್ಕು ಗೋಡೆಗಳ ಬಚ್ಚಲಲ್ಲಿ ಇಲ್ಲದ ಸುರಕ್ಷತೆ ಅವರಿಗೆ ನಿಸರ್ಗದ ಮಡಿಲಲ್ಲಿ ಲಭಿಸಿದೆ! ಮುರಿಯ ಪುರುಷರು ಹೆಂಗಳೆಯರಂತೇ ಕೂದ ಲನ್ನು ಬೆಳೆಸಿ ಎಣ್ಣೆ ಹಚ್ಚಿ ಬಾಚಿ ಮುಡಿ ಕಟ್ಟಿ ಕೊಳ್ಳುವರು. ಅದಕ್ಕೊಂದು ಬಾಚಣಿಗೆ ಸಿಕ್ಕಿಸಿ, ಬಣ್ಣ ಬಣ್ಣದ ಹೂ ಮುಡಿಯುವರು. ಕಿವಿ ಕೊರಳು ಕೈಗಳಿಗೆ ಆಭರಣ ತೊಡುವರು. ಹೆಣ್ಣು ಮಕ್ಕಳು ಮಣಿಸರಗಳೊಂದಿಗೆ ನಾಣ್ಯಗಳ ಹಾರ, ಬೆಳ್ಳಿಯ ಡಾಬು ವಂಕಿಗಳನ್ನು ಧರಿಸುತ್ತಾರೆ. ಗಂಡಸರು ಅಂಗವಸ್ತ್ರವೊಂದನ್ನು ಸೊಂಟಕ್ಕೆ ಬಿಗಿದು, ಹೂ, ಬಣ್ಣದ ಪುಕ್ಕ ಓರಣವಾಗಿ ಸಿಗಿಸಿ ಕಿರಿ ರುಮಾಲು ತಲೆಗೆ ಸುತ್ತಿಕೊಳ್ಳುತ್ತಾರೆ. ಹೆಂಗಳೆಯರು ಕಿರಿದಾದ ಕಿರಿಗೆಯನ್ನು ಸೀರೆಯಂತೆ ಉಡಹೋಗಿ ದೇಹದ ಉಬ್ಬು ತಗ್ಗುಗಳನ್ನು ಮುಚ್ಚಲು ಅಸಮ ರ್ಥರಾಗಿರುತ್ತಾರೆ! ಕೇವಲ ಐದು ದಶಕಗಳ ಹಿಂದೆ ಈ ಜನಾಂಗದವರು ಬಟ್ಟೆಯ ಬದಲಾಗಿ ಪರ್ಣಗಳನ್ನು ಬಳಸುತ್ತಿದ್ದರು.

ಸೂರ್ಯದೇವ ನಡುನೆತ್ತಿಯ ಮೇಲೆ ಬಂದಾಗ ಮುರಿಯರು ಗೃಹಾಭಿಮುಖರಾಗುವರು. [illegible] ಮೀನು, ಕಾಯಿಪಲ್ಲೆ ಹೊತ್ತು ತರುವರು. ಗೃಹಿಣಿ ಲಗುಬಗೆಯಿಂದ ಮೀನು, ಮಾಂಸದ ವ್ಯಂಜನ ಮಾಡುವದರಲ್ಲಿ ತೊಡಗಿದರೆ ಮಕ್ಕಳು ಸೀಳಿದ ಬಿದಿರಿನಿಂದ ಊಟಕ್ಕಾಗಿ ಬುಟ್ಟಿ ಹೆಣೆಯು ವರು, ಗೃಹಸ್ಥ ಬೀಡಿ ಹೊತ್ತಿಸಿ ನೆನೆಹಾಕಿದ ಮರದ ತೊಗಟೆಗೆ ಹುರಿಹಾಕಿ ಹಗ್ಗವನ್ನು ಹೆಣೆಯುವದರಲ್ಲಿ ಮೈಮರೆಯುವನು. ಈ ಹಗ್ಗದಿಂದ ಅವನು ಮನೆ ಕಟ್ಟಬಲ್ಲ, ಮಂಚ ತಯಾ ರಿಸಬಲ್ಲ, ಬೇಲಿ ಹಾಕಬಲ್ಲ. ತೊಟ್ಟಿಲು ತೂಗ

ಬಲ್ಲ. ಊಟ ಸಿದ್ಧವಾದಾಗ ದೊನ್ನೆ ಅಥವಾ ಬುಟಿ ಯಲ್ಲಿ ಅನ್ನ ಹಾಕಿಕೊಂಡು, ಪಲ್ಲೆ ಸುರಿದು ಕೊಂಡು ಎಲ್ಲರೂ ಜೊತೆಯಾಗಿ ಉಣ್ಣುವರು. ತಮಗೆ ಬೇಕಾದಷ್ಟು ತಾವೇ ಬಡಿಸಿಕೊಳ್ಳುವರು.

ಊಟದ ನಂತರ ಆರೋಗ್ಯಕ್ಕೆ ಒಳ್ಳೆಯದೆಂದು ಅಕ್ಕಿಯ ಸೆರೆ(ಲಾಂದಾ)ವನ್ನು ಮಕ್ಕಳು, ಹೆಂಗ-ಸರು ಎಂದು ಭೇದಭಾವವಿಲ್ಲದೇ ಎಲ್ಲರೂ ಸೇವಿ ರಿಸುವರು. ಮತ್ತೆ ಗೃಹಿಣಿ ಸಾಯಂಪಾಕದ ತಯಾ ರಿಯಲ್ಲಿದ್ದಾಗ ಗಂಡಸರು ಒಂದೆಡೆ ಸೇರಿ ಸರದಿ ಯಂತೆ ಗಾಂಜಾ ಸೇದುತ್ತ ವಿರಮಿಸುವರು. ಮುರಿಯರು ತಮಗೆ ಬೇಕಾದಷ್ಟು ಗಾಂಜಾ, ಅಫೀಮು ತಾವೇ ಸಿದ ಮಾಡಿಕೊಳ್ಳುವಂತೆ ಒಳ್ಳೆಯ ಸೆರೆಯನ್ನೂ ಮನೆಯಲ್ಲಿಯೇ ತಯಾ ರಿಸುತ್ತಾರೆ. ಅಮಲಿನ ಜೊತೆ ಪೌಷ್ಟಿಕ ಆಹಾರ ವೂ ಆದ ಲಾಂದಾ ಪ್ರತಿದಿನ ಸೇವಿಸಿದರೆ, ಮಹುವಾಮರ ಹೂ ಬಿಟ್ಟ ದಿನಗಳಲ್ಲಿ ಅವನ್ನು ಸಂಗ್ರಹಿಸಿ ಸುರಂರ್ಮಾ ಸೆರೆ ತಯಾರಿಸಿ ಕುಡಿಯು ತ್ತಾರೆ. ಹಬ್ಬ ಹುಣ್ಣಿವೆ ಮದುವೆಗಳಂತಹ ವಿಶೇಷ ಸಂದರ್ಭಗಳಲ್ಲಿ ಭರಣಿಗೆ ಮರದಿಂದ ತಯಾರಿಸಿದ 'ಸಲ್ಫಿ' ಸರಾಯಿ ಸೇವಿಸುವರು. ಅವ ಕಾಶ ಸಿಕ್ಕಾಗ ಕಾಡು ಖರ್ಜೂರ ತಾಳೆಮರ ಗಳಿಂದಲೂ ರುಚಿಕಟ್ಟಾದ ಮದ್ಯ ಇಳಿಸಬಲ್ಲರು.

ಘೋಟುಲ ಮುರಿಯರ ವಿದ್ಯಾಲಯದಂತೆ ಅಥವಾ ಜೀವನ ಶಿಕ್ಷಣ ಕೇಂದ್ರವಿದ್ದಂತೆ. ಗುಡಿಸಲು ಗಳು ತೀರ ಚಿಕ್ಕದಾಗಿರುವದರಿಂದಲೋ ಏನೋ ಆರು ವರ್ಷಕ್ಕೆ ಮೇಲ್ಪಟ್ಟ ಮಕ್ಕಳೆಲ್ಲ ಘೋಟು ಲದಲ್ಲಿ ಮಲಗಲು ಹೋಗುತ್ತಾರೆ. ಘೋಟುಲದ ಆಡಳಿತವನ್ನು ಸ್ವಲ್ಪ ದೊಡ್ಡ ಹುಡುಗರು ನೋಡಿ ಕೊಳ್ಳುತ್ತಾರೆ. ಹುಡುಗ-ಹುಡುಗಿಯರಿಗೆ ಬೇರೆ ಬೇರೆ ಕೆಲಸಗಳನ್ನು ಹಂಚಿ ಕೊಡಲಾಗುತ್ತದೆ. ಕುಮಾರಿಯರು ಕಸ ಗುಡಿಸುವರು, ಸಾರಿಸುವರು, ರಂಗವಲ್ಲಿ ಹಾಕುವರು; ಹುಡುಗರು ಕಾಡಿಗೆ ಹೋಗಿ ಕಟ್ಟಿಗೆ ತರುವರು, ಬೇಲಿ ಹೆಣೆಯುವರು, ಚಪ್ಪರ ಹಾಕುವರು. ಹೆಂಗಳೆಯರಿಗೆಂದು ಕಟ್ಟಿಗೆ ಸೀಳಿ ಹಣಿಗೆ ತಯಾರಿಸುವರು. ನಸುಗತ್ತಲಾದೊಡನೆ ಮನೆಯಲ್ಲಿ ಊಟ ತೀರಿಸಿಕೊಂಡು ಎಳೆಯರೆಲ್ಲ ಘೋಟುಲಕ್ಕೆ ಬಂದುಬಿಡುತ್ತಾರೆ, ಅಲ್ಲಿ ಹಿತವಾಗಿ ಉರಿಯುವ ಬೆಂಕಿಯ ಸುತ್ತಲೂ ಕಿರುಮಣೆ



ಮಕ್ಕಳು ಬುಟ್ಟಿ ಹೆಣೆಯುತ್ತಾರೆ

ಗಳನ್ನು ಹಾಕಿಕುಳಿತುಕೊಂಡು ಹರಟೆ ಹೊಡೆಯು ತ್ತಾರೆ. ಕತೆ ಹೇಳುತ್ತಾರೆ, ಹಾಡುತ್ತಾರೆ, ದಣಿ ಯದೇ ಇದ್ದರೆ ಕುಣಿಯುತ್ತಾರೆ, ಹಿಮ್ಮೇಳಕ್ಕೆ ಮೃದಂಗ ಬಾರಿಸುತ್ತಾರೆ. ಗಂಡು-ಹೆಣ್ಣು ಭೇದ ವಿಲ್ಲದೇ ಗೆಳೆಯ-ಗೆಳತಿಯರು ಜೊತೆಜೊತೆಯಾಗಿ ಒಂದೇ ಚಾಪೆಯ ಮೇಲೆ ಮಲಗುವದು ರೂಢಿ. ಮಕ್ಕಳು ಬೆಳೆದಂತೆ ಬೆಂಕಿಯ ಹತ್ತಿರ ಇಟ್ಟ ಬೆಣ್ಣೆ ಕರಗಿದರೆ ಅವರ ಸಮಾಜ ಏನೂ ಆಕ್ಷೇಪ ಎತ್ತ ಲಾರದು. ಆದರೆ ಕನ್ಯೆ ತಾಯಿಯಾಗುವ ಲಕ್ಷಣ ಕಂಡು ಬಂದರೆ ಆಕೆಯ ಗೆಳೆಯನೊಂದಿಗೆ ವಿವಾಹ ಏರ್ಪಡಿಸಲಾಗುವದು. ಘೋಟುಲದಲ್ಲಿ ಎಲ್ಲ ಸದಸ್ಯರು ವಿವಾಹ ಸಡಗರದಲ್ಲಿ ಪಾಲುಗೊಳ್ಳು ವರು. ಅವರಿಗೆಲ್ಲ ಭೋಜನ, ಸೆರೆ ಪೂರೈಸುವದು ವರನ ಜವಾಬ್ದಾರಿ. ವಿವಾಹದ ನಂತರ ದಂಪತಿ ಗಳಿಗೆ ಘೋಟುಲದಲ್ಲಿ ಪ್ರವೇಶ ನಿಷಿದ್ಧ. ಹೀಗಾಗಿ ಅವರು ಪ್ರತ್ಯೇಕ ಗುಡಿಸಲು ಕಟ್ಟಿಕೊಂಡು

ಸಂಸಾರ ಪ್ರಾರಂಭಿಸುತ್ತಾರೆ. ಮದುವೆಯಾಗದ ಎಳೆಯರು ನಸುಕಿನಲ್ಲೇ ಎದ್ದು ಚಾಪೆಗಳನ್ನು ಮಡಿಸಿಟ್ಟು ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ.

ಗುಡಿಸಲು ತೀರ ಚಿಕ್ಕದಾಗಿರುವದರಿಂದಲೋ ಅವರ ಪ್ರಕೃತಿ ಪ್ರೇಮದಿಂದಲೋ, ಮುರಿಯರು ದಾಂಪತ ಸುಖವನ್ನು ಅನುಭವಿಸುವದು ನಿಸರ್ಗದ ಮಡಿಲಲ್ಲೇ. ವೈವಾಹಿಕ ಜೀವನದಲ್ಲಿ ಪರಸ್ಪರ ಪ್ರಾಮಾಣಿಕತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಪತ್ನಿಗೊಬ್ಬ ಪ್ರೇಮಿಯಿದ್ದ ಸುಳಿವು ಹತ್ತಿದರೆ, ಅವನನ್ನು ಪತಿ ಕೊಲೆ ಮಾಡಿದರೂ ಅದು ಕ್ಷಮ್ಯವೇ! ವಿವಾಹಕಾಲದಲ್ಲಿ ಅಕ್ಕಿ, ಸೆರೆ, ಧಾನ್ಯಗಳ ರೂಪದಲ್ಲಿ ವಧುದಕ್ಷಿಣೆಯನ್ನು ಕೊಡುವುದು ವಾಡಿಕೆಯಾದ್ದರಿಂದ ಪತ್ನಿ ಬೇರೊಬ್ಬನೊಡನೆ ವಿವಾಹವಾಗಬಯಸಿದರೆ, ಅವಳ ತಂದೆ ವಧುದಕ್ಷಿಣೆಯನ್ನು ಹಿಂತಿರುಗಿಸುವ ಏರ್ಪಾಡು ಮಾಡಬೇಕಾಗುವದು. ಅಣ್ಣನು ಹುಲಿಯ ಬಾಯಿಗೆ ತುತ್ತಾದರೆ ಅಥವಾ ಅಕಾಲ ಮೃತ್ಯುವಿಗೆ ಈಡಾದರೆ. ಅವನ ಪತ್ನಿಯನ್ನು ಅವನ ತಮ್ಮನೇ ವರಿಸುತ್ತಾನೆ. ವಿವಾಹ ಕಾಲದಲ್ಲಿ ಹಳ್ಳಿಗೆಲ್ಲಾ ಭೋಜನ, ಪಾನದ ವ್ಯವಸ್ಥೆ ಮಾಡಲಾಗುತ್ತದೆ.

ಹಬ್ಬ ಹುಣ್ಣಿವೆಗಳಲ್ಲಿ ವಿಶೇಷ ನೃತ್ಯಕೂಟಗಳನ್ನು ಏರ್ಪಡಿಸಲಾಗುತ್ತದೆ. ಯುವಜನರು ತಮ್ಮ ನೃತ್ಯ ಪೋಷಾಕುಗಳನ್ನು ಬೆಲೆ ಬಾಳುವ ಒಡವೆಗಿಂತ ಭದ್ರವಾಗಿಟ್ಟುಕೊಳ್ಳುತ್ತಾರೆ. ಅವುಗಳನ್ನು ಹೊರತೆಗೆದು ಒಂದೊಂದಾಗಿ ಜೋಡಿಸಿ ಕನ್ನಡಿಯಲ್ಲಿ ನೋಡಿ ಅಲಂಕರಿಸಿಕೊಳ್ಳುವದಕ್ಕೆ ಎರಡು ತಾಸಾದರೂ ಬೇಕು. ಬರಿ ಮೈಯಿಂದ ಕಾಡಿನಲ್ಲಿ ಅಲೆಯುವ ಮುರಿಯನನ್ನು ಯಕ್ಷಗಾನದ ಕಟ್ಟುವೇಷದಂತಹ ಉಡಿಗೆಯಲ್ಲಿ ಗುರುತಿಸುವದು ಕಷ್ಟ. ಕೆಲ ಮಟ್ಟಿಗೆ ಕರಾವಳಿ ಸುಗ್ಗಿ ಹಬ್ಬದಲ್ಲಿ ಅಲಂಕರಿಸಿಕೊಂಡು ಕುಣಿಯುವ ಹಾಲಕ್ಕಿಗೌಡನನ್ನು ಈತ ಹೋಲುತ್ತಾನೆ. ತಲೆಗೆ ರುಮಾಲು ಸುತ್ತಿ ಅದಕ್ಕೆ ಬಣ್ಣ ಬಣ್ಣದ ಮಣಿಗಳ ಸರಗಳನ್ನು ಕಟ್ಟಿ, ಕೆಂಬಣ್ಣದ ಗೋಡೆಗಳನ್ನು ತೂಗಿ ಬಿಡುತ್ತಾನೆ. ವಿವಿಧ ಬಣ್ಣದ ಹಕ್ಕಿಗರಿಗಳಗುಚ್ಛವನ್ನು ರುಮಾಲಿನ ಮಧ್ಯದಲ್ಲಿ ಸಿಕ್ಕಿಸಿಕೊಂಡಿರುತ್ತಾನೆ. ಗುಚ್ಛದ ಅಡಿಯಲ್ಲಿ ಕಾಡು ಹಾದಿಯ ಜೋಡಿ ಕೋರೆ ಹಲ್ಲು ಸಿಗಿಸಿ ಎಲ್ಲ ಬಗೆಯ ಮಣಿ



ಹಾಲಕ್ಕಿ ಗೌಡನಂತೆ ಸಿಂಗರಿಸಿಕೊಂಡು...

ಸರಗಳನ್ನು ಸುತ್ತುತ್ತಾನೆ. ಕೊರಳಿಗೂ ಮಣಿಸರಗಳು. ರಬ್ಬಾದ ಅಂಚಿನ ಕಿರು ಪಂಚೆಯನ್ನು ಸೊಂಟಕ್ಕೆ ಬಿಗಿದು ಅದರ ಮೇಲೆ ಭಾರವಾದ ಕಂಚಿನ ಗಂಟೆಗಳನ್ನು ಹಿಂಬದಿಗೆ ಬರುವಂತೆ ಕಟ್ಟಿಕೊಳ್ಳುತ್ತಾನೆ. ಕೈಯಲ್ಲಿ ಕೊಡಲಿ, ಕೊಡೆ ಇಲ್ಲವೇ ದೊಣ್ಣೆ ಇರಬೇಕು. ಹೆಂಗಳೆಯರೂ ಅಲಂಕಾರದಲ್ಲಿ ಹಿಂದೆ ಬೀಳುವದಿಲ್ಲ. ಹಣೆಯ ಮೇಲೆ ನಾಲ್ಕಾರು ಬಗೆಯ ಮಣಿ ಸರಗಳು. ಅವಕ್ಕೆ ರೇಶಿಮೆ ಗೊಂಡೆಗಳು. ಹತ್ತಾರು ಬಾಚಣಿಕೆಗಳನ್ನು ಕೂದಲಲ್ಲಿ ಸಿಗಿಸುತ್ತಾರೆ. ಕೊರಳು ಕೈಗಳಿಗೆ ತುಂಬ ಸರ ಮತ್ತು ಬಳೆಗಳು. ಕತ್ತಲಾಯಿತೆಂದರೆ ಸ್ವಲ್ಪ ಸೆರೆ ಸೇವಿಸಿ ಕುಣಿಯಲಾರಂಭಿಸಿದರೆ ಎಂಥ ಪಾತ್ರಿಮಾತ್ರರನ್ನೂ ಹಿಂದೆ ಹಾಕುತ್ತಾರೆ. ಚಳಿಗೆ ನೃತ್ಯದ ಬಯಲಿನಲ್ಲಿ ಅಲ್ಲಲ್ಲಿ ಬೆಂಕಿ ಉರಿಸಿರುತ್ತಾರೆ. ಜೋಡಿಗಳು ನರ್ತಿಸಿ ದಣಿದಾಗ, ಬೆಂಕಿಯ ಸುತ್ತ ಕುಳಿತು ಹರಟೆ ಹೊಡೆಯುತ್ತಾ, ಲಾಂದಾ, ಸಲ್ಫಿ ಸೇವಿಸುತ್ತಾರೆ.

ಇಡೀ ರಾತ್ರಿ ನೃತ್ಯ ನಡೆಯುವದು ವಾಡಿಕೆ. ನಡುವೆ ಜೋಡಿಗಳು ಪಕ್ಕದ ಕಾಡಿನಲ್ಲಿ ಹೋಗಿ ಬರುವದು ತ್ಯಾಜ್ಯವಲ್ಲ.

ಸಮೀಪದ ಊರಲ್ಲಿ ವಾರಕ್ಕೊಮ್ಮೆ ನಡೆಯುವ ಸಂತೆ ಮುರಿಯಗೆ ಹಬ್ಬದಷ್ಟು ಮಹತ್ವದ್ದು. ಅಲ್ಲಿ ಆಪ್ತರು-ಪರಿಚಯದವರು ಭೆಟ್ಟಿಯಾಗುತ್ತಾರೆ. ರಸಿಕರು ಕೋಳಿ ಅಂಕ ನಡೆಸುತ್ತಾರೆ. ಗೆಲ್ಲಲಿ, ಬಿಡಲಿ ಗೆಲುವಾಗಿರುತ್ತಾರೆ. ಸಂತೆಗಳಲ್ಲಿ ಹೆಚ್ಚಾಗಿ ಬೇಡಿಕೆ ಇರುವದು ಎಣ್ಣೆ-ಉಪ್ಪು-ಮೆಣಸಿಗೆ. ಮಕ್ಕಳಿರುವವರು ಸ್ವಲ್ಪ ಬೆಲ್ಲವನ್ನು ಕೊಂಡುಕೊಳ್ಳಬಹುದು. ಇಲ್ಲಿ ಹಣ ಕೊಡುವದಕ್ಕಿಂತ ಮುರಿಯರು ತಾವು ಬೆಳೆಸಿದ ಇಲ್ಲವೇ ಕಲೆಹಾಕಿದ ಸಾಮುಗ್ರಿ ಕೊಟ್ಟು ತನಗೆ ಬೇಕಾದ್ದನ್ನು ಕೊಳ್ಳುವ ಪರಿಪಾಠವೇ ಹೆಚ್ಚು.

ಮುರಿಯರು ಸತ್ತವರನ್ನು ಹೂಳಿ ಅಲ್ಲೊಂದು ಸ್ಮಾರಕ-ಕೊರಡು ನಿಲ್ಲಿಸುತ್ತಾರೆ. ಹಳ್ಳಿಯ ಪ್ರಮುಖ ವ್ಯಕ್ತಿ ಸತ್ತರೆ ದಹನವಾಗುವದು. ಮದುವೆಯಂತೆ ಮರಣ ಸಂಭವಿಸಿದರೂ ಇಡೀ ಹಳ್ಳಿ ಕಲೆಯುವದು. ಹಳಿಯೇ ಒಂದು ಮಹಾ ವ್ಯಕ್ತಿ ಇದ್ದಂತೆ. ಹಳ್ಳಿಯವರೆಲ್ಲ ಕೂಡಿ ಕೃಷಿ ಮಾಡುವರು. ಹಬ್ಬದ ದಿನಗಳಲ್ಲಿ ಎಲ್ಲರೂ ಕೂಡಿ ಬೇಟೆಗೆ ಹೋಗುವರು, ಕೂಡಿ ಕುಣಿಯುವರು, ಕೂಡಿ ಕುಡಿಯುವರು ಕಳ್ಳ-ಸುಲಿಗೆಗಳಿಗೆ ಆಸ್ಪದವಿಲ್ಲ. ಸುಳ್ಳು ಹೇಳಿ ಸ್ವಾರ್ಥ ಸಾಧಿಸುವ ಸಾಮರ್ಥ್ಯ ಇಲ್ಲ. ಕೆಟ್ಟ ಕಾಲದಿಂದ ರಕ್ಷಣೆ ಬೇಕಾಗಿಲ್ಲ. ಮುರಿಯರು ತುಂಬ ತಿಳಿ ಹೃದಯದವರು, ವಿನೋದಪ್ರಿಯರು, [illegible] ಸದಾ ಸುಖಿಗಳು.

[illegible] ಶಿಕ್ಷಣ ಪಡೆದ ನಮಗೆ ಖರ್ಚಿಯ ಮೇಲೆ ಕುಳಿತು ಮಾಡುವ ನೌಕರಿ ಅಷ್ಟೇ ಬರುತ್ತದೆ. ಕೆಲ ವರ್ಷ ಅದನ್ನು ಮಾಡಿದರೆ ಬೇರಾವುದೂ ಬರದು ನಮಗೆ. ಅದೇ ಮುರಿಯರು ಹಗ್ಗ ಮಾಡಬಲ್ಲರು, ಬಲೆ ಹೆಣೆಯ ಬಲ್ಲರು, ಮನೆ ಕಟ್ಟಬಲ್ಲರು, ಬೇಟೆಯಾಡಿ, ಮೀನು ಹಿಡಿಯಬಲ್ಲರು, ಕೃಷಿ ಮಾಡಬಲ್ಲರು, ಹಲವಾರು ಔಷಧಿಗಳನ್ನು ಮಾಡಬಲ್ಲರು, ಕೊರಡು ಕೊರೆದು ಮಣ್ಣಿನ ಮೂರ್ತಿಗಳನ್ನು ಮಾಡಬಲ್ಲರು, ಚಿತ್ರ ಬಿಡಿಸಬಲ್ಲರು ವಾದ್ಯ ನುಡಿಸಬಲ್ಲರು, ನರ್ತಿಸಬಲ್ಲರು, ಹಾಡಬಲ್ಲರು, ರುಚಿಯಾದ ಸೆರೆಯಿಳಿಸಬಲ್ಲರು. ಎಲ್ಲಕ್ಕಿಂತ ಹೆಚ್ಚೆಂದರೆ ಪ್ರಾಮಾಣಿಕರು, ಸತ್ಯವಂತರು, ಮೋಸ ವಂಚನೆ ಅರಿಯದವರು. ಸಾಂಸಾರಿಕ ಜೀವನದಲ್ಲಿ ಪ್ರಾಮಾಣಿಕರು. ಹಣ ಬೆಳ್ಳಿ ಬಂಗಾರಗಳಲ್ಲಿ ಅವರು ಕಡು ಬಡವರಾದರೂ ಜೀವನದಲ್ಲಿ ಸಾಧಿಸಿದ ಅಪಾರ ಮೌಲ್ಯಗಳಲ್ಲಿ ಅವರೊಡನೆ ಸ್ಪರ್ಧಿಸುವದು ನಮ್ಮಿಂದ ಎಂದಾದರೂ ಸಾಧ್ಯವಾದೀತೇ? ಆದರೆ ಜೀವನದ ತಿರುಳನ್ನು ಕಂಡುಕೊಂಡ ಮುರಿಯರಂತಹ ಆದಿವಾಸಿಗಳನ್ನು ನಾಗರಿಕರನ್ನಾಗಿ ಮಾಡಲು ಸರಕಾರ, ಸಮಾಜ ಹಣದ ಹೊಳೆಯನ್ನೇ ಹರಿಸುತ್ತದೆ. ಮುರಿಯರಿಗೆ ಇವಾವವೂ ಬೇಕಿಲ್ಲ. ತಮ್ಮಷ್ಟಕ್ಕೆ ಜೀವಿಸಲು ಬಿಡದೆ ತಮ್ಮ ಮೇಲೆ ನಾಗರಿಕತೆ ಹೇರುತ್ತಿದ್ದಾರೆ ಎಂದು ಅನುಮಾನ ಬಂದೊಡನೆ ಅಲ್ಲಿಂದ ಕಾಲು ಕಿತ್ತು ದಟ್ಟವಾದ ಕಾಡಿಗೆ ಹೋಗುತ್ತಾರೆ. ಇಂಥವರನ್ನು ನಮ್ಮಂತೆ ಮಾಡಲು ಯತ್ನಿಸಬೇಕೇ? ಅವರಷ್ಟಕ್ಕೆ ಅವರನ್ನು ಬಿಡಬೇಕೇ? ಎಂದು ನಾವೆಲ್ಲ ವಿಚಾರ ಮಾಡಬೇಕಾದ ಪ್ರಶ್ನೆ. ✡

ಆತ ಸರಕಾರಿ ನೌಕರ, ಪ್ರಥಮ ದರ್ಜೆಯ ಗುಮಾಸ್ತ. ಮುಂಜಾನೆಯ ಕಾಫಿ ಮುಗಿಸಿದ. ಪತ್ರಿಕೆಗಳನ್ನೋದುವುದರಲ್ಲಿ ಮಗ್ನನಾದ. ಹನ್ನೆರಡು ಗಂಟೆಯು ಹೋಯ್ತು. ಗಡಿಯಾರ ಹೊತ್ತು ತಿಳಿಸಿತು, ಗಂಟೆಯ ಮೂಲಕ. ಆತ "ಇನ್ನೊಂದು ಕಾಫಿ" ಎಂದು ಕೂಗಿದ. "ಏನು ? ಕಾಫೀನಾ ?" ಒಳಗಿನಿಂದ ದನಿ ಬಂತು. "ಅದೆ, ಇದೊಳ್ಳೆ ಪ್ರಶ್ನೆ. ತಂದ್ಕೊಡಬಾರ್ದೆ ಸುಮ್ನೆ" ಅಂದ ಆತ. "ಆಫೀಸಿಗೆ ಹೋಗಲಾ ?" ಬಂತು ದಬಾವಣೆ. "ಆಫೀಸಾ ? ಮತ್ತೆ ನಾನೇನು ಮನೇಲಿದೀನಿ ಅಂದ್ಕೊಂಡಿದ್ದೀ ?" ಎಂದು ಸುತ್ತ ನೋಡುತ್ತಾನೆ- ತಾನಿರುವುದು ಮನೇಲೆ ಎಂದು ತಿಳಿದು, "ಅರೆ ಇದು ಮನೇನಾ ?" ಅಂದ ಆ ಮಹಾಶಯ.

“ಹರಿಜನರೊಂದಿಗೆ ಬೆರೆತು ಬಾಳಿ ಅವರೂ ಮಾನವ-ಕುಟುಂಬದ ಸಮಾನ ಸದಸ್ಯರೆಂಬುದನ್ನು ಅರಿತುಕೊಳ್ಳುವುದಕ್ಕಿಂತ ಹೆಚ್ಚಿನ ಶಿಕ್ಷಣ ಇನ್ನೊಂದಿಲ್ಲ”

– ಗಾಂಧೀಜಿ

ಕರ್ನಾಟಕದಲ್ಲಿ ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಜನಾಂಗದ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ– ಈ ಸೌಲಭ್ಯ ಒಂದು ಲಕ್ಷ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಲಭ್ಯ.

ಮೂವತ್ತೊಂದು ಸಾವಿರ ಶಾಲಾನಂತರದ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ವಿದ್ಯಾರ್ಥಿ ವೇತನ ದೊರೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗಳಿಗಾಗಿ ೧೨೫ ರೂಪಾಯಿಗಳ ವರೆಗೂ ಹೆಚ್ಚಿನ ಧನ ಸಹಾಯ.

ಐವತ್ತು ಸಾವಿರ ಪರಿಶಿಷ್ಟ ಜಾತಿ, ಜನಾಂಗ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸರಕಾರಿ ಹಾಗೂ ಧನ ಸಹಾಯ ಪಡೆದ ೧೦೭೬ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಸೌಲಭ್ಯಗಳ ಏರ್ಪಾಡು.

ಕರ್ನಾಟಕ– ಬಡವರ ಏಳಿಗೆಗಾಗಿ
ನಿರಂತರ ಯತ್ನ ನಡೆಯುತ್ತಿರುವ ರಾಜ್ಯ.

ಮಲ್ಲಿಗೆ ನಿಮ್ಮ ಸೌಭಾಗ್ಯದ ಗಣಿಯಾಗಬಹುದು


ಬಿ. ಕೆ. ತುಂಗಪ್ಪ

ಹೂವಿನ ಗಿಡಗಳನ್ನು ಬೆಳೆದು ಅವುಗಳು ಬಿಡುವ ಹೂಗಳನ್ನು ಪಟ್ಟಣಗಳಿಗೆ ಸರಬರಾಜು ಮಾಡುವುದು ಇಂದು ದೇಶದಲ್ಲಿ ಲಾಭದಾಯಕ ವಾದ ಉದ್ಯಮವಾಗಿ ಬೆಳೆಯುತ್ತಿದೆ. ಭಾರತದಲ್ಲಿ ಹೂಗಿಡಗಳನ್ನು ಬೆಳೆಯುವುದು ಅನಾದಿಕಾಲ ದಿಂದಲೂ ಬಂದಿದೆ. ಹೆಚ್ಚಾಗಿ ಹೂಗಳನ್ನು ಹೆಂಗ ಸರು ಮುಡಿಯುವ ಅಲಂಕಾರದ ಹೂಗೊಂಚಲು ಮಾಲೆಗಳಾಗಿ ಉಪಯೋಗಿಸುತ್ತಾರೆ. ದೇವರ ಪೂಜೆ ಮತ್ತು ಅಂದವಾಗಿ ಅಲಂಕರಿಸುವ ಹೂವು ಗಳಿಗೆ ಹೆಚ್ಚು ಪ್ರಾಶಸ್ತ್ಯವಿದೆ. ಇವು ಹಿಂದೂ ಸಂಸ್ಕೃತಿಯ ಶ್ರೇಷ್ಠ ಸಂಪ್ರದಾಯವೆಂದು ಹೇಳ ಬಹುದು. ಹೆಚ್ಚು ಬೆಲೆ ಬಾಳುವ ಹೂಗಳೆಂದರೆ, ಸುಗಂಧರಾಜ, ಗುಲಾಬಿ, ಮಲ್ಲಿಗೆ, ಸಂಪಿಗೆ.

ಪಾಶ್ಚಿಮಾತ್ಯ ದೇಶದಲ್ಲಿ ಈ ಹೂಗಳ ಉಪ ಯೋಗವು ಬೇರೆಯಾಗಿರುತ್ತದೆ. ಅಲ್ಲಿ ಹೂಗಳನ್ನು ಬೆಳೆಯುವುದು ಮುಖ್ಯವಾಗಿ ಅವುಗಳಲ್ಲಿರುವ ಪರಿ ಮಳವನ್ನು ಪರಿಷ್ಕರಿಸುವುದಕ್ಕೆ ಮಾತ್ರ. ಈ ಪರಿ ಮಳ ಸರಗಳು ಬಹು ಬೆಲೆ ಬಾಳುವುದಲ್ಲದೆ, ವಿಶ್ವದ ಹೆಸರಾಂತ ಪರಿಮಳ ಮತ್ತು ಶೃಂಗಾರ ವಸ್ತುಗಳ ತಯಾರಿಕೆಯಲ್ಲಿ ಬಳಸದೆ ವಿಧಿಯಿಲ್ಲ. ಪುಷ್ಪಪರಿಮಳಗಳಲ್ಲಿ ಅತಿಮುಖ್ಯವಾದವು ಮಲ್ಲಿಗೆ ಮತ್ತು ಗುಲಾಬಿ. ಇವು ಸುಗಂಧಗಾರನ ಮನ ಸ್ಸನ್ನು ಸೂರೆಗೊಂಡಿವೆ. ಆದರೆ ಇವೆರಡರಲ್ಲಿ ಯಾವುದು ಹೆಚ್ಚು ಎಂದು ಹೇಳುವುದು ಕಷ್ಟ.

ದಕ್ಷಿಣ ಫ್ರಾನ್ಸ್ ದೇಶದ ಅಲ್ಪ್ಸ್ ಪರ್ವತ ಮತ್ತು ಮೆಡಿಟರೇನಿಯನ್ ತೀರ ಪ್ರದೇಶ ಗಳಲ್ಲಿ ಅದರಲ್ಲೂ ಮುಖ್ಯವಾಗಿ ಕ್ಯಾನ್ಸ್, ನೀಸ್, ಗ್ರ್ಯಾಸ್ ಪಟ್ಟಣಗಳ ಸಮೀಪದಲ್ಲಿ ಕಳೆದ ೨೦೦ ವರ್ಷಗಳಿಂದ ಅನೇಕ ಬಗೆಯ ಅಂದರೆ ಮುಖ್ಯವಾಗಿ ಮಲ್ಲಿಗೆ, ಸುಗಂಧರಾಜ, ಗುಲಾಬಿ ಮುಂತಾದ ವಿವಿಧ ಪರಿಮಳ ಬೀರುವ ಹೂವಿನ ತೋಟಗಳನ್ನು ಬೆಳೆಸಿ ಪುಷ್ಪಸಾರವನ್ನು ಪರಿ ಷ್ಕರಿಸುವುದಕ್ಕೆ ಆಧುನಿಕ ಕಾರ್ಖಾನೆ ಮತ್ತು ಪರಿಶೋಧನಾಲಯಗಳನ್ನು ಸ್ಥಾಪಿಸಿದ್ದಾರೆ. ಇದು ವಿಶ್ವದ ಪ್ರಸಿದ್ಧ ಅತ್ತರು, ಸುಗಂಧಪುಷ್ಪ ಸಾರ ತಯಾರಿಕೆಯ ಕೇಂದ್ರವೆನಿಸಿ ನೆಲೆವೀಡಾಗಿದೆ. ಗ್ರ್ಯಾಸ್ ಪಟ್ಟಣದಲ್ಲಿ ಕೇಂದ್ರೀಕೃತವಾಗಿರುವ ಸುಗಂಧ ತಯಾರಿಕೆಯ ಕಾರ್ಖಾನೆ ಸಂಸ್ಥೆಗಳು

ಜಗತ್ ವಿಖ್ಯಾತವೆನಿಸಿವೆ. ಪ್ರಪಂಚದ ಯಾವ ಮೂಲೆಯಲ್ಲಿಯಾದರೂ ಬೆಳೆದು ತಯಾರಿಸಿದ ಪರಿಮಳ ಕಚ್ಚಾ ವಸ್ತುವು ಇಲ್ಲಿ ಶುದ್ಧಗೊಂಡು ಉತ್ತಮ ಗುಣದ ಪರಿಮಳವಾಗಿ ಪರಿವರ್ತನೆಗೊಂಡು ಪುನಃ ಬೇರೆ ಬೇರೆ ದೇಶಗಳಿಗೆ ರವಾನಿಸಲ್ಪಡುತ್ತದೆ. ದೇಶವಿದೇಶಗಳಲ್ಲಿರುವ ಸುಗಂಧಕಾರರು ಒಮ್ಮೆಯಾದರೂ ತಮ್ಮ ಜೀವನದಲ್ಲಿ ಗ್ರ್ಯಾಸ್‌ನಲ್ಲಿರುವ ಈ ಪರಿಮಳ ತಯಾರಿಕಾ ಸಂಸ್ಥೆಗಳಿಗೆ ಭೇಟಿಯಿತ್ತು ಅವುಗಳು ಸಾಧಿಸಿರುವ ಪ್ರಗತಿಯನ್ನು ಮನಸಾರೆ ನೋಡಲು ಹಂಬಲಿಸುತ್ತಾರೆ. ಈ ಪಟ್ಟಣವನ್ನು ಸುಗಂಧಗಾರರ ಕಾಶಿ ಎಂದು ವರ್ಣಿಸಿದ್ದಾರೆ. ಹೂತೋಟದ ವ್ಯವಸಾಯದಲ್ಲಿ ಗ್ರ್ಯಾಸ್‌ನಲ್ಲಿರುವ ಸುಪ್ರಸಿದ್ಧ ಸಂಸ್ಥೆಗಳು ಕಳೆದ ಎರಡು ಶತಮಾನಗಳಲ್ಲಿ ಸಾಧಿಸಿರುವ ಪ್ರಗತಿ ಮತ್ತೆ ಕೈಗೊಂಡಿರುವ ಸಂಶೋಧನೆಗಳು ಮತ್ತು ಅವರು ಕಟ್ಟಿರುವ ಸಂಸ್ಕರಣದ ಆಧುನಿಕ ಕಾರ್ಖಾನೆಗಳು ಪ್ರಪಂಚದ ಜನರ ಮನಸ್ಸನ್ನು ಸೂರೆಗೊಂಡಿವೆ. ಕಳೆದ ೫೦ ವರ್ಷಗಳಲ್ಲಿ ಹೂತೋಟಗಾರಿಕೆಯು ಇಲ್ಲಿ ಕ್ಷೀಣಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಏರುತ್ತಿರುವ ಕೆಲಸಗಾರರ ಸಂಬಳ ಸಾರಿಗೆ. ಆಧುನಿಕತೆ ಮತ್ತು ನಾಗರೀಕತೆ ಬೆಳೆದಂತೆ ಜನರು ಕೈ ಕೆಸರಾಗುವ ಇಂತಹ ವ್ಯವಸಾಯದಲ್ಲಿ ತೊಡಗುವುದು ಕಡಿಮೆಯಾಗುತ್ತಿದೆಯಲ್ಲದೆ ಅವರಿಗೆ ಕೊಡುವ ಕೂಲಿಯು ಹೆಚ್ಚಿ ಈ ವ್ಯವಸಾಯಕ್ಕೆ ಹೊರೆಯೆನಿಸುತ್ತಿದೆ. ಆದ್ದರಿಂದ ಹೂತೋಟಗಾರಿಕೆ ಕ್ರಮೇಣ ಕಡಿಮೆಯಾಗಿದೆ. ಈಚೆಗೆ ಜನಭರಿತ ದೇಶಗಳಾದ ಟರ್ಕಿ, ದಕ್ಷಿಣ ಇಟಲಿ, ಬಲ್ಗೇರಿಯ, ಸಿಸಲಿ, ಗ್ರೀಸ್, ಮೊರಾಕೊ, ಅಲ್ಜೀರಿಯ ಮತ್ತು ಈಜಿಪ್ತ್ ದೇಶಗಳಿಗೆ ಹರಡುತ್ತಿದೆ. ಇಲ್ಲಿರುವ ಅಲ್ಪ ಸಂಬಳಸಾರಿಗೆಯಿಂದ ಈ ವ್ಯವಸಾಯಕ್ಕೆ ಹೆಚ್ಚು ಉತ್ತೇಜನ ದೊರೆಯುತ್ತಿದೆ. ಫ್ರಾನ್ಸ್ ದೇಶದ ಸುಗಂಧಗಾರಿಕೆ ಸಂಸ್ಥೆಗಳು ಈ ಬಡ ದೇಶಗಳಲ್ಲಿ ತಮ್ಮದೇ ಆದ ಭಾರಿ ಹತೋಟಿಗಳನ್ನು ಸಾವಿರಾರು ಎಕರೆಗಳಲ್ಲಿ ಸ್ಥಾಪಿಸಿದ್ದಾರೆ. ಈಜಿಪ್ತ್ ದೇಶದ ಅಲೆಕ್ಸಾಂಡ್ರಿಯ ಪ್ರದೇಶದಲ್ಲಿ ಕಳೆದ ೫೦ ವರ್ಷಗಳಲ್ಲಿ ಸಾವಿರಾರ



ಎಕರೆಗಳಲ್ಲಿ ಮಲ್ಲಿಗೆ ತೋಟಗಳನ್ನು ಬೆಳೆಸಿ ಮಲ್ಲಿಗೆ ಪರಿಮಳವನ್ನು ಪರಿಶೋಧಿಸುವ ಉದ್ಯಮ ವಿಪುಲವಾಗಿ ಬೆಳೆದು ಫ್ರಾನ್ಸ್, ಅಮೇರಿಕ, ಇಂಗ್ಲೆಂಡ್, ಜರ್ಮನಿ, ಜಪಾನ ದೇಶಗಳಿಗೆ ಮಲ್ಲಿಗೆ ಪರಿಮಳ ಪಾಕವನ್ನು ರಫ್ತು ಮಾಡುತ್ತಿದ್ದಾರೆ. ರಾಜಕೀಯ ಕಾರಣಗಳಿಂದ ಈ ತೋಟಗಳನ್ನು ನಾಸರ್ ಸರ್ಕಾರವು ರಾಷ್ಟ್ರೀಕರಿಸಿದ ಮೇಲೆ ಅವುಗಳ ಬೆಳವಣಿಗೆಯ ಪ್ರಗತಿ ಕುಂಠಿತವಾಗಿದೆ. ಆದ್ದರಿಂದ ಪಾಶ್ಚಿಮಾತ್ಯ ಸುಗಂಧ ತಯಾರಿಕೆ ಸಂಸ್ಥೆಗಳು ಮಲ್ಲಿಗೆ ಹೂದೋಟಗಳನ್ನು ಬೇರೆ ಬೇರೆ ದೇಶಗಳಲ್ಲಿ ಬೆಳೆಸಲು ಪ್ರೋತ್ಸಾಹಿಸುತ್ತಿದ್ದಾರೆ ಇದರ ಫಲವಾಗಿ ಭಾರತದಲ್ಲಿ ಕಳೆದ ೨೫ ವರ್ಷಗಳಿಂದ ಮಲ್ಲಿಗೆ ಹೂವಿನ ತೋಟಗಳನ್ನು ಬೆಳೆಯಲು ಸತತ ಪ್ರಯತ್ನಗಳು ನಡೆಯುತ್ತಿವೆ. ಈ ದಿಶೆಯಲ್ಲಿ ಟಾಟಾ ಎಣ್ಣೆ ಕಂಪನಿಯವರು ಪುಣೆಯ ...ಯ ರಸಾಯನ ಪ್ರಯೋಗಶಾಲೆಯ ಸಹಕಾರದಿಂದ ಫ್ರಾನ್ಸ್‌ದೇಶದ ಉತ್ತಮ ...ಯ ಮಲ್ಲಿಗೆ ಕಡ್ಡಿಗಳನ್ನು ಆಮದು ಮಾಡಿಕೊಂಡು ಅವುಗಳನ್ನು ಬೆಳೆಯಲು ಅನೇಕ ಸಂಶೋಧನೆಗಳನ್ನು ನಡೆಸಿದ್ದಾರೆ. ಈ ಪ್ರಯತ್ನಗಳಿಂದ ಜನರಲ್ಲಿ ಮಲ್ಲಿಗೆ ಗಿಡಗಳನ್ನು ಫಲ ಮತ್ತು ಲಾಭಾದಾಯಕ್ಕಾಗಿ ಬೆಳೆಯುವ ಸಾಹಸ ಪ್ರವೃತ್ತಿ ಬೆಳೆಯುತ್ತಿದೆ. ಕೊಯಮತ್ತೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ತಜ್ಞರು ಕಳೆದ ೧೦–೧೫ ವರ್ಷಗಳಿಂದಲೂ ಮಲ್ಲಿಗೆ ಗಿಡದ ಬೆಳೆಯನ್ನು ಸ್ಥಾಪಿಸಲು ನಿರಂತರ ಪ್ರಯತ್ನ ನಡೆಸಿದ್ದಾರೆ. ಉತ್ತಮ ತಳಿಯ ಕಡ್ಡಿಗಳನ್ನು ನೆಟ್ಟು ಮಲ್ಲಿಗೆ ಗಿಡಗಳನ್ನು ಸುರಕ್ಷಿತವಾಗಿ ಪೋಷಿಸಿ ಅವುಗಳಿಂದ ಉತ್ತಮ ವಾಸನೆಯುಳ್ಳ ಹೂಗಳನ್ನು ಬೆಳೆದು ಅವುಗಳಲ್ಲಿ ಅಡಕವಾಗಿರುವ ಪರಿಮಳ ಸಾರವನ್ನು ಪಾಕರೂಪದಲ್ಲಿ ಬೇರ್ಪಡಿಸುವುದರಲ್ಲಿ ಹೆಚ್ಚು ಯಶಸ್ಸನ್ನು ಪಡೆದಿದ್ದಾರೆ. ಈ ಪ್ರಯತ್ನಗಳ ಫಲವಾಗಿ ಮೆಟ್ಟುಪಾಳ್ಯಂ ಪ್ರದೇಶದಲ್ಲಿ ಅನೇಕ ಮಲ್ಲಿಗೆ ತೋಟಗಳನ್ನು ನಾವು ನೋಡಬಹುದು.

ಬೆಂಗಳೂರಿನಲ್ಲಿರುವ ಕೇಂದ್ರ ಸರ್ಕಾರದ ಔಷಧ ಗಿಡ ಮತ್ತು ಸುಗಂಧ ಮೂಲಿಕೆಯನ್ನು ಬೆಳೆಸುವ ಸಂಸ್ಥೆಯು ಮಲ್ಲಿಗೆ ಗಿಡವನ್ನು ಬೆಳೆಸಿ ಅದರ ಪರಿಮಳಪಾಕವನ್ನು ತಯಾರಿಸಲು ಹೆಚ್ಚು ಪ್ರಯೋಗ ಮತ್ತು ಪ್ರಚಾರವನ್ನು ನಡೆಸುತ್ತಿದೆ. ಅಲ್ಲದೆ ಅಧಿಕೃತ ಮೂಲ ತಳಿಯ ಮಲ್ಲಿಗೆ ಕಡ್ಡಿಯನ್ನು ವ್ಯವಸಾಯಗಾರರಿಗೆ ಸರಬರಾಜು ಮಾಡುತ್ತಿದೆ.

ಕೊಡಗು ಜಿಲ್ಲೆಯ ಕುಶಾಲನಗರ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಓರಿಯಂಟ್ ಸುಗಂಧಗಾರಿಕೆ ಸಂಸ್ಥೆಯು ಮಲ್ಲಿಗೆ ತೋಟಗಳನ್ನು ಮತ್ತು ಬೆಳೆಯನ್ನು ಸ್ಥಿರಪಡಿಸಲು ಫ್ರಾನ್ಸ್ ದೇಶದ ಸುಪ್ರಸಿದ್ಧ ಸಂಸ್ಥೆಯ ಸಹಕಾರದಿಂದ ಅನೇಕ ಪ್ರಯತ್ನ ನಡೆಸುತ್ತಿದೆ. ಅಲ್ಜೀರಿಯ ಮತ್ತು ದಕ್ಷಿಣ ಫ್ರಾನ್ಸ್‌ನಿಂದ ಶ್ರೇಷ್ಠ ತಳಿಯ ಮಲ್ಲಿಗೆ ಕಡ್ಡಿಗಳನ್ನು ತರಿಸಿ ಅವುಗಳನ್ನು ಈ ಭೂಮಿಯಲ್ಲಿ ಊರ್ಜಿತಗೊಳಿಸಲು ವಿಫಲ ಪ್ರಯತ್ನ ನಡೆದಿದೆ. ಈ ದಿಶೆಯಲ್ಲಿ ಅನೇಕ ಎಡರು ತೊಡರುಗಳನ್ನು ಅನುಭವಿಸಿದರೂ ಅವರ ಪ್ರಯೋಗಗಳು ಹೆಚ್ಚು ಫಲಕಾರಿಯಾಗಿಲ್ಲವೆಂದು ತಿಳಿದಿದೆ.

ಇದೇ ಕಾಲದಲ್ಲಿ ನೀಲಗಿರಿ ಜಿಲ್ಲೆಯ ಮೆಟ್ಟುಪಾಳ್ಯಂನಲ್ಲಿ ಕೆಲವು ಸಾಹಸಿ ಉದ್ಯಮಿಗಳು ಕಳೆದ ೧೦ ವರ್ಷಗಳಿಂದಲೂ ಮಲ್ಲಿಗೆ ವ್ಯವಸಾಯದಲ್ಲಿ ನಿರತರಾಗಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ ಇತ್ತೀಚಿನ ಈ ಉದ್ಯಮದಲ್ಲಿ ಯಶಸ್ಸು ಸಂಪಾದಿಸುವುದು ತುಂಬಾ ಸಂತೋಷದಾಯಕವಾದ ಸಂಗತಿ. ಸುಮಾರು ೪೦ ಎಕರೆ ಜಮೀನಿನಲ್ಲಿ ಮಲ್ಲಿಗೆ ತೋಟಗಳನ್ನು ಬೆಳೆಸಿ ಹೂವುಗಳನ್ನು ಸುಗ್ಗಿಯಲ್ಲಿ ಸಂಗ್ರಹಿಸಿ ಮಲ್ಲಿಗೆ ಪರಿಮಳ ಪಾಕವನ್ನು ತಯಾರಿಸಿ ಅದನ್ನು, ಅಮೇರಿಕ, ಫ್ರಾನ್ಸ್, ಸ್ವಿಜರ್‌ಲ್ಯಾಂಡಿನಲ್ಲಿರುವ ಸುಪ್ರಸಿದ್ಧ ಅತ್ತರು ಸಂಸ್ಥೆಗಳಿಗೆ ರಫ್ತುಮಾಡಿ ಒಂದು ವಿಕ್ರಮವನ್ನು ಸ್ಥಾಪಿಸಿದ್ದಾರೆ. ವಿದೇಶ ಸಂಸ್ಥೆಗಳು ಈ ಪುಷ್ಪಸಾರದ ಗುಣವನ್ನು ಅಂಗೀಕರಿಸುವುದು ಹೆಮ್ಮೆಯನ್ನುಂಟುಮಾಡುವ ಸಂಗತಿಯಾಗಿದೆ. ಇದು ದೇಶದ ಪರಿಮಳ ಪ್ರಗತಿಯಲ್ಲಿ ಒಂದು ಮೈಲಿಗಲ್ಲು ಎಂದು ಹೇಳಬಹುದು.

ಈ ಯಶಸ್ಸಿಗೆ ಕಾರಣಕರ್ತರು ಮೆಟ್ಟುಪಾಳ್ಯಂನಲ್ಲಿರುವ ಶ್ರೀ ಎಸ್. ಚಂದಪ್ಪ ಮತ್ತು

ಅವರ ಸಹೋದರ ಕೃಷ್ಣಮೂರ್ತಿಯವರು. ರೈತರ ಕುಟುಂಬದಲ್ಲಿ ಹುಟ್ಟಿ ಬೆಳೆದ ಈ ಸಹೋದರರು ಆಧುನಿಕ ಕೃಷಿ ವ್ಯವಸಾಯದಲ್ಲಿ ಹೆಚ್ಚು ಆಸಕ್ತಿ ವಹಿಸಿ, ಫ್ರಾನ್ಸ್ ದೇಶದ ಗ್ರ್ಯಾಸ್ ಪಟ್ಟಣದಲ್ಲಿ ನಡೆಸುತ್ತಿರುವ ಹೂವಿನ ತೋಟಗಾರಿಕೆ ಮತ್ತು ಸುಗಂಧ ತಯಾರಿಕಾ ಸಂಸ್ಥೆಗಳಿಗೆ ಹತ್ತಾರು ಬಾರಿ ಸಂದರ್ಶಿಸಿ ಎಲ್ಲಾ ಬೆಳವಣಿಗೆಯನ್ನು ಸ್ವತಃ ಕೂಲಂಕಷವಾಗಿ ಅಭ್ಯಸಿಸಿ ಈ ಉದ್ಯಮವನ್ನು ಕೈಗೊಂಡಿದ್ದಾರೆ. ೧೦ ವರ್ಷಗಳ ಸತತ ಪರಿಶ್ರಮದ ಫಲವಾಗಿ ಈ ವ್ಯವಸಾಯ ಒಂದು ಸ್ಥಿರತೆಯನ್ನು ಪಡೆದಿದೆ. ಇದರಲ್ಲಿ ಅವರು ಅನುಭವಿಸಿದ ಕಷ್ಟನಷ್ಟಗಳು ಸಾಕಷ್ಟಾದರೂ ಹಿಡಿದ ಕೆಲಸವನ್ನು ಸಾಧಿಸಿಯೇ ತೀರಬೇಕೆಂಬ ಛಲ ಅವರಿಗೆ ಯಶಸ್ಸನ್ನು ಗಳಿಸಿಕೊಟ್ಟಿದೆ. ಈ ಸಹೋದರರ ಹೆಸರು ಭಾರತೀಯ ಮಲ್ಲಿಗೆ ವ್ಯವಸಾಯ ಮತ್ತು ಪರಿಮಳ ತಯಾರಿಕೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯುವ ಅಧ್ಯಾಯವೆನಿಸುತ್ತದೆ. ಸುಮಾರು ೭೦ ಎಕರೆ ಮಲ್ಲಿಗೆ ತೋಟವನ್ನು ನಿರ್ಮಿಸಿ ವರ್ಷಂಪ್ರತಿ ೫೦೦ ಕೆ. ಜಿ. ಮಲ್ಲಿಗೆ ಪರಿಮಳ ಪಾಕವನ್ನು ತಯಾರಿಸುವ ಪ್ರಥಮ ಘಟಕವನ್ನು ಸ್ಥಾಪಿಸಿದ್ದಾರೆ. ಇವರ ಯಶಸ್ಸನ್ನು ಕೇಳಿ ಬೇರೆ ಅನೇಕ ಉದ್ಯಮಿಗಳೀಗ ಮಲ್ಲಿಗೆ ತೋಟಗಾರಿಕೆಗೆ ಕೈಹಾಕಿದ್ದಾರೆ. ತಮಿಳುನಾಡಿನ ತಿರುನಲ್‌ವೇಲಿಯ ಮತ್ತೊಂದು ಕಂಪನಿಯು ದಕ್ಷಿಣ ಇಟಲಿಯ ಹೆಸರಾಂತ ಸಂಸ್ಥೆಯ ಸಹಕಾರದಿಂದ ಮಲ್ಲಿಗೆ ತೋಟಗಳನ್ನು ಬೆಳೆದು ಹೂಗಳಿಂದ ಪರಿಮಳ ಸಾರವನ್ನು ತಯಾರಿಸುವ ಆಧುನಿಕ ಕಾರ್ಖಾನೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಇದೇ ರೀತಿ ಮುಂದಿನ ಕೆಲವು ವರ್ಷಗಳಲ್ಲಿ ಮಲ್ಲಿಗೆ ಪರಿಮಳ ಪರಿಷ್ಕರಿಸುವ ಸಂಸ್ಥೆಗಳು ಹೆಚ್ಚು ಪ್ರಗತಿಯನ್ನು ಸಾಧಿಸಿ ಮುಂದುವರೆಯಬಹುದು.

ಮಲ್ಲಿಗೆ ಸಸಿಯು ಭಾರತೀಯ ಮೂಲದ್ದೆಂದು ಹೇಳಬಹುದು. ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ಇದು ಮೊದಲು ಬೆಳೆದು ಕ್ರಮೇಣ ಪರ್ಷಿಯ, ಗ್ರೀಸ್, ಇಟಲಿ ದೇಶಗಳ ಮುಖಾಂತರ ಮಧ್ಯಯೂರೋಪಿನಲ್ಲಿ ಸ್ಥಿರವಾಗಿ ೧೬ನೇ ಶತಮಾನದ ಸುಮಾರಿಗೆ ಬೇರೂರಿತೆಂದು ಊಹಿಸುತ್ತಾರೆ. ಪರ್ಶಿಯನ್ನರು ಮಲ್ಲಿಗೆ ಹೂವಿನಿಂದ ತಮ್ಮ ಶಯನಾಗಾರಗಳನ್ನು ಅಲಂಕರಿಸಿಸುತ್ತಿದ್ದರೆಂದು ಉಲ್ಲೇಖವಿದೆ. ಇಂದು ಯೂರೋಪಿನ ಅನೇಕ ದೇಶದ ತೋಟಗಳಲ್ಲಿ ಕಂಡುಬಂದರೂ ಹೆಚ್ಚಾಗಿ ದಕ್ಷಿಣಫ್ರಾನ್ಸಿನಲ್ಲಿ ಮಲ್ಲಿಗೆ ತೋಟಗಳಿವೆ. ಶ್ರೇಷ್ಠ ತಳಿಯ ಮಲ್ಲಿಗೆ ಗಿಡವನ್ನು ಬೆಳೆಸುವುದರಲ್ಲಿ ಫ್ರಾನ್ಸ್ ದೇಶವು ಹೆಚ್ಚು ಮುಂದುವರೆದಿದೆ. ಒಂದಾನೊಂದು ಕಾಲದಲ್ಲಿ ಇಲ್ಲಿ ಪ್ರತಿವರ್ಷವೂ ಸುಮಾರು ೭೫೦ ಟನ್‌ಗಳಷ್ಟು ಮಲ್ಲಿಗೆ ಹೂವನ್ನು ಸಂಗ್ರಹಿಸಿ ಅದರಿಂದ ಪರಿಮಳರಸವನ್ನು ಪರಿಷ್ಕರಿಸುತ್ತಿದ್ದರು. ಚೀನಾ ದೇಶದಲ್ಲಿ ಮಲ್ಲಿಗೆ ಸಸಿ ಮತ್ತು ಹೂವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ದೇಶದಲ್ಲಿ ಅವರು ಸೇವಿಸುವ ಟೀ ಪಾನೀಯದಲ್ಲಿ ಮಲ್ಲಿಗೆ ಹೂವನ್ನು ಸೇರಿಸುತ್ತಾರೆ. ಅವರು ಕುಡಿಯುವ ಟೀ ಹೆಚ್ಚು ಮಲ್ಲಿಗೆ ವಾಸನೆಯಿಂದ ಕೂಡಿರುತ್ತದೆ. ಊಟ ಮಾಡುವಾಗ ಪದೇ ಪದೇ ಮಲ್ಲಿಗೆ ವಾಸನೆಯ ಟೀ ಪಾನೀಯವನ್ನು ಸೇವಿಸುವ ರೂಢಿಯುಂಟು.

ಮಲ್ಲಿಗೆ ವ್ಯವಸಾಯ

ಮಲ್ಲಿಗೆ ಗಿಡದಲ್ಲಿ ಸುಮಾರು ೨೦೦ ಬಗೆಯ ತಳಿಗಳಿವೆಯೆಂದು ತಿಳಿದಿದೆ. ಅವುಗಳಲ್ಲಿ ಹೆಚ್ಚು ಹೂವು ಬಿಡುವ ಮತ್ತು ಪ್ರಖರವಾದ ಪುಷ್ಪಸಾರವುಳ್ಳ ಉತ್ತಮ ಜಾತಿಯ ತಳಿಯನ್ನು ಫ್ರಾನ್ಸ್‌ದೇಶದಲ್ಲಿ ಬೆಳೆಯುತ್ತಾರೆ. ಇಂತಹ ಶ್ರೇಷ್ಠ ತಳಿಯ ಮಲ್ಲಿಗೆ ಕಡ್ಡಿಗಳನ್ನು ಬೆಂಗಳೂರಿನಲ್ಲಿರುವ ಕೇಂದ್ರ ಗಿಡಮೂಲಿಕೆ ಮತ್ತು ಸುಗಂಧ ಸಸ್ಯ ಸಂಸ್ಥೆಯಿಂದ ಪಡೆಯಬಹುದು. ೮–೧೦ ವರ್ಷ ಬೆಳೆದ ಮಲ್ಲಿಗೆ ಗಿಡದಿಂದ ಹಸಿದಾದ ಕಡ್ಡಿಯನ್ನು ಕತ್ತರಿಸಿ ಮೊದಲೇ ಸಿದ್ಧಪಡಿಸಿದ ಮಡಿಕೆಗಳಲ್ಲಿ ನೆಡುತ್ತಾರೆ. ಬೇರು ಬಿಡಲು ೨೫–೩೦ ದಿವಸಗಳು ಬೇಕಾಗುತ್ತದೆ. ಈ ಮಧ್ಯ ಹೊಲದಲ್ಲಿ ೬೦–೬೦–೬೦ ಸೆಂಟಿಮೀಟರ್ ಆಳತೆಯ ಗುಳಿಗಳನ್ನು ೫ ಅಡಿ ಅಂತರದಲ್ಲಿ ಅಗೆದು ಅದಕ್ಕೆ ಚೆನ್ನಾಗಿ ಕಳೆತ ದನದ ಗೊಬ್ಬರ ಮತ್ತು ಉತ್ತಮ ಮಣ್ಣನ್ನು ಸೇರಿಸಿ ಬೇರುಬಿಟ್ಟ ಕಡ್ಡಿಗಳನು

ಎಚ್ಚರಿಕೆಯಿಂದ ಮಡಿಗಳಿಂದ ಹೊರತೆಗೆದು ಗುಳಿಗಳಲ್ಲಿ ನೆಡಬೇಕು. ಒಂದು ಹೆಕ್ಟೇರ್ ಜಮೀನಿನಲ್ಲಿ ಸುಮಾರು ೧೦ ಸಾವಿರ ಸಸಿಗಳನ್ನು ನೆಡಬಹುದು. ಹದವರಿತು ಸಸಿಗಳಿಗೆ ನೀರನ್ನು ಮತ್ತು ಗೊಬ್ಬರವನ್ನು ಕಾಲಕಾಲಕ್ಕೆ ಕೊಡಬೇಕು. ಒಂದು ವರ್ಷದ ಪೋಷಣೆಯಿಂದ ಸಸಿಗಳು ಹುಲುಸಾಗಿ ಬೆಳೆದು ಹೂವುಗಳನ್ನು ಬಿಡುತ್ತವೆ. ಹೊಲವನ್ನು ಕಳೆಯಿಲ್ಲದೆ ಚೊಕ್ಕಟವಾಗಿಡಬೇಕು. ಮೊದಲನೆಯ ವರ್ಷ ಇದು ಕೊಡುವ ಫಲ ಒಂದು ಹೆಕ್ಟೇರಿಗೆ ೨॥ ಟನ್ ಹೂವು. ಎರಡನೆಯ ವರ್ಷದಲ್ಲಿ ಇದು ಸುಮಾರು ೭ರಿಂದ ೮ ಟನ್‌ವರೆಗೆ ಹೆಚ್ಚುತ್ತದೆ. ಬಳ್ಳಿಯು ಹೆಚ್ಚು ಹರಡದಂತೆ ಅಗ್ಗಾಗ್ಗೆ ಕುಡಿಗಳನ್ನು ಕತ್ತರಿಸುತ್ತಾರೆ. ಉತ್ತಮ ಪೋಷಣೆ ಮತ್ತು ರಕ್ಷಣೆಯಿಂದ ಬಳ್ಳಿಗಳು ಸುಮಾರು ೮–೧೦ ರವರೆಗೂ ಹೂವು ಬಿಡುತ್ತದೆ. ಹತ್ತು ವರ್ಷದ ನಂತರ ಗಿಡವನ್ನು ಬೇರು ಸಹಿತ ಕಿತ್ತು ಹೊಸ ಬಳ್ಳಿಯನ್ನು ನೆಡುವುದು ಉತ್ತಮ. ಬಳ್ಳಿಗೆ ಆಗಾಗ್ಗೆ ಕೆಲವು ಎಲೆಯನ್ನು ತಿನ್ನುವ ಕೋರಿ ಹುಳುಗಳು ಬೀಳುತ್ತವೆ. ಆಗ ಕ್ರಿಮಿನಾಶಕಗಳನ್ನು ಬಳ್ಳಿಯ ಮೇಲೆ ಚಿಮಿಕಿಸಿ ಅವುಗಳನ್ನು ನಾಶಪಡಿಸಬೇಕು.

ಮಲ್ಲಿಗೆ ಬಳ್ಳಿಯು ವರ್ಷವಿಡೀ ಹೂ ಬಿಡುತ್ತದೆ. ಆದರೆ ಜುಲೈ, ಅಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಅತಿ ಹೆಚ್ಚು ಹೂವು ಬಿಡುತ್ತದೆ. ಹೂವನ್ನು ಬಿಡಿಸಿ ಸಂಗ್ರಹಿಸುವುದಕ್ಕೆ ಹೆಚ್ಚು ಕೆಲಸಗಾರರು ಬೇಕಾಗುತ್ತದೆ. ಇದೊಂದು ಶ್ರಮಪೂರಿತವಾದ ಕೆಲಸ ಹೂವನ್ನು ಬಿಡಿಸುವ ಕಾರ್ಯ ಬೆಳಿಗ್ಗೆ ೫ ಗಂಟೆಗೆ ಆರಂಭವಾಗಿ ೭ ಗಂಟೆಯೊಳಗೆ ಮುಗಿಸಬೇಕು. ಮಲ್ಲಿಗೆ ಹೂವಿನ ಮೇಲೆ ಸೂರ್ಯಲಕ್ಷ್ಮಿ ಸ್ಪರ್ಶಿಸಿದಂತೆ ಅದರಲ್ಲಿರುವ ಕಂಪು ಬೀರುವ ಸೂಕ್ಷ್ಮ ಸುಗಂಧ ಮೂಲಗಳು ಹೊರ ವಾತಾವರಣದಲ್ಲಿ ಬೆರೆತು ವಾಸನೆ ಕ್ಷೀಣಿಸುತ್ತದೆ. ಆದ್ದರಿಂದ ಸೂರ್ಯೋದಯಕ್ಕೆ ಮುನ್ನವೇ ಹೂವುಗಳನ್ನು ಕಾರ್ಖಾನೆಗಳಿಗೆ ಪರಿಷ್ಕರಿಸಲು ಸಾಗಿಸಬೇಕು. ಅಲ್ಲಿ ಕೂಡಲೇ ಹೂವುಗಳನ್ನು ಪೆಟ್ರೋಲಿಯಂ ದ್ರಾವಣದಲ್ಲಿ ಕುದಿಸಿ ಪುಷ್ಪಸಾರವನ್ನು ಬೇರ್ಪಡಿಸುತ್ತಾರೆ. ಕೊಬ್ಬಿನ ದ್ರಾವಣದಲ್ಲಿ ಹೂವುಗಳನ್ನು ಬೆರೆಸಿ ಅವುಗಳ ಪುಷ್ಪಸಾರವನ್ನು ಹೀರುವುದು ಮತ್ತೊಂದು ವಿಧಾನ. ಈ ಎರಡು ವಿಧಾನಗಳಿಂದಲೂ ಮಲ್ಲಿಗೆ ಪರಿಮಳಸಾರವನ್ನು ಫ್ರಾನ್ಸ್‌ದೇಶದಲ್ಲಿ ತಯಾರಿಸುತ್ತಾರೆ. ಭಾರತದ ಕನೌಜ್‌ನಲ್ಲಿ ಮಲ್ಲಿಗೆ ಹೂವಿನಿಂದ ಉತ್ತಮ ಸುಗಂಧ ಕೇಶತೈಲ ಮತ್ತು ಅತ್ತರುಗಳನ್ನು ತಯಾರಿಸುತ್ತಾರೆ. ಎಳ್ಳೆಣ್ಣೆ ಬೀಜಗಳ ಮೇಲೆ ಮಲ್ಲಿಗೆ ಹೂವುಗಳನ್ನು ಹರಡಿ ಪುಷ್ಪಸಾರವನ್ನು ಹೀರಿಸಿ ಅವುಗಳನ್ನು ಗಾಣವಾಡಿದರೆ ಮಲ್ಲಿಗೆ ಸುಗಂಧಯುಕ್ತ ಕೇಶವರ್ಧಿನಿ ತೈಲ ಹೊರಬರುತ್ತದೆ. ಈ ತೈಲವನ್ನು ಹಬೆಯಿಂದ ಭಟ್ಟಿ ಇಳಿಸಿದರೆ ಶುದ್ಧ ಮಲ್ಲಿಗೆ ಪರಿಮಳಸಾರವನ್ನು ಪಡೆಯಬಹುದು. ಕನೌಜಿನಲ್ಲಿ ಈ ಸಾರವನ್ನು ಹೆಚ್ಚಾಗಿ ಶ್ರೀಗಂಧದೆಣ್ಣೆಯಲ್ಲಿ ಸಂಯೋಜಿಸುತ್ತಾರೆ.

ಹೊಸದಾಗಿ ಅರಳಿದ ಮಲ್ಲಿಗೆ ಹೂವುಗಳನ್ನು ಬಿಡಿಸಿ ಕೂಡಲೆ ಹೆಚ್ಚು ವಿಳಂಬ ಮಾಡದೆ ಪೆಟ್ರೋಲಿಯಂ ಈಥರ್ ಅಥವಾ ವಿಶೇಷ ದರ್ಜೆಯ ಹೆಕ್ಸೇನ್ ದ್ರಾವಣದ ಸಂಕೀರ್ಣದಿಂದ ಅದರ ಪಾಕಾಂಶವನ್ನು ತೆಗೆಯುತ್ತಾರೆ. ಈ ಪಾಕ ಮಿಶ್ರಣದಲ್ಲಿ ಪುಷ್ಪಸಾರವಲ್ಲದೆ



"ನಾನೇನು ಕದಿಯ ಹೋಗಿಲ್ಲ ಸ್ವಾಮೀ, ಆ ಪೆಟ್ಟಿಗೆಯ ಭಾರ ಮಾತ್ರ ನೋಡಿದೆ ಅಷ್ಟೇ."

ಹೂವಿನಲ್ಲಿರುವ ಮೇಣ ಮತ್ತು ಬಣ್ಣದ ಕಣಗಳು ಹೆಚ್ಚಾಗಿ ಕೂಡಿರುತ್ತವೆ. ಇದನ್ನು ಬೇರ್ಪಡಿಸಲು ಶ್ರೇಷ್ಠ ದರ್ಜೆಯ ಮಧ್ಯ ಸಾರದಲ್ಲಿ ಪಾಕವನ್ನು ಕರಗಿಸಿ ಹಬೆಯ ಸಹಾಯದಿಂದ ಕುದಿಸಿದಾಗ ಬರುವ ಪರಿಶುದ್ಧ ಪರಿಮಳ ಸಾರಗಳಿಗೆ ಹೆಚ್ಚು ಬೆಲೆಯುಂಟು. ಪಾಕಾಂಶದ ಪ್ರಮಾಣ ಸುಮಾರು ೦.೦೩ ರಿಂದ ೦.೦೪ ಇರುತ್ತದೆ. (೧೦೦೦ ಕೆ.ಜಿ. ಹೂಗಳಿಂದ ೩೦೦–೪೦೦ ಗ್ರಾಂಗಳಷ್ಟು ಪಡೆಯಬಹುದು) ಪಾಕದಿಂದ ಬರುವ ಅಚ್ಚ ಪರಿಮಳ ಸಾರಾಂಶ ಕೇವಲ ೦.೪೫ ರಿಂದ .೫೩ ಇರುತ್ತದೆ (೧ ಕೆ.ಜಿ. ಪಾಕದಿಂದ ೪೫೦–೫೦೦ ಗ್ರಾಂಗಳಷ್ಟು ಸಾರ ಸಿಗುತ್ತದೆ) ಈಗಿನ ಬೆಲೆಯ ಪ್ರಕಾರ ೧ ಕೆ.ಜಿ. ಪಾಕದ ಬೆಲೆ ೮೦೦೦ ರೂಪಾಯಿಗಳಾದರೆ ಪರಿಮಳ ಸಾರದ ಬೆಲೆ ೧ ಕೆ.ಜಿ.ಗೆ ೩೦೦೦ರೂಪಾಯಿಗಳು. ಪಾಕ ಮತ್ತು ಪರಿಮಳಸಾರಗಳ ತಯಾರಿಕೆಯಲ್ಲಿ ಉಪಯೋಗಿಸುವ ಪೆಟ್ರೋಲಿಯಂ ಮತ್ತು ಮಧ್ಯಸಾರ ದ್ರಾವಣಗಳ ಗುಣ ಹೆಚ್ಚು ಪ್ರಭಾವ ಬೀರಬಲ್ಲದು. ಇದೇ ಹೂವುಗಳ ಸಂಕೀರ್ಣದಲ್ಲಿರುವ ಒಳಗುಟ್ಟು ಅದನ್ನು ಕಲಿಯಲು ಅನೇಕ ವರ್ಷದ ಹೆಚ್ಚು ಅನುಭವ ಸಂಶೋಧನೆಗಳ ಕುಶಲತೆ ಅವಶ್ಯವಿದೆ. ಮಲ್ಲಿಗೆ ಅಚ್ಚ ತೈಲ ಬಹು ದುಬಾರಿ ಬೆಲೆ. ಆದ್ದರಿಂದ ಸುಗಂಧ ಪರಿಣತರು ಇದರ ಕೃತಕ ನಮೂನೆಗಳನ್ನು ರಾಸಾಯನಿಕ ಮೂಲ ವಸ್ತುಗಳನ್ನು ಬೆರೆಸಿ ತಯಾರಿಸುತ್ತಾರೆ. ಅನೇಕ ಸುಂಗಧ ಸಂಸ್ಥೆಗಳು ತಮ್ಮದೇ ಆದ ನಕಲಿ ಮಲ್ಲಿಗೆ ತೈಲವನ್ನು ಸೃಷ್ಟಿಸಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರುತ್ತಾರೆ.

ಮುಂದಿನ ಯೋಜನೆಗಳು

ಮೆಟ್ಟುಪಾಳ್ಯಂ ಚಂದಪ್ಪ ಸಹೋದರರ ಉದ್ಯಮಶೀಲತೆಯಿಂದ ಉತ್ತಮ ದರ್ಜೆಯ ಮಲ್ಲಿಗೆ ಹೂವುಗಳನ್ನು ಬೆಳೆದು ಅದರಿಂದ ಪರದೇಶಿ ಕಂಪನಿಗಳ ಅಂಗೀಕಾರಾರ್ಹವಾದ ಪಾಕವನ್ನು ತಯಾರಿಸಬಹುದೆಂದು ಧೃಡಪಟ್ಟಿದೆ. ಅವರ ಮಾದರಿಯನ್ನು ಅನುಕರಿಸಿ ಇನ್ನು ಅನೇಕ ಮಂದಿ ಈ ಉದ್ಯಮದಲ್ಲಿ ಕೈಹಾಕಲು ಮುಂದೆ ಬರುತ್ತಿರುವುದು ಶುಭಸೂಚಕ. ಬೆಂಗಳೂರು, ಮೈಸೂರು, ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮಲ್ಲಿಗೆ ವ್ಯವಸಾಯವನ್ನು ಕೈಗೊಳ್ಳಲು ಹಿತಕರವಾದ ವಾತಾವರಣ ಸೌಲಭ್ಯ ಸನ್ನಿವೇಶಗಳಿವೆ. ಈಗಾಗಲೇ ಮಾರುಕಟ್ಟೆಗೆ ಪ್ರತಿನಿತ್ಯ ಮಲ್ಲಿಗೆ ಹೂವನ್ನು ಸರಬರಾಜು ಮಾಡುವುದು ಒಂದು ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ರೈತರು ಸಹ ಜಾಗ್ರತರಾಗಿ ಈ ವ್ಯವಸಾಯಕ್ಕೆ ಹೆಚ್ಚು ಹೆಚ್ಚಾಗಿ ಕೈಹಾಕುತ್ತಿದ್ದಾರೆ. ದಿನಂಪ್ರತಿ ಈ ವಹಿವಾಟಿನಲ್ಲಿ ಹಣದ ಬಟವಾಡೆಯಾಗುವುದರಿಂದ ರೈತರು ಹೆಚ್ಚು ಪ್ರೋತ್ಸಾಹಿತರಾಗುತ್ತಾರೆ. ವರ್ಷವಿಡೀ ದುಡ್ಡು ಅವನ ಕೈಯಲ್ಲಿ ಓಡಾಡಬಲ್ಲದು. ಈಗಾಗಲೇ ಬೆಂಗಳೂರು ನಗರಕ್ಕೆ ೧೦೦ ಮೈಲಿ ದೂರವಿರುವ ತಮಿಳು ನಾಡಿನ ಸೇಲಂ ಜಿಲ್ಲೆಯಲ್ಲಿ ೮೦೦ ಎಕರೆ ಮಲ್ಲಿಗೆ ತೋಟಗಳಿವೆ. ಪ್ರತಿ ದಿನ ಪ್ರಾತಃಕಾಲದೊಳಗಾಗಿ ಹೊಲಗಳಲ್ಲಿ ಹೂವನ್ನು ಬಿಡಿಸಿ ಟ್ಯಾಕ್ಸಿಗಳಲ್ಲಿ ಮಲ್ಲಿಗೆ ಹೂವನ್ನು ತುಂಬಿದ ಬುಟ್ಟಿಗಳನ್ನು ಕೆಲವು ತಾಸುಗಳಲ್ಲಿ ಬೆಂಗಳೂರಿಗೆ ಸಾಗಿಸಿ ಅಲ್ಲಿಂದ ವಿಮಾನದಲ್ಲಿ ಬೊಂಬಾಯಿ, ದೆಹಲಿ, ಮುಂತಾದ ಸ್ಥಳಗಳಿಗೆ ರವಾನಿಸುತ್ತಿದ್ದಾರೆ. ಇಂದು ೧ ಕೆ.ಜಿ. ಉತ್ತಮ ದರ್ಜೆಯ ಮಲ್ಲಿಗೆ ಹೂವಿನ ಬೆಲೆ ೧೦–೧೨ ರೂಪಾಯಿಗಳು. ಈ ಹೂವುಗಳಿಂದ ಪಾಕ ಮತ್ತು ಪರಿಪೂರ್ಣ ಸಾರವನ್ನು ಬೇರ್ಪಡಿಸುವ ಘಟಕಗಳನ್ನು ಸ್ಥಾಪಿಸಿ ಅದನ್ನು ವಿದೇಶಿ ಸಂಸ್ಥೆಗಳಿಗೆ ರಫ್ತುಮಾಡುವ ಉದ್ಯಮ ಹೆಚ್ಚು ಬೆಳೆಯಲು ವಿಶೇಷ ಅವಕಾಶವಿದೆ. ಭಾರತವು ಪ್ರಪಂಚದಲ್ಲಿ ಪ್ರಮುಖ ಮಲ್ಲಿಗೆ ಪರಿಮಳ ಸಾರವನ್ನು ತಯಾರಿಸುವ ದೇಶವೆನಿಸಬಹುದು. ಈ ದಿಶೆಯಲ್ಲಿ ಉದ್ಯಮಶೀಲರು, ರೈತರು, ವ್ಯವಸಾಯ ತಜ್ಞರು ಸುಗಂಧಗಾರರು, ಒಟ್ಟಾರೆ ಕೆಲಸ ಮಾಡಿದರೆ ನಾವು ಬಹಳ ಮುಂದುವರೆಯಬಹುದು. ✡

ದಾರಿದ್ರ್ಯ

೧

ಉಬ್ಬುತ್ತವೆ ಉಡುಗುತ್ತವೆ
ಬಡವರೊಡಲ ಬಯಕೆಗಳು;
ಬಾಲವಿಧವೆ ಕುಲನಾರಿಯ
ಎದೆ ಮೇಲಣ ಮೊಲೆಗಳು...

೨

ಚಿರ ಸಂಚಾರಿಗೆ, ನಿತ್ಯ ರೋಗಿಗೆ,
ಪೆರವರ ಕೂಳಿಗೆ ಬಿದ್ದವಗೆ,
ಪರಗೃಹವಾಸಿಗೆ ಬದುಕೇ ಸಾವು
ಸಾಯುವುದೆಂಬುದು ಬಿಡುಗಡೆಯೋ.

೩

"ಆ ಬಟ್ಟೆ ತುಂಡನೆನಗಾರೆ ನೀಡು, ನೀನಾರೆ ಮಗುವ ಮಲಗಿಸಿಕೊಳ್ಳು,
ಇಲ್ಲಿ ಬರಿಯ ನೆಲ, ನಿನ್ನ ಬೆನ್ನಿಗುಂಟಿಷ್ಟಾದರು ಒಣ ಹುಲ್ಲು"–
ಗಂಡ ಹೆಂಡಿರೀ ಇರುಳ ಸಲ್ಲಾಪ ಕೇಳಿ, ಕನ್ನವಿಕ್ಕದ ಕಳ್ಳ
ಎಲ್ಲೊ ಕದ್ದ ಕವದಿಯನಾಕೆಯ ಮೇಲೊಗೆದು ಜಾರಿದನು ಮೆಲ್ಲ.

೪

"ಎದ್ದು ನಿಂತೊಂದೆ ಕ್ಷಣ ಹೊತ್ತುಕೊ ನನ್ನ ಈ ಬಡತನದ ಭಾರವನ್ನ!
ಸೋತಿರುವೆನಣ್ಣ ನಾ. ಸಾವ ಸುಖವನ್ನ ಲವಲೇಶ ಅನುಭವಿಪೆ ನಿನ್ನ."
–ಇಂತು ಮಸಣದಲಿ ಬಡಪಾಯಿ ಗೋಗರೆದು ಬೇಡಿದನೊಂದು ಕುಣಪವನ್ನ-
ಬಡತನಕ್ಕಿಂತ ಹೆಣತನವ ಲೇಸೆಂದೆಣಿಸಿ ಹೆಣ ಮುರಿಯಲಿಲ್ಲ ಮೌನ.

೫

ವಯದಲ್ಲಿ ಹಿರಿಯರೂ ತಪದಲ್ಲಿ ಹಿರಿಯರೂ
ಅರಿವಲ್ಲಿ ಹಿರಿಯರಾದವರೂ
ಹಣದಲ್ಲಿ ಹಿರಿಯರಾದವರ ಬಾಗಿಲ ಮುಂದೆ
ಕೈಕಟ್ಟಿ ನಿಂತು ಕಾಯುವರು.

೬

ತಂದೆ ರತ್ನಾಕರನು ಲಕ್ಷ್ಮಿಯೆ ಅಕ್ಕ–
ಶಂಖ ಭೋಂಕರಿಸುವುದು ಬೇಡುತ್ತ ಭಿಕ್ಷ.

೭

ವಿಷವ ಕುಡಿವುದು, ತಿರುಪೆ ಬೇಡುವು–
ದೆರಡರಲಿ ಕಹಿ ಯಾವುದು ?
ಹೇಳು ಶಿವನೇ, ಉಭಯ ರಸಗಳ
ನಿನ್ನ ನಾಲಗೆ ಬಲ್ಲದು.

(ಸಂಸ್ಕೃತದಿಂದ)

–ಸಾವೆಂ.


'ಅಮ್ಮಾ!
ನನಗೀಗ 3 ತಿಂಗಳಾದವು!'
'ಅಹುದು, ಈಗ ಕೊಡಲು ಪ್ರಾರಂಭಿಸಬೇಕು
ಫೆರೆಕ್ಸ್®'
ನಿಮ್ಮ ಮಗುವಿಗೆ ಘನ ಆಹಾರ ಕೊಡಲು ಪ್ರಾರಂಭಿಸುವಾಗ ಡಾಕ್ಟರರು ಫೆರೆಕ್ಸ್® ನ್ನು ಶಿಫಾರಸು ಮಾಡುತ್ತಾರೆ.
ಮಗುವಿನ ಆದರ್ಶ ಘನ ಆಹಾರ— ಶೀಘ್ರ ಸರ್ವಾಂಗೀಣ ಬೆಳವಣಿಗೆಗಾಗಿ.
FAREX

269–16

ಅವರು ಕಾಲಾತೀತರಾಗಿದ್ದರೆ?

'ನಚಿಕೇತ'

ಶ್ರೀ ಪರಮಹಂಸ ಯೋಗಾನಂದರು (೧೮೯೩-೧೯೫೨) ಭಾರತದ ಹೆಸರಾಂತ ಯೋಗಿಗಳಲ್ಲೊಬ್ಬರು. ೧೯೧೫ರಲ್ಲಿ ಅವರು ಕಲ್ಕತ್ತಾ ವಿಶ್ವವಿದ್ಯಾನಿಲಯದ ಪದವೀಧರರಾದರು. ೧೯೨೦ರಲ್ಲಿ ಅಮೇರಿಕದ ಬೋಸ್ಟನ್ ನಗರದಲ್ಲಿ ನಡೆದ ಅಂತಾರಾಷ್ಟ್ರೀಯ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಪ್ರತಿನಿಧಿಯಾಗಿ ತೆರಳಿದವರು ಮೂವತ್ತೆರಡು ವರ್ಷಗಳ ಕಾಲ ಅಮೇರಿಕದಲ್ಲೇ ತಂಗಿದ್ದು ಕ್ಯಾಲಿಫೋರ್ನಿಯದ ಲಾಸ್ ಏಂಜಲಿಸ್ ನಗರದಲ್ಲಿ ತಾವು ಸ್ಥಾಪಿಸಿದ ಆತ್ಮಸಾಕ್ಷಾತ್ಕಾರ ಪ್ರತಿಷ್ಠಾನ ಎಂಬ ಸಂಸ್ಥೆಯ ಮುಖಾಂತರ ಭಾರತೀಯ ಸಂಸ್ಕೃತಿಯ ಸುಪ್ರಸಿದ್ಧ ಕೊಡುಗೆಯಾದ ಯೋಗ-ವೇದಾಂತವನ್ನು ಪಾಶ್ಚಿಮಾತ್ಯ ಜಿಜ್ಞಾಸುಗಳ ಮನದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತೆ ಅವರು ಪಟ್ಟಶ್ರಮವು ಅಪಾರ. ಅವರು ಬರೆದ 'ಒಬ್ಬ ಯೋಗಿಯ ಆತ್ಮಕಥೆ.' ಎಂಬ ಪುಸ್ತಕವು ೧೯೪೬ ರಲ್ಲಿ ಪ್ರಕಟಗೊಂಡಿತು. ಈ ಹೊತ್ತಿಗೆಯು ಇಂದು ಹನ್ನೆರಡನೆಯ ಆವೃತ್ತಿಯನ್ನು ಕಂಡಿದ್ದು, ಇದುವರೆಗೆ ಹದಿನೈದು ಭಾಷೆಗಳಿಗೆ ತರ್ಜುಮೆಗೊಂಡಿದೆ. ಈ ಪುಸ್ತಕದಲ್ಲಿ ಬರುವ ಒಂದು ಬಹು ಸ್ವಾರಸ್ಯಕರವಾದ ಘಟನೆಯ ಚಿತ್ರಣವನ್ನು ಇಲ್ಲಿ ನಿರೂಪಿಸಲಾಗಿದೆ.


ಮುಕುಂದಲಾಲ್ ಘೋಷ್ (ಯೋಗಾನಂದರ ಪೂರ್ವಾಶ್ರಮದ ಹೆಸರು) ಆಗ ಹನ್ನೆರಡು ವರ್ಷ ಪ್ರಾಯದ ಹುಡುಗ. ಉತ್ಸಾಹಿ. ಆದರೆ ಓದಿಗಿಂತಲೂ ಪ್ರವಾಸದಲ್ಲೇ ಆತನಿಗೆ ಹೆಚ್ಚು ಆಸಕ್ತಿ. ಯಾತ್ರಾಸ್ಥಳಗಳಲ್ಲಿ ಹಾಗೂ ಸಾಧು ಸಂತರಲ್ಲಿ ಅತೀವ ಕುತೂಹಲ. ಅವನ ಮೊದಲ ಒಲವು ಆಧ್ಯಾತ್ಮದ ಕಡೆಗೆ. ಹಿಮಾಲಯಕ್ಕೆ ಹೋಗಿ ಅಲ್ಲಿ ಸಾಧನೆಯನ್ನು ಮಾಡಿ, ತಾನೂ ಒಬ್ಬ ಮಹಾ ಯೋಗಿಯಾಗಬೇಕೆಂಬುದೇ ಅವನ ಹೆಬ್ಬಯಕೆ. ತನ್ನ ತಾಯಿಯ ಮರಣಾನಂತರ ವಿರಕ್ತಿ ತಾಳಿ ಹಿಮಾಲಯಕ್ಕೆ ಹಿಂದಿನ ವರ್ಷ ತಾನೆ ಓಡಿ ಹೋಗಿದ್ದ. ಆದರೆ ಅವನನ್ನು ಬೆನ್ನಟ್ಟಿ ಬಂದ ಅಣ್ಣ ಅನಂತನಿಗೆ ನೈನಿತಾಲ್‌ನಲ್ಲಿ ಸಿಕ್ಕಿಬಿದ್ದ. ಒಲ್ಲದ ಮನಸ್ಸಿನಿಂದ ಮನೆಗೆ ಹಿಂದಿರುಗಿದ್ದ.

ಅವನ ತಂದೆ ಭಗವತೀಚರಣ ಘೋಷರಿಗೆ ಆಗ ಬಂಗಾಲ-ನಾಗಪುರ ರೈಲ್ವೆ ಕಂಪನಿಯ ಉದ್ಯೋಗವಿತ್ತು. ಈ ಘಟನೆ ನಡೆದಾಗ ಅವರು

ಬರೇಲಿಯಲ್ಲಿ ವಾಸವಾಗಿದ್ದರು.

ಮುಕುಂದನಿಗೊಮ್ಮೆ ವಾರಾಣಸಿಯನ್ನು ನೋಡ ಬೇಕೆಂಬ ಆಶೆಯುಂಟಾಯಿತು. ಸರಿ, ತಂದೆಯ ಬಳಿಗೆ ಅನುಮತಿ ಕೇಳಲು ಹೋಗಿ, "ಅಪ್ಪಾ, ಯಾರ ಒತ್ತಾಯವೂ ಇಲ್ಲದೆ ಖಂಡಿತವಾಗಿ ಯೂ ಮನೆಗೇ ಹಿಂದಿರುಗಿ ಬರುತ್ತೇನೆ; ನಾನು ವಾರಾಣಸಿಗೆ ಪ್ರವಾಸ ಹೋಗಿ ಬರಲೇ ?" ಎಂದಾಗ ಅವರು, "ಆಗಲಿ, ನೋಡೋಣ," ಎಂದಿದ್ದರು. ಮರುದಿನವೇ ಅವರು ಮುಕುಂದನನ್ನು ಕರೆದು, ಬರೇಲಿಯಿಂದ ವಾರಾಣಸಿಗೆ ಹೋಗಿಬರಲು ಬೇಕಾದ ರೈಲ್ವೆ ಪಾಸ್, ಪತ್ರವುಳ್ಳ ಎರಡು ಲಕೋಟೆಗಳು ಹಾಗೂ ದಾರಿ ಖರ್ಚಿಗೆಂದು ಸ್ವಲ್ಪ ಹಣ, ಇವೆಲ್ಲವನೂ ಅವನ ಕೈಯಲ್ಲಿ ಕೊಟ್ಟು,

"ವಾರಾಣಸಿಯಲ್ಲಿ ನನ್ನ ಸ್ನೇಹಿತ ಕೇದಾರನಾಥ ಬಾಬುವಿಗೆ ಒಂದು ಬಹಳ ಮುಖ್ಯವಾದ ವಿಚಾರ ವನ್ನು ತಿಳಿಸಬೇಕಾಗಿತ್ತು. ನನ್ನಲ್ಲಿದ್ದ ಆತನ ವಿಳಾಸವು ಎಲ್ಲೋ ಕಳೆದುಹೋಗಿದೆ. ಆದರೆ ನೀನು ನಮ್ಮಿಬ್ಬರಿಗೂ ಸ್ನೇಹಿತರಾದ ಸ್ವಾಮಿ ಪ್ರಣವಾನಂದರ ಮೂಲಕ ಈ ಪತ್ರವನ್ನು ಅವನಿಗೆ ತಲುಪಿಸಬಹುದು. ಅಂದಹಾಗೆ, ಸ್ವಾಮಿ ಪ್ರಣ ವಾನಂದರು ಆಧ್ಯಾತ್ಮಸಾಧನೆಯಲ್ಲಿ ಬಹಳ ಮುನ್ನಡೆದಿರುವಂತಹ ವ್ಯಕ್ತಿ. ಆದ್ದರಿಂದ, ಅವರನ್ನು ಕಂಡಲ್ಲಿ ನಿನಗೂ ಸ್ವಲ್ಪ ಪ್ರಯೋ ಜನವಾಗಬಹುದು. ಈ ಎರಡನೆಯ ಪತ್ರವು ನಿನ್ನನ್ನು ಅವರಿಗೆ ಪರಿಚಯಿಸಿಕೊಡುವ ಸಲುವಾಗಿ ಇದೆ. ಆದರೆ ಮತ್ತೊಮ್ಮೆ ಎಲ್ಲಾದರೂ



ಓಡಿಹೋದೀಯೆ!" ಎಂದು ಎಚ್ಚರಿಸಿದ್ದರು.

ಮುಕುಂದನು ತನ್ನ ತಂದೆಯು ನೀಡಿದ ಅನುಮತಿಯಿಂದ ಅತ್ಯಂತ ಹರ್ಷಗೊಂಡು, ಅತ್ಯುತ್ಸಾಹದಿಂದ ರೈಲನ್ನು ಹತ್ತಿ, ವಾರಾಣಸಿ ತಲುಪಿಯೇಬಿಟ್ಟ. ಅಲ್ಲಿ, ಪ್ರಣವಾನಂದರ ವಿಳಾಸವನ್ನು ಪತ್ತೆ ಹಚ್ಚಿ, ಅವರ ನಿವಾಸಕ್ಕೆ ಬಂದ. ಹೊರಬಾಗಿಲು ತೆರೆದೇ ಇತ್ತು. ಮಹಡಿಯನ್ನು ಹತ್ತಿ ಎರಡನೆಯ ಅಂತಸ್ತಿಗೆ ಹೋಗಿ, ಒಂದು ದೊಡ್ಡ ಹಜಾರದಂತಿದ್ದ ಕೋಣೆಯನ್ನು ಪ್ರವೇಶಿಸಿದ. ಅಲ್ಲಿ ಸ್ವಾಮಿ ಪ್ರಣವಾನಂದರು, ಒಂದು ತುಂಡು ಪಂಚೆಯನ್ನುಟ್ಟು ಪದ್ಮಾಸನ ಹಾಕಿಕೊಂಡು ಕುಳಿತಿದ್ದರು. ಅವರದು ಸ್ವಲ್ಪ ಸ್ಥೂಲಕಾಯ. ತಮ್ಮ ತಲೆ, ಮುಖಗಳನು ನುಣ್ಣಗೆ ಕ್ಷೌರ ಮಾಡಿಸಿದ್ದರು. ಮುಕುಂದನು ಅವರ ಹತ್ತಿರಕ್ಕೆ ಹೋಗಿ ನಮಸ್ಕರಿಸಿದಾಗ, ಅವರು ಹಸನ್ಮುಖರಾಗಿ. "ಬಾಪಾ ಮಗು," ಎಂದು ಹೇಳಿ, ಪ್ರೀತಿಯಿಂದ ಅವನಿಗೆ ಸ್ವಾಗತ ಕೋರಿದರು.

ಮುಕುಂದನು, "ಸ್ವಾಮಿ, ಪ್ರಣವಾನಂದರು... ತಾವೇನೇ?" ಎಂದು ಕೇಳಿದ. ಆಗ ಅವರು, "ಹೌದು, ನೀನು ಭಗವತಿಯ ಮಗನಲ್ಲವೇ?" ಎಂದಾಗ, ಮುಕುಂದನಿನ್ನೂ ತನ ಕಿಸೆಯಿಂದ ಪರಿಚಯ ಪತ್ರವನ್ನು ತೆಗೆಯುವ ಸನ್ನಾಹದಲ್ಲಿದ್ದ. ಮರುಕ್ಷಣದಲ್ಲೇ ಅವರು, "ಅಗತ್ಯವಾಗಿಯೂ, ನಿನಗೆ ಕೇದಾರನಾಥರನ್ನು ಭೇಟಿ ಮಾಡಿಸುತ್ತೇನೆ," ಎಂದರು. ಆಗಲಂತೂ ಅವನಿಗೆ ಆಶ್ಚರ್ಯಕ್ಕಿಂತಲೂ ಹೆಚ್ಚಾಗಿ ದಿಗ್ಭ್ರಮೆಯೇ ಉಂಟಾಯಿತು. ಸ್ವಾಮಿ ಪ್ರಣವಾನಂದರಿಗೆ ಅವನ ಕಿಸೆಯಲ್ಲಿದ್ದ ಪರಿಚಯಪತ್ರದ ಅಗತ್ಯವೇ ಇರಲಿಲ್ಲ!

ಅನಂತರ ಸ್ವಾಮಿಗಳು, ಅವನ ತಂದೆಯ ಕ್ಷೇಮ ಸಮಾಚಾರವನ್ನು ವಿಚಾರಿಸಿದರು ಹಾಗೂ ತಾವೀಗ ಎರಡು ಬಗೆಯ ವಿಶ್ರಾಂತಿವೇತನಗಳನ್ನು ಪಡೆಯುತ್ತಿರುವುದಾಗಿ ಹೇಳಿದರು. ಮೊದಲನೆಯದು, ಹಿಂದೆ ಅವರು ಮುಕುಂದನ ತಂದೆ ಭಗವತೀಚರಣ ಘೋಷರ ಕೈಕೆಳಗೆ, ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ನಿವೃತ್ತರಾಗಿ, ಪಡೆಯುತ್ತಿರುವ ವಿಶ್ರಾಂತಿ ವೇತನ; ಮತ್ತೊಂದು, ಪ್ರಾಪಂಚಿಕ ಬಂಧನದಿಂದ ಬಿಡುಗಡೆಹೊಂದಿ, ಜಗದೀಶ್ವರನ ಕೃಪೆಯಿಂದ ಪಡೆಯುತ್ತಿರುವ ವಿಶ್ರಾಂತಿವೇತನ! ಆಗ, ಮುಕುಂದನು ಕೇಳಿದ: "ಸ್ವಾಮಿ, ಮೊದಲನೆಯದೇನೋ ಸರಿ. ಆದರೆ, ಎರಡನೆಯದಂತೂ ನನಗೆ ಅರ್ಥವಾಗದ ವಿಚಾರ. ಆ ಜಗದೀಶ್ವರನೇನಾದರೂ ನಿಮ್ಮ ಮಡಿಲಿಗೆ ಹಣ ಉದುರಿಸುತ್ತಾನೆಯೆ ?" ಅದಕ್ಕೆ ಅವರು, ತಮಗೆ ಅಷ್ಟಾಗಿ ಹಣದ ಅಗತ್ಯವಾಗಲಿ ಅದರ ಮೇಲಿನ ಮೋಹವಾಗಲಿ ಇಲ್ಲವೆಂದೂ, ಅನೇಕ ವರ್ಷಗಳ ಸಾಧನೆಯ ಫಲವಾದ ಆತ್ಮಾನುಭಾವದ ಆನಂದವೇ ಆ ಜಗದೀಶ್ವರನು ತಮಗೆ ದಯಪಾಲಿಸುತ್ತಿರುವ ವಿಶ್ರಾಂತಿ ವೇತನವೆಂದೂ ವಿವರಿಸಿ, ಮುಂದೆ ಅವನಿಗೂ ಅದರ ಮಹತ್ವದ ಅರಿವುಂಟಾಗುವುದೆಂದು ಹೇಳಿದರು.

ಅನಂತರ ಅವರು ಇದ್ದಕ್ಕಿದ್ದಂತೆಯೇ ಸ್ತಬ್ಧರಾಗಿ ಕಣ್ಣು ಮುಚ್ಚಿ, ಮೌನ ತಾಳಿದರು. ಇದೇನಿದು! ತಾನು ಸಂಧಿಸಬೇಕಾಗಿದ್ದ ವ್ಯಕ್ತಿಯ ಬಗ್ಗೆ ಏನೊಂದನ್ನೂ ತಿಳಿಸದೆ ಏಕಾಏಕಿ ಮೌನವಾಗಿಬಿಟ್ಟರಲ್ಲ ಎಂದು ಮುಕುಂದನು ತನ್ನಲ್ಲೇ ಅಚ್ಚರಿಪಡತೊಡಗಿದ. ಹಾಗೆಯೆ ತನ್ನ ಸುತ್ತಲೂ ಕಣ್ಣಾಡಿಸಿದ. ಆ ಕೋಣೆಯಲ್ಲಿ ಅವರಿಬ್ಬರ ಹೊರತಾಗಿ ಮತ್ತಾರೂ ಇರಲಿಲ್ಲ. ಆಕಸ್ಮಾತ್ತಾಗಿ ಅವನ ದೃಷ್ಟಿಯು ಅವರು ಕುಳಿತಿದ್ದ ವೇದಿಕೆಯ ಪಕ್ಕದಲ್ಲಿದ್ದ ಅವರ ಮರದ ಮೆಟ್ಟುಗಳ ಮೇಲೆ ಬಿದ್ದಿತು. ಅವನ ಮನಸ್ಸಿನಲ್ಲಿದ್ದ ಕಳವಳವು ಸ್ವಾಮಿಗಳಿಗೆ ಅರ್ಥವಾಯಿತೋ ಏನೋ! ಅವರು ಇದ್ದಕ್ಕಿದ್ದಂತೆಯೇ "ಮಗು, ನೀನೇನೂ ಚಿಂತಿಸಬೇಡ. ನೀನು ಕಾಣಬೇಕಾದ ವ್ಯಕ್ತಿಯು ಸರಿಯಾಗಿ ಇನ್ನರ್ಧ ಘಂಟೆ ಕಳೆದ ನಂತರ ಇಲ್ಲಿಗೇ ಬರುವನು," ಎಂದು ಹೇಳಿ, ಪುನಃ ಕಣ್ಣು ಮುಚ್ಚಿ, ಧ್ಯಾನಮಗ್ನರಾಗಿ ಕುಳಿತುಬಿಟ್ಟರು.

ಮುಕುಂದನು ಅತ್ಯಂತ ಕಾತರದಿಂದ ತನ್ನ ಕೈಗಡಿಯಾರವನ್ನು ಆಗಾಗ ನೋಡಿಕೊಳ್ಳುತ್ತಾ ಯಾವಾಗ ಅರ್ಧ ಗಂಟೆ ಕಳೆಯುವುದೊ ಎಂದು ತವಕಪಡುತ್ತಾ ಕುಳಿತ.

ಕರಾರುವಾಕ್ಕಾಗಿ ಅರ್ಧ ಘಂಟೆಯಾದ ನಂತರ ಸ್ವಾಮಿಗಳು ಎಚ್ಚರಗೊಂಡು, "ಕೇದಾರನಾಥ ಬಾಬುಗಳು ಇದೀಗ ಬೀದಿಯ ಬಾಗಿಲ ಬಳಿ ಬಂದಿರಬಹುದು," ಎಂದರು. ಆಗ, ಯಾರೋ ಮೆಟ್ಟಿಲುಗಳನ್ನು ಹತ್ತಿ ಬರುತ್ತಿರುವ ಸಪ್ಪಳವು

ಕೇಳಿಬಂದಿತು. ಮುಕುಂದನಂತೂ ತನ್ನೊಳಗೇ ಆಶ್ಚರಿಪಡುತ್ತಿದ್ದ. ಇದೇನು ಸ್ವಾಮಿಗಳು ನನ್ನ ಮುಂದೆಯೇ ಇಲ್ಲಿ ಕುಳಿತಿದ್ದಾರೆ; ಕೇದಾರ ನಾಥರ ಭೇಟಿಯು ಇವರಿಗೆ ಆಗಿರಲು ಅದು ಹೇಗೆ ತಾನೆ ಸಾಧ್ಯ? ಎಂದು ಅವನ ಮನವು ತರ್ಕಿಸುತ್ತಿತ್ತು. ತನ್ನ ಕೌತುಕವನ್ನು ನಿಗ್ರಹಿಸಲಾರದೆ, ಅವನು ಅಲ್ಲಿಂದ ಎದ್ದು, ಬರುತ್ತಿರುವವರು ಯಾರಾಗಿರಬಹುದು? ಎಂದು ಸ್ವತಃ ನೋಡಿ ಖಾತ್ರಿಪಡಿಸಿಕೊಳ್ಳಲು ಹೊರಟು, ದಡ ದಡನೆ ಮೆಟ್ಟಿಲುಗಳನ್ನಿಳಿದ. ಅವನು ಅರ್ಧದಷ್ಟು ಮೆಟ್ಟಿಲುಗಳನ್ನು ಇಳಿದಿರಬಹುದು; ಆಗ ತರಾತುರಿಯಿಂದ ಮೇಲೆ ಹತ್ತಿಬರುತ್ತಿದ್ದ ವ್ಯಕ್ತಿಯೊಬ್ಬ ಎದುರಾದ. ಅವನು ಕೂಡಲೆ ಉದ್ವಿಗ್ನನಾಗಿ, "ತಾವು, ಕೇದಾರ ನಾಥ ಬಾಬುಗಳೆ ?" ಎಂದು ಕೇಳಿದ. ಅದಕ್ಕವರು ನಸು ನಗುತ್ತಾ, "ಹೌದು, ನನಗಾಗಿಯೇ ಕಾಯುತ್ತಿರುವ ನೀನು ಭಗವತಿಯ ಮಗನಲ್ಲವೆ?" ಎಂದರು. ಆಗ ಮುಕುಂದನಿಗುಂಟಾದ ದಿಗ್ಭ್ರಮೆ ಅಷ್ಟಿಷ್ಟಲ್ಲ.

ಅವನು ಪುನಃ ಕೇಳಿದ; "ಸ್ವಾಮಿ, ತಾವು ಇಲ್ಲಿಗೆ ಹೇಗೆ ಬರೋಣವಾಯಿತು?" ಆಗ ಕೇದಾರನಾಥರು, ಅರ್ಧ ಘಂಟೆಯ ಹಿಂದೆ, ಸ್ನಾನ ಮಾಡಿ ಮುಗಿಸಿದ್ದಾಗ ತಮಗೆ ಸ್ವಾಮಿ ಪ್ರಣವಾನಂದರ ಭೇಟಿಯಾಯಿತೆಂದೂ, ಅವರಿಂದಲೇ ತನ್ನ ಭೇಟಿಗಾಗಿ ಅವನು ಇಲ್ಲಿ ಕಾಯುತ್ತಿರುವ ಸಂಗತಿ ತಿಳಿಯಿತೆಂದೂ ಅವರ ಆದೇಶದಂತೆ ತಾನಿಲ್ಲಿಗೆ ಬರುತ್ತಿರುವುದಾಗಿಯೂ ಹೇಳಿದರು. ಆಗ ಮುಕುಂದನೆಂದ, "ಸ್ವಾಮಿ, ನಾನು ನಿಮ್ಮ ಮಾತುಗಳನ್ನು ಸ್ವಲ್ಪವೂ ನಂಬಲಾರೆ. ನೀವು ನಿಜವಾದ ಸಂಗತಿಯನ್ನೇ ಹೇಳುತ್ತಿದ್ದೀರೊ, ಅಥವಾ ನಿಮಗೆಲ್ಲದರೂ ಚಿತ್ತಭ್ರಮೆಯುಂಟಾಗಿದೆಯೊ?" ಎಂದ. ಅದಕ್ಕೆ ಅವರು ತುಸು ಕೋಪದಿಂದಲೇ, "ಏನಯ್ಯಾ, ನಿನಗೆ ನಾನು ಸುಳ್ಳು ಹೇಳುತ್ತಿದ್ದೇನೆಯೆ? ನೀನಿಲ್ಲಿ ನನಗಾಗಿ ಕಾಯುತ್ತಿರುವ ಸಂಗತಿಯು, ಅವರಿಂದಲ್ಲದೆ ಬೇರೆ ಯಾರಿಂದ ತಾನೆ ನನಗೆ ತಿಳಿಯಬೇಕು?" ಎಂದರು. ಆಗ ಮುಕುಂದನು "ಸ್ವಾಮಿ, ನಾನಿಲ್ಲಿಗೆ ಬಂದು ಸುಮಾರು ಒಂದು ಗಂಟೆಯಾದರೂ ಆಗಿರಬೇಕು; ನನ್ನ ಕಣ್ಣುಗಳನ್ನು ತಪ್ಪಿಸಿ ಸ್ವಾಮಿಗಳು ಒಂದು ಅರೆಕ್ಷಣವಾದರೂ ಈ ಜಾಗವನ್ನು ಬಿಟ್ಟು ಕದಲಲಿಲ್ಲವಲ್ಲ, ಇದಕ್ಕೆ ನೀವೇನು, ಹೇಳುತ್ತೀರಿ?" ಎಂದ.

ಆಗ ಕೇದಾರನಾಥರು ದೊಡ್ಡದಾಗಿ ಕಣ್ಣರಳಿಸುತ್ತಾ, "ಇದೇನಯ್ಯಾ, ನೀನು ಹೇಳುತ್ತಿರುವುದು ! ನಾವಿಬ್ಬರೂ ಎಚ್ಚರದಿಂದಿರುವೆವೊ ಅಥವಾ ಕನಸನ್ನೇನಾದರೂ ಕಾಣುತ್ತಿರುವೆವೊ ? ನನ್ನ ಇಡೀ ಜೀವಿತದಲ್ಲೇ ಇಂತಹ ಪವಾಡವೊಂದನ್ನು ಕಂಡಿರಲಿಲ್ಲ, ಕೇಳಿರಲಿಲ್ಲ! ನಾನು, ಸ್ವಾಮಿ ಪ್ರಣವಾನಂದರನ್ನು ಒಬ್ಬ ಸಾಧಾರಣವಾದ ವ್ಯಕ್ತಿಯೆಂದೇ ಈ ತನಕವೂ ಭಾವಿಸಿದ್ದೆ. ಆದರೆ, ಅವರು ಬೇರೊಂದು ದೇಹವನ್ನೆ ಸೃಷ್ಟಿಸಿಕೊಂಡು, ತನ್ಮೂಲಕವೂ ಕೆಲಸ ಮಾಡಬಲ್ಲರೆಂಬ

ಅತ್ಯಂತ ವಿಸ್ಮಯಕರವಾದ ಸಂಗತಿಯು, ನನಗೆ ಈಗ ತಾನೆ ತಿಳಿಯುತ್ತಿರುವುದು!" ಎಂದರು.

ಅಲ್ಲಿಂದ ಇಬ್ಬರೂ ಮಹಡಿಯನ್ನು ಹತ್ತಿ, ಕೋಣೆಯನ್ನು ಪ್ರವೇಶಿಸಿದರು. ಬಾಗಿಲಲ್ಲೇ ನಿಂತ ಕೇದಾರನಾಥರು, ಬಹು ಕೌತುಕದಿಂದ, ಅವರ ವೇದಿಕೆಯ ಪಕ್ಕದಲ್ಲಿದ್ದ ಮೆಟ್ಟುಗಳತ್ತ ಬೊಟ್ಟುಮಾಡಿ ಮುಕುಂದನಿಗೆ ತೋರಿಸುತ್ತಾ, ತಾವು ನೋಡಿದಾಗಲೂ ಅದೇ ಮೆಟ್ಟುಗಳನ್ನೇ ಸ್ವಾಮಿಯವರು ಧರಿಸಿದ್ದರೆಂದೂ, ಈಗಿರುವಂತೆಯೇ ಆಗಲೂ ಅದೇ ತುಂಡು ಪಂಚೆಯನ್ನೇ ಉಟ್ಟಿದ್ದ ರೆಂದೂ, ಮೆಲು ದನಿಯಲ್ಲಿ ಆತನಿಗೆ ಉಸುರಿದರು. ಬಳಿಕ, ಇಬ್ಬರೂ ಸ್ವಾಮಿಗಳ ಸಮೀಪಕ್ಕೆ ಹೋಗಿ ಅವರಿಗೆ ಬಹು ಭಕ್ತಿ–ಗೌರವಗಳಿಂದ ಪ್ರಣಾಮ ಮಾಡಿದರು.

ಆಗ ಸ್ವಾಮಿಗಳು ಕಣ್ಣು ತೆರೆದು. ಮುಕುಂದನನ್ನು ಕುರಿತು, "ಇದನ್ನೆಲ್ಲಾ ನೋಡಿ, ಏಕೆ ತಾನೆ ನೀನು ದಿಗ್‌ಭ್ರಮೆಗೊಂಡಿರುವೆ? ಪ್ರಪಂಚದಲ್ಲಿ ತೋರುವ ಎಲ್ಲಾ ವೈವಿಧ್ಯಗಳ ಹಿಂದೆಯೂ ಅಡಗಿರುವ ಏಕತೆಯು ನಿಷ್ಣರಾದ ಯೋಗಿಗಳಿಗೆ ಚಿರಪರಿ ಚಿತವಾಗಿರುವುದು. ಅಂಥವರಿಗೆ ಯಾವ ಭೌತಿಕ ವಸ್ತುಗಳೂ ಆತಂಕವನ್ನೊಡ್ಡಲಾರವು. ಬೇಕಾದರೆ ನಾನು ಈಗಿಂದೀಗಲೇ, ದೂರದ ಕಲ್ಕತ್ತೆಯಲ್ಲಿರುವ ನನ್ನ ಭಕ್ತರನ್ನು, ಕೂತಲ್ಲಿಂದಲೇ ಸಂಧಿಸಿ, ಸಂಭಾಷಿ ಸಬಲ್ಲೆ," ಎಂದು ವಿವರಿಸಿದರು.

ಈ ಘಟನೆಯು, ಬಾಲಕ ಮುಕುಂದನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡಿತು. ಅವನು, ಆಗ ತನಗುಂಟಾಗಿದ್ದ ದಿಗ್ಭ್ರಮೆಯಿಂದ ಇನ್ನೂ ಚೇತರಿಸಿಕೊಳ್ಳಲಾರದೆ, ತನ್ನೆದುರು ಕುಳಿತು, ಇದೀಗ ಮಾತನಾಡುತ್ತಿರುವ ವ್ಯಕ್ತಿಯು, ನಿಜವಾದ ಸ್ವಾಮಿಗಳೋ ಅಥವಾ ಅವರ ಪ್ರತಿರೂಪವೋ ಎಂದು ಸಂಶಯದಿಂದ ಅವರನ್ನು ದೃಷ್ಟಿಸುತ್ತಿದ್ದ ! ಅದನ್ನರಿತ ಸ್ವಾಮಿ ಗಳು, ಅವನ ಅನುಮಾನವನ್ನು ಪರಿಹರಿಸಲೆಂದು, ತಮ್ಮ ಗುರುವಾದ ಲಾಹಿರೀ ಮಹಾಶಯರ ಬಗ್ಗೆ ಕೆಲ ವಿಚಾರಗಳನ್ನು ವ್ಯಕ್ತಗೊಳಿಸಿದರು. ಲಾಹೀರಿ ಮಹಾಶಯರ ಅಪಾರ ಶಕ್ತಿ, ಸಾಮರ್ಥ್ಯಗಳಿಂದ ತಾವು ಆತ್ಮಸಾಕ್ಷಾತ್ಕಾರ ವನ್ನು ಪಡೆದ ರೀತಿ ಹಾಗೂ ಅವರ ಪ್ರೇರಕ ಶಕ್ತಿಯಿಂದಲೇ ತಾವು, ಅವಧಿಗಿಂತ ಮುಂಚೆಯೇ ನಿವೃತ್ತಿಗೊಂಡ ಬಗೆ, ಇವುಗಳನ್ನು ವಿವರಿಸಿ, ಇವೇ ತಾವು ಹಿಂದೆ ಹೇಳಿದ ಎರಡು ನಿವೃತ್ತಿ ವೇತನಗಳೆಂದು ಹೇಳಿದರು.

ಮುಕುಂದನು ತನ್ನಲ್ಲೇ ಯೋಚಿಸತೊಡಗಿದ; ತಮ್ಮ ಒಬ್ಬ ಶಿಷ್ಯನಲ್ಲೇ ಇಂಥ ಅದ್ಭುತ ಪವಾಡ ಶಕ್ತಿಯಿದ್ದರೆ, ಇಂತಹ ಶಿಷ್ಯನ ಗುರುವಾದ ಲಾಹಿರೀ ಮಹಾಶಯರಿಗೆ ಅದಿನ್ನೇನು ತಾನೆ ಅಸಾಧ್ಯ! ಯೋಚಿಸಿದಾಗ, ಅವನ ಮೈಯೆಲ್ಲ ರೋಮಾಂಚಿತವಾಯಿತು.

ಇಬ್ಬರೂ ಸ್ವಾಮಿಗಳಿಗೆ ನಮಸ್ಕರಿಸಿ ಬೀಳ್ಕೊಡುತ್ತಿರುವಾಗ, ಅವರು ಮುಕುಂದನನ್ನು ಕುರಿತು, ಅವನು ಭವಿಷ್ಯದಲ್ಲಿ ಯೋಗ, ವೈರಾ ಗ್ಯಗಳ ಹಾದಿಯಲ್ಲಿ ಮುಂದುವರೆಯುವನೆಂದೂ ತಾವು ಇನ್ನೊಮ್ಮೆ ಅವನನ್ನು, ಅವನ ತಂದೆಯ ಸಂಗಡ ಭೇಟಿಯಾಗುವರೆಂದೂ ಹೇಳಿದರು. ಆ ಎರಡು ಸಂಗತಿಗಳೂ ಮುಂದೆ ದಿಟವಾಗಿ ಪರಿ ಣಮಿಸಿದವು.

ಅನಂತರ ಇಬ್ಬರೂ ಹೊರಬಂದರು. ಆಗಲೇ ಮುಚ್ಚಂಜೆಯಾಗಿತ್ತು. ಮುಕುಂದನು, ತಾನು ತಂದಿದ್ದ ತಂದೆಯ ಪತ್ರವನ್ನು ಕೇದಾರನಾಥರ ಕೈಯಲ್ಲಿಟ್ಟ. ಆಗ ಕತ್ತಲಾಗಿದ್ದುದರಿಂದ ಅವರು ಅದನ್ನು ಬೀದಿದೀಪದ ಕೆಳಗೆ ನಿಂತು ಓದಿಕೊಂ–ಡರು.

ಅನಂತರ ಅವನನ್ನು ಕುರಿತು, "ನಿನ್ನ ತಂದೆಯ ವರು ನನಗೆ, ತಮ್ಮ ರೈಲ್ವೆ ಕಂಪನಿಯ ಕಲ್ಕತ್ತಾ ಕಚೇರಿಯಲ್ಲಿ ಕೆಲಸ ಮಾಡೆಂದು ಸಲಹೆ ನೀಡಿರು ತ್ತಾರೆ. ಸ್ವಾಮಿ ಪ್ರಣವಾನಂದರು ಹೊಂದುತ್ತಿರುವ ಎರಡು ವಿಶ್ರಾಂತಿ ವೇತನಗಳ ಪೈಕಿ, ಒಂದನ್ನಾದರೂ ಪಡೆಯುವ ಆಸೆ ನನಗೇನೋ ಇದೆ. ಆದರೇನು? ದುರ್ದೈವವಶಾತ್ ನಾನು ವಾರಾಣಸಿಯನ್ನು ಬಿಟ್ಟು ಹೊರಡುವ ಸ್ಥಿತಿಯಲ್ಲಿಲ್ಲವಲ್ಲ; ಅಯ್ಯೋ, ನನಗೂ ಎರಡು ದೇಹಗಳಿದ್ದರೆ ... !" ಎಂದು ಉದ್ಗರಿ ಸಿದರು.

✡


మోలీ మోలీ
లూయిల రైనోక్లిన్

ಮೋಮೋ

ನಿಜವಾದ ಆತ್ಮೀಯತೆ ಎಂಥ ಕಷ್ಟವನ್ನೂ ತೃಣಸಮಾನವನ್ನಾಗಿಸಿ ಬಿಡಬಲ್ಲದು. ಆತ್ಮೀಯ ವ್ಯಕ್ತಿ, ಆತ್ಮೀಯ ವಸ್ತು, ಆತ್ಮೀಯ ಪ್ರಾಣಿ ನಮ್ಮಿಂದ ಆಕಸ್ಮಿಕವಾಗಿ ದೂರವಾದಾಗ ಅಥವಾ ಯಾರಾದರೂ ಅದನ್ನು ನಮ್ಮಿಂದ ಅಗಲಿಸಿದಾಗ ಹೃದಯದ ಪಾಡು ಬೇಡವೇ ಬೇಡ. ಅದನ್ನು ಮರಳಿ ಪಡೆದೇತೀರೇನೆಂಬ ಛಲದ ಜೊತೆಗೆ ಕಷ್ಟ ಸಹಿಷ್ಣುತೆಯೂ ನಮ್ಮಲ್ಲಿ ಉತ್ಪನ್ನವಾಗುತ್ತದೆ. ಮೋಮೋ ಒಬ್ಬ ಟಿಬೇಟ ಹುಡುಗಿ. ಆಕೆಯ ಆತ್ಮೀಯ ನಾಯಿ ಆಕೆಯಿಂದ ದೂರವಾದಾಗ ಆಕೆ ಪಟ್ಟ ಪಾಡು ಈ ಕಥೆಯ ವಸ್ತು. ಲೂಯಿ ರೈನ್‌ಕಿನ್ ಇಂಗ್ಲೀಷಿನಲ್ಲಿ ಬರೆದ ಮೂಲ ಕಥೆಯ ಕನ್ನಡ ರೂಪಾಂತರ ಸಂಗ್ರಹವಿದು.

ಮೋಮೋಳಿಗೆ ಆ ಮುದ್ದು ನಾಯಿ ಮರಿ ಜಗತ್ತಿನ ಬೇರೆಲ್ಲ ಐಶ್ವರ್ಯಕ್ಕಿಂತ ದೊಡ್ಡದು. ಅದು ಅಂತಿಂಥ ಬಿಡಾಡಿ ನಾಯಿಯ ಮರಿಯೇನಲ್ಲ; ಬಂಗಾರ ಬಣ್ಣದ ಉದ್ದ ಕೂದಲಿನ ಮುದ್ದುಮರಿ. ಅಂಥದೊಂದು ಮರಿ ತನ್ನ ಬಳಿ ಇರಬೇಕೆಂಬುದೇ ಮೋಮೋಳ ಅಭಿಲಾಷೆ. ಆದರೆ ಅದು ಕೇವಲ ಲ್ಹಾಸಾದಲ್ಲಿ ಸಿಕ್ಕಬಹುದಾದ ಜಾತಿ. ಬೆಲೆಯೂ ಹೆಚ್ಚು.

ಒಮ್ಮೆ ಬೌದ್ಧ ಮಠಕ್ಕೆ ಹೋಗಿದ್ದಾಗ ಮೋಮೋ ಅಂಥ ಮರಿಯನ್ನು ಹಿರಿಯ ಲಾಮಾರ ಬಳಿ ನೋಡಿದ್ದಳು. ಆಕೆ ಅದನ್ನು ನೋಡಿ ಎಷ್ಟು ಆಕರ್ಷಿತಳಾದಳೆಂದರೆ ಅಂದಿನಿಂದ ಆಕೆಗೆ ಅದರದೇ ಧ್ಯಾನವಾಯಿತು. "ನಂಗೂ ಅಂಥದೊಂದು ನಾಯಿ ಮರಿ ಬೇಕು" ಎಂಬ ಹಟ ಅವಳದು. ಆಗ ಆಕೆಗೆ ಕೇವಲ ನಾಲ್ಕು ವರ್ಷ ವಯಸ್ಸು. ತಂದೆ ನೇಮಾ ಮತ್ತು ತಾಯಿ, ಅಕ್ಕ ಅಣ್ಣಂದಿರೊಂದಿಗೆ ಮೋಮೋ ತೀರ್ಥಯಾತ್ರೆಗೆ ಹೋಗಿದ್ದಳು. ಲ್ಹಾಸಾದಲ್ಲಿ ದೊಡ್ಡ ಉತ್ಸವ. ಎಲ್ಲೆಲ್ಲೂ ಉತ್ಸಾಹ, ಆನಂದ.

ಇಂಥ ಆನಂದದ ದಿನಗಳಾದರೂ ಅವರಿಗೆ ಎಷ್ಟು ಸಿಗಬಹುದು? ನೇಮಾ ಪರ್ವತ ಶಿಖರ ಸುತ್ತಿ ಅಂಚೆ ಹಂಚಲು ಹೋಗುತ್ತಿದ್ದ. ಮನೆಯಲ್ಲಿ ಆತನ ಹೆಂಡತಿ ಚಿಕ್ಕದೊಂದು ಚಹದ ಅಂಗಡಿ ನಡೆಸುತ್ತಿದ್ದಳು. ಇಬ್ಬರಿಗೂ ಸಾಕಷ್ಟು ಶ್ರಮ. ಅವರಿಗೆ ವಿರಾಮವೆಂಬುದು ಬಲು ಅಪರೂಪ. ಅಂದಾಗ ಧಾರ್ಮಿಕ ಉತ್ಸವಗಳ ಸಂದರ್ಭದಲ್ಲಿ ಮಾತ್ರ ಅವರಿಗೆ ವಿರಾಮ, ಉತ್ಸಾಹ, ಆನಂದ. ಅದಕ್ಕಾಗಿಯೇ ಕಾಯುತ್ತಲಿದ್ದರು ಅವರೆಲ್ಲ.

ನೇಮಾನ ನೆರೆಹೊರೆಯ ಜನ ಬಂಡಿಗಳನ್ನು ಕಟ್ಟಿಕೊಂಡು, ಗುಂಪುಗೂಡಿಕೊಂಡು ಕರಗಾವ್ಲಾ ಕಡೆ ಹೊರಟಿದ್ದರು. ಶ್ರೀಮಂತ ಜನ ಕುದುರೆ ಸಾರೋಟುಗಳಲ್ಲಿ, ಮೇಣೆಗಳಲ್ಲಿ ಹೊರಟಿದ್ದರೆ ಬಡವರು, ಮಧ್ಯಮ ವರ್ಗದವರು ದಿನಕ್ಕೆ ನಲವತ್ತು ಮೈಲುಗಳಷ್ಟು ನಡೆದು ಉತ್ಸವದ ಊರನ್ನು ಸಮೀಪಿಸುತ್ತಿದ್ದರು. ಅವರಿಗೆ ದಣಿವೆಂಬುದೇ ಗೊತ್ತಿರಲಿಲ್ಲ. ಆದರೆಡೆಗೆ ಅವರ ಲಕ್ಷ್ಯವಿದ್ದರೆ ತಾನೇ ಗೊತ್ತಾಗುವುದು?

ಮಠದೊಳಕ್ಕೆ ಕಾಲಿರಿಸಿದ ಕೂಡಲೇ ಮೋಮೋಳ ಇಬ್ಬರು ಅಣ್ಣಂದಿರು ಓಡಿಹೋಗಿ ಮೊದಲ ಸಾಲಿನಲ್ಲಿದ್ದ ಜಾಗ ಹಿಡಿದು ಕುಳಿತರು. ಬಡವರಿಗೆ ಕೂಡುವುದಕ್ಕೆ ಬೇರೆ ಸ್ಥಳದ ವ್ಯವಸ್ಥೆ ಇತ್ತು. ಎಲ್ಲಿ ಕುಳಿತರೂ ಹಿರಿಯ ಲಾಮಾ ಎಲ್ಲರಿಗೂ ಕಾಣುತ್ತಿದ್ದರು. ಉತ್ಸವ ಪ್ರಾರಂಭ

ವಾಯಿತು. ನುರಿಲಾಮಾಗಳು ಮಠವನು ಪ್ರದಕ್ಷಿಸಿ ಬಂದರು. ಹಿರಿಯ ಲಾಮಾ ಪೀಠ ಏರಿದರು. ಹೊರಗಡೆ ವಾದ್ಯಘೋಷ. ಅದರೊಟ್ಟಿಗೆ ತಾಳಕ್ಕೆ ತಕ್ಕ ಹಾಗೆ ಲಾಮಾಗಳು ನರ್ತಿಸಲಾರಂಭಿಸಿದರು. ಆ ನರ್ತಕರೆಲ್ಲ ಮುಖವಾಡ ಹಾಕಿಕೊಂಡಿದ್ದರು. ಭಯಾನಕ ಮುಖವಾಡಗಳವು. ದೇವ–ದಾನವರ ಸಮರ ಆ ನರ್ತನದ ವಸ್ತು.

ನೇಮಾ ತನ್ನ ಮಗಳಿಗೆ ಹೇಳಿದ: "ಹೆದರಿಕೋ ಬೇಡ. ಅವೇನೂ ನಿಜವಾದ ರಾಕ್ಷಸರಲ್ಲ. ಮಠದ ಲಾಮಾಗಳೇ ಆ ವೇಷ ತೊಟ್ಟಿದ್ದಾರೆ."

ವಾದ್ಯಘೋಷದ ಸ್ವರ ಮುಗಿಲೆತ್ತರಕ್ಕೇರುತ್ತಿದ್ದಂತೇ ನರ್ತನದ ವೇಗವೂ ಹೆಚ್ಚಾಯಿತು.

ಟಿಬೇಟಿನ ಜನಕ್ಕೆ ರಕ್ಕಸರ ಭಯ ಹೆಚ್ಚಿದ್ದ ಕಾಲದಲ್ಲಿ, ಭಗವಾನ್ ಬುದ್ಧನ ಪುಣ್ಯಭೂಮಿ ಭಾರತದಿಂದ ಅಲ್ಲಿಗೆ ಆಗಮಿಸಿದ ಬೌದ್ಧ ಭಿಕ್ಷುಕನೊಬ್ಬ ಆ ಜನಕ್ಕೆ ರಕ್ಕಸನ ಭಯದಿಂದ ಮುಕ್ತಿ ನೀಡಿದನಂತೆ. ಆ ಕಥೆಯನ್ನಾಧರಿಸಿದ ಈ ನೃತ್ಯ ಉತ್ಸವಕ್ಕೆ ಬಂದವರಿಗೆ ಭಕ್ತಿ ಹೆಚ್ಚಿಸುವಂತಿತ್ತು.

ಮೂರು ದಿನಗಳ ಉತ್ಸವ ಅದು– ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ನೃತ್ಯ ನಾಟಕಗಳ ಮೂಲಕ ಭಗವಾನ್ ಬುದ್ಧನ ಕೃಪೆಯ ಕಥೆಯನ್ನು ಹೇಳುವ ಕಾರ್ಯಕ್ರಮಗಳು.

ನರ್ತನಕ್ಕೀಗ ರಂಗೇರಿತ್ತು. ಮೋಮೋ ಬಿಟ್ಟಗಣ್ಣುಗಳಿಂದ ನೋಡುತ್ತ ಕುಳಿತಿದ್ದಂತೆಯೇ ನೇಮಾ ಮತ್ತೆ ಹೇಳಿದ, "ಹೆದರಿಕೋಬೇಡ." ಆದರೆ ಆಕೆಯ ದೃಷ್ಟಿಯಲ್ಲಿ ನೆಟ್ಟಿದ್ದು ನರ್ತನವಲ್ಲ. ಆಕೆಯ ಕಿವಿಯಲ್ಲಿ ವಾದ್ಯಘೋಷವೂ ಗುಂಯ್‌ಗುಡುತ್ತಿರಲಿಲ್ಲ. ಬಿಟ್ಟಗಣ್ಣುಗಳಿಂದ ಆಕೆ ಹಿರಿಯ ಲಾಮಾರ ಪಕ್ಕದಲ್ಲಿ ನಾಲಿಗೆ ಚಾಚಿಕೊಂಡು ತುಂಟ ನೋಟ ಬೀರುತ್ತ ಕುಳಿತಿದ್ದ ಆ ಬಂಗಾರಗೂದಲಿನ ನಾಯಿ ಮರಿಯನ್ನೇ ನೋಡುತ್ತಿದ್ದಳು.

"ಅಪ್ಪಾ..." ಮೋಮೋ ನುಡಿದಳು.

"ಏನು ಮೋಮೋ?"

"ಅದೇನಪ್ಪಾ?" ನಾಯಿ ಮರಿಯತ್ತ ಕೈ ತೋರಿಸಿದಳು.

"ಅದು... ನಾಯಿ ಮರಿ" ನೇಮಾ ಹೇಳಿದ. ಮೋಮೋ ಮತ್ತೇನೂ ಕೇಳಲಿಲ್ಲ. ಕಾರ್ಯಕ್ರಮ ಮುಗಿಯುವತನಕವೂ ಆ ನಾಯಿ ಮರಿಯನ್ನು ನೋಡುತ್ತಲೇ ಕುಳಿತಳು. ಅದನ್ನುಳಿದು ಬೇರೆ ಏನೂ ಆಕೆಗೆ ಗೋಚರಿಸಲಿಲ್ಲ. ಕೊನೆಗೆ, "ಇಂಥ ನಾಯಿ ಮರೀನ ನಾನೆಲ್ಲೂ ನೋಡೇ ಇಲ್ಲಲ್ಲಪ್ಪಾ..." ಎಂದಳು.

ಮಗಳ ಮಾತಿಗೆ ನೇಮಾ ನಕ್ಕು, "ಹುಚ್ಚು ಹುಡುಗಿ. ನಮ್ಮೂರಲ್ಲಿ ಬರಿ ತಿಪ್ಪೆ ಕೆದರೋ ನಾಯಿಗಳನ್ನೇ ನೋಡೋದು. ಈ ನಾಯಿ ಶ್ರೇಷ್ಠ ಜಾತಿಯದು. ಲ್ಹಾಸಾದಲ್ಲಿ ಮಾತ್ರ ಸಿಗೋದು," ಅಂದ.

ಕೆಲ ನಿಮಿಷ ಕಳೆದವು. ನೇಮಾ ಮಗಳತ್ತ ನೋಡಿದ. ಆಕೆ ಇನ್ನೂ ನಾಯಿ ಮರಿಯನ್ನೇ ನೋಡುತ್ತ ಕುಳಿತಿದ್ದಾಳೆ. "ಮೋಮೋ, ಈ ರಾಕ್ಷಸರಿದ್ದಾರಲ್ಲಾ... ಅವರನ್ನ ಬುದ್ಧದೇವ ಹ್ಯಾಗೆ ಓಡಿಸ್ತಾನೆ ನೋಡು. ಭಗವಾನನ ಪ್ರಾರ್ಥನೆ ಮಾಡೋವ್ರನ್ನ ರಾಕ್ಷಸರು ಕಾಡೋದಿಲ್ಲ. ಗೊತ್ತಾಯ್ತಾ?" ಆತನ ಮಾತು ಮಗುವಿನ ಕಿವಿ ಸೇರಿದರಲ್ಲವೆ ಆಕೆ ಹುಂ–ಹಾಂ ಅನ್ನಬೇಕು. ಆಕೆಗೀಗ ಆ ನಾಯಿ ಮರಿಯದೊಂದೇ ಧ್ಯಾನ. 'ಅಂಥದು ಕೇವಲ ಲ್ಹಾಸಾದಲ್ಲಿ ಸಿಗತ್ತಾ! ನಂಗೂ ಒಂದು ತಂದು ಕೊಡಬಾರ್ದೆ ನಮ್ಮಪ್ಪ ಇಂಥಾ ಮರೀನಾ... ಅಬ್ಬಾ. ಎಷ್ಟು ಮುದ್ದಾಗಿದೆ! ಆ ಹೊಳೆಯುವ ಕಣ್ಣು, ಆ ಗುಲಾಬಿ ಮೂಗು, ಕೆಂಪು ನಾಲಿಗೆ, ದಾಳಿಂಬೆ ಬೀಜದಂಥ ಹಲ್ಲುಗಳು, ಅದರ ರೇಶ್ಮೆಯಂಥ ಮೈ, ಕುಚ್ಚಿನಂಥ ಬಾಲ...' ಧೇನಿಸುತ್ತಿದ್ದಂತೇ ಮೋಮೋಳಿಗೆ ಒಮ್ಮೆ 'ಅದು ನಿಜವಾದ ನಾಯಿ ಮರಿಯೆ ? ಮುಖವಾಡ ತೊಟ್ಟ ರಾಕ್ಷಸರು–ದೇವರುಗಳ ಹಾಗೆ ಇದೂ ಮುಖವಾಡ ಧರಿಸಿದೆಯೇ' ಎಂಬ ಯೋಚನೆಯೂ ಬಂತು. ಅದು ನಿಜವಾದ ನಾಯಿ ಮರಿಯೆ? ಮೂರ್ತಿಯಾಗಿರಬಾರದೇಕೆ? ಎಂದು ಅಂದುಕೊಳ್ಳುತ್ತಿರುವಂತೆಯೇ ಹಿರಿಯ ಲಾಮಾ ಅದರೆಡೆ ಅಕ್ಕಿ ಹಿಟ್ಟಿನ ಬಿಸ್ಕತ್ತು ಎಸೆದರು. ಅದನ್ನು ನೆಲ ಮುಟ್ಟುವುದರೊಳಗೆ ಬಾಯಿಂದ ಹಿಡಿದು ನುರಿಸಿ ನುಂಗಿತು ನಾಯಿ ಮರಿ. ಆಗಂತೂ ಮೋಮೋ ಎದ್ದು ನಿಂತು ಚಪ್ಪಾಳೆ ಹೊಡೆದು

ಕೇಕೆ ಹಾಕಿದಳು. ನೇಮಾ ಮಗಳನ್ನು ಬಲವಂತದಿಂದ ಕೂರಿಸಿದ. ನಾಯಿ ಮರಿ ಬಾಲ ಆಡಿಸಿ ಲಾಮಾ ಅವರ ಕೈ ನೆಕ್ಕತೊಡಗಿತ್ತು.

ಮೂರು ದಿನಗಳ ಉತ್ಸವದಲ್ಲಿ ಮೋಮೋ ನೋಡಿದ ಆಟವೆಂದರೆ ಆ ನಾಯಿ ಮರಿಯದೊಂದೆ. ಉತ್ಸವ ಮುಗಿಯಿತು. ಬಂದವರೆಲ್ಲ ಮಧುರ ಸ್ಮೃತಿಗಳೊಂದಿಗೆ ಊರೆಡೆಗೆ ನಡೆದರೆ ಮುಗ್ಧ ಮೋಮೋಳ ಮನದಲ್ಲಿ ಉಳಿದದ್ದು ಆ ಮುದ್ದು ನಾಯಿ ಮರಿಯ ನೆನಪು ಮಾತ್ರ.

ತಿಂಗಳುಗಳು ಉರುಳಿ ಹೋಗಿದ್ದರೂ ಆ ನಾಯಿ ಮರಿಯ ನೆನಪು ಕಳೆದಿರಲಿಲ್ಲ. ಬದಲಾಗಿ ಅಂಥದೊಂದು ಮರಿಯನ್ನು ಸಾಕಬೇಕೆಂಬ ಆಶೆ ಬೆಳೆದಿತ್ತು ಆಕೆಯಲ್ಲಿ. ಮೋಮೋ ದೊಡ್ಡವಳಾಗುತ್ತಿದ್ದಂತೆ ತಾಯಿಯೊಂದಿಗೆ ಮಠಕ್ಕೆ ತಿಂಗಳಿಗೆರಡು ಬಾರಿ ಪೂಜೆಗೆ ಹೋಗುವ ಪರಿಪಾಠ ಹಾಕಿಕೊಂಡಳು. ಹಾಗೇಯೇ ಪೂಜೆಗೆ ಹೋಗಬೇಕಾಗಿದ್ದರೆ ಬಹುಶಃ ಆಕೆ ಹೋಗುತ್ತಿರಲಿಲ್ಲವೋ ಏನೋ. ಆದರೆ ನಾಯಿ ಮರಿಯನ್ನು ನೋಡಲಿಕ್ಕೆ, ಅದರೊಂದಿಗೆ ಮನಸ್ಸಿನಲ್ಲೇ ಆಡಲಿಕ್ಕೆ ಸಿಗುತ್ತದಲ್ಲ ಎಂಬಾಶೆಯಿಂದ ಆಕೆ ಪೂಜೆಗೆ ಬರಲು ಒಪ್ಪಿಕೊಂಡಳು. ಹೀಗಾಗಿ ಆ ನಾಯಿ ಮರಿಯನ್ನು ಸದಾ ತನ್ನ ಬಳಿಯೇ ಇಟ್ಟುಕೊಳ್ಳುವ ಆಶೆ ಅದಮ್ಯವಾಯಿತು.

ಆಕೆಯ ಅಣ್ಣಂದಿರನ್ನಂತೂ ನೇಮಾ 'ಲಾಮಾ ದೀಕ್ಷೆ' ಗಾಗಿ ಮಠಕ್ಕೆ ಬಿಟ್ಟುಬಿಟ್ಟ ಮೇಲೆ ಮೋಮೋಳಿಗೆ ಒಬ್ಬಂಟಿತನ ಕಾಡತೊಡಗಿತು. ದಿನವಿಡೀ ಒಬ್ಬಳೇ ಆಡಿಕೊಳ್ಳುತ್ತ ಇರಬೇಕು. ಅಪ್ಪ ಬೆಳಕು ಹರಿಯುವ ಮೊದಲು ಅಂಚೆ ಚೀಲ ಹೊತ್ತು ಹೊರಟರೆ ಮರಳುವುದು ಬೆಳಕು ಕಳೆದ ಮೇಲೆಯೇ. ತಾಯಿಯೋ ಹಗಲಿಡೀ ಚಾ ಅಂಗಡಿಯಲ್ಲಿ ಗಿರಾಕಿಗಳಿಗೆ ತಿಂಡಿ–ಪಾನೀಯ ಪೂರೈಸುವುದರಲ್ಲಿ ಮಗ್ನಳು. ಯಾರೊಂದಿಗೆ ಮಾತಾಡಬೇಕು, ಯಾರೊಂದಿಗೆ ಆಟವಾಡಬೇಕು? ಆ ದಿನ ಸಂಜೆ ಅಪ್ಪ ಬಂದ ಕೂಡಲೇ, "ಅಪ್ಪಾ ನಂಗೆ ಅಂಥಾ ನಾಯಿ ಮರಿ ತಂದ್ಕೊಡಲ್ವಾ ?" ಮುಖವುಬ್ಬಿಸಿ ಕೇಳಿದಳು ಮೋಮೋ.

"ಓಹ್......ಅದಾ? ಮನೇಲಿ ಒಂದು ಇದೆಯಲ್ಲಮ್ಮಾ..."

ಮೋಮೋಳಿಗೆ ಸಿಟ್ಟು ಬಂತು. ಕೈಯಲ್ಲಿ ಹಿಡಿದಿದ್ದ ಊದುಗೊಳವೆಯನ್ನು ಮಲಗಿದ್ದ ನಾಯಿಯ ಮೇಲೆಸೆದು ಬಿಟ್ಟಳು. ಅದು ಕುಂಯ್ಗುಡುತ್ತ, ಕುಂಟುತ್ತ ಓಡಿತು.

ಪ್ರತಿ ಟಿಬೇಟೀಯನ ಮನೆಯಲ್ಲಿ ಇರುವಂತೆ ನೇಮಾನ ಮನೆಯಲ್ಲೂ ಇದ್ದಂಥ ನಾಯಿ ಅದು. ಬೇಟೆ ನಾಯಿ. ಯಾರಾದರೂ ಬಂದರೆ ಊರೇ ನಡುಗುವಂತೆ ಬೊಗಳುವ ನಾಯಿ. ನೋಡಲಿಕ್ಕೆ ಹೆದರಿಕೆ ಬರಿಸುವಂಥ ಅಸಹ್ಯ ಮುಖದ ನಾಯಿ. ಅದು ಮುದ್ದು ಮೋಮೋಳ ಗೆಳೆಯನಾಗಬಲ್ಲದೆ? ಆ ಸುಂದರವಾದ ರೇಶ್ಮೆಗೂದಲಿನ ಮುದ್ದು ಮರಿಯೊಂದಿಗೆ ಈ ಅಸಹ್ಯವಾದ ದೊಡ ನಾಯಿಯನ್ನು ಹೋಲಿಸಲು ಕೂಡ ಮೋಮೋಳಿಗೆ ಅಸಹ್ಯವಾಗುತ್ತಿತ್ತು.

"ನಂಗೆ ಆಟಾ ಆಡೋದಕ್ಕೆ ಒಂದು ನಾಯಿ ಬೇಕು......ಊಂ...ತಂದ್ಕೊಡು ಅಂದ್ರೆ... ..." ಹಟ ಮಾಡತೊಡಗಿದಳು ಮೋಮೋ.

ಹೇಗಾದರೂ ಮಾತು ಮರೆಸಬೇಕಲ್ಲ. ನೇಮಾ, "ಹೌದಾ? ಆಗ್ಲಿ...ಅಂದ್ಹಾಗೆ ಆ ನಾಯಿ ಮರೀನ ನಾನೆಲ್ಲಿ ನೋಡ್ದೆ? ಪಾಸಂಗನ ಮನೆಯಲ್ಲಿ... ಎಲ್ಲಿ?"

"ಅಲ್ಲ..." ಮೋಮೋ ಚೀರಿಕೊಂಡಳು. ಸಿಟ್ಟು ನೆತ್ತಿಗೇರಿತ್ತು, ಅಪ್ಪನ ವರ್ತನೆಗೆ. "ಪಾಸಂಗನ ಮನೇಲಿರೋದು ಅಂಥಾ ನಾಯಿ ಅಲ್ಲ. ನಂಗೆ ಆ ಬಂಗಾರಗೂದಲಿನ ಲ್ಹಾಸಾ ನಾಯಿ ಬೇಕು. ಮಠದಲ್ಲಿ ಲಾಮಾಜಿ ಹತ್ತಿರ ಇರೋವಂಥಾದ್ದು..."

ನೇಮಾನಿಗೀಗ ಪೇಚಿಗಿಟ್ಟುಕೊಂಡಿತು. ನಿಟ್ಟುಸಿರುಗರೆದ. ಅಂಚೆ ಹಂಚುವ ಕೆಲಸಕ್ಕೆ ತನಗೆ ಬರುವ ಸಂಬಳದಲ್ಲಿ ಮನೆಯ ಎಲ್ಲ ಹೊಟ್ಟೆಗಳನ್ನು ಸರಿಯಾಗಿ ತುಂಬುವುದೇ ಕಷ್ಟ. ಇಂಥ ಪ್ರಸಂಗದಲ್ಲಿ ಲ್ಹಾಸಾ ನಾಯಿ ಕೊಂಡು ತರುವುದೆಂದರೆ ಸಾಧ್ಯವೆ?

ಆದರೆ ಮಗಳಿಗೇನಾದರೂ ಸಮಾಧಾನ ಹೇಳಲೇಬೇಕಲ್ಲ. "ನೋಡು ಮರಿ. ನಿನ್ನ ಚಿಕ್ಕಪ್ಪ ಲ್ಹಾಸಾದಿಂದ ಬರೋವ್ನಿದಾನಲ್ಲ, ಬರೋವಾಗ ಅಂಥಾ ನಾಯಿ ಮರೀನ ತಂದೇತರ್ತಾನೆ ತಿಳೀತಾ?"

"ಹಾಂ, ಅಂಥಾದ್ದೇ ಬೇಕು. ಉದ್ದವಾದ ರೇಶ್ಮೆಯಂಥಾ ಕೂದ್ಲಿರೋ ನಾಯಿನೇ ಬೇಕು. ಅದಕ್ಕೂ ಮಠದ ನಾಯಿಯ ಹಾಗೇ ಕಪ್ಪು ಕಣ್ಣು, ದಾಳಿಂಬೆ

ಬೀಜದಂಥಾ ಹಲ್ಲು, ಕುಚ್ಚಿನಂಥಾ ಬಾಲ ಎಲ್ಲಾ ಇರಬೇಕು. ಚಿಕ್ಕಪ್ಪಂಗೆ ಅಂಥಾದ್ದೇ ತಂಗೊಂಬರೋಕ್ಕೆ ಹೇಳಿ ಅಪ್ಪಾ..." ಸಮಾಧಾನ ಹಚ್ಚಿಕೊಳ್ಳುತ್ತಿದ್ದಳು ಮೋಮೋ. ಹಾಗೇ ನಾಲ್ಕೈದು ಸಲ ಅಪ್ಪನಿಗೆ ನೆನಪಿಸಿಕೊಟ್ಟಳು. "ಹೂನಮ್ಮ ಅಂಥಾದ್ದೇ ತರ್ರೀನೀಂತ ಹೇಳಿಕಳ್ಸಿದಾನೆ ನಿನ್ನ ಚಿಕ್ಕಪ್ಪ."

ಪ್ರತಿರಾತ್ರಿ ಮೋಮೋಳಿಗೆ ಆ ಬಂಗಾರಬಣ್ಣದ ನಾಯಿಯದೇ ಕನಸು. ಅದನ್ನು ತಾನು ಅಪ್ಪಿಕೊಂಡಂತೆ, ಅದರೊಂದಿಗೆ ಆಟವಾಡಿ ನಲಿದಂತೆ, ಅದು ತನ್ನ ಮುಖ–ಹಣೆಗಳಿಗೆಲ್ಲಾ ಮೂಸಿ ಕಚಕುಳಿ ಇಟ್ಟಂತೆ ಕನಸು ಕಾಣುತ್ತ ನಕ್ಕು–ಏನೇನೋ ಬಡಬಡಿಸುತ್ತಿದ್ದಳು.

ದಿನ–ವಾರ–ತಿಂಗಳು ಕಳೆದವು. ಚಿಕ್ಕಪ್ಪ ಬರಲೇ ಇಲ್ಲ. ಮೋಮೋಳಿಗೆ ಚಿಂತೆ ಹೆಚ್ಚಾಯಿತು. ಒಂದು ದಿನ ತಾಯಿಯನ್ನು ಕೇಳಿದಳು: "ಅಮ್ಮಾ, ಲ್ಹಾಸಾದಿಂದ ಚಿಕ್ಕಪ್ಪ ಬರಲೇ ಇಲ್ಲ. ನಂಗೆ ಅಂಥಾ ನಾಯಿ ಸಿಗಲ್ವಾ?" ನೋವಿತ್ತು ಧ್ವನಿಯಲ್ಲಿ.

"ಎಲ್ಲಾ ಅವನ ಇಚ್ಛೆ ಮಗು. ಅವನಿಗೆ ನಿನ್ನ ಪ್ರಾರ್ಥನೆ ಮುಟ್ಟಿದರೆ ಸಾಕು, ನಿನ್ನ ಆಶೆ ಪೂರೈಸುತ್ತೆ." ತಾಯಿಯ ಸಮಾಧಾನ.

ಅಂದಿನಿಂದ ಹಗಲಿರಳು ಹತ್ತಾರು ಸಲ ಪ್ರಾರ್ಥಿಸತೊಡಗಿದಳು ಮೋಮೋ. ಚಹದಂಗಡಿಯಲ್ಲಿನ ಅಗ್ಗಿಷ್ಟಿಕೆಯ ತಿದಿ ಒತ್ತುತ್ತ ಮತ್ತೊಂದು ಕೈಯಿಂದ ಪ್ರಾರ್ಥನಾ ಚಕ್ರ ತಿರುಗಿಸುತ್ತಿದ್ದಳು ಮೋಮೋ. ಮಠದಿಂದ ನೇಮಾ ತಂದಿದ್ದ ಆ ಪ್ರಾರ್ಥನಾ ಚಕ್ರ ನೋಡಲಿಕ್ಕೆ ತಾಮ್ರದ ತಟ್ಟೆಯ ಹಾಗೆ ಕಂಡರೂ ಅದರ ತುಂಬ ಲಾಮಾ ಬರೆದ ಸಾವಿರಾರು ಪ್ರಾರ್ಥನೆಗಳ ಕೆತ್ತನೆಯಿತ್ತು. ಚಕ್ರ ತಿರುಗಿಸುತ್ತಿದ್ದಂತೆ ಮೋಮೋ ಭಾವಪರವಶಳಾಗಿ ಬಿಡುತ್ತಿದ್ದಳು. 'ನನ್ನ ಪ್ರಾರ್ಥನೆ ಬುದ್ಧದೇವನಿಗೆ ತಲುಪಿಬಿಡುತ್ತದೆ......ನನ್ನಾಶೆಯನ್ನು ದೇವರು ಪೂರೈಸಿಬಿಡುತ್ತಾನೆ...'

ಒಮ್ಮೊಮ್ಮೆ ಆಕೆಗೆ ಬುದ್ಧದೇವ ಮೇಲೆ ಆಕಾಶದಲ್ಲಿರುವವ. ಆತನಿಗೆ ಕೇಳುವಂತೆ ಕೂಗಲಿಕ್ಕೆ ತನ್ನಿಂದ ಸಾಧ್ಯವೆ? ಎಂಬ ಶಂಕೆಯೂ ಉಂಟಾಗುತ್ತಿತ್ತು. ಆದರೂ ಹಿರಿಯ ಲಾಮಾರ ಆಶೀರ್ವಾದ ಇರುವ ಈ ಪ್ರಾರ್ಥನಾ ಚಕ್ರದ ಮಹಿಮೆ ಅಗಾಧ ಎಂದುಕೊಳ್ಳುತ್ತಿದ್ದಳು ಮೋಮೋ.

ಬಲು ಶ್ರದ್ಧೆಯಿಂದ ಪ್ರಾರ್ಥನೆ ಸಲ್ಲಿಸತೊಡಗಿದ ಮೋಮೋಳಿಗೆ ಅದೂ ಬೇಸರವೆನಿಸಿತು. 'ಎಷ್ಟು ಪ್ರಾರ್ಥಿಸಿದರೂ ತನ್ನ ಮುದ್ದು ಮರಿ ತನ್ನ ಬಳಿ ಏಕೆ ಬರುವುದಿಲ್ಲ?' ಎಂದು ನಿರಾಶೆಗೊಂಡಳು. ದೇವರ ಮೇಲೆ ಬಹಳ ಸಿಟ್ಟು ಬಂತು ಆಕೆಗೆ. ಈಗಾಕೆಗೆ ಒಂಭತ್ತು ತುಂಬಿದೆ. ಈಗಲೇ ಸಿಕ್ಕರೆ ಎಷ್ಟು ಒಳ್ಳೆಯದು! ಅದರೊಂದಿಗೆ ಆಟವಾಡುತ್ತ ಬೆಳೆಯಬಹುದು ಎಂದುಕೊಳ್ಳುತ್ತಿದ್ದಳು ಕೂಡ. ಬೇಸಿಗೆ ಕಳೆಯುತ್ತಿತ್ತು. ಇನ್ನೇನು ಮತ್ತೆ ಮಳೆಗಾಲ.

'ನನ್ನ ಪ್ರಾರ್ಥನೆ ಕೇಳುವುದಿಲ್ಲವೇ ನಿನಗೆ? ಕೇಳುವ ವರೆಗೂ ಬಿಡುವವಳಲ್ಲ' ಎಂದಳು ಮೋಮೋ ಬುದ್ಧದೇವನೆದುರು ಮಂಡೆಯೂರಿ.

ಚಳಿಗಾಲ ಬಂತು, ಹೋಯಿತು; ಆದರೆ ನಾಯಿ ಮರಿ ಮಾತ್ರ ಬರಲೇ ಇಲ್ಲ. ವಸಂತಮಾಸ ಕಾಲಿಟ್ಟಿತು. ನಾಡು–ಕಾಡು ಹೊಸ ರೂಪ ತೊಟ್ಟಿತು. ಮೋಮೋಳಿಗೆ ಮತ್ತೆ ಆಶೆ ಹುಟ್ಟಿತು. ಮತ್ತೆ ದೇವರ ಪೂಜೆಗೆ ಅಣಿಯಾದಳು. ಹುಣ್ಣಿಮೆಯ ದಿನ ತಾಯಿಯೊಂದಿಗೆ ಕೊನೆಯ ಬಾರಿ ಕರಗಾವ್ರುವಿಗೆ ನಡೆದಳು.

ಆ ಮಠ ಆಕೆಗೆ ಅತ್ಯಂತ ಪ್ರಿಯವಾದ ಸ್ಥಳ. ಏಕೆಂದರೆ ಉಳಿದ ಮಠಗಳಿಗಿಂತ ಹೆಚ್ಚಿನದೊಂದು ವಿಶೇಷ ಆಕೆಯ ಪಾಲಿಗೆ ಅಲ್ಲಿತ್ತು. ಸಾವಿರಾರು ಮೆಟ್ಟಿಲುಗಳನ್ನೇರಿದರೆ ಮಠದ ದ್ವಾರ. ಪಕ್ಕದಲ್ಲಿಯೆ ಪುಷ್ಕರಣಿ. ಎತ್ತರದಿಂದ ಸುತ್ತೆಲ್ಲ ನೋಡಿದರೆ ಹತ್ತು ಬಗೆಯ ಹೊಸತನ ಕಾಣುತ್ತಿತ್ತು. ಪುಷ್ಕರಿಣಿಗೆ ಕಾಮ್ಪೆಂಗ್ ಎಂಬ ಹೆಸರು. ಸದಾ ಶುಭ್ರ ಪಾಪ ನೀರು ಹರಿಸುವ ಸೆಲೆ ಅಲ್ಲಿದ್ದುದರಿಂದ ಉಳಿದ ಪುಷ್ಕರಣಿಗಳಂತೆ ಗೊಬ್ಬು ನಾತವಿರಲಿಲ್ಲ. ಅಷ್ಟೇ ಅಲ್ಲ, ಉಳಿದ ಮಠಗಳಿಗೆ ಹೋಗುವಾಗ ಹಿಮ ಬಂಡೆಗಳ ಹೆದರಿಕೆ ಬೇರೆ. ಕಾಲಿಟ್ಟರೆ ಸಾಕು, ಸರ್ರನೆ ಜಾರಿಕೊಂಡು ಆಸ್ಪತ್ರೆ ಸೇರುವಂತೆ ಮಾಡುತ್ತಿದ್ದ ಹಿಮಬಂಡೆಗಳುವು. ಅನುಕೂಲ ಸ್ಥಳದಲ್ಲಿ ಮತ್ತು ಸುಂದರವಾದ ಪ್ರದೇಶದಲ್ಲಿದ್ದ ಆ ಮಠದ ಆಹ್ಲಾದಕರ ವಾತಾವರಣದಿಂದಾಗಿ ನಿತ್ಯ ನೂರಾರು ಜನ ಭಕ್ತರು ಬಂದೇಬರುತ್ತಿದ್ದರು. ಅಲ್ಲಿಗೆ ಬರಲು ಇಂಥದೇ ಶುಭದಿನ ಆಗಬೇಕೆಂದಿರಲಿಲ್ಲ. ಅಲ್ಲಿ ಬರುವವರಿಗೆ ಎಲ್ಲ ಶುಭದಿನಗಳೆ.

"ಮೋಮೋ, ಈ ದಿನ ನಾವಿಲ್ಲಿ ಬಹಳ ಹೊತ್ತು

"ನನ್ನ ಅಮ್ಮನಿಗೆ ಸಂಪೂರ್ಣ ಆರೋಗ್ಯದಾಯಕ ಪೇಯಕ್ಕಿಂತ ಕಡಿಮೆ ಸಲ್ಲದು"

ಕೇವಲ

ಕೋಂಪ್ಲಾನ್

ಪ್ರತಿ ದೇಹಕ್ಕೆ ಅತ್ಯವಶ್ಯಕವಾಗಿರುವ 23 ಪೋಷಕಾಂಶಗಳನ್ನು ಒಳಗೊಂಡಿರುವ ಸಂಪೂರ್ಣ ಆರೋಗ್ಯದಾಯಕ ಪೇಯ.



ಸ್ವಾಸ್ಥ್ಯ ಮತ್ತು ಶಕ್ತಿಗಾಗಿ. ಪ್ರತಿಯೊಬ್ಬರ ದೇಹಕ್ಕೆ ಪ್ರತಿ ದಿನ ಶಕ್ತಿಗಾಗಿ ದೇಹಕ್ಕೆ ಪ್ರತಿ ದಿನ ಅತ್ಯವಶ್ಯಕವಾಗಿರುವ, ಪ್ರೋಟೀನ್‌ಗಳು, ವಿಟಮಿನ್‌ಗಳು, ಖನಿಜದ್ರವ್ಯಗಳು, ಕಾರ್ಬೋಹೈಡ್ರೇಟ್‌ಗಳು ಮತ್ತು ಇತರ ಪೋಷಕಾಂಶಗಳು, ಕೇವಲ ಕೋಂಪ್ಲಾನ್‌ನಲ್ಲಿ ವೈಜ್ಞಾನಿಕವಾಗಿ ನಿಯೋಜಿತ ಪ್ರಮಾಣದಲ್ಲಿವೆ. ಆರೋಗ್ಯ ಚೆನ್ನಾಗಿರದೆ ಊಟ ಒಗ್ಗದ ಕುಟುಂಬದ ಹಿರಿಯರಿಗೆ ಉತ್ತಮ. ಹೆಚ್ಚಾಗಿ ಊಟಕ್ಕೂ ಬಿಡುವಿಲ್ಲದ ಅವಸರದ ಪತಿಗಳಿಗೆ ಆದರ್ಶವಾಗಿದೆ. ಊಟ ಮಾಡಲು ನಿರಾಕರಿಸುವ ಹಟವಾದಿ ಮಕ್ಕಳಿಗೆ ಹೇಳಿಸಿದ್ದು. ಆಯಾಸದಿಂದ ಊಟವೇ ಬೇಡವೆನಿಸುವ ನಿಮಗೆ ಮತ್ತೂ ಉತ್ತಮ.

ನೆನಪಿಡಿರಿ, ಡಾಕ್ಟರರು ಸಂಪೂರ್ಣ ಪೋಷಕಾಹಾರವಾಗಿ ಹೆಚ್ಚಾಗಿ ಕೋಂಪ್ಲಾನ್‌ನ್ನು ಶಿಫಾರಸು ಮಾಡುತ್ತಾರೆ.

ಕೋಂಪ್ಲಾನ್ ಪ್ಲೇನ್ ಮತ್ತು ಸ್ವಾದಿಷ್ಟವಾದ ಚಾಕ್‌ಲೇಟ್, ಏಲಕ್ಕಿ-ಕೇಸರಿ ಮಾತ್ರವಲ್ಲದೆ ಮಕ್ಕಳು ಮೆಚ್ಚುವ ಹೊಸ ಸ್ಟ್ರಾಬೆರಿ ಸ್ವಾದಗಳಲ್ಲಿಯೂ ದೊರೆಯುತ್ತದೆ!

ಪ್ರೋಟೀನ್
ಕೊಬ್ಬು
ಕಾರ್ಬೋಹೈಡ್ರೇಟ್
ಕ್ಯಾಲ್ಸಿಯಮ್
ಫೋಸ್ಫರಸ್
ಸೋಡಿಯಮ್
ಕ್ಲೋರೈಡ್ (ಸಿ ಎಲ್ ಆಗಿ)
ಪೊಟ್ಯಾಸಿಯಮ್
ಐಯರ್ನ್
ಅಯೋಡಿನ್
ವಿಟಮಿನ್ ಎ
ವಿಟಮಿನ್ ಬಿ

ರಿಬೋಫ್ಲೇವಿನ್
ನಿಕೋಟಿನಾಮೈಡ್
ಕ್ಯಾಲ್ಸಿಯಮ್
ಪ್ಯಾಂಟೊಥಿನೇಟ್
ಕೋಲಿನ್
ಪೈರಿಡಾಕ್ಸಿನ್ (ಬಿ6)
ವಿಟಮಿನ್ ಬಿ12
ಫೋಲಿಕ್ ಆಸಿಡ್
ವಿಟಮಿನ್ ಸಿ
ವಿಟಮಿನ್ ಡಿ
ವಿಟಮಿನ್ ಇ
ವಿಟಮಿನ್ ಕೆ

ಹಾಲನ್ನು ಬೆರಸಬೇಕಾಗಿಲ್ಲ



ಸಂಪೂರ್ಣವಾದದು

ಕೋಂಪ್ಲಾನ್ ಸಂಪೂರ್ಣ ಆರೋಗ್ಯದಾಯಕ ಪೇಯ.

ಕಳೆಯೋದು ಬೇಡ. ಜನ ಬಹಳ ಬರ್‍ತಾರೆ" ಅಂದಳು ತಾಯಿ. ಚಳಿಗಾಲದಲ್ಲಿ ಅಲ್ಲಿಗೆ ಬರುವುದೂ ದುಸ್ತರ. ಹೀಗಾಗಿ ಬರುವ ಒಂದು ವಾರ ಅಲ್ಲಿ ಬರುವವರೆಲ್ಲ ಬಂದು ಹೋಗುತ್ತಿದ್ದರು. ಆದ್ದರಿಂದ ತಾಯಿ ಇಂದೇ ಚಳಿಗಾಲದ ಪ್ರಾರ್ಥನೆ ಸಲ್ಲಿಸಬೇಕೆಂದು ನಿರ್ಧರಿಸಿದ್ದಳು. ಚಳಿಗಾಲದಲ್ಲಿ ಆಕೆಯ ಚಹದ ಅಂಗಡಿಗೂ ವ್ಯಾಪಾರ ಜೋರು.

ಮಠ ಪ್ರವೇಶಿಸಿದ ಮೋಮೋಳ ತಾಯಿ ಮೊಟ್ಟಮೊದಲು ಪತಿಯ ಸುರಕ್ಷತೆಗಾಗಿ ರಕ್ಷಕನಲ್ಲಿ ಮೊರೆಯಿಟ್ಟಳು. ಚಳಿಗಾಲವಾದರೂ ನೇಮಾನಿಗೆ ಅಂಜಿ ಹೋಗುವುದು ತಪ್ಪಿದ್ದಿಲ್ಲ. ನಂತರ ಅಂಗಡಿಯ ವ್ಯಾಪಾರ ಈಗಿನಕಿಂತ ಹತ್ತು ಪಟ್ಟು ಹೆಚ್ಚಲೆಂದು ಪ್ರಾರ್ಥಿಸಿ, ತನ್ನ ಮಕ್ಕಳನ್ನು ಶೀತದ ಬಾಧೆಯಿಂದ ಕಾಪಾಡೆಂದು ಕೇಳಿಕೊಂಡಳು.

ಪ್ರಾರ್ಥನೆ ಮುಗಿಯಿತೆಂದು ಆಕೆ ಹೊರಡಲಣಿಯಾಗಿ ಮಗಳನ್ನು ಕೂಗಿದರೆ ಆಕೆಯ ಉತ್ತರವೇ ಇಲ್ಲ. ಹೋಗಿ ನೋಡಿದರೆ ಮೋಮೋ ಗಾಢವಾಗಿ ಪ್ರಾರ್ಥಿಸುತ್ತಿದ್ದಾಳೆ. ಕಣ್ಣು ಮುಚ್ಚಿ ಅಲುಗಾಡದಹಾಗೆ ಕುಳಿತಿದ್ದಾಳೆ. ಕೈಗಳೆರಡನ್ನೂ ಜೋಡಿಸಿದ್ದಾಳೆ. ಬಾಯಲ್ಲೇನೋ ಮಣ ಮಣ ಮಾತು.

ತಾಯಿಗಿಂತಲೂ ಮಹತ್ವದ ಪ್ರಾರ್ಥನೆ ಆಕೆಯದು. ಬುದ್ಧದೇವನ ಭವ್ಯಮೂರ್ತಿಯೆದುರು ಕುಳಿತ ಬಾಲೆಯನ್ನು ಕಂಡವರೆಲ್ಲರಿಗೂ ಅದೇನೋ ಆಸಕ್ತಿ...ಮತ್ತೆ ಮತ್ತೆ ಕೈ ಮುಗಿದು ಪ್ರಾರ್ಥಿಸುತ್ತಿದ್ದಾಳೆ ಮೋಮೋ.ಪಕ್ಕದಲ್ಲೇ ಒಂದು ಬಾಟಲಿನಾದ ಸೋಡಾ ಶೀಶೆ. ಅದನ್ನು ದೇವರಿಗೆ ಅರ್ಪಿಸಲು ಕಾಣಿಕೆ ಎಂದು ತಂದಿದ್ದಳಾಕೆ.

ಆ ಶೀಶೆ ನೋಡಲಿಕ್ಕೆ ಸಾಮಾನ್ಯ ಎನಿಸಿದರೂ ಮೋಮೋ ಬಹು ಕಷ್ಟಪಟ್ಟು ಅದನ್ನು ಸಂಪಾದಿಸಿದ್ದಳು. ಪಾಸಂಗನ ಬಳಿ ಇದ್ದ ಆ ಶೀಶೆ ಕಂಡು ಮೋಮೋಳಿಗೆ ಅಚ್ಚರಿಯಾಗಿತ್ತು. ಅದರ ಕಂಠದಲ್ಲಿ ಕುಳಿತಿದ್ದ ಗೋಲಿ ಒಳಗೆ ಹೇಗೆ ಹೋಯಿತು, ಎಂಬುದೇ ಆಕೆಗೆ ಬಗೆಹರಿಯದ ಪ್ರಶ್ನೆ. ಪಾಸಂಗ ಆಗಾಗ ಶೀಶೆಯನ್ನು ಅಲುಗಾಡಿಸಿ 'ಟಳ್ ಟಳ್' ಸದ್ದು ಮಾಡುತ್ತಿದ್ದ. "ಆ ಶೀಶೆ ನಂಗೆ ಕೊಡ್ತಿಯಾ?" ಎಂದಿದ್ದಳು ಮೋಮೋ. "ಹಾಗೇ ಕೊಡ್ತೀನಾ? ನಂಗೆ ನಿಮ್ಮಂಗಡಿಯಲ್ಲಿರೋ ಬಚಾರು ಕೊಡು ಅಂದ್ರೆ ಮಾತ್ರ ಶೀಶೆ ಕೊಡೋದು" ಅಂದ. ಬಚಾರು ಅಲ್ಲಿನ ಜನಕ್ಕೆ ಬಲು ಪ್ರಿಯವಾದ ಸಿಹಿ ತಿಂಡಿ.

ಕರಾರಿಗೊಪ್ಪಿಕೊಂಡು ಅದನ್ನು ಪಡೆದಿದ್ದಳು ಮೋಮೋ. ಅಷ್ಟೇ ಅಲ್ಲ, ಅದನ್ನು ಬಹು ಜೋಪಾನವಾಗಿ ತೆಗೆದಿರಿಸಿದ್ದಳು. ಅದನ್ನೇ ಇವೊತ್ತು ಬಲು ಶ್ರದ್ಧೆ–ಭಕ್ತಿಯಿಂದ ಭಗವಾನನಿಗೆ ಅರ್ಪಿಸಲು ತಂದಿದ್ದಳು.

ಪ್ರಾರ್ಥನೆಯ ನಂತರ ಪ್ರಾರ್ಥನಾ ಚಕ್ರದೆಡೆಗೆ ಮತ್ತೆ ಧಾವಿಸಿದಳು ಮೋಮೋ. ಅಲ್ಲಿ ಆಕೆಯ ಅಣ್ಣ ಮುನಿ ಹಿರಿಯ ಲಾಮಾರ ಆ ಸುಂದರ ನಾಯಿ ಮರಿಯನ್ನೆತ್ತಿಕೊಂಡು ನಿಂತಿದ್ದಾನೆ! ಆ ಸಮಯದಲ್ಲಿ ಹಿರಿಯ ಲಾಮಾ ಧ್ಯಾನಸ್ಥರಾಗಿದ್ದರು. ಆದರೆ ಮೋಮೋ ನೇರವಾಗಿ ಪ್ರಾರ್ಥನಾ ಚಕ್ರವನ್ನು ಸಮೀಪಿಸಿದಳು. "ಇಂದು ನನ್ನ ಮೊರೆ ಭಗವಾನನಿಗೆ ಮುಟ್ಟಲೇಬೇಕು" ಎಂದು ಆಕೆ ನಿಶ್ಚಯಿಸಿಕೊಂಡಂತಿತ್ತು.

"ಓಂ ಮಣಿ ಪದ್ಮೇ ಹೂಂ......ಓಂ ಮಣಿ ಪದ್ಮೇ ಹೂಂ..." ಎನ್ನುತ್ತಲೇ ನಾಯಿ ಮರಿಯ ಕಡೆ ನೋಡಿ ಮತ್ತೆ ಪ್ರಾರ್ಥನೆ ಮುಂದುವರಿಸುತ್ತಿದ್ದಳು ಮೋಮೋ. ಕೈಗಳಿಂದ ಶಕ್ತಿ ಮೀರಿ ಆ ಚಕ್ರವನ್ನು ತಿರುಗಿಸುತ್ತಿದ್ದಳು. ಅದರ ಗಂಟೆಗಳ ಗಣಗಣ ಮಂದಿರವನ್ನು ಹೊಕ್ಕು ಪ್ರತಿಧ್ವನಿಯೊಂದಿಗೆ ಹೊರಬರುತ್ತಿತ್ತು. ಇದಾವುದೂ ಆಕೆಯ ಲಕ್ಷ್ಯದಲ್ಲಿಲ್ಲ.

ಅಷ್ಟರಲ್ಲೇ ಮಧ್ಯವಯಸ್ಕ ಲಾಮಾ ಒಬ್ಬ ಅಲ್ಲಿಗೆ ಬಂದ. ಅಲ್ಲಿ ನಿಂತಿದ್ದ ಮುನಿಗೆ, "ಏನಿದು? ಈ ಹುಡುಗಿ ಯಾರು?" ಎಂದು ಕೇಳಿದ.

"ಆಕೆ ನನ್ನ ಸೋದರಿ. ಇಂಥದೊಂದು ನಾಯಿ ಮರಿ ಆಕೆಗೆ ಬೇಕಂತೆ."

ಆ ಲಾಮಾ ಮೋಮೋಳತ್ತ ಪ್ರಸನ್ನಚಿತ್ತನಾಗಿ ನೋಡಿದ. ನಂತರ ಮೆಲ್ಲಗೆ ನಡೆದು ಆಕೆಯ ತಲೆ ನೇವರಿಸಿ, "ಮಗು, ಇಷ್ಟು ಜೋರಿನಿಂದ ಚಕ್ರವನ್ನೇಕೆ ತಿರುಗಿಸುತ್ತಿದ್ದಿ? ಉಳಿದವರು ಒಂದೆರಡು ಸಲ ತಿರುಗಿಸಿ ಸುಮ್ಮನಾಗುತ್ತಾರೆ." ಅಂದ. ಮೋಮೋ ಚಕ್ರ ತಿರುಗಿಸುವುದನ್ನು ನಿಲ್ಲಿಸಿ ಲಾಮಾರತ್ತ ನೋಡಿದಳು. ಲಾಮಾ ಮತ್ತೆ ಮೊದಲಿನಂತೆಯೇ ಕೇಳಿದರು. ಆಗ ಮೋಮೋ, "ಗುರೂಜಿ, ನಂಗೆ ಇಂಥದೇ ಒಂದು ನಾಯಿ ಬೇಕು. ಬಹಳ ದಿನಗಳಿಂದ ದೇವರಲ್ಲಿ ಪ್ರಾರ್ಥಿಸುತ್ತಿದ್ದೇನೆ. ಆದರೆ ದೇವರು

ನನ್ನ ಪ್ರಾರ್ಥನೆಯನ್ನು ಕೇಳುತ್ತಲೇ ಇಲ್ಲ. ಇಷ್ಟು ದಿನ ನಾನು ನಿಧಾನವಾಗಿ ಪ್ರಾರ್ಥಿಸಿದ್ದೆ. ಈಗ ಜೋರಾಗಿ ಪ್ರಾರ್ಥಿಸ್ತಿದ್ದೇನೆ. ಅಂದ್ರೆ ಸ್ವರ್ಗ ದಲ್ಲಿರೋ ದೇವರಿಗೆ ನನ್ನ ಮೊರೆ ಕೇಳಿ ಆತ ಅದನ್ನು ಪೂರೈಸಲಿ ಅಂತ......ಇವೊತ್ತು ಆತನಿಗೆ ನನ್ನ ಪ್ರಾರ್ಥನೆ ಕೇಳಲೇಬೇಕು. ಕೇಳಿದವರೆಗೂ ಬಿಡು ವವಳಲ್ಲ," ಅಂದಳು.

ಮೋಮೋಳ ತಾಯಿ ಗಾಬರಿಯಾದಳು. ಲಾಮಾ ಮುಗುಳ್ನಕ್ಕು ಹೇಳಿದರು. "ಮಗು, ಪ್ರಾರ್ಥನೆಯ ಮಹತ್ವ ನಿಂಗೆ ಗೊತ್ತಿದೆಯಲ್ಲ, ಅಷ್ಟೇ ಸಂತೋಷ. ಮೋಮೋ, ಈ ಪ್ರಾರ್ಥನಾ ಚಕ್ರದ ಪ್ರಭಾವ ಎಷ್ಟು ಗೊತ್ತಾ? ಹಿಂದಿನ ಜನ್ಮದ ಪಾಪಗಳನ್ನೆಲ್ಲಾ ತೊಳೆದುಬಿಡುತ್ತೆ ಇದು. ಮುಂದಿನ ಜನ್ಮವನ್ನು ಪಾವನವನ್ನಾಗಿಸುತ್ತೆ. ನಿನಗೆ ಬೇಕಾಗಿರೋ ಇಂಥ ಚಿಕ್ಕಪುಟ್ಟ ವಸ್ತುಗಳಿಗೋಸ್ಕರ ನೀನು ತಾರಾ ಮಾತೆಯ ಪ್ರಾರ್ಥನೆ ಮಾಡು. ಬಹಳ ದಯಾಳು ಆಕೆ."

ಮಗುವಿಗೀಗ ತುಂಬ ನಿರಾಶೆ. ಮುಖದಲ್ಲಿ ಅದು ಎದ್ದು ಕಂಡಿತು. ಲಾಮಾ ಮತ್ತೆ ಹೇಳಿದರು, "ಮಗು, ನೀನೀಗ ಮಾಡಿರೋದೆಲ್ಲಾ ಸರೀನೇ. ನಿರಾಶಳಾಗಬೇಡ. ನಿನ್ನ ಆಸೆ ಪೂರೈಸುತ್ತದೆ."

ಆಕೆ ಮತ್ತೆ ಪ್ರಸನ್ನಚಿತ್ತಳಾದಳು. ಲಾಮಾರಿಗೆ ನಮಸ್ಕರಿಸಿ ಅಣ್ಣನತ್ತ ಓಡಿದಳು. ದೇವರು ತನ್ನ ಪ್ರಾರ್ಥನೆ ಕೇಳ್ತಾನೆ ಎಂಬ ಸಂತೋಷ ಆಕೆಗೆ.

*

ಊರಿಗೆ ಬಂದ ಕೂಡಲೇ ಮೊದಲು ಸುದ್ದಿ ಮುಟ್ಟಿಸಿದ್ದು ಪಾಸಂಗನಿಗೆ. ಆತ ಬಾತುಕೋಳಿಗಳ ಹಿಂದೆ ಓಡುತ್ತ ಆಟವಾಡುತ್ತಿದ್ದ.

"ಪಾಸಂಗ, ದೇವರಿಗೆ ನನ್ನ ಪ್ರಾರ್ಥನೆ ಕೇಳಿಸ್ತು. ನಂಗೆ ನಾಯಿ ಸಿಕ್ಕತ್ತೆ."

ಆಕೆಯ ಮಾತಿಗಷ್ಟು ಮಹತ್ವ ಕೊಡದೇ ಪಾಸಂಗ, "ಬಾ ಮೊಮೋ. ಬಾತುಕೋಳಿ ಹಿಡಿದು ಕೊಡು–ಬಾ" ಅಂದ. ಅದೇನು ಸುಲಭದ ಕೆಲಸ ಅಲ್ಲ ಎನ್ನುವುದು ಆಕೆಗೆ ಗೊತ್ತು. "ನಿನಗೆ ನಾಯಿ ಸಿಕ್ಕತ್ತಾ? ಎಲ್ಲಿಂದ? ಹ್ಯಾಗೆ?" ಪಾಸಂಗ ಕೇಳಿದ.

"ಅದೆಲ್ಲಾ ನಂಗೊತ್ತಿಲ್ಲಪ್ಪಾ...ದೇವ್ರು ಆಕಾಶ ದಿಂದ ನಮ್ಮಂಗಳಕ್ಕೆ ಇಳಿಸೀದ್ರೂ ಇಳಿಸಬಹುದು."

ಪಾಸಂಗ ನಕ್ಕುಬಿಟ್ಟ. "ಹುಚ್ಚಿ, ದೇವ್ರು ಆಕಾಶ ದಿಂದ ಮಳೇನ ಮಾತ್ರ ಇಳಿಸ್ತಾನೆ. ನಿನ್ನ ನಾಯಿ ಮರಿ ಬಂದ್ರೆ ಯಾತ್ರಿಕರ ಜತೆ ಬರಬಹುದು."

ಅಷ್ಟರಲ್ಲೇ ಗಂಟೆಗಳ ಸಪ್ಪಳ, ಬಂಡೆಗಾಲಿಗಳ ಗುಡು ಗುಡು ಉರುಳುವಿಕೆಯ ಸದ್ದು ಕೇಳಿತು. ಮನೆಯೆಡೆ ಓಡಿದಳು. ನಿಜವಾಗಿಯೂ ಯಾತ್ರಿಕರ ಗಾಡಿಗಳು ಬರುತ್ತಿದ್ದವು. ಮೋಮೋಳ ತಾಯಿ ಬೇಗನೇ ಒಲೆಯ ಮೇಲೆ ಗಡಿಗೆ ಇಟ್ಟು ಕಷಾಯ ದಂಥ ಬಿಸಿ ಪಾನೀಯ ತಯಾರಿಸತೊಡಗಿದಳು. ಉಪ್ಪು, ಸೋಡಾ, ಬೆಣ್ಣೆಯನ್ನು ಸಮಪ್ರಮಾಣ ದಲ್ಲಿ ಹಾಕಿ ಗಡಿಗೆಯ ಮೇಲೊಂದು ಮುಚ್ಚಳ ಮುಚ್ಚಿದಳು.

ಗಾಡಿಗಳು ಸಮೀಪ ಬರತೊಡಗಿದವು. ಮೋಮೋ ಬಾಗಿಲ ಹತ್ತಿರ ನಿಂತು ನೋಡತೊಡಗಿ ದಳು. ಯಾವ ಗಾಡಿಯಲ್ಲಾದರೂ ನಾಯಿ ಮರಿ ಕಾಣುತ್ತದೇನೋ ಎಂಬಾಸೆ ಆಕೆಯದು, ಮೊದಲ ಗಾಡಿ ಬಂದು ಅಂಗಡಿಯೆದುರೇ ನಿಂತಿತು. ಜನ ಇಳಿ ದರು. ಎಲ್ಲ ಗಾಡಿಗಳ ಜನರೂ ಒಟ್ಟಾಗಿ ಅಂಗಡಿಗೆ ಬಂದರು. ಅಬ್ಬಾ! ಅಂಗಡಿಯ ತುಂಬಾ ಜನ. ಅವರ ಮುಖ್ಯಸ್ಥ ಬಂದವನೇ ಮೋಮೋಳ ಕೆನ್ನೆ ತಟ್ಟಿ, "ಅರೆ, ಎಷ್ಟು ಬೆಳೆದಿದೀಯೆ ಹುಡುಗಿ" ಎಂದು ಗಲ್ಲಕ್ಕೆ ಮುತ್ತಿಟ್ಟ.

"ನಮ್ಮ ಡೋಲ್ಮಾ ನಿನ್ನ ವಯಸ್ಸಿನೋಳೇ. ಆದ್ರೆ ಆಕೆ ನಿನ್ನಷ್ಟು ಎತ್ತರ ಬೆಳೀಲಿಲ್ಲ" ಅಂದ.

"ಹಾಂ, ಅಂದ್ಹಾಗೆ ಆಕೆ ಏನು ತರೋದಕ್ಕೆ ಹೇಳಿ ದಾಳೆ ಗೊತ್ತಾ? ಮೋಮೋ ತಂದ್ಕೊಡು ಅಂದಿ ದಾಳೆ. ನಡಿ, ಬಾ ನಂ ಜೊತೆಗೆ" ಅಂದಾಗ ಎಲ್ಲರಿಗೂ ನಗೆ ಬಂತು.

ಟಿಬೇಟೀ ಭಾಷೆಯಲ್ಲಿ ಮೋಮೋ ಅಂದರೆ ಒಂದು ಸಿಹಿ ತಿಂಡಿ. ಮೋಮೋ ಹುಟ್ಟಿದಾಗ ನೇಮಾ ತನ್ನ ಮಗಳು ಆ ತಿಂಡಿಯಷ್ಟೇ ಸಿಹಿಯಾಗಿರಲಿ ಅಂದು ಕೊಂಡು ಅದೇ ಹೆಸರಿಟ್ಟಿದ್ದ.

"ನಿಂಗೇನು ತರ್ಲಿ ಮೋಮೋ? ಇನ್ನೆರಡು ತಿಂಗಳಿಗೆ ಮತ್ತೆ ಬರ್ತೀನಲ್ಲ" ಅಂದ ಯಾತ್ರಿಕರ ಮುಖ್ಯಸ್ಥ.

"ಆಕೆಗೆ ಒಂದು ಲ್ಹಾಸಾ ನಾಯಿ ಮರಿ ಬೇಕಂತೆ" ಅಂದಳು ಮೋಮೋಳ ತಾಯಿ.

"ಹಾಂ, ಹೌದಾದು. ರೇಶ್ಮೆಕೂದಲಿನ ನಾಯಿ

ಮರಿ," ದನಿಗೂಡಿಸಿದಳು ಮೋಮೋ.

ಆತ ಒಂದರೆಕ್ಷಣ ಗಂಭೀರನಾಗಿ ಮೋಮೋಳತ್ತ ನೋಡಿದ. "ನೀನು ಅಂಥ ನಾಯೀನ ಎಲ್ಲಿ ನೋಡ್ದೆ?" ಕೇಳಿದ.

"ದೊಡ್ಡ ಲಾಮಾ ಅವರ ಹತ್ತಿರ."

"ಹಾಗಾದ್ರೆ ಕಣ್ಣು ಮುಚ್ಚು," ಅಂದ. ಕಣ್ಣು ಮುಚ್ಚಿದ ಮೋಮೋಳ ಎದುರು ಚೀಲವೊಂದನ್ನು ಹಿಡಿದ. "ಈಗ ಕಣ್ಣು ತೆಗೆ," ಅಂದ. ಮೋಮೋ ಕಣ್ತೆರೆದಾಗ ತನ್ನ ಕಣ್ಣನ್ನು ತಾನೇ ನಂಬದಾದಳು. ಎದುರಿಗೆ ತಾನು ಬಯಸಿದಂಥ ನಾಯಿಮರಿ. ಮಲಗಿ ನಿದ್ರಿಸುತ್ತಿರುವ ಮುದ್ದು ಮರಿ.

ಒಮ್ಮಿಂದೊಮ್ಮೆಲೇ ಆಕೆಯ ಕೈಗಳು ಜೋಡಿಸಿಕೊಂಡವು. "ದೇವ್ರೆ, ನನ್ನ ಪ್ರಾರ್ಥನೆ ಕೇಳಿದಿಯಾ ಕೊನೆಗೂ?" ಅಂದುಕೊಂಡಳು.

ಆತ ಮರಿಯನ್ನು ಮೋಮೋ ಕೈಗಿತ್ತ. ಅಪ್ಪಿಕೊಂಡಳು. ಅದನ್ನು ನೇವರಿಸಿದಳು. ಮುದ್ದಿಸಿದಳು. ಆಕೆಗೆ ಏನು ಮಾತನಾಡಬೇಕೆಂಬುದೇ ತೋಚಲಿಲ್ಲ. ಮರಿ ಈಗ ಆಕೆಯ ಕತ್ತನ್ನು ನೆಕ್ಕತೊಡಗಿತು.

ಒಮ್ಮೆಲೇ ಗಂಭೀರಳಾದಳು ಮೋಮೋ. ತಾಯಿಯೆಡೆ ನೋಡಿದಳು. ನಂತರ ಆತನನ್ನುದ್ದೇಶಿಸಿ "ಇದರ ಬೆಲೆ ಎಷ್ಟು?" ಎಂದು ಕೇಳಿದಳು.

"ನೂರೈವತ್ತು ರೂಪಾಯಿ."

"ಆಂ?"

"ಗಾಬ್ರಿಯಾಗ್ಬೇಡ ಮೋಮೋ. ಇದು ನಾನು ನಿನಗಿತ್ತಿರೋ, ಕಾಣಿಕೆ" ಅಂದ ಆತ. "ಇದರ ತಾಯಿ ರಸ್ತೇಲಿ ಸತ್ತು ಹೋಯ್ತು. ಇದನ್ನು ಹೊತ್ಕೊಂಡು ಅಲ್ಲಲ್ಲಿ ತಿರುಗಾಡೋದು ನನಗೆ ಅಸಾಧ್ಯ. ಹಾಂ, ಮೋಮೋ. ಇದಕ್ಕೆ ದಿನಾಲು ಹಾಲು ಕುಡಿಸ್ಬೇಕು ಮತ್ತೆ," ಅಂದ.

ಅಷ್ಟರಲ್ಲೇ ಅಲ್ಲಿಗೆ ಬಂದಿದ್ದ ನೇಮಾ, "ಇದಕ್ಕೆ ಏನು ಹೆಸರಿಡ್ತೀ ಮೋಮೋ ?" ಎಂದು ಕೇಳಿದ.

"ಹೌದಲ್ಲ, ಏನಂತ ಕರೆಯೋದು? ಯಾರಾದ್ರೂ ಹಿರಿಯ ಪಂಡಿತರಿಂದ ಹೆಸರಿಡಿಸ್ಬೇಕು" ಎಂದು ಆಕೆ ಯೋಚಿಸುತ್ತಿದ್ದಂತೆಯೇ ಯಾತ್ರಿಕರ ಜತೆ ಬಂದಿದ್ದ ಜ್ಯೋತಿಷಿ ಲೆಕ್ಕ ಹಾಕಿ. "ಪೆಂಪಾ ಅಂತ ಹೆಸರಿಡಿ" ಅಂದ. ಏಕೆಂದರೆ ಮರಿ ಮನೆಗೆ ಬಂದದ್ದು ಶನಿವಾರ ದಿನ. ಮೋಮೋಳ ಜನ್ಮದಿನ, ಜನ್ಮವಾರವೂ ಪೆಂಪಾ ಒಂದೇ. ಟಿಬೇಟಿ ಭಾಷೆಯಲ್ಲಿ 'ಪೆಂಪಾ' ಅಂದರೆ ಶನಿವಾರ ಎಂದರ್ಥ.

ಅದೇ ವೇಳೆಗೆ ಆ ಜ್ಯೋತಿಷಿ, "ಈ ನಾಯಿ ಮರಿಯಿಂದ ಮೋಮೋ ಬಹಳ ತೊಂದ್ರೆ ಅನುಭವಿಸಬೇಕಾಗ್ತದೆ. ಮನೇಲಿ ಜಗಳ ಉಂಟಾಗ್ತದೆ," ಅಂದ. ಆ ಮಾತಿಗೆ ನೇಮಾ ನಕ್ಕುಬಿಟ್ಟ.

*

ಪೆಂಪಾ ಮನೆಗೆ ಬಂದು ಮೂರು ವರ್ಷಗಳು ಉರುಳಿವೆ. ಅದು ಈಗ ತುಂಬಾ ದಷ್ಟಪುಷ್ಟವಾಗಿ ಬೆಳೆದು ನಿಂತಿದೆ. ಮೋಮೋ ಕೂಡ ದೊಡ್ಡವಳಾಗಿದ್ದಾಳೆ. ಜ್ಯೋತಿಷಿ ಹೇಳಿದಂತೆ ಯಾವ ಕೆಡುಕೂ ಉಂಟಾಗಲಿಲ್ಲ. ಇಪ್ಪತ್ನಾಲ್ಕು ಗಂಟೆಯೂ ಪೆಂಪಾ ಮೋಮೋ ಒಂದಾಗಿಯೇ ಇರುತ್ತಿದ್ದರು.

ಮತ್ತೊಮ್ಮೆ ವ್ಯಾಪಾರಿಗಳ ತಂಡವೊಂದು ಬಂತು. ಗಾಡಿಗಳನ್ನು ನಿಲ್ಲಿಸಿ ಎಂದಿನಂತೆ ಚಹ ಕುಡಿದು ವಿಶ್ರಾಂತಿ ಪಡೆದರು ವ್ಯಾಪಾರಿಗಳು. ನಂತರ ಗಾಡಿಗಳು ಹೊರಟುಹೋದುವು.

ಸಂಜೆಯಾಯಿತು. ರಾತ್ರಿಯಾಯಿತು. ಪೆಂಪಾನ ಸುಳಿವೇ ಇಲ್ಲ. ಮೋಮೋ ಊರ ತುಂಬ ಹುಡುಕಿದಳು. ಪೆಂಪಾ ಸಿಕ್ಕಲಿಲ್ಲ. ಅಳುತ್ತ ರಾತ್ರಿಯಿಡೀ ಎಲ್ಲೆಲ್ಲೂ ಕಂದೀಲು ಹಿಡಿದು ಹುಡುಕುತ್ತ ಹೊರಟಳು. ಹುಚ್ಚೇ ಹಿಡಿದಂತಾಯಿತು. ರಸ್ತೆಯಲ್ಲಿ ಸಿಕ್ಕವರಿಗೆಲ್ಲಾ ಮೋಮೋ ಕೇಳುತ್ತಿದ್ದ ಪ್ರಶ್ನೆ, "ಪೆಂಪಾನ ನೋಡಿದಿರಾ?"

ಒಬ್ಬ ಹುಡುಗ ಮಾತ್ರ ಆಕೆಯ ಪ್ರಶ್ನೆಗೆ ಉತ್ತರಿಸಿದ: "ಪೆಂಪಾ...ನಿಂಗೆ ಇನ್ನು ಸಿಕ್ಕಲ್ಲ. ದೂರ ಹೊರಟೋಯ್ತು."

"ಹೊರಟೋಯ್ತು? ಎಲ್ಲಿಗೆ?"

ಆ ಹುಡುಗ ನಕ್ಕ. "ವ್ಯಾಪಾರಸ್ಥರ ಗಾಡಿಗಳಲ್ಲಿ" ಅಂದ.

"ಹ್ಯಾಗೆ?"

"ಯಾವನೋ ಒಬ್ಬ ಧಡಿಯ ಪೆಂಪಾನ ಬಾಯಿ ಮುಚ್ಚಿ ಬಟ್ಟೆ ತುರುಕಿ ಕೈಕಾಲು ಕಟ್ಟಿ ಹೊತ್ಕೊಂಡು ಗಾಡೀಲಿ ಹಾಕಿ ಹೊರಟ್ಹೋದ. ಕಲಕತ್ತಾಕ್ಕೆ ಒಯ್ದು ಮಾರ್ತಾನಂತೆ."

ಮೋಮೋ ಒಂದು ಕ್ಷಣವೂ ತಡ ಮಾಡಲಿಲ್ಲ. ಗಾಳಿಯ ವೇಗದಲ್ಲಿ ಓಡತೊಡಗಿದಳು. ಹತ್ತು ದೂರ ಕ್ರಮಿಸಿರಬೇಕು. ತಟ್ಟನೇ ನಿಂತಳು. "ಅಷ್ಟು ದೂರ ಹೋಗೋದಿದೆ, ಉಪವಾಸ [illegible]

ಹ್ಯಾಗೆ?" ಎಂದು ಯೋಚಿಸಿ ಮನೆಯೆಡೆ ನಡೆದಳು.

ಅಂಗಡಿ ಹೊಕ್ಕವಳೇ ಉಂಡಿಯ ಡಬ್ಬಿಯನ್ನು ಚೀಲಕ್ಕೆ ತುರುಕಿಕೊಂಡಳು. ಚಹದ ಪಾತ್ರೆಯನ್ನೆತ್ತಿಕೊಂಡು ಪ್ರಯಾಣದ ಖರ್ಚಿಗಿರಲೆಂದು ತಾಯಿಯ ಗಲ್ಲೆಗೆ ಕೈ ಹಾಕಿ ಸಿಕ್ಕಷ್ಟು ಕಾಸನ್ನು ಜೇಬಿಗೆ ತುರುಕಿಕೊಂಡವಳೇ ಓಡಿ ರಸ್ತೆಗೆ ಬಂದಳು. ಆಕೆಯ ತಾಯಿ ಎದುರಿನ ಗುಡ್ಡದ ಹತ್ತಿರ ಏನೋ ಕೆಲಸದಲ್ಲಿದ್ದಳು. ಮೋಮೋ ಆಕೆಗೆ ದೂರದಿಂದಲೇ, "ಅಮ್ಮಾ,ಅವ್ರು ನನ್ನ ಪೆಂಪಾನ್ನ ಕದ್ದುಕೊಂಡೊಯ್ದಿದ್ದಾರೆ. ಅವರನ್ನ ಹುಡುಕಲಿಕ್ಕೆ ಹೋಗ್ತಿದೀನಿ," ಎಂದು ಕೂಗಿದವಳೇ ಹೊರಟುಬಿಟ್ಟಳು. ತಾಯಿಗೆ ಕೇಳಿತೋ ಇಲ್ಲವೋ.

ಮೋಮೋ ದಾರಿಯುದ್ದಕ್ಕೂ ಓಡುತ್ತಲೇ ಹೋದಳು. "ದೊಡ್ಡ ರಸ್ತೆ ದೊಡ್ಡ ರಸ್ತೆ" ಅಂತ ಯಾತ್ರಿಕರು, ವ್ಯಾಪಾರಿಗಳು ಹೇಳೋದನ್ನ ಆಕೆಗೆ ಕೇಳಿ ಗೊತ್ತೇ ವಿನಾ ನೋಡಿ ಗೊತ್ತಿರಲಿಲ್ಲ. ಆಕೆ ನಡೆಯುತ್ತಿದ್ದ ದಾರಿ ತುಂಬಾ ಉದ್ದ. ಆ ರಸ್ತೆ ತುಂಬಾ ಕಠಿಣ ಎಂದೂ ಅಪರಿವರು ಅಂದದ್ದು ಆಕೆಯ ಕಿವಿಗೆ ಬಿದ್ದಿತ್ತು. ಜೆರೂಕಿನಿಂದ ಸಿಗಪಾಂ ಗುಡ್ಡದ ವರೆಗೂ ಇದ್ದ ಆ ಉಬ್ಬು ತಗ್ಗಿನ ಕಲ್ಲು ಮುಳ್ಳಿನ ಕಠಿಣ ರಸ್ತೆ ಒಂದೇ ಒಂದು ಮೈಲು ನಡೆಯಲೂ ತೊಂದರೆದಾಯಕವಾದದ್ದು. ಅದನ್ನು ದಾಟಿದರೆ ಬರಿ ಬರ್ಫ ಹೊದ್ದ ಬೆಟ್ಟಗಳು. ಅದರ ನಂತರ ರೂಂಗ್ಲಿ ಬಾಜಾರಿನವರೆಗೆ ಕಗ್ಗಾಡು. ಅಲ್ಲಂತೂ ಮುಳ್ಳು ಕಂಟಿಗಳ ಕಾಟ. ಇದೆಲ್ಲ ಆಗಾಗ ಅಂಗಡಿಯಲ್ಲಿ ಚಹ ಕುಡಿಯುತ್ತ ಮಾತಾಡುತ್ತಿದ್ದ ಯಾತ್ರಿಕರು ಹೇಳುತ್ತಿದ್ದದ್ದು. ಈಗ ಒಂದೊಂದೇ ಅನುಭವಕ್ಕೆ ಬರತೊಡಗಿತು. ಆದರೆ ಹೆದರಬೇಕೇಕೆ? ಭಗವಂತ ನೀಡಿದ ಮರಿ ಪೆಂಪಾ. ತನಗೆ ಸಿಕ್ಕೇ ಸಿಕ್ಕುತ್ತೆ ಅನ್ನೋ ಭರವಸೆ ಹೊತ್ತು ಮುಂದೆ ಮುಂದೆ ಹೊರಟಳು ಮೋಮೋ.

ಜೆಲೆಪ್-ಲಾ ಗಿರಿ ನಾಟಿನ ಮೇಲೆ ಬರುವ ಗುಡ್ಡದ ವರೆಗೂ ಒಂದೆರಡು ಸಲ ನೇಮಾನೊಂದಿಗೆ ಹೋಗಿದ್ದಳು. ಅದರ ನಂತರದ ರಸ್ತೆಗಳೆಲ್ಲ ಚುಂಬಿ ನದಿಯ ಪ್ರವಾಹ, ಗಗನಚುಂಬಿತ ಗಿರಿಗಳ ನಡು ನಡುವೆ.

ಅಲ್ಲಿ ನಿಂತು ಮೋಮೋ ಪ್ರಾರ್ಥಿಸುತ್ತಿದ್ದಳು: "ಹೇ ದೇವಾ, ಹೇ ತಾರಾಮಾಯಿ, ನನ್ನ ಪೆಂಪಾ ನಂಗೆ ಮರಳಿ ಸಿಗುವಂತೆ ಮಾಡು."

ಪೆಂಪಾ ಅಂದರೆ ಸಾಕು, ಆಕೆಯ ದಣಿವೆಲ್ಲ ಮಾಯವಾಗುತ್ತಿತ್ತು. ಹೀಗಾಗಿ ಪೆಂಪಾನನ್ನು ನೆನೆಯುತ್ತಲೇ ದೂರವನ್ನು ಕ್ರಮಿಸತೊಡಗಿದಳು. ಸಂಜೆಯಾಗುವ ಲಕ್ಷಣ ಕಂಡುಬಂತು. ರಾತ್ರಿಯಾಗುವುದರೊಳಗಾಗಿ ಯಾವುದಾದರೊಂದು ಹಳ್ಳಿ ಸೇರಬೇಕಲ್ಲ. ನಡಿಗೆ ವೇಗ ದ್ವಿಗುಣಗೊಳಿಸಿ ಎಷ್ಟು ನಡೆದರೂ ಒಂದಾದರೂ ಗುಡಿಸಲು ಕಾಣಸಿಗದು. ಆಕೆ ಮತ್ತೆ ಮುಂದೆ ನಡೆದಳು. ಅಲ್ಲಿ ತನ್ನ ತಂದೆಯ ಮಿತ್ರ ಸಾಕ್ಯಾ ಸೈರಿಗ್‌ನ ಝೋಪಡಿ ಕಂಡಿತು. ನಿತ್ಯ ಈ ವೇಳೆಗೆ ನೇಮಾ ಅಲ್ಲಿಗೆ ಬರುತ್ತಿದ್ದ. ರಾತ್ರಿಯ ಚಳಿಯಿಂದ ಪಾರಾಗಲು ಬೆಂಕಿಯ ಮುಂದೆ ಕುಳಿತುಕೊಳ್ಳುತ್ತಿದ್ದ. ಇದು ಮೋಮೋಳಿಗೆ ತಿಳಿದ ವಿಷಯ. ಅಪ್ಪನನ್ನು ಕರೆದರೆ ಹೇಗೆ? ಎಂದುಕೊಂಡಳು. ತಾನು ಪೆಂಪಾನನ್ನು ಹುಡುಕಲು ಹೊರಟಿದ್ದೇನೆ ಎಂದು ತಿಳಿಸಿದರೆ ಅಪ್ಪ ಬಿಟ್ಟಾನೆಯೆ ಎಂಬ ಯೋಚನೆಯೂ ಬಂತು. ಇಲ್ಲ, ಅಪ್ಪ ತನ್ನನ್ನು ಹೋಗಗೊಡುವುದೇ ಇಲ್ಲ. ಜಬರದಸ್ತಿಯಿಂದ ಮನೆಗೆಳೆದುಕೊಂಡು ಹೋಗಿಯೇಬಿಡುತ್ತಾನೆ ಅನಿಸಿತು.

ಅಷ್ಟರಲ್ಲೇ ನೇಮಾ ಕೆಮ್ಮಿದ ಸದ್ದು. ಮೋಮೋ ಮರೆಯಾದಳು. ದೂರದಲ್ಲಿ ಅಪ್ಪ ಬರುತ್ತಿರುವುದು ಕಾಣಿಸಿತು.

ಪೆಂಪಾ ದೂರ ಹೋಗಿದೆ. ಸುಮ್ಮನೇ ವೇಳೆ ಗಳೆದರೆ ಇನ್ನೂ ದೂರ ಹೋಗಿಬಿಡುತ್ತದೆ. ಹೀಗೇ ಕೆಳಗೆ ಹೋದರೆ ಗ್ನಾಟೋಂಗ್ ಬರುತ್ತದೆ. ಅಲ್ಲಿ ಹೋಗಿ ವಿಶ್ರಾಂತಿ ಪಡೆಯಬಹುದು ಅಂದು-ಕೊಂಡು ಹೊರಟಳು ಮೋಮೋ.

ಗ್ನಾಟೋಂಗ್ ತುಂಬ ಭಯಂಕರ ಸ್ಥಳ ಎಂಬುದನ್ನು ಕೇಳಿ ತಿಳಿದಿದ್ದಳು. ಕೊಲೆಗಳು ಅಲ್ಲಿ ಸರ್ವೇಸಾಮಾನ್ಯವಂತೆ. ಭೂತಗಳಿವೆಯಂತೆ. ಆ ಅರಣ್ಯದಲ್ಲಿ ನೇಪಾಳದಿಂದ ತಲೆ ಮರೆಸಿಕೊಂಡು ಬಂದ ಡಕಾಯಿತರೂ ಇರುತ್ತಾರಂತೆ. ಕೆಲ ದಿನಗಳ ಹಿಂದೆ ಅಮ್ಮನಂಗಡಿಯಲ್ಲಿ ಚಾ ಕುಡಿಯುತ್ತಿದ್ದ ಜೋಗಾ ಹೇಳಿದ್ದ ಮಾತು ನೆನಪಿಗೆ ಬಂತು. ಬೆವರಿದಳು ಮೋಮೋ. ಭಯದಿಂದ ನಡುಗಿದಳು.

ಆದರೆ ಪೆಂಪಾನ ನೆನಪು ಭಯವನ್ನೆಲ್ಲ ಕತ್ತರಿಸಿತು. ಮೂಲತಃ ಮೋಮೋ ಸಾಹಸಿ. ಈಗ ಮುಂದಿನ ದಾರಿಯೂ ಕಾಣದಹಾಗೆ ಕತ್ತಲು

ತುಂಬಿತ್ತು. ಮೋಮೋಳಿಗೆ ಅಮ್ಮನ ನೆನಪು. ಅಮ್ಮ ಆಕೆಯ ಭಯವನ್ನೆಲ್ಲ ಕಳೆದು ಧೈರ್ಯ ತುಂಬಿದವಳು. ಆದರೆ ಅಪ್ಪ ಹೇಳುವ ಕತೆಗಳೆಲ್ಲಾ ದೆವ್ವ–ಭೂತಗಳದ್ದು.

ಈಗ ಅಮ್ಮನೂ ಇಲ್ಲ, ಅಪ್ಪನೂ ಇಲ್ಲ. ತಾನೇ ತಾನು. ತನಗೇನಾದರೂ ಆದರೆ? ನಡುಗತೊಡ ಗಿದಳು. ಹಾಗೆಯೆ ಅತ್ತಿತ್ತ ನೋಡಿದಳು. ತಾನು ನಿಂತಿರುವುದು ಆಂಗ್ಲ ಸೈನಿಕರ ಶವಹುಗಿದ ಸ್ಥಳದಲ್ಲಿ. ಸುತ್ತಲೂ ರುದ್ರನೀರವತೆ. ಆಗಾಗ ಎಲ್ಲಿಂದಲೋ ಎದೆ ನಡುಗಿಸುವ ದನಿ. ಯಾವು-ದೋ ಪ್ರಾಣಿಯ ಚೀತ್ಕಾರ. ಜೀ... ಎಂದು ಸುಡುಗಾಡು ಹಕ್ಕಿಯ ಸೋಬಾನ. ಆಂಗ್ಲ ಸೈನಿ ಕರು ದೆವ್ವಗಳಾಗುತ್ತಾರೆ ಎಂಬ ಚೊಂಗನ ಮಾತು ಮತ್ತೆ ಕಿವಿಯಲ್ಲಿ ಮೊರೆಯಿತು. ಹಸಿರು ಕಣ್ಣು ಗಳೆರಡು ಈಕೆಯತ್ತಲೇ ಓಡುತ್ತ ಬಂದಂತೆ, ಸದ್ದು ಕೇಳಿಸಿದಂತೆ ಆದಾಗ ಮೋಮೋ 'ಅಮ್ಮಾ' ಎಂದು ಕಿರುಚಿ ದೊಪ್ಪೆಂದು ಬಿದ್ದುಬಿಟ್ಟಳು.

*

ಆಕೆಗೆ ಎಚ್ಚರವಾದಾಗ ಸುತ್ತಲೂ ಬೆಳ್ಳಂಬೆಳಕು. ಎದ್ದು ನೋಡಿದಳು; ತನ್ನ ಕೈಯಲ್ಲಿದ್ದ ಚೀಲ ಹರಿದು ಬಿದ್ದಿದೆ. ಚಹದ ಕಿಟ್ಲಿ ಸುರಿದು ಬಿಟ್ಟಿದೆ. ರಾತ್ರಿಯಿಡೀ ತಾನು ಹೀಗೆಯೆ ಬಿದ್ದಿ ದ್ದೆನೆ? ಎಂದುಕೊಂಡು ನಡುಗಿದಳು. ಅಷ್ಟರಲ್ಲೇ ಯಾಕ್‌ಪ್ರಾಣಿಗಳ ದಂಡು ಈಕೆಯತ್ತ ಬಂತು. ಅರೆ, ರಾತ್ರಿ ಹೆದರಿಸಿದ ಕಣ್ಣು ಇವುಗಳವೇ ಎಂದುಕೊಂಡು ತಂತಾನೇ ನಕ್ಕುಬಿಟ್ಟಳು ಮೋಮೋ.

ಹೊಸ ದಿನ ಆಕೆಯಲ್ಲಿ ಹೊಸ ಹುರುಪು ತಂದಿತ್ತು. ಮುಂದೆ ಹೊರಡಲು ಅಣಿಯಾದಳು. ಆದರೆ ಹೊಟ್ಟೆ ಹಸಿದದ್ದು ಗೊತ್ತಾದಾಗ ಬಿದ್ದ ಚೀಲಕ್ಕೆ ಕೈಹಾಕಿದಳು. ಅದು ಖಾಲಿ. ಒಂದೆರಡು ಚೂರು ಸಿಹಿತಿಂಡಿಗೆ ಇರುವೆ ಮುತ್ತಿದೆ. ಚಹ ವನ್ನಂತೂ ಆ ರುದ್ರಭೂಮಿ ಕುಡಿದು ಕಿಟ್ಲಿ ಯನ್ನು ಖಾಲಿಮಾಡಿಬಿಟ್ಟಿದೆ. ಮುಂದೆ ಹೋದರೆ ಯಾವುದಾದರೂ ಹಳ್ಳಿ ಸಿಕ್ಕೇ ಸಿಗುತ್ತದೆ, ಅಲ್ಲಿ ಏನಾದರೂ ತಿಂದು ಚಹ ಕುಡಿದರೆ ಯಿತೆಂದುಕೊಂಡು ಹೊರಟಳು. ಮುಂದೆ ಮುಂದೆ ನಡೆಯುತ್ತಿದ್ದಾಗ ದೂರದಲ್ಲಿ ಹೊಗೆ ಕಂಡಿತು. ಪಕ್ಕದ ಎತ್ತರವಾದ ದಿನ್ನೆಯ ಮೇಲೇರಿ ನೋಡಿ ದಳು. ಹೊಗೆ ಬರುತ್ತಿರುವುದು ಅಲ್ಲಿ ಕಾಣು ತ್ತಿದ್ದ ಮನೆಗಳ ಹೊಗೆಗೊಂಡಿಯಿಂದ. ನಡಿಗೆಯ ವೇಗ ಹೆಚ್ಚಿಸಿದಳು.

ಆ ಹಳ್ಳಿಗೆ ಬಂದಾಗ ಅದು ಲಿಂಗತ್ಸಾಂಗ್ ಎಂದು ಗೊತ್ತಾಯಿತು. ಊರ ಹೊರಗೆ ತಮ್ಮ ಅಂಗಡಿಯನ್ನೇ ಹೋಲುವಂಥ ಒಂದು ಚಹದ ಅಂಗಡಿ. ಒಳ ಹೊಕ್ಕಳು. ಇಬ್ಬರು ಹೆಂಗಸರು ಒಲೆಯ ಮುಂದೆ ಕುಳಿತಿದ್ದರು. ನೀರು ಕುಡಿದು, "ಇಲ್ಲೇನಾದ್ರೂ ನಿನ್ನೆ ರಾತ್ರಿ ಗಾಡಿಗಳು ನಿಂತಿ ದ್ದುವಾ? ಒಟ್ಟು ನಲವತ್ತು ಗಾಡಿಗಳು..." ಕೇಳಿದಳು ಮೋಮೋ.

ಆ ಹೆಂಗಸರು ಮುಂದೆ ಬಂದರು. ಸ್ವಲ್ಪ ಹೆಚ್ಚು ವಯಸ್ಸಾದವಳು, "ಹೌದು. ಇಲ್ಲಿಳಿದು ಚಾ ಕುಡಿದು ಮತ್ತೆ ಹೊರಟುಬಿಟ್ಟರು ಅವರು." ಉತ್ತರಿಸಿದಳು.

"ಹಾಗಾದ್ರೆ ಅವರ ಹತ್ರ ರೇಶ್ಮೆಗೂದಲಿನ ನಾಯಿ ಮರೀನೇನಾದ್ರೂ ನೀವು ನೋಡಿದ್ರಾ?"

"ನಾಯಿ ಮರೀನೆ ? ಇಲ್ವಲ್ಲ ?" ಎನ್ನುವಂತೆ ಆಕೆ ಇನ್ನೊಬ್ಬಾಕೆಯ ಕಡೆ ನೋಡಿದಳು. ಇಲ್ಲ ಎನ್ನುವಂತೆ ಆಕೆ ತಲೆಯಾಡಿಸಿದಳು.

ಆದರೆ ಅವರ ಬಳಿ ಕುಳಿತಿದ್ದ ಮೋಮೋಳ ವಯಸ್ಸಿನ ಹುಡುಗಿ, "ಹಾಂ, ಹೌದೌದು. ನಾನು ನೋಡ್ದೆ. ಎರಡು ನಾಯಿಗಳಿದ್ವು. ಒಂದು ನಾಯಿ ಹಾಗೇ ಗಾಡಿಗಳ ಕೆಳಕೆಳಗೇ ಓಡ್ತಿತ್ತು. ಇನ್ನೊಂದು ಉದ್ದಗೂದಲಿನ ನಾಯಿ. ಅದರ ಕತ್ತಿಗೆ ಹಗ್ಗ ಬಿಗಿದು ಒಬ್ಬ ಹಿಡಿದಿದ್ದ. ಆತನ್ನ ಅದು ಕಚ್ಚೋದಕ್ಕೆ ಹೋಗ್ತಿತ್ತು. ಭಾಳಾ ಚಂದ ನಾಯಿ..."ಅಂದಳು.

"ಹಾಂ–ಹಾಂ–ಅದೇ ಅದೇ ನನ್ನ ಪೆಂಪಾ. ಆತ ನನ್ನ ಮನೆಯಿಂದ ಪೆಂಪಾನ್ನ ಕದ್ದು ಕೊಂಡು ಬಂದಿದಾನೆ. ನಾನು ಅದನ್ನ ವಾಪಸ್ ತರೋದಕ್ಕೆ ಹೊರಟಿದೀನಿ."

"ಯಾವೂರು ನಿಂದು?" ಮುದುಕಿ ಕೇಳಿದಳು.

"ಜೆಪೆಲ್–ಲಾ ಹತ್ರ ನಮ್ಮ ಹಳ್ಳಿ. ನಮ್ದೂ ನಿಮ್ಮ ಹಾಗೆ ಒಂದು ಚಾ ಅಂಗಡಿ ಇದೆ. ನಮ್ಮಮ್ಮ ನೋಡ್ಕೋತಾಳೆ. ಅಪ್ಪ ಅಂಚೆ ಹಂಚ್ತಾನೆ. ನನ್ನ ಹೆಸ್ರು ಮೋಮೋ."

"ನೀನೊಬ್ಳೇ ಹೊರಟಿದ್ದೀಯಾ? ಅಪ್ಪನಿಗೆ ಇದು

ಗೊತ್ತಿಲ್ವಾ?"

"ಇಲ್ಲ ಅಪ್ಪನಿಗೆ ಗೊತ್ತಿಲ್ಲ. ನೀವು ಅವ್ರಿಗೆ ಪತ್ರ ಬರೆದು ನಾನು ಪೆಂಪಾನ ವಾಪಸ್ ತಗೊಂಡೇ ಬರ್ತೀನಿ; ಕಾಳಜಿ ಮಾಡಬೇಡೀಂತ ತಿಳಿಸಿ."

"ಬೇಡಮ್ಮಾ ಮೋಮೋ. ಮನೆಗೆ ಹೋಗ್ಬಿಡು. ನೀನು ಇಲ್ದೇ ಇರೋದನ್ನ ನೋಡಿ ನಿಮ್ಮ ಮನೇಲಿ ಯಾರ್‍ಯಾರ ದುಃಖ ಏನೋ ಎಷ್ಟೋ! ಅಪ್ಪನಿಗೆ ಹೇಳಿ ಮತ್ತೊಂದು ನಾಯಿ ತರಿಸ್ಕೋ. ವ್ಯಾಪಾರಿಗಳ ಬೆನ್ನು ಹತ್ತೋದು ಬಾಳಾ ಕಷ್ಟದ ಕೆಲ್ಸ," ಮುದುಕಿ ಮೋಮೋಳ ತಲೆ ನೇವರಿಸಿ ಹೇಳಿದಳು.

"ಬೇರೆ ನಾಯಿ ಬೇಡಾ ನಂಗೆ. ಪೆಂಪಾನಂಥಾ ಬೇರೆ ನಾಯಿ ಸಿಗೋದೇ ಅಸಾಧ್ಯ. ಅದು ದಲಾಯಿ ಲಾಮಾ ಅವರ ಮನೇಲಿ ಹುಟ್ಟಿದ್ದು. ಹಾಗಂತ್ಲೇ ಆ ಕಳ್ರು ನನ್ನ ಪೆಂಪಾನ ಹಾರಿಸ್ಕೊಂಡೋದ್ರು" ಮೋಮೋಳ ದನಿಯಲ್ಲಿ ಹಟವಿತ್ತು, ಸೇಡಿತ್ತು. ತಿರಸ್ಕಾರವೂ ಇತ್ತು.

"ನಿಂಗೆ ಅದೆಲ್ಲಾ ಗೊತ್ತಾಗಲ್ಲ ಮಗು, ಅವ್ರ ಹಿಂದಿಂದೆ ಎಲ್ಲೀಂತ ಅಲೀತಿ? ಯಾರೂ ನಿನ್ನ ಮಾತು ಕೇಳೋದೇ ಇಲ್ಲ. ನಿನಗ್ಯಾರಾದ್ರು ಸಹಾಯ ಮಾಡ್ತಾರೇಂತ ನೀನು ತಿಳ್ಕೊಂಡಿದೀ ಏನು? ಊಹುಂ ಸಾಧ್ಯವೇ ಇಲ್ಲ. ಸುಮ್ನೇ ಮನೆಗೆ ಹೋಗ್ಬಿಡು."

"ಇಲ್ಲ–ನಾನು ಪೆಂಪಾನ ವಾಪಸ್ ಪಡೀತೀನಿ."

"ಹುಚ್ಚ ಹುಡುಗಿ ನಿನ್ನ ಹಟ ಬಿಡೋದಿಲ್ಲಾಂತ ಕಾಣಿಸ್ತದೆ. ಹೋಗ್ಲಿ ಚಹಾನಾದ್ರೂ ಕುಡಿ. ಆ ಮೇಲೆ ಹೋಗಬಹುದು."

ಬಿಸಿಬಿಸಿ ಚಾ ಕುಡಿದ ಮೇಲೆ ಮೋಮೋ ಸ್ವಲ್ಪ ವಿಶ್ರಾಂತಿ ಪಡೆದು ಮತ್ತೊಮ್ಮೆ ತಿಂಡಿ (ಚಾ ತನ್ನ ರೊಕ್ಕದಲ್ಲಿ) ಮುಗಿಸಿ ಮುಂದೆ ಹೊರಟಳು. ಕೆಲವು ಹೆಜ್ಜೆಗಳ ಅಂತರದಲ್ಲಿ ಒಂದು ದೊಡ್ಡ ಬಯಲು. ಅಲ್ಲಿ ಬಗ್ಗು ಬಗ್ಗಾದ ಮರಗಿಡಗಳು. ಅಲ್ಲಿಂದ ಸ್ವಲ್ಪ ದೂರಕ್ಕೆ ಕೆಲವು ರೆಫ್ಯೂಪಡಿಗಳು. ಅದು ಜೆಲುಕ್ ಹಳ್ಳಿ ಎಂದು ಯಾರನ್ನೋ ಕೇಳಿದ ಮೇಲೆ ಗೊತ್ತಾಯಿತು.

ಅಲ್ಲಿಯ ಚಹದಂಗಡಿಯಲ್ಲಿಯೂ ಮೊದಲಿನಂತೆಯೇ ಪ್ರಶ್ನಿಸಿದಳು. ಹಾಗೇ ಮತ್ತೊಂದೂರಿನ ಚಹದಂಗಡಿಯಲ್ಲಿಯೂ ಆಕೆಗೆ ನಿರಾಶಾದಾಯಕ ಉತ್ತರ ಸಿಕ್ಕಿತು. ಈ ಹೊತ್ತಿಗೆ ಭೋರೆಂದು ಮಳೆ ಒಮ್ಮಿಂದೊಮ್ಮೆಲೇ ಶುರುವಾಯಿತು. ಮೋಮೋಳ ಉಣ್ಣೆಯ ಬಟ್ಟೆಗಳು ಕೆಟ್ಟು ಹೋದವು.

ರೆನೋಕಿನ ಚಾದಂಗಡಿಯಲ್ಲಿ ಮೋಮೋಳಿಗೆ ಬಹಳ ಫಜೀತಿಯಾಯಿತು. ಮಳೆ ನಿಲ್ಲುವ ವೇಳೆಗಾಗಲೇ ರಾತ್ರಿಯಾಯಿತು. ಅಂಗಡಿಯಾಕೆ ಯಾರು, ಎತ್ತ, ಎಲ್ಲ ಪ್ರಶ್ನಿಸಿದಳು. ನಂತರ ಬೆಳಗಾಗುತ್ತಲೇ, "ಭಾರತದಿಂದ ಬರೋ ವ್ಯಾಪಾರಿಗಳ ಜತೆ ಈಕೇನ ಅವಳ ಮನೇಗೆ ಕಳಿಸಿಬಿಡೋದೇ ಒಳ್ಳೆಯದು" ಎಂಬ ನಿರ್ಧಾರ ಪ್ರಕಟಿಸಿದಳು. ಇದನ್ನು ಕೇಳಿ ಮೋಮೋಳಿಗೆ ಗಾಬರಿಯಾಯಿತು. ಪೆಂಪಾನ ನೆನಪು ಮತ್ತಷ್ಟು ತೀವ್ರವಾಯಿತು.

ರಾತ್ರಿ ಜನರೆಲ್ಲ ಮಲಗಿ ನಿದ್ರಿಸುತ್ತಿದ್ದಾರೆಂದು ಖಾತ್ರಿ ಮಾಡಿಕೊಂಡು ಮೋಮೋ ಅಲ್ಲಿಂದ ಮೆಲ್ಲನೇ ಕಾಲು ಕಿತ್ತಳು. ಅಷ್ಟರಲ್ಲೇ ಆ ಕರಿ ನಾಯಿ ಈಕೆಯ ಬೆನ್ನಟ್ಟಿ ಬೊಗಳತೊಡಗಿತು. ಅಂಗಡಿಯ ಮುದುಕಿಗೆ ಎಚ್ಚರವಾಯಿತು. ಮೋಮೋಳ ಕೈ ಕಾಲುಗಳನ್ನು ಹಗ್ಗದಿಂದ ಕಟ್ಟಿ ಹಗ್ಗದ ಕೊನೆಯನ್ನು ತನ್ನ ಟೊಂಕಕ್ಕೆ ಕಟ್ಟಿಕೊಂಡು ಮಲಗಿದಳು ಆಕೆ. ಮೋಮೋ ಸ್ವಲ್ಪ ಅಲ್ಲಾಡಿದರೂ ಸಾಕು, ಮುದುಕಿಯ ಬೈಗುಳ ಪ್ರಾರಂಭ. ಹೀಗೆ ನಿದ್ರೆಯಿಲ್ಲದೆ ರಾತ್ರಿ ಕಳೆದಳು.

ಆದರೆ ಬೆಳಗುಮುಂಜಾನೆ ಸ್ವಲ್ಪ ಜೋಂಪಿನಲ್ಲಿದ್ದ ಮುದುಕಿಗೆ ವ್ಯಾಪಾರಿಗಳ ಗಾಡಿಗಳು ವಾಪಸ್ ಹೊರಟದ್ದು ಗಮನಕ್ಕೆ ಬರಲಿಲ್ಲ. ವಿಷಯ ತಿಳಿದ ಮೇಲೆ ಪೇಚಾಡಿಕೊಂಡ ಮುದುಕಿ ನಂತರ ಆ ಮಾತನ್ನೇ ತೆಗೆಯಲಿಲ್ಲ.

"ನನ್ನನ್ನ ಮನೇಗೆ ಕಳಸಲ್ವಾ ಅಜ್ಜಿ?" ಹಂಗಿಸುವಂತೆ ಕೇಳಿದಳು ಮೋಮೋ.

"ನಿನ್ನನ್ನ ಮನೇಗೆ ಕಳಿಸ್ಲಾ? ವ್ಹಾ…ನೀನು ಬಹಳ ಕೆಲಸಾ ಮಾಡಬಲ್ಲೆ. ನಮ್ಮಂಗಡೀಲೇ ಇದ್ದುಬಿಡು. ಇಟ್ಕೊತೀನಿ" ಅನ್ನುತ್ತ ನೀರು ತುಂಬಲು ಕೊಡ ಹಗ್ಗ ತಂದುಕೊಟ್ಟು, "ಅದೋ, ಆ ಬಾವಿಯಿಂದ ನೀರು ತಗೊಂಬಾ" ಅಂದಳು.

ಆಕೆ ಅಷ್ಟು ಹೇಳಿ ಒಳಹೋದಳು. ಮೋಮೋಳಿಗೆ ಅವಮಾನ–ಸಿಟ್ಟು ಎರಡೂ ಏಕಕಾಲಕ್ಕೆ ಬಂದು ಹಗ್ಗ–ಕೊಡಗಳನ್ನು ಅಲ್ಲಿಯೇ ಎಸೆದು ಕಾಲಿಗೆ



ಭಾರತೀಯ ಪರಂಪರೆಯಲ್ಲಿ ನೃತ್ಯವು ಧಾರ್ಮಿಕ ಆರಾಧನೆಯ ಒಂದು ವಿಧವಾಗಿದೆ. ದೇವಾಧಿದೇವತೆಗಳ ಗೌರವಾರ್ಥವಾಗಿ ಮತ್ತು ಸ್ತುತಿರೂಪವಾಗಿ ರೂಪಶ್ರೀಯ ಅಂಗ ಭಾವಗಳ ಶುಚಿತ ಮಿಡಿತಗಳ ಪ್ರದರ್ಶನವಾಗಿದೆ. ಈಶ್ವರನು ತಾನೇ ನೃತ್ಯದೇವನಾಗಿದ್ದ ಮತ್ತು ಈಶ್ವರನ ನೃತ್ಯವೆಂದರೆ ಜಗತ್ತಿನ ಚಲನೆಯ ಮೂರ್ತ ಸ್ವರೂಪವೆಂದು ಪರಿಗಣಿಸಲಾಗುತ್ತದೆ.

ಇದೇ ರೀತಿಯಲ್ಲಿ ದಾವಣಗೆರೆ ಕಾಟನ್ ಮಿಲ್ಸ್ ತಮ್ಮ ಪರಂಪರಾಗತ ಕೌಶಲ್ಯವನ್ನು ಹಲವು ವಿಧದ ಉತ್ಕೃಷ್ಟ ಬಟ್ಟೆಗಳ ರೂಪದಲ್ಲಿ ನಿಮಗೆ ನೀಡುತ್ತಾರೆ. ಚೆಲುವಾಗಿ ನೇಯ್ದು ಮತ್ತು ಕೌಶಲ್ಯಪೂರ್ಣವಾಗಿ ಮಿಶ್ರ ಮಾಡಿದ ಈ ಬಟ್ಟೆಗಳು ಪ್ರತಿಯೊಬ್ಬರ ಅಭಿರುಚಿಗೆ ಅನುರೂಪವಾಗಿದೆ.

ಅತ್ಯಂತ ವರ್ಣರಂಜಿತ ನೃತ್ಯ ಶೈಲಿಗಳಲ್ಲಿ ಒಂದನ್ನು ನೀಡಿದ ಹಿರಿಮೆ ಕೇರಳಕ್ಕೆ ಸಲ್ಲುತ್ತದೆ. ಅದೇ ಕಥಕಳಿ. ಕಥಕಳಿಯ ಕಲೆಯು ದೇವಿ ಭಗವತಿಗೆ ಸಂಬಂಧಿತ ಪ್ರಾಚೀನ ಪರಂಪರೆಯು. ಧಾರ್ಮಿಕತೆಯು, ಯುದ್ಧೋಚಿತ ಮತ್ತು ಜಾನಪದ ನೃತ್ಯವನ್ನು ಮೈಗೂಡಿಸಿಕೊಂಡಿದ್ದು.

ಉತ್ತಮ ಬಟ್ಟೆಗಳ ಉತ್ಕೃಷ್ಟ ಪರಂಪರೆಯಿರುವ

ದಾವಣಗೆರೆ

ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್, ದಾವಣಗೆರೆ 577 002.

(ಶೋ ರೂಮ್‌ಗಳು)

ರಾಜೀವ ಭವನ, ಬೆಂಗಳೂರು 560 009 [illegible] 560 020 [illegible] ದಾವಣಗೆರೆ 577 002.

THOMAS/DCM/78/A/KAN

ಬುದ್ಧಿ ಹೇಳಿದಳು. ಹಿಂತಿರುಗಿ ನೋಡದೇ ನಡೆದು ಓಡಿ ರೂಂಗ್ಲಿ ಬಜಾರ್ ತಲುಪಿದಳು. ರೂಂಗ್ಲಿ ಬಜಾರ್ ಆಕೆಗೆ ಒಂದು ವಿಸ್ಮಯಲೋಕ ಎನಿಸಿತು. ಅಲ್ಲಿ ತರತರದ ಜನ. ತರತರದ ಸಾಮಾನುಗಳು. ಅಂದವಾದ ಮನೆಗಳು, ಗಾಡಿಗಳು. ತಾನೇನು ಸ್ವರ್ಗಕ್ಕೇ ಬಂದೆನೇನೋ ಎಂದುಕೊಂಡಳು ಮೋಮೋ. ಅಲ್ಲಿಯವರು ಆಡುವ ಭಾಷೆ ತೀರಾ ಹೊಸದೆನಿಸಿತು. ಮೋಮೋಳೆಡೆ ನೋಡಿ ಆಕೆಯ ಓರಗೆಯವರು ನಗ-ತೊಡಗಿದರು. ಅವರ ಕಣ್ಣಿಗೆ ಮೋಮೋ ಎಲ್ಲಿಂದಲೋ ಹಿಡಿದು ತಂದ ಅಥವಾ ಎಲ್ಲಿಂ-ದಲೋ ತಪ್ಪಿಸಿಕೊಂಡು ಓಡಿಬಂದು ಅಲೆಯುತ್ತಿರುವ ಪ್ರಾಣಿಯ ಹಾಗೆ ಕಂಡಿರಬೇಕು. ಅತ್ತಿತ್ತ ನೋಡುತ್ತ, ಗಾಡಿಗಳ ಬಾಯಿಗೆ ಸಿಗುವುದನ್ನೂ ಜನರಿಗೆಡಿಕ್ಕಿ ಹೊಡೆದು ಆಗಬಹುದಾದ ಪ್ರಮಾದವನ್ನೂ ತಪ್ಪಿಸಿಕೊಳ್ಳುತ್ತ ನಡೆದಳು. ಎದುರಿಗೊಂದು ಮಿಠಾಯಿ ಅಂಗಡಿ. ಮೋಮೋಳ ಬಾಯಿಯಲ್ಲಿ ನೀರೂರಿತು. ನಿಂತಳು. ಅಷ್ಟರಲ್ಲೇ ಪೆಂಪಾನ ನೆನಪು ಒತ್ತರಿಸಿ ಬಂತು. ಮತ್ತೆ ಓಡತೊಡಗಿದಳು.

ಹಾಗೆ ಓಡುತ್ತಿರುವಾಗ ಆ ಧಡಿಯನಿಗೆ ಮೋಮೋ ಡಿಕ್ಕಿ ಹೊಡೆದಳು. ಆತ ಕಣ್ಣು ಕೆಂಪಗೆಮಾಡಿ ಟಿಬೇಟಿ ಭಾಷೆಯಲ್ಲಿ "ಕುರುಡೀನಾ ? ಯಾರೂ ಕಾಣಲ್ವಾ?" ಎಂದು ಕೇಳಿದ.

ಮೋಮೋಳಿಗೆ ಕಳಕೊಂಡದ್ದು ಸಿಕ್ಕಷ್ಟು ಸಂತೋಷವಾಯಿತು. "ಓಹ್ ನೀವೂ ನಮ್ಮ ದೇಶದವರೆ…"ಎಂದು ಅದೇ ಭಾಷೆಯಲ್ಲಿ, ನುಡಿದಳು.

ಅಷ್ಟರಲ್ಲೇ ಆತ ಏನೂ ಹೇಳದೇ ಜನರ ನಡುವೆ ಕರಗಿ ಹೋಗಿದ್ದ. ಮೋಮೋ ಯೋಚಿಸಿದಳು: "ಇಲ್ಲಿನ ಜನ ಯಾರಿಗೂ ಎಳ್ಳಷ್ಟೂ ಸಹಾಯ ಮಾಡೋವ್ರಲ್ಲ…ಮನುಷ್ಯತ್ವ ಇಲ್ಲದವ್ರು. ಹುಂ ದೇವ್ರಿದ್ದಾನೆ, ನನ್ನ ಬೆನ್ನಿಗೆ." ಮುಂದೆ ನಡೆಯತೊಡಗಿದ ಆಕೆಗೆ ಜೋತಿಷಿ ಹೇಳಿದ್ದ ನುಡಿ ನೆನಪಿಗೆ ಬಂತು. "ಹೌದು. ಆತ ಹೇಳಿದ್ದು ನೂರಕ್ಕೆ ನೂರು ನಿಜ."

ನೂರಾರು ನೋವುಗಳನ್ನು ನುಂಗಿಕೊಂಡು ಕಾಲಿಂಪಾಂಗ್ ತಲುಪಿದಳು ಮೋಮೋ. ಕೆಲವು ಟಿಬೇಟಿ ವ್ಯಾಪಾರಿಗಳು ಕಂಡರು. ಅವರ ಹಿಂದೆ ಹಿಂದೆಯೇ ನಡೆಯತೊಡಗಿದಳು, ಅವರು ಕಲ-ಕತ್ತಾಕ್ಕೆ ಹೋಗಿಯೇ ತೀರುತ್ತಾರೆ, ತಾನು ಸುಲಭವಾಗಿ ಪೆಂಪಾನ ಜಾಡನ್ನು ಪತ್ತೆ ಹಚ್ಚಬಹುದು ಎಂಬಾಸೆಯಿಂದ. ರಿಜಂಗಾಂಗಿನಲ್ಲಿ ಆ ವ್ಯಾಪಾರಿಗಳು ಮನೆಯೊಂದರಲ್ಲಿ ಚಹ ಕುಡಿಯಲು ಹೋದರು. ಮೋಮೋ ಹೊರಗೆ ಮೆಟ್ಟಿಲ ಮೇಲೆ ಕುಳಿತು ಕಾಯತೊಡಗಿದಳು. ಒಳಗೆ ಹೋದರೆ ಮತ್ತಾವ ಮುದುಕಿ ಕೆಲಸಕ್ಕೆ ಇಟ್ಟುಕೊಂಡು ಬಿಡುತ್ತಾಳೋ ಎಂಬ ಹೆದರಿಕೆ ಆಕೆಗೆ. ಹೀಗಾಗಿ ಯಾರ ಮನೆಯ ಒಳಗೂ ಕಾಲಿರಿಸಬಾರದೆಂಬ ನಿರ್ಧಾರಕ್ಕೆ ಬಂದಿದ್ದಳು.

ಹೊರಗೆಲ್ಲ ಕತ್ತಲು. ಆ ಮನೆಯೊಳಗೆ ಮಾತ್ರ ಮಿಣುಕು ದೀಪದ ಮಸುಕು ಬೆಳಕು. ಒಳಗಿನಿಂದ ಹೊರಬಂದ ಯಾರೋ ಮೋಮೋಳಿಗೆ ಡಿಕ್ಕಿ ಹೊಡೆದು. "ಯಾರಿಲ್ಲಿ ಕುಳಿತದ್ದು?" ಅಂದಳು ಹುಡುಗಿ. ಕೋಮಲ ಧ್ವನಿಯ ಹುಡುಗಿ.

ಮೋಮೋಳಿಗೆ ಹೆದರಿಕೆ, "ಪೆಟ್ಟಾಯ್ತಾ? ಕ್ಷಮಿಸಿ" ಅಂದಳು.

"ಇಲ್ಲ, ನಂಗೇನೂ ಪೆಟ್ಟಾಗಿಲ್ಲ. ಆದ್ರೆ ನೀನು ಯಾರು? ಇಲ್ಲಿ ಕೂತ್ಕೊಂಡು ಏನ್ಮಾಡ್ತಿದ್ದಿ?"

ಮೋಮೋ ತನ್ನೆಲ್ಲ ಕತೆಯನ್ನು ಹೇಳಿದಳು.

"ನಿನ್ನ ಹೆಸರೇನು?"

"ಸೂಫೂ" ಎಂದು ಹೇಳಿದ ಆ ಹುಡುಗಿ ಮೋಮೋಳನ್ನು ತನ್ನ ಕೋಣೆಗೆ ಕರೆದೊಯ್ದಳು. ಕೊಳೆ ಬಟ್ಟೆಗಳನ್ನು ಕಳೆದು ತನ್ನ ಬಟ್ಟೆಗಳನ್ನು ತೊಡಲು ಹೇಳಿದಳು. ಹೊಟ್ಟೆಗಿಷ್ಟು ತಿನ್ನಲು ಕೊಟ್ಟು,"ನಡಿ ಇನ್ನು ಮಲಗೋಣ" ಅಂದಳು.

ಆಕೆಯತ್ತ ಕೃತಜ್ಞತೆಯಿಂದ ನೋಡಿದ ಮೋಮೋಳಿಗೆ ಸೂಫೂಳ ಕಣ್ಣಲ್ಲಿ ಏನೋ ವೇದನೆ ಕಂಡಿರಬೇಕು. "ಯಾಕೆ ಸೂಫೂ…ಹುಪಾರಿಲ್ವಾ?" ಕೇಳಿದಳು.

"ಇಲ್ಲ, ಹೊಟ್ಟೆಗೆ ಸರಿಯಾಗಿ ಬಿದ್ರೆ ತಾನೆ ಹುಪಾರಿರೋದು" ಎಂದು ತನೆಲ್ಲ ಕತೆಯನ್ನು ಹೇಳಿದಳು ಸೂಫೂ. ಆಕೆಯನ್ನು ಹೆತ್ತವರಿಬ್ಬರೂ ಮಹಾಮಾರಿಗೆ ಬಲಿಯಾದದ್ದು. ಸೂಫೂಳ ಹೆಸರಿನಲ್ಲೇ ಇದ್ದ ಆ ಮನೆ ಮತ್ತು ಚಹದ ಅಂಗಡಿಯನ್ನು ಚಿಕ್ಕಪ್ಪ ಮತ್ತು ಆತನ ಮಗ ಕಸಿದುಕೊಂಡು ತಮ್ಮ ಹೆಸರಿಗೆ ಮಾಡಿಕೊಂಡಿದ್ದು. ಉಪವಾಸ


ಬೆನ್ನು ನೋವೇ?
ಐಯೋಡೆಕ್ಸ್
ಗುಣಪಡಿಸುವ
ಮುಲಾಮು
IODEX
Methyl Salicylate
ಐಯೋಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.

ಕೊಲ್ಲುವ ಉದ್ದೇಶದಿಂದ ಊಟಕ್ಕೆ ಹಾಕದಿದ್ದದ್ದು ಎಲ್ಲಾ ವಿಸ್ತರಿಸಿದ ಸೂಫೂ ಬಿಕ್ಕಿ ಬಿಕ್ಕಿ ಅಳತೊಡಗಿದಳು. "ನಾನು ಹ್ಯಾಗಾದ್ರೂ ಇಲ್ಲಿಂದ ಓಡಿ ಹೋಗ್ಬೇಕು."

"ಸುಮ್ನಿರು ಸೂಫೂ. ನಾನು ನಿನ್ನ ಕಲ್ಕತ್ತಾಕ್ಕೆ ಕರಿಸ್ಕೋತೀನಿ" -ಮೋಮೋ ಸಂತೈಸಿದಳು.

* * *

ಗಾಪ್ಲೆಖೋಲಾ ತಲುಪಿದ ಮೋಮೋ ಅಲ್ಲಿಂದ ಕಲಕತ್ತಾ ತಲುಪಲು ರೈಲು ಹಿಡಿಯಬೇಕಿತ್ತು. ಆದರೆ ರೈಲು ಟಿಕೆಟ್ಟಿಗೆ ಹಣ ? ಮೋಮೋಳ ಕೈಯಂತೂ ಖಾಲಿ. ಟಿಬೇಟಿ ವ್ಯಾಪಾರಿಯೊಬ್ಬನನ್ನು ರೈಲು ಚಾರ್ಜಿಗಾಗಿ ಅಂಗಲಾಚಿದಳು. ಆತ ಕೇಳಿಯೂ ಕೇಳದವನಂತೆ ನಡೆದುಬಿಟ್ಟ. ಮೋಮೋ ದುಃಖಿಸಿ ಅಳತೊಡಗಿದಳು. ಗಾಡಿ ಇನ್ನೇನು ಹೊರಡಬೇಕು. ಜನರ ಗದ್ದಲ ಹೆಚ್ಚಾಯಿತು. ಗಾರ್ಡ್ ಸೀಟಿಯೂದಿದ. ಗಾಡಿಯ "ಕೂ"ಗುಡುವಿಕೆಯಲ್ಲಿ ಆಕೆಯ ಅಳು ಯಾರಿಗೆ ಕೇಳಬೇಕು ?

ಯಾರೋ ಬೆನ್ನ ಮೇಲೆ ಕೈ ಆಡಿಸಿದಂತಾಗಿ ಬೆಚ್ಚಿ ತಿರುಗಿ ನೋಡಿದಳು. ಒಬ್ಬ ದೃಢಕಾಯ ಆಂಗ್ರೇಜಿ–ಟಿಬೇಟಿ ಯುವಕ ನಿಂತಿದ್ದಾನೆ. "ಯಾಕೆ ಅಳುತ್ತಿ?" ಆ ನೀಲಿ ಕಣ್ಣಿನ ಬಿಳಿ ಟಿಬೇಟೀಯ ಕೇಳಿದ, "ನೀನು ಈ ಗಾಡಿಯಲ್ಲಿ ಕೂಡ್ತೀಯಾ ?"

"ಹಾಂ...ಹೌ...ಹೌದು" ಬಿಕ್ಕುತ್ತ ಉತ್ತರಿಸಿದಳು ಮೋಮೋ...ಗಾಡಿ ಹೊರಡುವ ತಯಾರಿಯಲ್ಲಿತ್ತು. ಕ್ಷಣಾರ್ಧದಲ್ಲಿ ಮೋಮೋಳ ಕತೆ ಕೇಳಿದ ಆ ಯುವಕ ತನ್ನ ಕೈಯಲ್ಲಿದ್ದ ಟಿಕೆಟ್ಟನ್ನೂ ಜತೆಗೆ ಒಂದಿಷ್ಟು ಚಿಲ್ಲರೆ ಹಣವನ್ನೂ ಆಕೆಯ ಕೈಗಿತ್ತು, "ಹೂಂ ಬೇಗ ಹತ್ತು" ಅಂದ. ಮೋಮೋ ಗಾಡಿ ಹತ್ತಿದಳು. ಆ ಡಬ್ಬಿಯಲ್ಲಿ ಕುಳಿತಿದ್ದ ವ್ಯಾಪಾರಿಯೊಬ್ಬನಿಗೆ "ಈಕೆಯನ್ನು ನೋಡಿಕೋ" ಎಂದು ಹೇಳುತ್ತಿದ್ದಂತೇ ಗಾಡಿ ಚಲಿಸಿತು.

ಕಲಕತ್ತಾದ ಜನಸಾಗರದಲ್ಲಿ ಮೋಮೋ ತನ್ನನ್ನು ತಾನೇ ಮರೆತಳು. ಹಸಿವಾದಾಗಲೇ ಆಕೆಗೆ ವಾಸ್ತವದ ಅರಿವಾದದ್ದು. ಏನಾದರೂ ಕೊಂಡು ತಿನ್ನಬೇಕೆಂದು ಜೇಬಿಗೆ ಕೈ ಹಾಕಿದರೆ ಅಲ್ಲೇನಿದೆ ಇದ್ದ ಚಿಲ್ಲರೆಯನ್ನೆಲ್ಲ ಯಾರೋ ಕದ್ದಿದ್ದಾರೆ.

ಪೆಂಪಾನಿಗಾಗಿ ಇಷ್ಟೆಲ್ಲ ಸಹಿಸಿದ ಆಕೆಗೆ ಈ ಹಸಿವು ಯಾತರ ಲೆಕ್ಕ? ಕಲಕತ್ತಾದ ವಿಂಗ್–ಫೌಂಗ್ ಚೀನೀ ಪಾದರಕ್ಷೆಗಳ ಅಂಗಡಿಯ ಹೆಸರು ಆಕೆಗೆ ನೆನಪಾಯಿತು. ಅಲ್ಲಿ ಟಿಬೇಟಿಯರೆಲ್ಲ ಪಾದರಕ್ಷೆಗಳನ್ನು ಕೊಳ್ಳುತ್ತಾರೆಂದು ಕೇಳಿ ತಿಳಿದಿದ್ದಳು ಮೋಮೋ. ಪೆಂಪಾನನ್ನು ಕದ್ದವನು ಅಲ್ಲಿ ಸಿಕ್ಕಬಹುದೆಂದುಕೊಂಡು ಅತ್ತ ಹೆಜ್ಜೆ ಹಾಕಿದಳು- ಅವರಿವರನ್ನು ದಾರಿ ಕೇಳುತ್ತ.

ವಿಂಗ್–ಫೌಂಗ್ ಆ ಅಂಗಡಿಯ ಮಾಲಿಕ. ಆತನೆದುರು ಹೋಗಿ ಪೆಂಪಾನ ಬಗ್ಗೆ ವಿಚಾರಿಸಿದಳು. ಆತನಿಗೆ ಗೊತ್ತಿತ್ತು, ಪೆಂಪಾನನ್ನು ಆಂಗ್ಲ ಮಹಿಳೆಯೊಬ್ಬಳು ಕೊಂಡಿದ್ದಾಳೆ ಎಂದು. ಆತ ಮಾತು ಮರೆಸಲೆತ್ನಿಸಿದಷ್ಟೂ ಮೋಮೋಳ ಒತ್ತಾಯ ಹೆಚ್ಚಾಯಿತು. ಆ ಆಂಗ್ಲ ಮಹಿಳೆಯ ಮನೆಯ ವಿಳಾಸ ಹೇಳಿ ಈ 'ಪೀಡೆ'ಯನ್ನು ದೂರಮಾಡಿಕೊಂಡ ವಿಂಗ್–ಫೌಂಗ್.

ಬಂಗಲೆಯ ಎದುರು ಬಂದು ನಿಂತಳು. ಬಾಗಿಲು



" ಮಗ ಯಾವ ಕೆಲಸದಲ್ಲಾದ್ರು ಮುಂದೆ ಅಂತ ನೀವು ಆ ದಿನ ಹೇಳಿದ್ದು ನಿಜ, ರಾಯ್ರು. ನೋಡಿ, ಮದ್ವೆ ಆಗಿ ನಾಲ್ಕನೇ ತಿಂಗಳ್ನಲ್ಲೇ ಬಾಣಂತನಕ್ಕೆ ಕಳ್ಸಬಿಟ್ಟ, ನನ್ನ ಮಗಳ್ನ! "

ಮುಚ್ಚಿದೆ. ಹೊರಗೊಬ್ಬ ಕಾವಲುಗಾರನ ಭದ್ರ ಕಾವಲು ಬೇರೆ. ಮೋಮೋ ಅಂಜಲಿಲ್ಲ. ಹೋಗಿ ಕೇಳಿದಳು. ಆತ ಈಕೆಯ ಮಾತಿನೆಡೆ ಲಕ್ಷ್ಯ ಕೊಡಲೇ ಇಲ್ಲ. "ದಯವಿಟ್ಟು ಒಡತೀನ ಕಾಣ್ಲಿಕ್ಕೆ ಬಿಡಿ" ಅಂದಳು.

ಆತ ಆಕೆಯನ್ನು ಬಿಕ್ಕೆ ಬೇಡುವ ಹುಡುಗಿ ಎಂದುಕೊಂಡಿರಬೇಕು. "ನಾನು ಭಿಕ್ಷೆ ಬೇಡ್ಲಿಕ್ಕೆ ಬಂದಿಲ್ಲ" ಅಂದಳು ಮೋಮೋ "ನನ್ನ ಪೆಂಪಾನ್ನ ತಗೊಂಡು ಹೋಗ್ಲಿಕ್ಕೆ ಬಂದೆ." ವಿವರಿಸಿದಳು.

"ಪೆಂಪಾನ್ನ ನಮ್ಮೊಡತಿ ಖರೀದಿ ಮಾಡಿದಾರೆ ಅಂತ ಗೊತ್ತಿಲ್ವಾ? ಅದರ ಮೇಲೆ ನಿನ್ನದಾವ ಹಕ್ಕು? ಸುಮ್ನೆ ಪೀಡಿಸ್ಬೇಡ ಹೊರಟ್ಹೋಗು, ಇಲ್ದಿದ್ರೆ..." ಎಂದು ಆತ ಮೋಮೋಳ ಕತ್ತು ಹಿಡಿದು ದೂಡಿದ.

ಕುಸಿದು ಬಿದ್ದ ಆಕೆ ಅಲ್ಲಿಯೇ ಎದ್ದು ಕುಳಿತಳು. ಅವಮಾನ-ಸಿಟ್ಟು. ಅಳು ಬಂತು. ಜೋರಿನಿಂದ ಅಳತೊಡಗಿದಳು. ಹೊರಗಿನ ಗದ್ದಲ ಕೇಳಿ ಮನೆಯೊಡತಿ ಹೊರಬಂದು; "ಏನೋ ಅದು?" ಅಂದು, "ಏ ಯಾರೇ ನೀನು?" ಎಂದು ಮೋಮೋಳನ್ನು ಕೇಳಿದಳು.

ಈ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಮೋಮೋ,

"ಒಡತಿ, ಆ ಪೆಂಪಾ ನನ್ನ ನಾಯಿ. ನಿಮಗೆ ಮಾರಿದೋನು ನಮ್ಮ ಊರಿಂದ ಕದ್ದು ತಂದಿದ್ದಾನೆ. ಈಗ ೧೫ ದಿನದಿಂದ ಅದನ್ನು ಹುಡುಕುತ್ತ ನಡಕೊಂಡೇ ಇಲ್ಲೀವರೆಗೂ ಬಂದೆ. ಜೆಪೆಲ್-ಲಾದಿಂದ ಇಲ್ಲೀವರೆಗೂ ಎಷ್ಟೋ ಕಷ್ಟ ಸಹಿಸಿ ಬಂದಿದೀನಿ. ನನ್ನ ಪೆಂಪಾನ್ನ ನಂಗೆ ಮರಳಿ ಕೊಟ್ಬಿಡಿ."

ಆಕೆ ಒಮ್ಮೆ ಮೋಮೋಳನ್ನು ದಿಟ್ಟಿಸಿ ನೋಡಿ, "ಬಾ ಒಳಗೆ" ಎಂದು ಒಳಸರಿದಳು. ಕಾವಲುಗಾರನಿಗೂ ಬರಲು ಹೇಳಿ, "ಆಕೆ ಹೇಳೋದನ್ನೆಲ್ಲ ಇಂಗ್ಲೀಷಿನಲ್ಲಿ ಹೇಳು" ಅಂದಳು.

ಮೋಮೋ ಹೇಳಿದ್ದನ್ನೆಲ್ಲ. ಆತ ಆಕೆಗೆ ಅನುವಾದಿಸಿ ಹೇಳಿದ. ಎಲ್ಲವನ್ನೂ ಕೇಳಿ ಆಕೆಯ ಕಣ್ಣು ಹನಿಗೂಡಿತು.

"ನೋಡು ಮೋಮೋ. ನಾನು ನಿನ್ನ ಮತ್ತು ಪೆಂಪಾನ ಸ್ನೇಹದ ಪರೀಕ್ಷೆ ಮಾಡ್ತೀನಿ. ಅದು ಬೇರೆ ಕೋಣೇಲಿದೆ. ನಿನ್ನ ದನಿ ಕೇಳಿ ನಿನ್ನತ್ರ ಓಡಿಬಂದ್ರೆ ಪೆಂಪಾನ್ನ ವಾಪಸ್ ಕೊಟ್ಬಿಡ್ತೀನಿ" ಅಂದಳು.

"ಪೆಂಪಾ... ಪೆಂಪಾ... ಬಾ ಮರಿ... ನಾನು ಮೋಮೋ ಬಂದಿದೀನಿ, ಬಾ ಪೆಂಪಾ..." ಮೋಮೋಳ ದನಿ ಆ ಬಂಗಲೆಯಲ್ಲಿ ಪ್ರತಿಧ್ವನಿಸಿತು.

ಪೆಂಪಾನ ಕಿವಿ ನೆಟ್ಟಗಾದುವು. ಬಹುದಿನಗಳ ನಂತರ ಕೇಳುತ್ತಿರುವ ಸ್ನೇಹದ ಕರೆ, ಸ್ನೇಹದ ದನಿ. ಕ್ಷಣಾರ್ಧದಲ್ಲೇ ನೆಗೆದೋಡಿ ಬಂದು ಮೋಮೋಳ ಮೈಯೇರಿ ನಕ್ಕತೊಡಗಿತು ಪೆಂಪಾ.

ಒಡತಿ ರೆಪ್ಪೆ ಬಡಿಯದೇ ಈ ದೃಶ್ಯ ನೋಡುತ್ತ ನಿಂತುಬಿಟ್ಟಳು.

"ಆಹಾ! ಎಂಥಾ ಸ್ನೇಹ ನಿಮ್ಮದು. ಪೆಂಪಾನನ್ನು ಇಲ್ಲಿ ಹಿಡಿಯೋ ಧೈರ್ಯ ಯಾರಿಗೂ ಇರ್ಲಿಲ್ಲ. ಕಚ್ಲಿಕ್ಕೆ ಬರ್ತಿತ್ತು. ಅದು ಬಂದಾಗಿನಿಂದ ಸರಿಯಾಗಿ ಹೊಟ್ಟೆಗೂ ತಿಂದಿಲ್ಲ. ಪೆಂಪಾ ನಿನ್ನನ್ನ ಬಹಳ ಪ್ರೀತಿಸುತ್ತೆ. ವಾಹ್, ನೀನು ತುಂಬಾ ಧೈರ್ಯಸ್ಥೆ ಮೋಮೋ. ಹೇಳು ನಿಮ್ಮಪ್ಪನ ವಿಳಾಸ. ಆತನ್ನ ಕರೆಸಿ ಇಲ್ಲಿ ಒಳ್ಳೇ ಕೆಲಸ ಕೊಡಿಸ್ತೇನೆ. ಎಲ್ರೂ ಇಲ್ಲೇ ಇರಬಹುದು."

ಪೆಂಪಾನನ್ನು ಮುದ್ದುಗರೆಯುತ್ತ ಕೂತುಬಿಟ್ಟಳು ಮೋಮೋ. ✡

Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201; New Delhi: P. R. Chopra Phone: 224130.



ನಿಮ್ಮ ಮಗುವಿಗೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ,
ಅವನನ್ನು ಮುಂದಿಡುತ್ತದೆ...
ಕೋಕೋ-ಸ್ವಾದಿಷ್ಟ ಬೋರ್ನ್‌ವಿಟಾ.
ಬೋರ್ನ್‌ವಿಟಾದಲ್ಲಿ ಈಗ ಅಧಿಕ ಕೋಕೋ ಇರುವುದರಿಂದ ಅದು ಅಧಿಕ ರುಚಿಕರ ಹಾಗೂ ಅಧಿಕ ಆರೋಗ್ಯಪೂರ್ಣವಾಗಿದೆ.
ಮಾತ್ರವಲ್ಲ, ಬೋರ್ನ್‌ವಿಟಾ ಮಾಲ್ಟ್, ಹಾಲು ಮತ್ತು ಸಕ್ಕರೆಗಳ ಎಲ್ಲಾ ಪೌಷ್ಟಿಕ ಉತ್ತಮಿಕೆಯಿಂದ ತುಂಬಿದೆ.
ಎರಡು ಚಹಾ ಚಮಚ ಬೋರ್ನ್‌ವಿಟಾವನ್ನು ಒಂದು ಕಪ್ ಬಿಸಿ ಹಾಲಿಗೆ ಸೇರಿಸಿದಾಗ ಅದು ಅತ್ಯಂತ ರುಚಿಕರವಾದ, ಶಕ್ತಿದಾಯಕ ಪೇಯವಾಗುತ್ತದೆ.
ನಿಮ್ಮ ಮಕ್ಕಳಿಗೆ ಬೋರ್ನ್‌ವಿಟಾವನ್ನು ಪ್ರತಿದಿನ ಎರಡಾವರ್ತಿ ಕೊಡಿರಿ. ಅದು ಅವರ ಶಾರೀರಿಕ ಬೆಳವಣಿಗೆಗೆ ಅವಶ್ಯವಿರುವ ಹೆಚ್ಚಿನ ಶಕ್ತಿಯನ್ನು ಒದಗಿಸಲು ನೆರವಾಗುತ್ತದೆ. ಮತ್ತು ನಿಮಗೂ ಅದು ಬೇಕು...ಅವರೊಂದಿಗೆ ಅವರಂತೆ ಇರುವುದಕ್ಕಾಗಿ!
ಕ್ಯಾಡ್‌ಬರಿಸ್
ಬೋರ್ನ್‌ವಿಟಾ
ಅಧಿಕ ಕೋಕೋ ಯುಕ್ತ: ಅಧಿಕ ರುಚಿಕರ,
ಅಧಿಕ ಆರೋಗ್ಯಪೂರ್ಣ!
Cadbury's
Bournvita
The ideal health drink for strength, vigour and taste
With More Cocoa tastier healthier
500 g net
75 ಪೈಸೆ ಉಳಿಸಿರಿ
ಹಣ ಉಳಿಸುವ 500 ಗ್ರಾಮ್‌ನ ರಿಫಿಲ್ ಪ್ಯಾಕ್ ಕೊಳ್ಳಿರಿ.
ಮುಖ್ಯ ಸಂಗತಿ:
ಈ ಪ್ಯಾಕನ್ನು ತೆರೆದ ಕೂಡಲೇ ಅದರಲ್ಲಿರುವ ಪುಡಿಯನ್ನು ಬೋರ್ನ್‌ವಿಟಾದ ಡಬ್ಬಿಯಲ್ಲಿ ಹಾಕಿರಿ. ಅದರಿಂದ ಅದರ ತಾಜಾ ಗುಣ ಉಳಿಯುತ್ತದೆ
OBM 8376 B KN

ASTURI PRICE : 1–25 Regd. No. KRNG 43
Registered with the Registrar of Newspapers for India under No. 3533/57

ಚತುರ ಶೀಲ

